ಸಂಪುಟ : ೧೯
ಸಂಚಿಕೆ : ೧

# ಕರ್ನಾಟಕ ಭಾರತಿ

ರಾಜ್ಯೋತ್ಸವ ಸಂಚಿಕೆ

ನವ್ಹೆಂಬರ, ೧೯೮೬

ಧಾರವಾಡ
ಕರ್ನಾಟಕ ವಿಶ್ವವಿದ್ಯಾಲಯ,

## ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ"ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪು ಮಾಡಿರಬೇಕು. ಹಸ್ತ ಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, "ಕರ್ನಾಟಕ ಭಾರತಿ" ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩** ಇವರಿಗೆ ಬರೆಯಬೇಕು.

---

## ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ  ೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ  ೪. ಅಕ್ಷಯ ತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆ ವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ : ರೂ. ೨-೫೦ (ಅಂಚೆ ವೆಚ್ಚ ರೂ. ೧-೨೫ ಪ್ರತ್ಯೇಕ)

ವಿದ್ಯಾರ್ಥಿಗಳಿಗೆ ರಿಯಾಯಿತಿ ಚಂದಾ ದರ ರೂ. ೪-೦೦ ಮಾತ್ರ.

ಹಣವನ್ನು ಡಿಮಾಂಡ ಡ್ರಾಫ್ಟ್ ಇಲ್ಲವೇ ಪೋಸ್ಟಲ್ ಆರ್ಡರ ಮೂಲಕ **ಫಾಯನಾನ್ಸ್ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ** ಇವರಿಗೆ ಕಳುಹಿಸಬೇಕು.

# ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೧೯ ಸಂಚಿಕೆ : ೨

ಪ್ರಧಾನ ಸಂಪಾದಕರು :

ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ

ಸಂಪಾದಕರು :

ಡಾ. ವಿಲ್ಯಂ ಮಾಡ್ತ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

# ಕರ್ನಾಟಕ ಭಾರತಿ

## ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

## ರಾಜ್ಯೋತ್ಸವ ಸಂಚಿಕೆ

**ನವ್ಹೆಂಬರ, ೧೯೮೭**





ಪ್ರಕಾಶಕರು :

**ಎಸ್. ಬಿ. ನಾಯಕ**
೧೦.೮.೮೨ ನಿರ್ದೇಶಕರು, ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ರಾಜಶ್ರೀ ಪ್ರಿಂಟಿಂಗ್ ಪ್ರೆಸ್
ತಡಕೋಡ ಓಣಿ, ಧಾರವಾಡ–೫೮೦ ೦೦೧

# ಪರಿವಿಡಿ

ಪುಟ

# ಕಲೆ ಮತ್ತು ಸಮಾಜ

● ಎಸ್. ಎಂ. ವೃಷಭೇಂದ್ರಸ್ವಾಮಿ

ಕಲೆ ಮೂಲತಃ ಮಾನವನ ಸೃಷ್ಟಿ; ಅದು ಪ್ರತಿಭಾನ್ವಿತ ಮಾನವನ ಜೀವನಾನುಭವದ ಅಭಿವ್ಯಕ್ತಿ. ಕಲೆ ಮಾನವತೆಯ ವಿಶಿಷ್ಟ ಆನಂದದಾಯಿನಿಯಾದ ಪಾತ್ರಶಕ್ತಿ; ಭೌತಿಕ ಜಗತ್ತಿನ ಬಾಹ್ಯ ಸೃಷ್ಟಿಗಿಂತ ಹೆಚ್ಚಾಗಿ, ಮಾನವನ ಅಂತರಂಗಿಕ ನಿತ್ಯಸತ್ಯದ, ಆನಂದಾನುಭವದ ಅಭಿವ್ಯಕ್ತಿ. ಕಲಾವಿದನ ಆತ್ಮದರ್ಶನ, ಅಂತಃಪ್ರೇರಣೆ, ಬಾಹ್ಯ ಪ್ರಭಾವಗಳ ಸಮಾಹಿತ ಅಭಿವ್ಯಕ್ತಿ ಈ ಕಲೆ. ಭಾವ, ಬಣ್ಣ, ನಾದ ಮುಂತಾದ ವಿವಿಧ ಮಾಧ್ಯಮದಲ್ಲಿ ಹೊಮ್ಮಿ ಸಮಾಜದ ಹೃದಯವಂತಿಕೆಯನ್ನು ಆಗುಮಾಡುತ್ತದೆ, ಋಜು ಮಾರ್ಗವನ್ನು ತೋರುತ್ತದೆ.

ಕಲಾವಿದನ ಅನುಭಗಳನ್ನು ವಿಶ್ಲೇಷಿಸಿ, ಅದರ ಫಲ, ಪ್ರಭಾವಗಳನ್ನು ಗುರುತಿಸಿ, ಸಹೃದಯ ಸಮಾಜ, ಆತನ ಮೂಲೋದ್ದೇಶ, ವಿಶಿಷ್ಟ ಸಾಧನೆಗಳನ್ನು ಪರಿಶೀಲಿಸಿ, ಅದರಿಂದ ತನ್ನತನದ ಅರಿವನ್ನು ಪಡೆಯುತ್ತದೆ. ವ್ಯಕ್ತಿಗೆಂತೋ ಅಂತೆ, ಸಮಾಜಕ್ಕೂ ಅದು ಪ್ರೇರಕಶಕ್ತಿಯಾಗಿದೆ. ವ್ಯಕ್ತಿ ಮತ್ತು ಕಲೆ, ಸಮಾಜ ಮತ್ತು ಕಲೆ ಇವುಗಳಲ್ಲಿ (ಅರ್ಥಪೂರ್ಣವಾಗಿ ಹೇಳಬೇಕೆಂದರೆ) ತಾಯಿ-ಮಗುವಿನ ಸಂಬಂಧ ಎದ್ದು ಕಾಣುತ್ತದೆ. ಕೊಡು-ಪಡೆವ ವಿನಿಮಯ ದೃಷ್ಟಿಯಿಂದಲೂ ಈ ಮಾತಿಗೆ ವಿಶೇಷಾರ್ಥವಿದೆ. ಕಲಾವಿದ, ಸಹೃದಯಸಮಾಜದ ಸೃಷ್ಟಿ. ಅಂತೆಯೇ ಸಮಾಜವೂ, ಕಲಾವಿದನ ಅನಿಸಿಕೆಯ, ಉದ್ದೇಶದ ಅಭಿವ್ಯಕ್ತಿ. ಸಮಾಜ ತಾಯಿ, ಕಲೆ ಅದರ ಶಿಶು. ಇವರಿಬ್ಬರಲ್ಲಿ ಅನಾಭಾವ ಸಂಬಂಧ ಮಾತ್ರವಲ್ಲ, ನಾನಾ ವಿನಾ ಸಂಬಂಧವೂ ಇದೆ. ಆರೋಗ್ಯವಂತ ತಾಯಿ ಸದೃಢ ಶಿಶುವನ್ನು ಪಡೆವಂತೆ, ಆದರ್ಶ ಸಮಾಜ ಆದರ್ಶ ಕಲೆಯ ಸೃಷ್ಟಿಗೆ ಪ್ರೇರಕವಾಗುತ್ತದೆ. ಶ್ರೇಷ್ಟಕಲೆ ಸಮಾಜವನ್ನೂ, ವ್ಯಕ್ತಿಯನ್ನೂ ತಿದ್ದಬಲ್ಲ ಶಕ್ತಿ ಪಡೆದಿದೆ. ಅಲ್ಲದೆ, ಜೀವಂತ ಜನ ಮಾತ್ರ ಸತ್ತ್ವಯುತ ಕಲೆಯನ್ನು ನಿರ್ಮಿಸಬಲ್ಲರು. ಅದು ಜನಾಂಗದ ಧೀಶಕ್ತಿಯನ್ನು ಪಟುಗೊಳಿಸುತ್ತದೆ. ಅದಕ್ಕಾಗಿಯೇ ಇತಿಹಾಸ ಒಂದು ಜನಾಂಗದ 'ಜೀವನ ಚರಿತ್ರೆ' (Biography) ಯಾದರೆ ಕಲೆ (ಸಾಹಿತ್ಯ) ಆಯಾ ದೇಶದ 'ಆತ್ಮಚರಿತ್ರೆ' (Auto-biography) ಎಂಬ

ಪ್ರಸಿದ್ಧವಾದ ಹೇಳಿಕೆ ಎಂದಿಗೂ ಸತ್ಯವಾದುದು; ನಿತ್ಯವಾದುದು. ಕಲೆ ಬೆಳೆಯಬೇಕು, ಜನಾಂಗ ಉಳಿಯಬೇಕು, ಜೀವನ ಪರಂಪರೆ ಮುಂದುವರಿಯಬೇಕು, ನಾಡಿನ ಸಂಸ್ಕೃತಿ ಅರಳಬೇಕೆನ್ನುವ ಸಮಾಜ, ಸತ್ವಪೂರ್ಣ ಕಲಾ ಸೃಷ್ಟಿಯನ್ನು ಗೌರವಿಸುತ್ತದೆ. ಹೀಗೆ, ಕಲೆ ಮತ್ತು ಸಮಾಜಗಳಲ್ಲಿ ಪರಸ್ಪರ ಪೂರಕ–ಪ್ರೇರಕತ್ವವೇ ಅಡಗಿದೆ.

ಜನಜೀವನವನ್ನು ಉದಾತ್ತಗೊಳಿಸಬಲ್ಲ ಶಕ್ತಿಗಳಲ್ಲಿ 'ಕಲೆ' ಅತ್ಯಂತ ಅಗ್ರಗಣ್ಯವಾದುದು. ಕಲೆ ಮಾನವನಲ್ಲಿರುವ ಮಾನವೀಯತೆಯ ಅಭಿವ್ಯಕ್ತಿಯಾಗಿರುವುದರ ಒಡನೊಡನೆಯೇ ಅವನಲ್ಲಿರುವ 'ವಿಶ್ವಮಾನವೀಯತೆ'ಯನ್ನೂ ಬಿಂಬಿಸುತ್ತದೆ. ಮಾನವಸಮಾಜವನ್ನು ಪರಿಷ್ಕರಿಸಿ. 'ವ್ಯಕ್ತಿ ಮಾನವ' ನನ್ನು 'ವಿಶ್ವಮಾನವ' ನನ್ನಾಗಿಸುವುದು ಕಲೆಯ ಪರಮ ಚರಮಗುರಿ. ಪ್ರಕೃತಿಯ ಮಾನವನ, ಸಮಾಜದ ಮೇಲು ಮೇಲಿನ ಚಿತ್ರಣಕ್ಕಿಂತ ವಿಶೇಷವಾಗಿ, ಕಲೆ, ಅವುಗಳಲ್ಲಿರುವ 'ನಿತ್ಯ ಸತ್ಯ' ದ ಅನ್ವೇಷಣೆಗೆ ಹೊರಡುತ್ತದೆ. ಅಂಥ ನಿತ್ಯಸತ್ಯದ ಅಭಿವ್ಯಕ್ತಿಯಾದ ಕಲೆ, ಕಾಲ–ದೇಶ–ಭಾಷೆಗಳ ಎಲ್ಲೆ-ಬಂಧನಗಳನ್ನು ಮೀರಿ, ಚಿರಂತನ ಸತ್ಯದ ಅವಿಷ್ಕಾರವಾದುದರಿಂದ, ಅದು ವಿಶ್ವಮಾನವೀಯವಾಗುತ್ತದೆ. ಮಾನವನಲ್ಲಿರುವ 'ಪ್ರಾಣಿತನ' ವನ್ನು ಗುರುತಿಸಿ. ಅದನ್ನು ದಾಟಿ, 'ದೇವತ್ವ' ದರ್ಶಕವಾಗುತ್ತದೆ. ಈ ಅರ್ಥದಲ್ಲಿಯೇ Art is universal ಎನ್ನುವುದು. ಮಹಾತ್ಮಾಗಾಂಧೀಜಿಯವರೆನ್ನುವಂತೆ "ನಿಜವಾದ ಕಲೆ ಆತ್ಮದ ಅಭಿವ್ಯಕ್ತಿ. ಅದರ ಬಾಹ್ಯ ರೂಪಗಳಿಗೆ ಜೀವ ಶಕ್ತಿಯಾದುದು ಈ ಆತ್ಮಶಕ್ತಿಯೇ: ಅವನ್ನು ಪಟುಗೊಳಿಸಿ, ಮಾನವ ಶಕ್ತಿ ಸ್ಫೋಟವಾಗಿ ದಾನವತ್ವದಿಂದ ಮಾನವ ಸಮಾಜವನ್ನು ವಿಮುಕ್ತಿಗೊಳಿಸುವ ಗುರಿಯೇ ನಿಜವಾದ ಗುರಿ." 'Art, if it is to be reckoned with, as one of the great values of iife, must teach men humility, tolerance, wisdom and magnitude' ಎಂಬ Somerset Maugham ಅಭಿಪ್ರಾಯ ಎಂದಿಗೂ ಮಾನ್ಯವಾದುದು. ವಿನಯ, ಸಹನೆ. ಮಹಾನುಭಾವತೆ, ಔನ್ನತ್ಯಗಳು ಎಲ್ಲ ಕಾಲದಲ್ಲಿಯೂ ಸಮಾಜಕ್ಕೆ ಅತ್ಯಾವಶ್ಯಕವಾದುವು. ಸಮಾಜ ಕ್ಷೇಮ, ವ್ಯಕ್ತಿ ಕ್ಷೇಮ, ವಿಶ್ವಕ್ಷೇಮ ಸಾಧನೆಗೆ ಕಲೆಗಳು ಅತ್ಯಂತ ಪರಿಣಾಮಕಾರೀ ಸಾಧನಗಳಾಗಿವೆ. ಈ ಉದ್ದೇಶ, ಈ ಮೌಲ್ಯಗಳನ್ನು ಆಧುನಿಕ ಕಲಾವಿದರೂ, ಆಧುನಿಕ ಸಮಾಜವೂ ಎಷ್ಟೆಷ್ಟು ಮಟ್ಟಿಗೆ ಅಳವಡಿಸಬಲ್ಲುದೋ, ಅಷ್ಟಷ್ಟು ಮಟ್ಟಿಗೆ 'ಕ್ಷೇಮಸಮಾಜ'ದ ನಿರ್ಮಾಣವಾಗುತ್ತದೆ. ಆಧುನಿಕತೆ, ವೈಜ್ಞಾನಿಕತೆಗಳ ಬೆನ್ನುಹತ್ತಿದ ಇಂದಿನ ಸಮಾಜ ಇಂದಿನ ಜನ, ಕಲೆಯ ಚಿರಂತನ ಜೀವನ ಮೌಲ್ಯಗಳನ್ನು ಕಡೆಗಣಿಸುತ್ತಿರುವುದರಿಂದ ಕ್ಷೇಮ-ರಾಜ್ಯ-ಸುಕ್ಷೇಮ ಸಮಾಜ ದೂರದೂರವಾಗಿಯೇ ಇರುವುದು ದುರ್ದೈವದ ಪ್ರಸಂಗ. ಆ ಬಗೆಗೆ ಮತ್ತೆ ಮತ್ತೆ ಎಚ್ಚರಿಕೆ ನೀಡುವುದೂ ಅನಿವಾರ್ಯ.

## ಅಂಥ ಕಲೆ : ಇಂಥ ಸಮಾಜ

ನಿಜ, ಇದೆಲ್ಲ ಸುಂದರವಾದ ಸಿದ್ಧಾಂತ; ಬಂಧುರವಾದ ಕಲ್ಪನೆ. ಆದರೆ ಈ ಮೌಲ್ಯಗಳು ನಮ್ಮ ಸಮಕಾಲೀನ ಸಮಾಜದಲ್ಲಿವೆಯೆ? ಜೀವನ ಮೌಲ್ಯಗಳ ತಲೆಕೆಳಗಾಗಿರುವಿಕೆಯ ಪರಿಣಾಮಗಳ ಬಗೆಗೆ ನಾವಿಂದು ಚಿಂತಿಸುತ್ತೇವೆಯೆ? ಅಂಥ ಮೌಲ್ಯಗಳನ್ನು, ಆದರ್ಶಗಳನ್ನು ಕಡೆಗಣಿಸಿ, ಆತ್ಮ ವಂಚನೆಯ ದೇಹೋಹಂಭಾವನೆಗಳನ್ನು ಬೆಳೆಯಿಸುವ ಪರಿಸರವನ್ನು ನಿರ್ಮಿಸಿಕೊಂಡಿರುವ ನಮ್ಮ ಸಮಾಜ ಎತ್ತ ನಡೆದಿದೆ? ಏನಾಗುತ್ತಿದೆ ? ಇದನ್ನು ಸರಿಗೊಳಿಸುವುದರತ್ತ ನಾಲ್ಕು ಹೆಜ್ಜೆ ಮುಂದೆ ಹೋಗುವ ಪ್ರಯತ್ನ ಬೇಡವೆ ? ಈ ಬಗೆಗೆ, ನಾವೆಲ್ಲರೂ ಇಂದು ಗಂಭೀರವಾಗಿ ಚಿಂತಿಸಬೇಕಾಗಿದೆ.

ಪ್ರಥಮವಾಗಿ, ನಮ್ಮ ವಿವಿಧ ಕಲಾಮಾಧ್ಯಮಗಳ ಮೂಲಕ ಬಿತ್ತರಿಸುವ ಇಂದಿನ ಪ್ರಯತ್ನಗಳೆಲ್ಲ ಕಲೆಯಾಗಿ, ಮಾನವೀಯ ಮೌಲ್ಯಗಳ ಅಭಿವ್ಯಕ್ತಿಯಾಗಿ ಇವೆಯೋ ಎಂಬುದು ನಮ್ಮ ಮುಂದಿರುವ ಪ್ರಶ್ನೆ. ನಮ್ಮ ಪತ್ರಿಕೆಗಳ ಜಾಹೀರಾತುಗಳು ರೇಡಿಯೋ, ಟೀವಿಗಳ ಪ್ರದರ್ಶನಗಳು ಈ ಕಲಾಮೌಲ್ಯ ಅಥವಾ ಮಾನವೀಯ ಮೌಲ್ಯಗಳನ್ನು ಪ್ರಮುಖವಾಗಿ ಬಿಂಬಿಸುತ್ತಿವೆಯೆ ? ಇಲ್ಲ. ಪ್ರಯೋಗಪ್ರಿಯರಾದ, ಪ್ರಚಾರ ಪ್ರಿಯರಾದ ಇಂದಿನ ಹೆಚ್ಚಿನ ಸಂಖ್ಯೆಯ ಕಲಾವಿದರು-ಸಾಹಿತಿಗಳು, ಕಲೆಯನ್ನು. ಅದರ ಮೌಲ್ಯಗಳನ್ನು ಕಡೆಗಣಿಸುತ್ತಿದ್ದಾರೆ. ನೂತನಸಮಾಜ ನಿರ್ಮಾಣಕ್ಕೆ ಅವಶ್ಯಕವಾದ 'ಕಲಾಮೌಲ್ಯ'ಗಳತ್ತ ಗಮನವಿರಿಸಿದಂತೆ ತೋರುವದಿಲ್ಲ. ಲಲಿತಕಲೆಗಳೆಲ್ಲ 'ವಿಕೃತಕಲೆ' ಗಳು ಆಗುತ್ತಿರುವುದು ನಾವು ನಿತ್ಯಕಾಣುವ ದುರಂತ!! ಚಿತ್ರ, ಶಿಲ್ಪ. ಸಂಗೀತ, ಸಾಹಿತ್ಯ, ನರ್ತನಗಳು ಆಧುನಿಕತೆಯ ಬೆನ್ನುಹತ್ತಿ, ಭೂತಾಕಾರದ ಭೇತಾಳರಾಗದ ವಿಕೃತಿಗಳಾಗುತ್ತಿವೆ. 'ಕಲೆ' ಒಂದು ಯೋಗವಾಗಿ, ಕಲಾವಿದ ಒಬ್ಬ ಸೌಂದರ್ಯಯೋಗಿಯಾಗಿ ಮೆರೆವ ಕಾಲ ಹಿಂದಾಗಿದೆ; ಆಧುನಿಕ ಕಲಾಮಾಧ್ಯಮಗಳಲ್ಲಿ 'ಪ್ರಾಣಿತ್ವ'ದ ಅಂದರೆ ಐಂದ್ರಿಕ ಭೋಗ ಪ್ರಚಾರವೇ ಕಾಣುತ್ತಿದೆ. ಇಂದ್ರಿಯಗಳ ಉಲ್ಬಣ, ನಡೆ-ನುಡಿಯ ವಿಕೃತಿ, ವಿರಸ-ಬಡಿದಾಟಗಳೇ ಇಂದಿನ ಕಲೆಗಳ 'ವಸ್ತು' ವಾಗಿದೆ. ಇಂದಿನ ಸಮಾಜವೇ ಹಾಗಿದೆಯಲ್ಲ, ಅದರ ಪ್ರಭಾವವೇ ಈ ಕಲೆಗಳು ಎಂದು ವಾದಿಸುವವರಿಗೆ ಒಂದೇ ಪ್ರಶ್ನೆ. ನಿಮ್ಮ ಈ 'ಆಧುನಿಕ ಕಲೆ' ಗಳಿಂದ ಜನಸಾಮಾನ್ಯರ ಮನಸ್ಸು ಅರಳುತ್ತಿದೆಯೋ ? ಇಲ್ಲವಾದರೆ ಇಂಥ ಕಲೆ ನಮ್ಮ ಜೀವನಕ್ಕೆ, ಜನತೆಗೆ ಏಕೆಬೇಕು ?ಏಕೆ ಕೊಡುತ್ತೀರಿ ? ಎಂದು ನೀವೇ ವಿಚಾರ ಮಾಡಿಕೊಳ್ಳಿ.

ಎರಡನೆಯದಾಗಿ, ನಮ್ಮ ಸಮಕಾಲೀನ ಸಮಾಜದಲ್ಲಿ ನಿಜವಾದ ಕಲಾವಿದನಿಗೆ ಇರುವ ಸ್ಥಾನವೆಂಥದು ? ಪರಿಸರ ಅದೆಂಥದು ? ನಿಜವಾದ, ಕಲಾಪ್ರೇಮಿಗೆ

ಪ್ರೋತ್ಸಾಹದಾಯಕ ವಾತಾವರಣ ನಿರ್ಮಿಸಿರುವೆವೆ ? ಕಲಾವಿದನಿಗೆ ಅತ್ಯಂತ ಪ್ರಿಯವಾದುದು, ಸಹೃದಯ ತೃಪ್ತಿ ಹಾಗೂ ರಸಿಕರ ಪ್ರೋತ್ಸಾಹದ ನುಡಿ. ಕಿರಿಯ ಕಲಾವಿದರಿಗೆ ಅದೇ ದೊರೆಯುತ್ತಿಲ್ಲ. ಹಿರಿಯ ಕಲಾವಿದರ ಸಾಧನೆಗಳತ್ತ ಗಮನ ಹರಿಸಲು ಮನಸ್ಸಿಲ್ಲ. ಪುರಸೊತ್ತಿಲ್ಲ. ಪ್ರಾಮಾಣಿಕವಾಗಿ ವಿಮರ್ಶೆ ಮಾಡಿ. ಮಾರ್ಗ ದರ್ಶನ ನೀಡಬಲ್ಲ ಸಹೃದಯ ವಿಮರ್ಶಕರೆಲ್ಲಿದ್ದಾರೆ ? ಅಂಥ ಪತ್ರಿಕೆಗಳೆಷ್ಟಿವೆ ? ಶ್ರೀಸಾಮಾನ್ಯರಂತೂ, ಕಲೆ-ಕಲಾವಿದ-ಕಲಾಮೌಲ್ಯಗಳತ್ತ ಗಮನಹರಿಸಲಾರದ ಅಜ್ಞಾನದಲ್ಲಿರುವುದು ದುರ್ದೈವದ ಪ್ರಸಂಗ. ಕಾರಣ. ಇಂದಿನ ಪ್ರಜ್ಞಾವಂತ ಜನ, ಅಭಿರುಚಿಯನ್ನು ಬೆಳೆಯಿಸಿಕೊಂಡು, ಕಲೆ-ಕಲಾವಿದ ಸಮಾಜಗಳನ್ನು ಬದುಕಿಸ ಬಲ್ಲರೆ ? ವಿಚಾರಮಾಡಬೇಕಾದ ವಿಷಯ.

ಮೂರನೆಯದಾಗಿ, ನಮ್ಮ ಭವ್ಯಪರಂಪರೆಯಲ್ಲಿ ಮೂಡಿಬಂದ ಕಲಾಕ್ಷೇತ್ರಗಳು, ಶೈಲಿಗಳು, ಕಲಾಪ್ರಕಾರಗಳು ವಿಕೃತಗೊಳ್ಳುತ್ತಿವೆ. ಕರ್ನಾಟಕ ಸಂಗೀತದ ಪ್ರಕಾರ ಇಂದು ದಾಸರ ಹಾಡುಗಳನ್ನು, ಶರಣರ ಪದಗಳನ್ನು ಹಾಡುವವರೆಷ್ಟು ಜನ ? ನಮ್ಮ 'ಶಿಲ್ಪ'ದ ಮಾದರಿಗಳನ್ನು, ಆಧುನಿಕ ವಾಸ್ತುಶಿಲ್ಪಕ್ಕೆ ಅಳವಡಿಸಿಕೊಂಡ ಉದಾಹರಣೆಗಳೆಷ್ಟಿವೆ ? ಭಾರತೀಯ ಚಿತ್ರಶೈಲಿ, ಬಣ್ಣಗಾರಿಕೆ, ಮೌಲೀಕೃತ ಚಿತ್ರಗಳನ್ನು ಅದೆಷ್ಟು ಜನ ಬೆಳೆಯಿಸಿಕೊಂಡಿದ್ದಾರೆ ? ನಮ್ಮ ಎಲ್ಲ ಪುರಾತನ ದೇವಾಲಯಗಳ ಚಿತ್ರ-ಶಿಲ್ಪ ಮಾದರಿಗಳನ್ನು, ಇಂದಿನ ಕ್ಯಾಲೆಂಡರುಗಳ ಮೇಲೆ, ಪುಸ್ತಕ, ಆಹ್ವಾನಪತ್ರಗಳ ಮೇಲೆ ಬಳಸಿಕೊಳ್ಳುತ್ತಿದ್ದೇವೆಯೆ ? ಇಂದಿನ ಬಡಿದಾಟದ ಬಂಡಾಯವೆಂಬ ಸಾಹಿತ್ಯ ಚಿತ್ರ-ಘರ್ಷಣೆ ಶೋಷಣೆಗಳ, ಘೋಷಣೆಗಳ ಮಧ್ಯದಲ್ಲಿ ಹೃದಯ ಮಿಡಿವುದೆಷ್ಟು ? ಮನ ಮಿಡಿವುದೆಷ್ಟು ? ನಮ್ಮ ರೇಡಿಯೋ ಟಿ.ವಿ ಸಿನಿಮಾಗಳ ಬಹುಪಾಲು, ಕಲಾಹೀನವಾದ, ಚಾರಿತ್ರ್ಯ ಹೀನವಾದುದಕ್ಕೇ ಮೀಸಲಾದಂತಿದೆ. ಜನಜೀವನವನ್ನು ಉದಾತ್ತಗೊಳಿಸದೆ—ವಿಹ್ವಲಗೊಳಿಸುತ್ತಿದೆ. ಒಟ್ಟಿನಲ್ಲಿ. ನಮ್ಮ ಇಂದಿನ ಸಮಾಜದಲ್ಲಿ ನಮ್ಮ ಕಲೆಗಳಿಗೆ ಸ್ಥಾನ-ಗೌರವ-ಅಭಿಮಾನ ಬಹುಕಡಿಮೆ. ಇದರಿಂದ ನಮ್ಮ ಇಂದಿನ ಪೀಳಿಗೆ, ಒಂದುಕಡೆ ಕಲಾಹೀನವಾದ ದುರಂತ, ಇನ್ನೊಂದುಕಡೆ ಚಾರಿತ್ರ್ಯಹೀನವಾದ ದುರಂತಗಳಲ್ಲಿ ಬದುಕುತ್ತಿದೆ; ಮುಂದೇನು? ಈ ಮೂಲಭೂತವಾದ ಜನಾಂಗಿಕ ಸಮಸ್ಯೆಯ ಬಗೆಗೆ ಈಗ ಚಿಂತಿಸ ಬೇಕಾಗಿದೆ. ಜನಮನವನ್ನು ಹದಗೊಳಿಸುವ ಸಂಸ್ಕೃತಿಯನ್ನು ಅರಳಿಸುವಂಥ ಕಲೋಪಾಸನೆ ಜನಪ್ರಿಯವಾಗುವ ಸಾಧ್ಯತೆಗಳ ಬಗೆಗೆ ನಾವಿಂದು ವಿಚಾರ ಮಾಡಬೇಕಾಗಿದೆ.

ಕೊನೆಯದಾಗಿ, ಆಧುನಿಕಸಮಾಜದ ಸರ್ವಜವಾಬ್ದಾರಿಹೊತ್ತ ಸರಕಾರ, ಆಡಳಿತ ವರ್ಗ ನೂತನಸಮಾಜ ನಿರ್ಮಾಣ ಮಾಡಬಲ್ಲ ಕಲಾಮೌಲ್ಯಗಳ ಬಗೆಗೆ ಕಲೆಯ

ಪ್ರೋತ್ಸಾಹದ ಬಗೆಗೆ ಕೈಕೊಳ್ಳುತ್ತಿರುವ ಕಾರ್ಯಕ್ರಮಗಳಲ್ಲಿ, ಕಲೆಯ ಉದ್ಧಾರ ಸಾಧ್ಯವೆ ? ಸಾರ್ವಜನಿಕರಲ್ಲಿ ಈ ಮೌಲ್ಯಗಳತ್ತ ಗಮನವಿರಿಸುವ ಎಚ್ಚರ ಇನ್ನೆಂದು ಬಂದೀತು ?

ಒಟ್ಟಿನಲ್ಲಿ, ನಮ್ಮ ಆಧುನಿಕ ಸಮಾಜ ರೋಗಗ್ರಸ್ಥವಾಗಿದೆ. ಕಾರಣ ಅನಿವಾರ್ಯವಾಗಿ ಅವಳ ಗರ್ಭದಲ್ಲಿ ಹುಟ್ಟಿದ 'ಶಿಶು' ಬಾಲಗ್ರಹ ಪೀಡೆಗಳೊಳಗಾಗಿದೆ. ಅದರ ಆರೋಗ್ಯ ರಕ್ಷಣೆಗೆಂದು ಹೊರಟ ಸರಕಾರದ ಹತ್ತಿರ ಅವಶ್ಯಕವಾದಷ್ಟು ಔಷಧದ ಸರಬರಾಜು ಇಲ್ಲ; ಜವಾಬ್ದಾರಿಯುತ ಬುದ್ಧಿಜೀವಿಗಳಿಗೆ, ತರುಣ ಪೀಳಿಗೆಗೆ ಇದೊಂದು ಸವಾಲು, ಅಹವಾಲು.

●

# ಬೇಂದ್ರೆ ಕಾವ್ಯದಲ್ಲಿ ಸಾಂಸ್ಕೃತಿಕ ಕಾಳಜಿಗಳು :
## ಒಂದು ಟಿಪ್ಪಣಿ

● ದೇವೇಂದ್ರಕುಮಾರ ಹಕಾರಿ

ನಡೆದಷ್ಟು ದಾರಿ, ಮೊಗೆದಷ್ಟು ನೀರು, ಅಗಿದಷ್ಟು ಆಳ ಬೇಂದ್ರೆ ಕಾವ್ಯ. ಜನಾಂಗದ ಸಮಷ್ಟಿ ಕಲ್ಯಾಣ ಚಿಂತನೆ ಆ ಕಾವ್ಯದ ಮೂಲ ದ್ರವ್ಯವಾದರೆ, ಮಾನವ ಕುಲದ ಬಗೆಗಿನ ಅಪಾರ ವಾತ್ಸಲ್ಯ ಕರುಣೆಗಳು ಅವರ ಸೃಜನಶೀಲತೆಯ ಮೂಲ ಸ್ರೋತವಾಗಿದೆ.

ಬೇಂದ್ರೆ ಕಾವ್ಯ ಮತ್ತು ಬೇಂದ್ರೆಯವರ ಸೃಜನಶಕ್ತಿಯನ್ನು ಕುರಿತು 'ಬೇಂದ್ರೆಯವರಿಗೆ ಸೃಜನಶೀಲತೆ ಕೇವಲ ಕಾವ್ಯಕ್ಕಷ್ಟೇ ಸೀಮಿತವಾಗಿರದೆ ಅದು ಸಮಗ್ರ ಜೀವನದ ಅಂತಃಸತ್ವವಾಗ ತ್ತದೆ. ಜೈವಿಕವಾಗಿರುವ ಸೃಜನಕ್ರಿಯೆಯೇ ಮಾನಸಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಸ್ತರಗಳಿಗೂ ವ್ಯಾಪಿಸಬೇಕೆಂಬ ವಿಚಾರ ಅವರ ಕಾವ್ಯದ ಹಿಂದಿನ ಶ್ರದ್ಧೆಯಾಗಿ ಮತ್ತು ಕಾವ್ಯದ ಕೊನೆಯಾಗಿ ಕಾಣುತ್ತದೆ'[೧] ಎಂದು ಕೀರ್ತಿನಾಥ ಕುರ್ತಕೋಟಿ ವಿವರಿಸುತ್ತಾರೆ. ಆದರೆ ಬೇಂದ್ರೆ ಕಾವ್ಯದ ಅತ್ಯಂತ ಮಹತ್ವದ ಭೌತಿಕ ಸ್ತರ ಅಥವಾ ಪಾತಳಿ ಅವರ ಮಾತಿನಲ್ಲಿ ಅಲಕ್ಷಿತವಾದಂತೆ ತೋರುತ್ತದೆ. ಎಂಥ ಗೂಢವಾದ ಆಧ್ಯಾತ್ಮಿಕ ಅನುಭೂತಿಯನ್ನು ಕಾವ್ಯಾನುಭವವನ್ನಾಗಿ ಪರಿವರ್ತಿಸುವಾಗಲೂ ಬೇಂದ್ರೆ ಸೃಷ್ಟಿ, ಭೌತಿಕ ನೆಲೆಯಲ್ಲಿ ಆಳವಾಗಿ ಬೇರುಬಿಟ್ಟಿರುತ್ತದೆ. 'ಓಂ' ಜಪ ನಡೆದಾಗ ಕೋಗಿಲೆಯ 'ಕುಹೂ', 'ಅಸರಂತ ಕೂಗುವ ಕೋಗಿಲೆಯ ಕೂಗಿಗೆ ಓಗೊಟ್ಟು ನುಗ್ಗಾಗುವುದು ಗುಡ್ಡ', 'ಸ್ವರಾಕೇಳಿ' ಕೇಳಿ ಮಾಮರವೇ ಆಗ ತೇನೋ ಅಂತ ಭ್ರಮಾ' ಇತ್ಯಾದಿಗಳಲ್ಲಿ ಬೇಂದ್ರೆ ಆಧ್ಯಾತ್ಮಿಕ ಅನುಭೂತಿ ಭೌತಿಕ ನೆಲೆಯಿಂದ ಸ್ಥಗಿತಗೊಳ್ಳದೆ ಎರಡೂ ಗಾಢವಾಗಿ ಬೆಸೆದುಕೊಳ್ಳುತ್ತ, ಸಾವಯುವ ಸಂಬಂಧ ಹೊಂದುತ್ತ, ಏಕಜೀವವಾಗಿ ಸ್ಪಂದಿಸುವುದನ್ನು ಕಾಣುತ್ತೇವೆ.

'ಬೇಂದ್ರೆ ಕಾವ್ಯಾಭ್ಯಾಸಕ್ಕೆ ಅವರ ಮನೋವೃತ್ತಿ ಉಳ್ಳವರೇ ತೊಡಗಬೇಕಾಗುವುದು ಅನಿವಾರ್ಯ' ಎನ್ನುವ ಡಾ. ವಾಮನ ಬೇಂದ್ರೆ ಅವರ ಕಾವ್ಯದ 'ವ್ಯಕ್ತಿ

೧. ಅಂಕಣ, ಸಂ. ೩, ಸಂಚಿಕೆ ೫. ಕೀರ್ತಿನಾಥ ಕುರ್ತಕೋಟಿ : ಬೇಂದ್ರೆಯವರ ಕಾವ್ಯ ಸೃಷ್ಟಿ. ಪು. ೩೩

ವಿಶಿಷ್ಟ' ಗುಣಗಳಾದ ದೇಶ ಕಾಲ ವಸ್ತು ದ್ರವ್ಯ ಚಿಂತನೆ, ಗುಣಧರ್ಮ ಶೋಧನೆ ಮತ್ತು 'ದೇಹದ ಸಂಪೂರ್ಣ ಅರಿವನ್ನು ಇಟ್ಟುಕೊಂಡೂ ದೇವಶಕ್ತಿ.. ಯಲ್ಲಿ ನಂಬಿಗೆ'[೧] ಇತ್ಯಾದಿಗಳನ್ನು ಗಮನಿಸಲು ಸೂಚಿಸುತ್ತಾರೆ. ಬೇಂದ್ರೆ ಕಾವ್ಯಾಭ್ಯಾಸಗಳಿಗೆ ದಿಕ್ಸೂಚಿಯಾಗಿರುವ ಈ ಮಾತುಗಳಲ್ಲಿ ಭೌತಿಕ ಮತ್ತು ಆಧ್ಯಾತ್ಮಿಕ ಸ್ತರಗಳು ಏಕಕಾಲಕ್ಕೆ ಸಂಯೋಜನೆಗೊಳ್ಳುವ ಅಂಶವನ್ನು ಸ್ಪಷ್ಟಗೊಳಿಸಲಾಗಿದೆ. ಆದುದರಿಂದ ಬೇಂದ್ರೆ 'ಸ್ವರಾಕೇಳಿ ಮಾಮರಾ ಆಗತೆನೊ' ಎನ್ನುವ ಭ್ರಮೆಯಿಂದ ಮುಂದು ವರಿದು ತಾವೇ ಸ್ವತಃ 'ಸ್ವರಾ' ಆದರು. ಅದು ಮಾನವ ಜನಾಂಗದ ಶ್ರುತ ಅಶ್ರುತ 'ಸ್ವರಾ'; ಮತ್ತು ಮಾನವ ಸಂಸ್ಕೃತಿಯ ಮೂರ್ತ ಅಮೂರ್ತ ಧ್ವನಿ.

ಆದುದರಿಂದ, 'ಬೇಂದ್ರೆ ಕಟ್ಟಿದ ಕಗ್ಗಾ'

> 'ಹಕ್ಕಿ ನುಡಿಸ್ಯಾವ ಗೆಜ್ಜಿ
> ಬೆಳಕು ಹಾಕ್ಯಾವ ಹೆಜ್ಜಿ'

ಒಡಲ ನೂಲು ಅದು ಸುಮ್ಮನೆ ಆದ ಹಗ್ಗವಲ್ಲ. ಅದರ ಮೂಲದಲ್ಲಿ ಪ್ರಜ್ಞೆಯ, ಚೆಲುವಿನ ಸತ್ವ, ತತ್ವ, ಹುದುಗಿದೆ.

> 'ಅಂಬಿಕಾತನಯ ಕಟ್ಟಿದ ಕಗ್ಗಾ
> ಜಗ್ಗಬ್ಯಾಡ ನೀ ಹಿಗ್ಗಾಮುಗ್ಗಾ
> ಹುರೀ ಐತಿ ಒಳಗ ಬರಿದಲ್ಲಾ ಹಗ್ಗಾ'

ಆದುದರಿಂದ ಕವಿ ತೋರಿದ ಜಾಡಿನಲ್ಲಿಯೇ ಸಹೃದಯ ಎಚ್ಚರದಿಂದ ಹೆಜ್ಜೆಯಿಡ ಬೇಕಾದುದು ಅನಿವಾರ್ಯ.

೩. ಡಬ್ಲ್ಯು. ಬಿ. ಯೇಟ್ಸ್, ಪಾಲ್ ವೆಲೇರಿ, ವಾಲೇಸ್ ಸ್ಟೀವನ್ಸ್ ಮುಂತಾದ ಪಾಶ್ಚಾತ್ಯ ಕವಿಗಳ ಕಾವ್ಯ ಧೋರಣೆಯನ್ನು: 'ಕಾವ್ಯಸೃಷ್ಟಿ ಈ ಕವಿಗಳಿಗೆ ಒಂದು ಅಪೂರ್ವವಾದ ಅನುಭವವಾಗಿದ್ದು ಅದು ಹುಟ್ಟು ಸಾವುಗಳೊಂದಿಗೆ ಒಂದು ರಹಸ್ಯಪೂರ್ಣವಾದ ಸಂಬಂಧವನ್ನು ಕಟ್ಟಿಕೊಂಡಿರುತ್ತದೆ. ಅದೃಷ್ಟವೆನ್ನಬಹುದಾದ, ಅತೀಂದ್ರಿಯವೆನ್ನಬಹುದಾದ ಅನುಭವಗಳ ಲೋಕಕ್ಕೆ ಒಳದಾರಿಯನ್ನು ಈ ಕವಿಗಳು ಕಾವ್ಯದ ಮೂಲಕವಾಗಿ ಕಂಡು ಕೊಂಡಿದ್ದಾರೆ'[೨] ಎಂದು ಮುಂತಾಗಿ ಗುರುತಿಸಿ ಕುರ್ತಕೋಟಿ ಬೇಂದ್ರೆಯವರನ್ನು ಏನೂ ಸಂಕೋಚವಿಲ್ಲದೆ ಈ ಕವಿಗಳ ಸಾಲಿಗೆ ಸೇರಿಸಿ ಬಿಡಬಹುದು ಎನ್ನುತ್ತಾರೆ. ಈ ಕಾರಣಗಳಿಗಾಗಿ ಬೇಂದ್ರೆಯವರನ್ನು ಇವರ ಸಾಲಿಗೆ ಸೇರಿಸುವುದು ಒಂದು ಅತಿ ಸರಳವಾದ ತೀರ್ಮಾನವಾಗುತ್ತದೆ. ಏಕೆಂದರೆ ಬೇಂದ್ರೆ

೧. ನಾಕುತಂತಿ, ಸಂ. ಡಾ. ವಾಮನ ಬೇಂದ್ರೆ, ಪು. ೧೦೨

೨. ಕೀರ್ತಿನಾಥ ಕುರ್ತಕೋಟಿ, ಅಂಕಣ, ಸಂ. ೩, ಸಂ. ೫, ೧೯೮೨, ಪು. ೩೨.

‘ಅನುಭವಗಳ ಲೋಕಕ್ಕೆ ಒಳದಾರಿ’ಯನ್ನು ಕಂಡು ತೃಪ್ತರಾಗುವುದಿಲ್ಲ; ತಪ್ತರಾಗುತ್ತಾರೆ.

ನಿದ್ದೆಗೊಮ್ಮೆ ನಿತ್ಯ ಮರಣ
ಎದ್ದ ಸಲ ನವೀನ ಜನನ

ಎಂದು ಅಮೂರ್ತ ಸತ್ಯದ ನುಡಿ ಮೀಂಟುತ್ತಾರೆ.

ಕುಣಿಯೊಳಗ ಕುಣಿಸ್ಯಾಡ್ಯಾರ ಹೆಣಾ
ಬಸಿರಿನೊಳಗ ಬಣಾ ಹುಟ್ಟಿ–ಸ್ಯಾರಣಾ
ನೆಲಾ ಎಲ್ಲಾ ಮಾಡ್ಯಾರ ಖಣಾ
ನಡೆಸಿದರಿಲ್ಲಿ ರಣಾ
ತೀರಿಲ್ಲ ಇನ್ನೂ ಆ ಜನಾ

ಎಂದು, ಹುಟ್ಟು ಸಾವುಗಳ ರಹಸ್ಯಪೂರ್ಣವಾದ ಸಂಬಂಧವನ್ನು ಸ್ಥಿರೀಕರಿಸುವ ಬದಲು—

ದೇವರಿಗೊಂದು
ಗೋರಿಯು ಕಟ್ಟಿ
ಧರ್ಮದ ಧೂಪಕೆ
ಬೆಂಕಿಯನಿಕ್ಕಿ
ನೆಲವನ್ನೆಲ್ಲಾ
ತುತ್ತುವೆನೆಂದು
ಗದರುತ್ತಿಹುದು
ಗರ್ಜಿಸುತಿಹುದು
ಬಡವರ ಬಗ್ಗರ
ತುತ್ತಿನ ಚೀಲದ
ಒಳಗಿನ ಒಳಗಿನ
ಒಳದನಿಯೊಂದು

ಎಂದು ಆ ರಹಸ್ಯ ಕೋಟೆಗಳನ್ನು ಒಡೆದು ಹಾಕುತ್ತಾರೆ. ಈ ಕಾರಣಗಳಿಂದಾಗಿ ಬೇಂದ್ರೆ ಕಾವ್ಯದ ಅಧ್ಯಯನ ಮಾಡುವಾಗ ‘ಅದ್ಭುತ’, ‘ಅಚ್ಚರಿ’, ‘ವಿಸ್ಮಯ’ ಇತ್ಯಾದಿ ಮಾತುಗಳನ್ನು ಹೇಳುತ್ತ ಹೋಗುವಲ್ಲಿ. ಬೇಂದ್ರೆ ಕಾವ್ಯ ಸತ್ಯ ಸತ್ವಗಳಿಂದ ವಂಚಿತವಾಗುವ ಅಪಾಯವಿರುತ್ತದೆ. ಏಕೆಂದರೆ ಬೇಂದ್ರೆ ಕಾವ್ಯ ಕಾವ್ಯಮೀಮಾಂಸೆಯ ಪರಿಧಿಗಳನ್ನು ಮೀರಿ ಸ್ಪಂದಿಸುವ ಮಾನವಕುಲದ ಸಮಷ್ಟಿ ಧ್ವನಿಯಾಗಿದೆ; ಜನಾಂಗದ ಬದುಕಿನ ಅಗಣಿತ ಆಯಾಮಗಳನ್ನು ಅನಾವರಣಗೊಳಿಸುವ ಒಂದು

ಸಾಂಸ್ಕೃತಿಕ ಸತ್ಯವಾಗಿದೆ. ಇದನ್ನೇ ಇಲ್ಲಿ ಸಾಂಸ್ಕೃತಿಕ ಕಾಳಜಿಗಳು ಎಂದು ಕರೆಯಲಾಗಿದೆ.

೪. ಕನ್ನಡ ಭಾಷೆಯ ಎಲ್ಲ ಬಗೆಯ ಅಭಿವ್ಯಕ್ತಿ ಶಕ್ತಿ ಸಾಧ್ಯತೆಗಳನ್ನು ಸೂರೆಗೊಂಡ ಕವಿ ಎಂತಲೋ. ಸಾಹಿತ್ಯೇತರವಾದ ಸಂಗತಿಗಳನ್ನೂ ಕಾವ್ಯಪ್ರಕಾರಕ್ಕೆ ಹೇಗೆ ಅಳವಡಿಸಿದರೆಂತಲೋ, 'ಅತ್ಯಂತ ದಟ್ಟ ಹರಹಿನ ವಿವಿಧ ಸುರಂಗಗಳ ಬದುಕು ನಡೆಸಿದ'ರೆಂತಲೋ, ಕಲ್ಪನಾವಿಲಾಸದ ಮಾತುಗಾರ, ಶಬ್ದಲೋಕದ ಮೋಡಿಕಾರ ಇತ್ಯಾದಿಗಳನ್ನು ಮಾತಾಡುತ್ತಲೇ 'ಬೇಂದ್ರೆ ಕಾವ್ಯದ ಸೋಲು' ಮುಂತಾದವುಗಳನ್ನಾಡುವ ಕೆಲವರು ಬೇಂದ್ರೆ ಕಾವ್ಯದ ಸಾಂಸ್ಕೃತಿಕ ಕಾಳಜಿಗಳನ್ನು ಮರೆಯುತ್ತಾರೆ. ಅಥವಾ ಅವುಗಳಿಂದ ವಂಚಿತರಾಗುತ್ತಾರೆ. ಹೀಗಾಗಿ ಬೇಂದ್ರೆ ಕಾವ್ಯದ ನೆಲೆಗಟ್ಟನ್ನು ಮುಟ್ಟುವ ಅಥವಾ ಅದರ ಜೀವಂತತೆಯ ತಲಸ್ಪರ್ಶಿ ಗುಣಗಳನ್ನು ಗ್ರಹಿಸಲಾಗದ ಕ್ಲೀಷೆಗಳನ್ನು ಅಂಥ ಕೆಲವರ ಮಾತುಗಳಲ್ಲಿ ಕಾಣುತ್ತೇವೆ. 'ಇಳಿದು ಬಾ ತಾಯಿ' ಅಭಿನಂದನ ಗ್ರಂಥದ ಸಂಪಾದಕ ಡಾ. ಬುದ್ಧಣ್ಣ ಹಿಂಗಮಿರೆ, ಬೇಂದ್ರೆಯವರ ಅಭಿಜಾತ ಪ್ರಜ್ಞೆಯನ್ನು ಕುರಿತು 'ಅವರ ಕಾವ್ಯದ ಮೂಲ ಸ್ರೋತ ಜಾನಪದ ಬದುಕಿನಲ್ಲಿರುವುದನ್ನು ಗುರುತಿಸುತ್ತ 'ನಾಲ್ಕು ಹುಡುಗರು ಎದ್ದು ಬೌ ಎಂದ ಮಾತ್ರಕ್ಕೆ ಆ ಕವಿಯ ಮಹತ್ವವೇನೂ ಕಡಿಮೆಯಾಗುವುದಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ. ಬೇಂದ್ರೆ ಕಾವ್ಯ ವಿಮರ್ಶೆ ವಿಮರ್ಶಕನಿಗೆ ಒಂದು ದೊಡ್ಡ ಸವಾಲು ಎಂದು ಹೇಳುತ್ತ ಅವರ 'ಕಾವ್ಯದ ಮಹತ್ವ ಅದರ ಸಾಂಸ್ಕೃತಿಕ ಅಭಿನಿವೇಶನದಲ್ಲಿರುವುದು' ಎಂದು ಸೂಚಿಸಿದ್ದಾರೆ.

ಇದೇ ಸಮಯದಲ್ಲಿ ಬೇಂದ್ರೆ ಕಾವ್ಯದ ಸಮಾಜ ಪ್ರಜ್ಞೆ ಕುರಿತು ಡಾ. ಕೆ. ರಾಘವೇಂದ್ರರಾವ್ 'ಬೇಂದ್ರೆಯವರ ಕಾವ್ಯದಲ್ಲಿ ಸಾಮಾಜಿಕ ನಿರ್ಮಿತವಾದ ಸಾಂಸ್ಕೃತಿಕ ಮೌಲ್ಯಗಳನ್ನು ಆದರ್ಶಗಳನ್ನು ನಾವು ಕಾಣಬಹುದು' ಎಂದು ವಿವರಿಸಿ ಅವರ ಕಾವ್ಯದ ಭೌತಿಕ ತಳಹದಿಯ ಕಡೆಗೆ, ಕಾವ್ಯದಲ್ಲಿ ಮೂಡಿರುವ ಸಾಂಸ್ಕೃತಿಕ ವೈಶಿಷ್ಟ್ಯಗಳ ಕಡೆಗೆ ವಿಮರ್ಶಕರ ಗಮನವನ್ನು ಸೆಳೆಯುತ್ತ 'ಇದನ್ನು ಮೊಟ್ಟಮೊದಲನೆಯ ಹೆಜ್ಜೆಯೆಂದು ಭಾವಿಸಬೇಕು' ಎಂದಿದ್ದಾರೆ. ಅದರ ಮುಂದಿನ ಹೆಜ್ಜೆಯನ್ನೂ ಅವರೇ ಇಡಬೇಕಾಗಿತ್ತೇನೋ, ಅಥವಾ ಯಾರಾದರೂ ಇಟ್ಟಿದ್ದಾರೋ ತಿಳಿಯದು. ಏಕೆಂದರೆ ಬೇಂದ್ರೆಯವರ ಅಪ್ಪಟ ಜಾನಪದ ಮತ್ತು ಮಾನವೀಯ ವ್ಯಕ್ತಿತ್ವದ ಮೂಲಭೂತ ಸಾಂಸ್ಕೃತಿಕ ಕಾಳಜಿಗಳ ಅಭಿವ್ಯಕ್ತಿಗೆ ಕಾವ್ಯ ಒಂದು ಮಾಧ್ಯಮವಾಗಿರುವುದನ್ನು ಗುರುತಿಸುತ್ತಲೇ ಇದರಿಂದಾಗಿ ಅವರ ಕಾವ್ಯ ಹೇಗೆ ಸಾಂಸ್ಕೃತಿಕ ಆಯಾಮಗಳನ್ನು ಪಡೆದುಕೊಳ್ಳುತ್ತದೆ; ಮತ್ತು ವಿಶ್ವಸಂವೇದನೆಗಳಿಗೆ ಧ್ವನಿಯಾಗುತ್ತದೆ ಎನ್ನುವುದರ ಶೋಧ ಇಲ್ಲಿ ಮುಖ್ಯ. ಈ ದೃಷ್ಟಿಯಿಂದ ಬೇಂದ್ರೆ ಕಾವ್ಯ ವಿಶಿಷ್ಟ ಮತ್ತು ನಿರಂತರ ಪ್ರಸ್ತುತ.

೫. 'Man is the only culture-building animal'—'ಮನುಷ್ಯ ನೊಬ್ಬನೇ ಸಂಸ್ಕೃತಿ ನಿರ್ಮಾಪಕ ಪ್ರಾಣಿ' ಮತ್ತು ಅವನೇ ಈ ಭೂಮಿಯ ಮೇಲೆ ಪ್ರಥಮ ಸಾಂಸ್ಕೃತಿಕ ರಂಗವನ್ನು ಸ್ಥಾಪಿಸಿದವನು. 'he sets the cultural stage on earth' ಎನ್ನುವ ಸಾಂಸ್ಕೃತಿಕ ಮಾನವಶಾಸ್ತ್ರಜ್ಞ ಮೆಲ್‌ವಿಲ್ ಜೆ ಹೆರ್ಸ್ಕೋವಿಟ್ಸ ಮುಂತಾದವರ ಮಾತುಗಳ ಹಿನ್ನೆಲೆಯಲ್ಲಿ ಬೇಂದ್ರೆ ಕಾವ್ಯ ನಮಗೆ ಹೆಚ್ಚು ಅರ್ಥಪೂರ್ಣವಾಗುತ್ತದೆ; ಅಮೂರ್ತ ಶಕ್ತಿಗಳನ್ನೂ ಪ್ರತೀಕ ಸಂಕೇತಗಳ ಮೂಲಕ ಮೂರ್ತೀಕರಣಗೊಳಿಸುತ್ತಲೇ ಹತ್ತಿರವಾಗುತ್ತದೆ,

೬. ಸಂಸ್ಕೃತಿಗೂ ಜಾನಪದಕ್ಕೂ ಇರುವ ಒಂದು ಸೂಕ್ಷ್ಮ ಅಂಶ : ಜಾನಪದ ಸಾವನ್ನು ಧಿಕ್ಕರಿಸುವ ಜೀವಂತ ಪಳೆಯುಳಿಕೆ ಎನ್ನುವುದು. ಜಾನಪದದ ಮೂಲ ಸ್ರೋತದಿಂದ ಮೊದಲುಗೊಂಡು ಅಭಿವ್ಯಕ್ತಿಯ ಯಾವ ಹಂತದಲ್ಲೂ ಸ್ಥಗಿತ ಗೊಳ್ಳದ ಬದುಕಿನ ಅಖಂಡ ಜೀವಂತ ಗತಿ, ಬೇಂದ್ರೆ ಕಾವ್ಯದ ಗುರಿ. ಹೀಗಾಗಿ ಬೇಂದ್ರೆ, ಸಂಸ್ಕೃತಿಯ ಎರಡೂ ಹಂತಗಳನ್ನು – ಅಂದರೆ ಭೌತಿಕ ಮತ್ತು ಆಧ್ಯಾತ್ಮಿಕ ಹಂತಗಳನ್ನು—ಪುರಾಣ ಕಾಲ, ಐತಿಹಾಸಿಕ ಕಾಲದಿಂದ ವರ್ತಮಾನ ಕಾಲದ ವರೆಗೆ ಸಂವಹನಗೊಂಡ ವಾಸ್ತವಾಂಶ ಚಿಂತನಾಂಶಗಳನ್ನು ಸಮೀಕರಿಸುತ್ತ ಎಲ್ಲದಕ್ಕೂ ಮುಖಾಮುಖಿಯಾಗಿ ಸ್ಪಂದಿಸುತ್ತಾರೆ.

> ಪುರಾಣದ ಸೋಗು ಹಾಕಿ, ಇತಿಹಾಸದ ಬಣ್ಣ ಬಳಿದು
> ಕಾಲ ಬಿಚ್ಚಿದ ಕತಿ ಗತಿ ಯಾಕೋ
> ಹುಜರಾ ಹುಜರಾನ ಐತಿ ಜೀವಂತ ವ್ಯವಹಾರ
> ಪಲ್ಲಾ ಸಲ್ಲದ ಹಾಡು ನುಡಿ ಸಾಕೋ[೧]

ಎನ್ನುತ್ತ ಹಣ್ಣಾದ ಆತ್ಮದ ಬಂಗಾರ ಬಣ್ಣದಲ್ಲಿ ಜೀವರಸದ ತೇಜ ಕಾಣುತ್ತಾರೆ. ಭೌತಿಕ ಮತ್ತು ಆಧ್ಯಾತ್ಮಿಕ ಪಾತಳಿಗಳೆರಡೂ ಪರಸ್ಪರ ಸಂಧಿಸುತ್ತ ಬೇಂದ್ರೆ ಕಾವ್ಯ ದಲ್ಲಿ ಹೇಗೆ ಸ್ಪಂದಿಸುತ್ತವೆ ಎನ್ನುವುದು ಕುತೂಹಲಕಾರಿಯಾಗಿದೆ.

೭. ಸಂಸ್ಕೃತಿಯ ಪ್ರಥಮ ರಂಗ ಸ್ಥಾಪನೆಗೊಳ್ಳುವುದು ಈ ಭೂಮಿಯ ಮೇಲೆ. ಹೀಗಾಗಿ ಬೇಂದ್ರೆ ಕಾವ್ಯದಲ್ಲಿ ಮಣ್ಣು, ನೆಲ, ಅಥವಾ ಭೂಮಿ ಒಂದು ವಿಶಿಷ್ಟ ಆಧಾರಭೂತ ವಸ್ತುವಾಗಿ ಮೂಡಿಬರುತ್ತದೆ. ನೆಲ ಅಥವಾ ಭೂಮಿ ಅದು ಭೂಮಿತಾಯಿ. ಮೊದಲಗಿತ್ತಿಯಂತೆ ಮೆರೆಯುವ ಈಕೆಯ ಮೇಲೆ ಮಾನವ ನಡೆ ಸುವ ಆಕ್ರಮಣ, ಸುರಿಸುವ ರಕ್ತಪಾತ ಅನಂತ. ಕೊರೆದು, ಮೆಟ್ಟಿ, ಕೆತ್ತಿ ಕುತ್ತಿ

೧. ಅಂಬಿಕಾತನಯದತ್ತ, ಪರಾಕಿ, ಪು. ೬

ಕೊಚ್ಚಿದಷ್ಟೂ 'ಇವಳು' ನಿತ್ಯವೂ ರಸಧಾರೆ ಸುರಿಸುವ ಪುಣ್ಯಾತಗಿತ್ತಿ, ವೈಭವದಿಂದ ಮೆರೆಯುವ ಮೊದಲಗಿತ್ತಿ.

'ಹೂವ ಹಡಲಿಗೆಯನು ಹೊತ್ತ
ಭೂಮಿತಾಯಿ ಜೋಗತಿ
ಮೈತುಂಬಿ ಕುಣಿಯುತಿಹಳ
ನಂತಕಾಲವೀಗತಿ

ಹೂವ ಹಡಲಿಗೆ ನಿತ್ಯವಿಕಸನದ ಭೌತಿಕ ಪ್ರತೀಕವಾದರೆ ಅದನ್ನು ಹೊತ್ತು ಮೈ ತುಂಬಿ ಕುಣಿಯುವ ಜೋಗಿತಿ-ಭೂಮಿತಾಯಿ-ವಿಶ್ವಪ್ರತಿಮೆಯಾಗುತ್ತ ವಿಶ್ವಸಂವೇದನೆಯ-ಆಂತರಿಕ-ರೂಪಕವಾಗಿ ಅರಳುತ್ತದೆ. 'ಅನಂತ ಕಾಲವೀಗತಿ' ಎಂದು ಹೇಳುವಲ್ಲಿ ಬದುಕಿನ ಜೀವಂತ ಗತಿಯ ಕಾಲಾತೀತ ಸ್ವರೂಪವನ್ನು ಅಭಿನಯಿಸಿ ತೋರಿಸಲಾಗಿದೆ. ಇಷ್ಟಿದ್ದರೂ ಭೂಮಿಯ ಮೇಲೆ ಮನುಷ್ಯನಿಗೆ ಒಪ್ಪವಾಗಿ ಬದುಕಲು ಬರಲಿಲ್ಲ. 'ರಾಜರು' 'ಪುಂಡರು' 'ತಾಯಿಗಂಡರು' ಇಲ್ಲಿ ಒಡೆತನ ನಡೆಸಿದರೂ ಅದೆಲ್ಲ 'ನಿನ್ನ ತೇಜದ ಮುಂದೆ ರಾಜ ತೇಜವು ಕೂಸು. ಅವರನ್ನೂ ಮಡಿಲಾಗ ಮಲಗಿಸಿ'ದಳು. ಹಾಗೆಂದು ಭೂಮಿಯ ಮೇಲಿನ ಬದುಕು ಮಲಗುವಂತಿಲ್ಲ. ಕಾಲಿಗೆ ಆಧಾರವಾದದ್ದು, ಉಸಿರ ಜೀವಾಳವಾದದ್ದು ಈಗ ಕಾಲ್ಕಸವಾದರೆ ಹೇಗೆ ? ಮತ್ತೆ ಮತ್ತೆ ಹೊಸದಾಗಿ ಬಾಳನ್ನು ಹೂಡಬೇಕು:

'ಹರಗೋಣ ಬಾ ಹೊಲ ಹೊಸದಾಗಿ
ಬಿದ್ದೈತಿ ದ ಹ್ಯಾಗೋ ಕಾಲ್ಕಸವಾಗಿ

ಎಂದು ಕೃಷಿಸಂಸ್ಕೃತಿಯ ಹಿರಿಮೆಯನ್ನು

ಬಿತ್ತಿದರು ಕಾಳು ಹನಿಹನಿಯಾಗಿ
ಬರ್ತಾಳ ತಾಯ್ ತೆನಿತೆನಿಯಾಗಿ

ಎಂದು ಶ್ಲೇಷೆಯ ಮೂಲಕ ಎತ್ತಿಹಿಡಿದ ಬೇಂದ್ರೆ ನೆಲಕ್ಕೂ, ಒಕ್ಕಲುತನಕ್ಕೂ ಭೂಮಿಯ ಫಸಲಿಗೂ ತಾಯ ಕರುಣೆಯ ನಿಸ್ಸೀಮತೆಗೂ ಒಂದು ಸಜೀವ ಸಂಬಂಧ ಕಲ್ಪಿಸುತ್ತ ತಟ್ಟನೇ ಜೀವನದ ಮೂಲಭೂತ ಶ್ರದ್ಧೆಗೆ ನಮ್ಮನ್ನು ಕೀಲಿಸುತ್ತಾರೆ.

'ನಂಬಗಿಲೆ ತುಂಬ್ಯ ದ ನಮ್ಮ ಬಾಳು
ನಂಬಿಗಿಲೆ ಬಿತ್ತ್ರೋಣ ನಮ್ಮ ಬಾಳು'

ಶ್ರದ್ಧೆಯಿಲ್ಲದೆ ಬದುಕು ಸಫಲವಾಗದು ಎನ್ನುವ ಕಾಳಜಿ ಇಲ್ಲಿ ಮುಖ್ಯವಾಗುತ್ತದೆ. ಬೇಂದ್ರೆ ಕಾವ್ಯದಲ್ಲಿ ಬರುವ ಮತ್ತೊಂದು ಅತಿ ಮುಖ್ಯ ಭೌತಿಕ ಸಂಸ್ಕೃತಿಯ ವಸ್ತು ನೀರು.

ಕಾಲಕಸವಾದ ಹೊಲವನ್ನು ಹರಗಿ ಸಜ್ಜುಗೊಳಿಸಿದರೆ ಮುಗಿಯಲಿಲ್ಲ. ಹೊಲ ಹೊಲ ತೃಪ್ತವಾಗಿವೆ. ಪುರಾಣದ ಭಗೀರಥನ ಪ್ರಾಣ ಗಂಗೆಗಾಗಿ ಮೊರೆದಂತೆ

ಇಳಿದು ಬಾ ತಾಯಿ ಇಳಿದು ಬಾ
........................
ನಾಡಿ ನಾಡಿಯನು ತುತ್ತ ಬಾ
ನಮ್ಮ ನಾಡನ್ನೇ ಸುತ್ತ ಬಾ
ತಾಯಿ ಪಾದದಾನಂದ ಉಂಡು
ಬೇದಪರ ಜೀವ ಬೆರಸೋಣ ಬಾ
ಇಳಿದು ಬಾ ತಾಯಿ ಇಳಿದು ಬಾ

ಎಂದು ಆಕ್ರಂದನಗೈಯ್ಯುತ್ತದೆ ಕವಿಹೃದಯ. ಆ ಸ್ವರ್ಣಗಂಗೆ ಇಳಿದುಬಂದುದನ್ನು ಅದು

ಜಡೆಯಲ್ಲಿ ಇಳಿದು, ಮೆದುಳೆಲ್ಲ ತೊಳೆದು
ನರನಾಡಿಗಳಲಿ ಹೊಳೆದು
ಮತ್ತೆ ಹೊಳೆಯಾಗಿ ಹೊನ್ನ ಬೆಳೆಯಾಗಿ
ಮನದ ಮಾಲಿನ್ಯ ಕಳೆದು

ಹರಿಯುವುದನ್ನು ಕವಿ ಕಾಣುತ್ತಾನೆ. ಅದರ ಪ್ರವಾಹದಲ್ಲಿ—

ಕೇಳಿಕೆಗೆ ತಾನೆ ಹೇಳಿಕೆಯದಾಗಿ
ತೇಲಿದವು ಎರಡು ಸಾಲು :
'ನಾ ನೀನು ಒಂದೆ ಪಾಲು
ಇಲ್ಲಿಲ್ಲ ಕೀಳು ಮೇಲು'

ಹೊನ್ನ ಗಂಗೆ ಹರಿಯಬೇಕು; ಹೊನ್ನ ತಾವರೆ ಅರಳಬೇಕು, ಹೊನ್ನದಾರಿ ತೆರೆಯಬೇಕು. ಇದು ಕವಿಯ ನಿರಂತರ ಹಂಬಲ. ಅದು—

ಬೆಳಕು ಕುಡಿಸುವುದು
ಬೆಳಕ ಗುಡಿಸುವದು
ನನ್ನ ನಿನ್ನ ಬೆರೆದು

ಎನ್ನುವ ಅಭೀಪ್ಸೆ. ಲಾವಣ್ಯಜಲಧಿ ಗಂಟಲಲ್ಲಿ ವಿಷವಾಗುವ, ಮಲವಾಗುವ ಅಜ್ಞಾನದ ಪ್ರತೀಕಗಳು ಬೇಂದ್ರೆ ವಾಸ್ತವ ಪ್ರಜ್ಞೆಯ ತೀಕ್ಷ್ಣತೆಯನ್ನು ತೋರಿಸುತ್ತಲೇ ಜೀವರಸದ ತೇಜದ ರೂಪವನ್ನು ಕಂಡರಿಸುತ್ತವೆ.

ಹಿಡಿಯ ತೆರೆದು ಅದನೊಡೆಯ ಬರದು
ತೇಜಃ ಪುಂಜ ಹುಡಿಯು.

೮. ಮೂರನೆಯ ಮುಖ್ಯ ಕಾಳಜಿಯ ವಸ್ತು 'ಅನ್ನ' ಅಥವಾ ರೊಟ್ಟಿ. ಅನ್ನ ಪ್ರಾಣ : ಅನ್ನ ಬ್ರಹ್ಮ. ಎಲ್ಲರ ಹೊಟ್ಟೆ ನೆತ್ತಿಯನ್ನು ಕಾಪಿಟ್ಟು ಬದುಕಿನಲ್ಲಿ ನೆಮ್ಮದಿ

ಯನ್ನು ಸಂತೃಪ್ತಿಯನ್ನು ತುಂಬಬೇಕಾಗಿರುವ ಅನ್ನ ಕೆಲವರಪಾಲಿಗೆ 'ಅಮೃತದ ತೇಗು'

ಕಿಕ್ಕಿರಿ ತುಂಬಿದೆ
ಭೂಮಿಯು ಕಣಜ
ಕಕ್ಕಸಬಡುತಿದೆ
ಬೊಕ್ಕಸದೊಡಲು

ಭಂಡವಲಶಾಹಿಗಳ ಭ್ರಷ್ಟ ವ್ಯವಸ್ಥೆಯಿಂದಾಗಿ ಅದು ದುಡಿವವರ ದೀನರ ಪಾಲಿಗೆ ಬರೀ ಧಗಧಗ ಬೆಂಕಿ. 'ಬರಿದೋ ಬರಿದು. ತೆರವೋ ತೆರವು, ಬಡವರ ಬಗ್ಗರ ತುತ್ತಿನ ಚೀಲಾ' ಅನ್ನಬ್ರಹ್ಮನೂ ಈ ವ್ಯವಸ್ಥೆಯ ಮುಷ್ಠಿಯಲ್ಲಿ ಸಿಕ್ಕಿದ್ದಾನೆ. ದೇವರು ಧರ್ಮ ಯಾವುದೂ ಇವರ ನೆರವಿಗೆ ಬರುವುದಿಲ್ಲ. ಪಾಪ ಪುಣ್ಯಗಳ ಜಾಳಿಗೆಯಲ್ಲಿ ಜೀವ ನೇತಾಡುತ್ತಿದೆ. ಶೋಷಣೆಯ ಅಟ್ಟಹಾಸಕ್ಕೆ ಸಿಕ್ಕ ಬಡವ, ದೀನ ದಲಿತ ಅವನನ್ನು ಮಾನವ ಎಂದು ಗುರುತಿಸುವವರೂ ಇಲ್ಲ. ಅವರ ಶೋಷಣೆ ರುದ್ರವೀಣೆಯಾಗುತ್ತದೆ. ರುದ್ರವೀಣೆ ಮಿಡಿಯುವ ರೂಪಕದ ಹಿಂದೆಯೇ ಶೋಷಣೆಗೆ ಕಾರಣವಾದ ವ್ಯವಸ್ಥೆಯ ಮೂಲ ಘಟಕಗಳನ್ನು ಒಡೆದು ಹಾಕುವ ಕ್ರಿಯೆ ಮೂಡುತ್ತದೆ.

'ದೇವರದೊಂದು ಗೋರಿಯ ಕಟ್ಟಿ, ಧರ್ಮದ ಧೂಪಕೆ ಬೆಂಕಿಯನಿಕ್ಕಿ ಗರ್ಜಿಸುತ್ತಿರುವ' ಜೀವಂತ ಚಿತ್ರ ಮಾನವೀಯ ಅಂತಃಕರಣದ ಪ್ರಪಾತವಾಗಿ ಧುಮ್ಮಿಕ್ಕುತ್ತದೆ. ಎಟುಕದ ಅನ್ನಬ್ರಹ್ಮಕ್ಕೂ, ಜೀವವನ್ನು ಕುಟುಕುವ ವ್ಯವಸ್ಥೆಗೂ ಇರುವ ಕೊರಕಲನ್ನು ಅಳಿಸಿದ ಬೇಂದ್ರೆ

ಮತ್ತೆ ನೆಲದ ಎದೆಯ ಮೇಲೆ ತೆನೆಯಧ್ವಜವು ನಿಲ್ಲಲಿ
ಸಾವಿಗಿಂತ ಬಾಳು ಮೇಲು ಎಂಬ ಮಾತು ಗೆಲ್ಲಲಿ

ಎಂದು ಸಾರುತ್ತಾರೆ. ಹೊನ್ನ ನೆಕ್ಕಿ ಬಾಳ್ವರಿಲ್ಲ ಎಂದು ವಿಡಂಬಿಸುತ್ತ 'ಅನ್ನ ಸೂರೆ ಮಾಡಿರಿ ಅಣ್ಣಗಳಿರಾ ಅನ್ನದಲ್ಲಿ ಮಣ್ಣ ಕಲಸಬೇಡಿರಿ' ಎನ್ನುವ ವಾಸ್ತವ ವಿಷಣ್ಣತೆಗೆ ದಿಕ್ಕು ತೋರುತ್ತಾರೆ. ಏಕೆಂದರೆ 'ಹೊಸಗಾಲದ ಹಸುಮಕ್ಕಳಾದರೂ ಚೆನ್ನಾಗಿ ಬಾಳಲಿ, ಮುಗಲದ ಬೆಳಗನ್ನು ಅವರಾದರೂ ಕಾಣಲಿ' ಎನ್ನುವುದೇ ಅವರ ಸಾಮಾಜಿಕ ಬದ್ಧತೆಯ ತುಡಿತ.

೯. ಬೇಂದ್ರೆ ಕಾಳಜಿಯ ನಾಲ್ಕನೆಯ ಅಂಶ ರಾಷ್ಟ್ರ, ನಾಡು–ನುಡಿ. 'ಅತ್ತೊಂದು ಹತ್ತು ಕೋಟಿ, ಇತ್ತೊಂದು ಹತ್ತು ಕೋಟಿ'ಯಾಗಿ ಚಿದುರಿದ ಭಾರತದ ಸ್ವಾತಂತ್ರ್ಯಕ್ಕಾಗಿ ಹಂಬಲಿಸಿದ ಬೇಂದ್ರೆ ಕನ್ನಡ ನಾಡಿನಲ್ಲಿ ಕನ್ನಡ ತಾಯಿ ಅನಾಥಳಾಗಿರುವುದನ್ನು ಕಂಡು 'ದೇವಮಾನವರೆಲ್ಲ ಕಂಡ ಕನಸೇ, ಬಾರೆ ಮನಸಿನೊಳು ನೆಲಸು ನನಸೇ' ಎಂದೋ, 'ಬೇಗದಿಂ ಕರುನಾಡ ಹರಕುತನವನ್ನು ಕಳೆದು

ಹಿರಿದಾಗೋಣ ಸೀಮೆಯನು ದಾಟಿ' ಎಂದೋ ಹಲಬಿದ ಕಾಲದಲ್ಲಿ ನಾಡಿಗಾಗಿ ಬಲಿಯನ್ನು ಕೇಳುವ ಚಂಡಿಯಾಗಿ ಗರ್ಜಿಸಿದರು—'ಗಂಡುಸಾದರೆ ನಿನ್ನ ಬಲಿಕೊಡು ವೆಯೇನು' ಎಂದು. 'ತಾಯಿ ಇದೋ ಬಂದೆವೆನ್ನಿ' ಎನ್ನುವ ಆತ್ಮಪ್ರಜ್ಞೆ ಆತ್ಮ ವಿಶ್ವಾಸಗಳ ಆಶ್ವಾಸನೆಯಲ್ಲಿ ಸ್ವಾತಂತ್ರ್ಯದ ಬೆಳಗು ಕಂಡ ಬೇಂದ್ರೆ ಮತ್ತೆ ಈ ನಾಡು ಕುರುಕ್ಷೇತ್ರವಾಗುವುದನ್ನೂ ಕಂಡು ಮನನೊಂದು ನುಡಿಯುತ್ತಾರೆ :

ಶಾಂತಿಗಾಗಿಯೆ ಯುದ್ಧದ ಸಿದ್ಧತೆ : ಅದು ನಡೆಯುವಲ್ಲಿ ಪ್ರಜಾಸತ್ತೆ' ಪ್ರಜರಿಗೆ ದಿನ ಮರಣವಾಗುವುದನ್ನು ಕಂಡು ಈ ಹಗರಣಾ ತೀರಬೇಕು. ಈ ಹಳೇ ಮನುಷ್ಯನ ಹೇಣಾ, ಚಟ್ಟಾ ಬೆಳಗಬೇಕು'. 'ಬರಲಿ ಹೊಸ ಸೃಷ್ಟಿ, ದೃಷ್ಟಿ' ಎಂದು ಹಾರೈಸುತ್ತಾರೆ.

ಮತ ಮತದ ಬಂಧ ಜನವಾಯಿತಂಥ ಜಗ
ಕುರುಕ್ಷೇತ್ರದಿಂದಾ

ಎನ್ನುವ ವಾಸ್ತವ ಕಳವಳ 'ಓ ನೆಲದ ತಾಯಿ, ಓ ಬಾನ ತಂದೆ ಬಾಂಧವ್ಯವಿರಲಿ ಚಂದಾ'ಎನ್ನುವ ಪ್ರಾರ್ಥನೆಯಲ್ಲಿ ಪರಿವರ್ತನೆಗೊಳ್ಳುತ್ತದೆ.

೧೦ ಮತ್ತೊಂದು ಪ್ರಮುಖ ಅಂಶ ಭಾಷೆ: ಬೇಂದ್ರೆ ಕನ್ನಡ ಭಾಷೆಯ ಸೊಗಡನ್ನು, ಸೊಗಸನ್ನು ಹೇಗೆ ಕಾವ್ಯ ವಿನ್ಯಾಸಕ್ಕೆ ಬಳಸಿಕೊಂಡರು, ಹೇಗೆ ಕನ್ನಡ ನುಡಿಯನ್ನು ದುಡಿಸಿಕೊಂಡರ ಅದರ ನಿಗೂಢ ಶಕ್ತಿಯನ್ನು ಆತ್ಮಸಾತ್ ಮಾಡಿಕೊಂಡರು ಎನ್ನುವುದು ಅವರ ಕಾವ್ಯದ ಒಂದು ಮಗ್ಗಲು. ಜನಪದ ಭಾಷೆಗೆ ಒಲಿದು ಅದಕ್ಕೆ ಮನಸೋತ ಬೇಂದ್ರೆ ಗಾರುಡಿಗನಂತೆ ಅದರ ಲಯ, ಛಂದ, ಬೆಡಗು ಗಳನ್ನು ಕಾವ್ಯದ ಮೂಲಕ ಸೂರೆಗೊಳಿಸುತ್ತಾರೆ. ಆದರೆ ಜನಾಂಗ ಸಂಸ್ಕೃತಿ ಮತ್ತು ಅದರ ವಿಕಾಸದ ಪ್ರಬಲ ಸಾಧನವಾದ ಭಾಷೆ, ಆತ್ಮಗೌರವದ ಸ್ವಾಭಿಮಾನದ ಅದಮ್ಯ ಶಕ್ತಿಯಾಗಿ ಒಡಮೂಡಿರುವುದು ಅವರ ಕಾವ್ಯದ ಇನ್ನೊಂದು ಮಗ್ಗಲು ಮತ್ತು ಮಹತ್ವದ ಮಗ್ಗಲು. ಏಕೆಂದರೆ ಕನ್ನಡ ಭಾಷೆಯ ಅಭಿಮಾನ ಗೌರವಗಳು ಒಂದು ಸೀಮಿತ ವಲಯದಲ್ಲಿ ಸ್ಪಂದಿಸದೆ ಅಖಂಡ ಪ್ರಜ್ಞೆಗೆ ದಾರಿ ತೆರೆಯುವ ವಸ್ತುನಿಷ್ಠ ಶಕ್ತಿಯಾಗಿ ಕರೆಯುತ್ತವೆ; ದೊರೆಯುತ್ತವೆ. ಆಡುವ ಬಾಯಿ ಅಂದರೆ ಅದೇ ತಾಯಿ:

ಬರಿದೆ ಮರುಗುವಿರೇತಕೆ
ಬನ್ನಿ ತಾಯಿಯ ಜೀತಕೆ

ಎಂದು ಕನ್ನಡದ ಜೀತಕ್ಕೆ ಆಹ್ವಾನ. 'ಮೆಟ್ಟಿ ನಡೆದುದೆ ಕನ್ನಡ' ಎನ್ನುವಲ್ಲಿ ಕನ್ನಡಿ

ಗರ ಕ್ಷಾತ್ರತೇಜ ಗುಡಿಗಟ್ಟಿದರೆ, 'ಮುಟ್ಟಿ ನಡೆದುದೆ ಕನ್ನಡ' ಎನ್ನುವಲ್ಲಿ ಅದು ಅಂತಃಕರಣವನ್ನು ಮುಟ್ಟುವ. ಅರಳಿಸುವ, ಕರಗಿಸುವ ಶಕ್ತಿಯಾಗುತ್ತದೆ.

ನಿಸರ್ಗಾರಾಧನೆ, ಸಾಮಾಜಿಕ ಪ್ರಜ್ಞೆ, ಸಮಕಾಲೀನ ರಾಜಕೀಯ ವಿಡಂಬನೆ, ರೋಷ ವಿಷಣ್ಣತೆ, ಆತ್ಮವ್ಯಂಜಕತೆ ಇತ್ಯಾದಿ ಅಂಶಗಳು ಬೇಂದ್ರೆ ಕಾವ್ಯದಲ್ಲಿ ಹೇರಳವಾಗಿ ಮೂಡಿ, ಅವು ಆನುಷಂಗಿಕ ಸಂಗತಿಗಳಾಗಿ ಉಳಿಯದೆ ಮತ್ತೆ ಮತ್ತೆ ಸಾಮಾಜಿಕರನ್ನು ಒಟ್ಟು ಬದುಕಿನ ಬಗೆಗೆ ಒಟ್ಟು ಲೇಸಿನ ಬಗೆಗೆ ಗಾಢವಾದ ಚಿಂತಗೆ ಮತ್ತು ಚಿಂತನೆಗೆ ತೊಡಗಿಸುತ್ತವೆ. ಆದರೆ ಅವರ ಈ ರೋಷ ರೊಚ್ಚು ಇನ್ನೊಬ್ಬರ ಮೇಲೆ ಎರಚುವ ಕೆಸರಾಗದೆ ಎಲ್ಲರನ್ನೂ ಎಚ್ಚರಿಸುವ ಎಚ್ಚರಿಕೆ ಗಂಟೆಯಾಗುತ್ತದೆ. ಆತ್ಮ ಸೌಂದರ್ಯದ ಮೂಲಕ ಸಮಷ್ಟಿಯನ್ನು ತಬ್ಬಿಕೊಳ್ಳುವ ನಾದದ ಲೀಲೆಯಾಗುತ್ತದೆ.

೧೧ ಜನಾಂಗದ ಸಮಷ್ಟಿ ವಿಕಾಸದಲ್ಲಿ ಮಹತ್ವದ ಪಾತ್ರ ವಹಿಸುವ ಅನೇಕ ಸಾಂಸ್ಕೃತಿಕ ಮೌಲ್ಯಗಳಲ್ಲಿ ಕೆಲವನ್ನು ಮಾತ್ರ ಸ್ಥೂಲವಾಗಿ ವಿವರಿಸಲಾಗಿದೆ. ಈ ವಿವರಣೆಯು ಗುರಿ ಬರೀ ಸಾಂಸ್ಕೃತಿಕ ಮೌಲ್ಯಗಳ ಪಟ್ಟಿ ಸಿದ್ಧಗೊಳಿಸುವುದಲ್ಲ. ಬೇಂದ್ರೆ ಈ ಮೌಲ್ಯಗಳಿಗೆ ಮತ್ತು ಮಾನವತೆಗೆ ಬದ್ಧರಾಗಿ, ಅವು ಬದುಕಿನಲ್ಲಿ ಆವಿಷ್ಕಾರ ಗೊಳ್ಳುವ ಕುರಿತ ತಮ್ಮ ಚಿರಂತನವಾದ ಕಾಳಜಿಯನ್ನು ಹೇಗೆ ತಮ್ಮ ಕಾವ್ಯಸೃಷ್ಟಿಯಲ್ಲಿ ಅನಾವರಣಗೊಳಿಸಿದರು ಎನ್ನುವುದು.

ಕೊನೆಯದಾಗಿ ಇನ್ನೊಂದು ಅತ್ಯಂತ ಪ್ರಬಲ ವಸ್ತು ಕಾಮ–ಪ್ರೇಮ–ಯೋಗ. ಬೇಂದ್ರೆ ಪಾಲಿಗೆ ಕಾಮದ ಬೆಂಕಿಯಿಂದ ಚಿಮ್ಮುವ ಬೆಳಕು ಪ್ರೇಮ. ಅದು ಸ್ನೇಹ, ಅದು ವಾತ್ಸಲ್ಯ, ಅದು ಪ್ರೀತಿ. ಅದು ಸಖ್ಯಯೋಗ, ಜೀವ ಮಾಯೆಯು ಅನಂತ ಚಿಲುವು.

> ಬಿರುಗಾಳಿ ಕಡಲಿನೊಡ ಸರಸವಾಡುವ ಹಾಗೆ,
> ತೆರೆಯ ಕುದುರೆಯ ಸಾಲ ತರುಬಬೇಕೆನಿಸಿ
> ಕೊರಳ ಕೂದಲು ಹಿಡಿಯೆ ಜೀವ ತುಡಿಯುವುದು
> ...................................
> ಉದಧಿ ಗಂಭೀರದಲಿ, ಉಸಿರ ಮೇಲುಸಿರಿನಲಿ
> ಮದುವಣಿಗನನು ಹಸೆಗೆ ಕರೆಯುತಿಹುದು
> ಮದುವೆ ಮುದವಲ್ಲವೇ ? ಹುಸಿ ಸಾಹಸವೆ ? ಹೇಳು
> ಇದುವೆ ಜೀವನವಲ್ಲೆ ಜೀವನಾಧಾರಾ ?

ಎಂದು ಕೇಳುವ ಕವಿ ವಾಸ್ತವ ಬದುಕಿನ ಪ್ರೇಮದಿಂದ ಸಂತುಷ್ಟನಾಗುತ್ತ. ಒಲವೆ ನಮ್ಮ ಬದುಕು, 'ರಸವೆ ಜನನ ವಿರಸ ಮರಣ' ಇತ್ಯಾದಿ ಹೇಳುತ್ತ ಅವುಗಳ

ಸೀಮೆ-ಯ ಮೀರಿದ ಅನಂತ ಪ್ರಣಯಿಯಾಗುತ್ತಾನೆ. ಬೇಂದ್ರೆ ಬದುಕನ್ನು ಗಾಢವಾಗಿ ಮತ್ತು ನಿರಂತರವಾಗಿ ಪ್ರೀತಿಸಿದ ಕವಿ. ಜೀವನವ 'ಧಾರೆ'ಗೆ ಮದುವಣಿಗನಾಗಿ ನಿಂತವರು. ಬದುಕು ತೀರದಾಟವಂಗಳ; ಮೀರಿದ ಬೆಳದಿಂಗಳ. 'ಚಾಚಿ ಚಾಚಿ ಮೈಯು, ಮನ-ದಾಚಿ ಸೀಮಿ' ಕಂಡವರು. ಪ್ರೀತಿಯ ವಿವಿಧ ರೂಪಗಳು ಮುಖ ಚಾಚುತ್ತ—'ನಿನ್ನ ತಳಿ ಬಳಿಯಲಿ ತಾ ಹಳ್ಳಿ ಹಳ್ಳಿಗೆ ಕರಿಕೆ ಕಳ್ಳಿಯೊಲು ಕಂದ ಜೋ ಜೋ' ಎಂದು ಒಮ್ಮೆ ಲೀಲೆಯುಲ್ಲುಲಿದ ಲಾಲಿ—

ಒಡ್ಡನುಡಿಸವ್ವ ಸೋಬಾನೆ ಸುವ್ವಿ
ಅರಳಲಿ ಬಸಿರಲಿ ತತ್ತಿ
ಎಳ್ಳಷ್ಟು ಎಣ್ಣೆಗೆ ಸಾವಿರದ ಬತ್ತಿ
ಮರೆಯಲಿ ಆರತಿ ಎತ್ತಿ

ಎನ್ನುವ ಸುವ್ವಾಲೆ ಮಗುದೊಮ್ಮೆ.

೧೨' ಹೀಗೆ ಹಲವಾರು ತೆರತೆರೆಗಳ ಕಲಕಲಾಟ ಈ ಕವಿಯ ಪ್ರೇಮದಾಟ. ಇದೆಲ್ಲ ಸಾಗುತ್ತಲೇ 'ಹುಡುಕಿದೆವು ಇನ್ನೊಂದು ಲೋಕವನೆ' ಎಂದ ಕವಿಯಪಾಲಿಗೆ ಇಡೀ ಬದುಕು ಒಂದು ಅನ್ವೇಷಣೆಯ, ದರ್ಶನದ ನೆಲೆಯಾಗುತ್ತದೆ. 'ಜೋಗಿ' ಯಲ್ಲಿ ಮಸಣವಾಟ, ಶಾಮನ ಹಚ್ಚಂಗಿ ಹಾಸಿದಾಂಗಿದ್ದ ನೀರ ಪಾಚಿ ಹೊಚ್ಚಿದ ಹೊಂಡ ಅಲ್ಲಿ ಕರೆದ ಕಪ್ಪು ನೀರು ಒಂದೊಂದರಿಂದಲೂ ಪಾರಾಗಿ ಕೋಗಿಲೆಯ ಅಸರಂತ ಕೂಗು ಕೇಳಿದ ಕವಿ, ಬದುಕಿನ ಅಪಾರ ಪ್ರೇಮ ನಿಸ್ಸೀಮಶಕ್ತಿಯ ಅನುಭೂತಿಗೆ ಅಣಿಯಾಗುವುದನ್ನು ಕಾಣುತ್ತೇವೆ.

ಸುತ್ತು ಕಡಿಗೂ ಕಾಣತಾವ ಗವಿಗವಿ
ರವಿಗೆ ಹತ್ತ್ಯದೋ ಕತ್ತಲಿ ಸವಿ
.......................
ಎಲ್ಲಾ ರಂತರಂಗಾ ತರಂಗ ತರಂಗಾ

ಎನ್ನುವಲ್ಲಿ ಅಮೂರ್ತ ಅನುಭಾವಗಳ ಪ್ರೇಮಯೋಗದ ಅನುಭೂತಿಯ ಒಂದು ಬೇರೆ ಅಮಾಯಕ ಪ್ರಪಂಚ ತೆರೆದುಕೊಳ್ಳುತ್ತದೆ. 'ತಲೀ ತುಂಬ ನವಿಲಿನಗರಿ'

ನಿನ್ನ ಮಠದಾಗ ನಾನೂ ಇರಾಕಿ
..........  ..........
ನೀ ಎಲ್ಲೀ ಇರು, ಅಲ್ಲೇ ಬರಾಕಿ
.........................
ಓ ಬಲ್ಲೆ ನೀ ನನ್ನ ಗಿರಾಕಿ

ಎಂದು ಬೆನ್ನುಹತ್ತಿದ 'ಪರಾಕಿ' ಕವಿದರ್ಶನದ ಒಂದು ಸಾಂಕೇತಿಕ ರೂಪ. ಈ ಬದುಕಿನಲ್ಲಿ ಗಾಢವಾಗಿ ತೊಡಗಿದಾಗಲೇ ಆತ್ಮದ ಒಳಗಿನ ಒಳಗಿನ ಧ್ವನಿ–ನೋಟಗಳ ಸ್ಫೋಟ.

ನೋಟದ ಮಾಟದ ಮಾನದಂಡದಲಿ
ಮಿಂಚಿಸಿ ನೀ ತೂಗಾಡಿದೆ
ನಿನ್ನಾ ಮೊಗವನೆ ತುಡುಕಲು ಹುಡುಕಲು
ವೈಕುಂಠಕೆ ಹೋದ್ಹಾಂಗಿದೆ....
ಯುಗಗಳೇ ಆದ್ಹಾಂಗಿದೆ

ಇತ್ಯಾದಿ ಅಭಿವ್ಯಕ್ತಿಗಳು ಕವಿಯ ಅನುಭಾವದ ನಿಲವಿಗೆ ಆತ್ಮಸ್ವರೂಪದ ವಿಶ್ವರೂಪದ ಅನುಭೂತಿಗೆ ಮತ್ತು ಆ ನಿಟ್ಟಿನ ಅನ್ವೇಷಣೆಗೆ ಸಾಕ್ಷಿಯಾಗುತ್ತವೆ. 'ಕನ್ನಡವೂ ಭಾರತವೂ ಒಂದೇ....' ಇತ್ಯಾದಿಗಳನ್ನು ಕನವರಿಸುತ್ತಲೇ 'ಜಗದೇಳಿಗೆಯಾಗುವದಿದೆ ಕರ್ನಾಟಕದಿಂದೇ' ಎನ್ನುವ ಪ್ರವಾದಿಯಾದ ಬೇಂದ್ರೆ ಕಾವ್ಯ ಮಾನವ ಚೈತನ್ಯದ ಪೂಜೆಗೆ ತೊಡಗುತ್ತದೆ. ಆಗ ಕವಿ ಮನ 'ಬಲೀವ:ನ'ವಾಗಿ ಉಳಿಯದೆ 'ಘನವೋಘನ'ದ ಅತೀಂದ್ರಿಯ ನೆಲೆಯಲ್ಲಿ ಸ್ಪಂದಿಸುತ್ತದೆ.

ವಿಶ್ವಮಾತೆಯ ಗರ್ಭ ಕಮಲಜಾತ ಪರಾಗ
ಪರಮಾಣು ಕೀರ್ತಿ ನಾನು
ವಿಶ್ವದೊಳನುಡಿಯಾಗಿ ಕನ್ನಡಿಸುತಿಹನಿಲ್ಲಿ
ಅಂಬಿಕಾತನಯನಿವನು

(ಬಾಹತ್ತರ)

ಎಂದು ಮುಂತಾಗಿ ವಿಶ್ವಸಂವೇದನೆಗಳ ಸ್ತರದಲ್ಲಿ ಹಂಬಲಿಸಿದ ಬೇಂದ್ರೆ ಆಧ್ಯಾತ್ಮದ ಅನುಭೂತಿಯ ನಿಲವಿನಲ್ಲಿಯೇ ಉಸಿರಾಡಿದ್ದು ಅದನ್ನು ತಮ್ಮ ಕಾವ್ಯದಲ್ಲಿ ಸಂಕೇತಗೊಳಿಸಿದ್ದು ಕೇವಲ ಒಂದು ಆಕಸ್ಮಿಕವಲ್ಲ; ಅದು ಬೇಂದ್ರೆ ಬದುಕಿನ ಸಾಧನೆಯ ಶಿಖರ ವಾಗಿರುವಂತೆ ಕನ್ನಡ ಕಾವ್ಯದ ಸತ್ಯವೂ ಆಗಿದೆ.

೧೩. ನಿಸರ್ಗದ ವೈಭವ, ಮಾನವ ಪ್ರೀತಿ ವಾತ್ಸಲ್ಯಗಳ ನೆಲೆಯಿಂದ ಅಖಂಡ ಮಾನವ ಕುಲದ ಪ್ರೇಮ, ಮಾನವೀಯ ಸಂವೇದನೆ, ಮಾನವತೆಯ ಆರಾಧನೆಗಳ ವರೆಗೆ ಹರಡಿದ ಬೇಂದ್ರೆ ಕಾವ್ಯದಲ್ಲಿ ಮಾನವ ಕಲ್ಯಾಣದ ಸಾಂಸ್ಕೃತಿಕ ಕಾಳಜಿಗಳು ಬರೀ ಕಾಳಜಿಗಳಾಗಿ ಉಳಿಯದೆ ಮೌಲ್ಯಗಳಾಗಿ ಒಡಮೂಡಿದುವೆ ? ಅವುಗಳ ನೆಲೆಗಟ್ಟು ಯಾವುದು ? ಒಳಗುಟ್ಟು ಏನು ? ಇತ್ಯಾದಿಗಳ ತಲಸ್ಪರ್ಶಿಯಾದ ವಿಶ್ಲೇಷಣೆ ಅನ್ವೇಷಣೆ ಇನ್ನುಮೇಲೆ ನಡೆಯ ಬೇಕಾಗಿರುವ ಕಾರ್ಯ. ವೈಭವೀಕರಣ ಮತ್ತು ಅಪರಿಮಿತ ವಿವರಣೆಗಳು ಗೀಳುಗಳಿಂದ ಹೊರಬಂದಷ್ಟೂ

ಬೇಂದ್ರ ಕಾವ್ಯದ ವಿಮರ್ಶೆ ಮತ್ತು ಅನ್ವೇಷಣೆಗಳ ದಾರಿ ಗಟ್ಟಿಗೊಳ್ಳುತ್ತದೆ ಎನ್ನುವ ಎಚ್ಚರದಲ್ಲಿ ಇದು ಮುಂದುವರೆಯಬೇಕಾಗಿರುವುದು.

'ಅಂಬಿಕಾತನಯ ಮೂಕ ಆಗ್ಯಾನ'. 'ಧಾರವಾಡ ತಕ್ಕಡಿ ಧಾರಣೆನ ಆಗಿಲ್ಲಾ 'ಹೊರಟಾವ ಛಕ್ಕಡಿ ಮ್ಯಾಲೆ ಛಕ್ಕಡಿ' ಇದು ಬೇಂದ್ರೆ ಕಾವ್ಯ ಇಂದಿನವರಿಗೆ ನೀಡಿರುವ ಅಹವಾಲು.

ಬೇಂದ್ರೆ ಕಾವ್ಯದ ಸಾಂಸ್ಕೃತಿಕ ಮೌಲ್ಯಗಳನ್ನು ಗುರುತಿಸುತ್ತಲೇ ಅದರ 'ಧಾರಣೆ' ಯ ಆಲೋಚವೆ ಮಾಡುವುದು ಹೇಗೆ ಎನ್ನುವುದೇ ಇಂದು ನಮ್ಮ ಮುಂದಿರುವಪ್ರಶ್ನೆ.

●

# ವೃತ್ತಿರಂಗಭೂಮಿಯ ಪರಂಪರೆ

● ಎಸ್. ಎಸ್. ಕೋತಿನ

ಕರ್ನಾಟಕ ರಂಗಭೂಮಿಗೆ ಒಂದು ಸುದೀರ್ಘಕಾಲದ ಸಮೃದ್ಧ ಪರಂಪರೆ ಇರುವದು ಮಾತ್ರವಲ್ಲ ಮೇಲಿಂದಮೇಲೆ ಹೊಸ ಹೊಸ ಆವಿಷ್ಕಾರಕ್ಕೆ ಒಳಗಾಗುತ್ತ ಬೇರೆ ಬೇರೆ ರೂಪಾಂತರಗಳನ್ನು ಹೊಂದುತ್ತ, ತನ್ನ ನೆರೆಹೊರೆಯ ಪ್ರಾಂತಗಳಿಗೂ ಬೇರು-ನೀರನ್ನು ಪೂರೈಸುತ್ತ ಬಂದಿರುವದು ಚಾರಿತ್ರಿಕ ಸತ್ಯ. ಕಳೆದ ಶತಮಾನದಲ್ಲಿ ವಸಾಹತು ಶಾಹಿಗಳ ಬೆನ್ನುಹತ್ತಿ ಬಂದ ಬ್ರಿಟಿಶ ಕಂಪನಿಗಳ ಮೋಡಿಗೆ ಒಳಗಾಗಿ ಭಾರತದುದ್ದಕ್ಕೂ ಬೆಡಗಿನಿಂದ ಸಂಚರಿಸಿದ ಫಾರಸಿ ಕಂಪನಿಗಳ ಪ್ರಭಾವದಿಂದ ಭಾರತೀಯ ರಂಗಭೂಮಿಯ ಸ್ವರೂಪ ಮತ್ತು ಪ್ರವೃತ್ತಿಗಳೇ ಬೇರೆಯಾದವು; ಅಷ್ಟೇ ಅಲ್ಲ ಕೆಲವು ರಂಗಭೂಮಿಯ ತಂಡಗಳು ಥಳಕು-ಬೆಳಕನ್ನು ಮುಂದೆ ಮಾಡಿ ಕೊಂಡು ಗಳಿಕೆಗೂ ನಿಂತವು. ಅಪರೂಪಕ್ಕೆ ಕಾಣಿಸಿಕೊಳ್ಳುತ್ತಿದ್ದ ಇಂಥ ಫಾರ್ಸಿ ಕಂಪನಿಗಳ ಪ್ರಭಾವಕ್ಕಿಂತ, ಕರ್ನಾಟಕ ರಂಗಭೂಮಿಯಿಂದಲೇ ಜೀವಧಾತುವನ್ನು ಪಡೆದ ಮರಾಠಿ ವೃತ್ತಿರಂಗಭೂಮಿಯ ಪ್ರಭಾವ ಹಾಗೂ ಪರಿಣಾಮ—ಮಹಾ ರಾಷ್ಟ್ರದ ಆಳಿಕೆಯಲ್ಲಿಯೇ ಇದ್ದ—ಉತ್ತರ ಕರ್ನಾಟಕದ ರಂಗಭೂಮಿಯ ಮೇಲೆ ಅನಿವಾರ್ಯವೆನ್ನುವಷ್ಟು ದಟ್ಟವಾಯಿತು. ಭಾರತೀಯ ಸಾಹಿತ್ಯ ಕಲೆಗಳಿಗೆ ಒಂದು ಹೊಸ ತಿರುವನ್ನು ತಂದುಕೊಟ್ಟ ಪಶ್ಚಿಮದ ಗಾಳಿ ಆಗಿನ ರಾಜಕೀಯ ಕೇಂದ್ರವಾಗಿದ್ದ ಬಂಗಾಲದಿಂದಲೇ ದಕ್ಷಿಣಕ್ಕೆ ಬೀಸುತ್ತಿದ್ದ ಕಾರಣ ಸಹಜವಾಗಿಯೇ ಅದರ ಮೊದಲ ಸ್ಪರ್ಶ ಮಹಾರಾಷ್ಟ್ರಕ್ಕೆ ಉಂಟಾಗುತ್ತಿತ್ತು. ಮರಾಠಿ ನಾಟಕ ಮತ್ತು ನಾಟ್ಯ ಸಂಗೀತಗಳ ಮೂಲ ಕನ್ನಡ ರಂಗಭೂಮಿ ಮತ್ತು ಸಂಗೀತ ಎಂಬುದು ಸುಳ್ಳಲ್ಲವಾದರೂ, ಮರಾಠಿ ರಂಗಭೂಮಿ ಕನ್ನಡ ನಾಟ್ಯಕಲೆಯ ಆಧಾರ ದಿಂದಲೇ ನಿರ್ಮಾಣವಾಯಿತೆಂದು ಮರಾಠಿ ರಂಗಭೂಮಿಯ ಪಿತಾಮಹರಾದ ದಿವಂಗತ ವಿಷ್ಣುದಾಸ ಭಾವೆಯಂಥವರು ಹೇಳಿರುವದು ಸತ್ಯವಾದರೂ ಅದು ಆಧುನಿಕ ವೃತ್ತಿ ರಂಗಭೂಮಿಯ ಸ್ವರೂಪವನ್ನು ತಾಳಿ ಕನ್ನಡಿಗರೆದುರು ಮೆರೆಯ ಲಾರಂಭಿಸಿದ್ದು ಮುಂಬೈಯಲ್ಲಿದ್ದ ಫಾರ್ಸಿ ಕಂಪನಿಗಳ ಪ್ರಭಾವದಿಂದ.

ಮರಾಠಿ ವೃತ್ತಿರಂಗಭೂಮಿಯ ಸಂಪರ್ಕಕ್ಕೆ ಬರುವ ಮೊದಲೇ ಕರ್ನಾಟಕದಲ್ಲಿ ಕೆಲವು ಜಾನಪದ ಹವ್ಯಾಸಿ ತಂಡಗಳಿದ್ದಂತೆ ಕೆಲವು ವೃತ್ತಿತಂಡಗಳೂ ಇದ್ದವು

ಎಂಬುದು ಗಮನಾರ್ಹ; ಆದರೆ ಅವೆಲ್ಲ ಆಚ್ಛಾದಿತ ರಂಗಭೂಮಿಯನ್ನು ಆಶ್ರಯಿಸಿ ಟಿಕೆಟ್ಟುಗಳನ್ನು ಮಾರುವ ಪರಿಪಾಠವನ್ನು ಇಟ್ಟುಕೊಂಡಿರದೆ ಊರವರು ಕೂಡಿಸಿ ಕೊಡುವ ಹಣವನ್ನೇ ಪಡೆದು ಉಪಜೀವಿಸುವ ತಂಡಗಳಾಗಿದ್ದವು. ಅಂಥ ಜಾನಪದ ತಂಡಗಳು ಇದುವರೆಗೂ ಜೀವಂತವಾಗಿರುವದನ್ನೂ ಕಾಣಬಹುದು. ಬಯಲಲ್ಲಿ ಹಾಕಿದ ಅಟ್ಟ, ಎರಡೂ ಬದಿಗೆ ಪಂಜು, ಅಟ್ಟದ ಹಿಂದಿಯೇ ಇರುವ ನೇಪಥ್ಯ, ಅಟ್ಟದ ಬಲಗಡೆಯಲ್ಲಿ ಅದೂ ದಿನನಿತ್ಯದ ಸರಳ ಉಡಿಗೆಯಲ್ಲಿ ಇರುವ ಹಿಮ್ಮೇಳ, ಅವರೊಡನೆಯೇ ಬಣ್ಣ ಬಳಿದು ವೇಷ ಕಟ್ಟಿಕೊಂಡು ನಿಲ್ಲುವ ಪಾತ್ರಗಳು, ಪ್ರೇಕ್ಷಕರಿಗೆ ಮರೆಯಾಗುವಂತೆ ಶಾಲನ್ನು ಹಿಡಿದು ಪಾತ್ರಗಳನ್ನು ಬರಮಾಡಿಕೊಳ್ಳುವ, ಅನಂತರ ಪರಿಚಯಿಸಿಕೊಡುವ ವಿಧಾನ—ವರುಷದಲ್ಲಿ ಆಗೊಮ್ಮೆ ಈಗೊಮ್ಮೆ ಅಪರೂಪಕ್ಕೆ ಕಾಣಿಸಿಕೊಳ್ಳುವ ಇಂಥ ಆಟಗಳನ್ನು ಬಯಲಿನಲ್ಲಿಯೋ, ಮನೆಯ ಮುಂದಿನ ಕಟ್ಟೆ–ಮಾಳಿಗೆಯ ಮೇಲೊ ಕುಳಿತು ಬೆಳತನಕ ನೋಡುತ್ತಿದ್ದ ನಮ್ಮ ಮುಗ್ಧ ಜನರಿಗೆ ಈ ಹೊಸ ಕಂಪನಿಗಳ ಕಣ್ಣು ಕೋರೈಸುವ ವೇಷ–ಭೂಷಣಗಳು, ರಂಗುರಂಗಾದ ಅತ್ಯಾಧುನಿಕ ಪರದೆ ಕವಾಟಗಳು ವೈಭಯುತ ದೃಶ್ಯಾವಳಿಗಳು, ಸಂಸ್ಕರಿಸಲ್ಪಟ್ಟ ಸಂಗೀತಾಭಿನಯಗಳು ಮತ್ತು ಅಲಂಕೃತವಾದ ಆಚ್ಛಾದಿತ ರಂಗಭೂಮಿ—ಇವೆಲ್ಲ ಹೇಳತೀರದಷ್ಟು ಕುತೂಹಲವನ್ನು ಕೆರಳಿಸಿದವು.

ಇಂಥ ಮರಾಠಿ ಕಂಪನಿಗಳ ವಸಾಹತುಶಾಹಿತ್ವ ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಅನಾಥಪ್ರಜ್ಞೆಯನ್ನು ಅನುಭವಿಸುತ್ತಿದ್ದ ಉತ್ತರಕರ್ನಾಟಕದ ಕನ್ನಡಾಭಿಮಾನಿಗಳಿಗೆ ಅಸಹನೀಯ ವಿಷಯವಾಯಿತು. ನೋಡಿದಲ್ಲೆಲ್ಲ ಮರಾಠಿಯ ಕಂಪನಿಗಳು, ಕೇಳಿದಲ್ಲೆಲ್ಲ ಮರಾಠಿಯ ಚೀಜುಗಳು, ಮಾತಾಡಿದಲ್ಲೆಲ್ಲ ಮರಾಠಿ ಮಾತುಗಳು; ತಮ್ಮೆದುರಿನಲ್ಲಿಯೇ ತಮ್ಮ ಋಣವನ್ನುಂಡು ಬೆಳೆದ ಮರಾಠಿ ಕಂಪನಿಗಳ ಈ ವಿರಾಟ ಹಾಗೂ ಕನ್ನಡದ ಬಗೆಗೆ ಮರಾಠಿಗರಲ್ಲಿದ್ದ ತಾತ್ಸಾರಭಾವನೆ ಕರ್ನಾಟಕ ಸಂಸ್ಕೃತಿಯ ಪುನರುಜ್ಜೀವನದ ಅರುಣೋದಯದ ಆಕಾಲದ ಕನ್ನಡಿಗರ ಅಭಿಮಾನ ಪುಟದೇಳುವಂತೆ ಮಾಡಿತು. ಅದರ ಒಂದು ಜ್ವಲಂತ ಪ್ರತಿಕ್ರಿಯೆಯಾಗಿ ೧೮೭೪ರಲ್ಲಿ "ಶ್ರೀ ವೀರನಾರಾಯಣ ಪ್ರಾಸಾದಿಕ ಕೃತಪುರ ನಾಟ್ಯಮಂಡಳಿ" ಜನ್ಮತಾಳಿತು. ಕರ್ನಾಟಕ ರಂಗಭೂಮಿ, ಮರಾಠಿ ರಂಗಭೂಮಿಯ ಪ್ರೇರಣೆ ಹಾಗೂ ಪ್ರಚೋದನೆಯಿಂದ, ಆಧುನಿಕ ವೃತ್ತಿರಂಗಭೂಮಿಯಾಗಿ ಉತ್ತರ ಕರ್ನಾಟಕದಲ್ಲಿ ಮೊಟ್ಟಮೊದಲು ನಾಂದಿಯನ್ನು ಹಾಡಿತು. ಇದಾದ ಕೆಲವು ವರುಷಗಳ ನಂತರ ಮರಾಠಿ ಕಂಪನಿಗಳ ಅದಕ್ಕಿಂತಲೂ ಹೆಚ್ಚಾಗಿ ಪಾರ್ಸಿಕಂಪನಿಗಳ ನೇರಪ್ರಭಾವಕ್ಕೆ ಒಳಗಾಗಿ ೧೮೮೨ರ ಸುಮಾರಿಗೆ ಅರಮನೆಯ "ಚಾಮರಾಜೇಂದ್ರ ಕರ್ನಾಟಕ ಸಭಾ" ಹುಟ್ಟಿಕೊಂಡಿತು. ಕರ್ನಾಟಕದ ಎರಡೂ ಕಂಪನಿಗಳು ಪಾರ್ಸಿ ಮತ್ತು ಮರಾಠಿ ಕಂಪನಿಗಳ ವಿರಾಟವನ್ನು ಎದುರಿಸುವದರೊಂದಿಗೆ ಆಂಧ್ರಪ್ರದೇಶ ಹಾಗೂ ತಮಿಳುನಾಡಿನ

ಮೇಲೆ ಚರಿತ್ರಾರ್ಹವಾದ ಪ್ರಭಾವವನ್ನು ಬೀರಿದವು. ಈ ಎರಡೂ ಕಂಪನಿಗಳ ಆದರ್ಶದಲ್ಲಿಯೇ ಈ ಶತಮಾನದ ಆರಂಭದ ಕಾಲದವರೆಗೂ ಹಲವಾರು ಕಂಪನಿಗಳು ಜನ್ಮತಾಳಿದವು; ಆಧುನಿಕ ವೃತ್ತಿರಂಗಭೂಮಿಯ ಪರಂಪರೆಗೆ ದಾರಿಮಾಡಿ ಕೊಟ್ಟವು. ಮೈಸೂರ ಭಾಗದ "ಶ್ರೀಚಾಮರಾಜೇಂದ್ರ ಕರ್ನಾಟಕ ನಾಟಕಸಭಾ" 'ರಾಜಧಾನಿ ನಾಟಕ ಮಂಡಳಿ.' 'ಸರಸ್ವತಿ ನಾಟಕ ಸಭೆ,' 'ಶ್ರೀಕಂಠೇಶ್ವರ ಕಂಪನಿ' ಹಾಗೂ ಉತ್ತರ ಕರ್ನಾಟಕದಲ್ಲಿ ಶಾಂತಕವಿಗಳ ಕೃತಪುರ ನಾಟಕ ಮಂಡಳಿ (೧೮೭೩), 'ಹಲಸಂಗಿ ನಾಟಕ ಮಂಡಳಿ; 'ಧಾರವಾಡದ ತಂತುಪುರಸ್ಥ ನಾಟಕ ಮಂಡಳಿ' (೧೮೮೦), ಉಲ್ಲೇಖನಾರ್ಹವಾದ ಮಹತ್ವದ ಸೇವೆಯನ್ನು ಸಲ್ಲಿಸಿದವು.

ಮೈಸೂರಿನ ಅರಮನೆಯ ಕಂಪನಿ ವಿದ್ವನ್ಮಣಿಗಳಿಂದ ಶಾಕುಂತಲ, ನಾಗಾನಂದ ರತ್ನಾವಳಿ, ಮೃಚ್ಛಕಟಿಕ, ವೇಣಿಸಂಹಾರ, ಚಂಡಕೌಶಿಕ, ಮಾಲತೀಮಾಧವ ಮೊದಲಾದ ಸಂಸ್ಕೃತ ನಾಟಕಗಳನ್ನು ಹಾಗೂ ಓಥೆಲ್ಲೊ (ಶೂರಸೇನ ಚರಿತೆ). ರೋಮಿಯೊ ಆ್ಯಂಡ ಜ್ಯೂಲಿಯಟ್, ಮರ್ಚಂಟ ಆಫ್‌ವೇನಿಸ್ (ಪಾಂಚಾಲ ಪರಿಚಯ) ಮತ್ತು ಹಾಮ್ಲೆಟ್‌ದಂಥ ಇಂಗ್ಲೀಷ ದುರಂತನಾಟಕಗಳನ್ನು ಅನುವಾದಿಸಿ ರಂಗಭೂಮಿಯ ಮೇಲೆ ತಂದಿತು. ಉತ್ತರ ಕರ್ನಾಟಕದ ಕಂಪನಿಗಳ ವೆಂಕಣ್ಣಾಚಾರ್ಯ ಅಗಳಗಟ್ಟಿ (ಶ್ರೀನಿವಾಸಕವಿ) ಯವರ ಶ್ರೀಮತಿ ಪರಿಣಯ, ಮದಾಲಸಾ ಪರಿಣಯ, ದ್ರೌಪದಿಪಸ್ವಾಹರಣ ಹಾಗೂ ಶಾಂತಕವಿಗಳ ಉಷಾಹರಣದಂಥ ನಾಟಕಗಳನ್ನು ಪ್ರಯೋಗಿಸಲಾರಂಭಿಸಿದವು. ಶಾಂತಕವಿಗಳ ಕಂಪನಿಯಲ್ಲಿ ಡಂಬಳ ಹುಚ್ಚಾಚಾರ್ಯರು ಹಾಗೂ ಅರಮನೆಯ ಕಂಪನಿಯಲ್ಲಿದ್ದ ಗೌರಿನರಸಿಂಹಯ್ಯನವರು ಸ್ತ್ರೀಪಾತ್ರಗಳ ಅಭಿನಯದಲ್ಲಿ ತೋರಿದ ನೈಪುಣ್ಯ ನೆನೆಸಿಕೊಳ್ಳುವಂಥದ್ದು.

ಕರ್ನಾಟಕ ವೃತ್ತಿರಂಗಭೂಮಿಯ ಅರುಣೋದಯವೆಂದು ಗುರುತಿಸಬಹುದಾದ ಕಳೆದ ಶತಮಾನದ ಉತ್ತರಾರ್ಧದಲ್ಲಿ ಕೈಬೆರಳಲ್ಲಿ ಎಣಿಸುವಷ್ಟು ಕಂಪನಿಗಳು ಮಾತ್ರ ಗೋಚರವಾದರೂ ಆ ಮೊದಲು ಜನಪದ ರಂಗಭೂಮಿಯನ್ನು ಅವಲಂಬಿಸಿದ್ದ ಉತ್ತರ ಕರ್ನಾಟಕದ ವೃತ್ತಿತಂಡಗಳಲ್ಲಿ ಕೆಲವಾದರೂ ಉಪಜೀವನಕ್ಕಾಗಿ ವೃತ್ತಿರಂಗಭೂಮಿಯನ್ನು ಅವಲಂಬಿಸಿ ಸಣ್ಣ-ಪುಟ್ಟ ಕಂಪನಿಗಳನ್ನು ಕಟ್ಟಿರಬಹುದೆಂದು ಊಹಿಸಲು ಅವಕಾಶವಿದೆ.

ಗಮನಿಸಬೇಕಾದ ಅಂಶವೆಂದರೆ–ವಿಭಿನ್ನ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರದಲ್ಲಿ ಬದುಕುತ್ತಿದ್ದ ಈ ಎರಡೂ ಪ್ರದೇಶಗಳ ವೃತ್ತಿರಂಗಭೂಮಿಯ ಹಿಂದಿರುವ ಪ್ರೇರಣೆ–ಧೋರಣೆಗಳಲ್ಲಿ ಹಾಗೂ ಸ್ವರೂಪಗಳಲ್ಲಿ ಎದ್ದು ಕಾಣುವ ವ್ಯತ್ಯಾಸ. ಬ್ರಿಟಿಶರ ರಾಜಕೀಯ ಧೋರಣೆಯಿಂದಾಗಿ ಕರ್ನಾಟಕವು ಬೇರೆ

ಬೇರೆ ಆಡಳಿತಕ್ಕೆ ಹರಿದು ಹಂಚಿಹೋಗಿದ್ದ ಸಂದರ್ಭದಲ್ಲಿ ಉತ್ತರ ಕರ್ನಾಟಕಕ್ಕೆ ಇದ್ದ ಸಮಸ್ಯೆಗಳು ಮೈಸೂರುಸಂಸ್ಥಾನಕ್ಕೆ ಇದ್ದಿರಲಿಲ್ಲ. ಆದ್ದರಿಂದ ಉತ್ತರ ಕರ್ನಾಟಕ ತನ್ನ ಸಂಸ್ಕೃತಿಯ ಉಳುವಿಗಾಗಿ, ತನ್ನ ಅಸ್ತಿತ್ವಕ್ಕಾಗಿ ಹೋರಾಡಬೇಕಾದ ಸಂದರ್ಭದಲ್ಲಿ ಕೆರಳಿನಿಂತ ಸ್ವಾಭಿಮಾನ ಮತ್ತು ಪರಂಪರೆಯ ಪ್ರಜ್ಞೆ ಅದರ ವೃತ್ತಿ ರಂಗಭೂಮಿಯ ಮೂಲಪ್ರೇರಣೆಯಾಯಿತು; ಮೂಸ್‌ರವರ ನೇತೃತ್ವದ, ಬಾಲಿ ವಾಲಾ ನೇತೃತ್ವದ 'ವಿಕ್ಟೋರಿಯಾ ಪಾರ್ಸಿಕಂಪನಿಗಳ ವೈಭವ ಅಚ್ಚುಹಾಸಗಳಿಂದ ಪುಟಿದೆದ್ದ ಉತ್ಸಾಹ ಮೈಸೂರ ವಿಭಾಗದ ವೃತ್ತಿರಂಗಭೂಮಿಯ ಉದಯಕ್ಕೆ ಮೂಲ ಪ್ರೇರಣೆಯಾಯಿತು. ಕನ್ನಡಿಗರಲ್ಲಿ ಸ್ವಾಭಿಮಾನವನ್ನು ಮೂಡಿಸುವದು ಉತ್ತರಕರ್ನಾಟಕದ ವೃತ್ತಿರಂಗಭೂಮಿಯ ಉದ್ದೇಶವಾಗಿದ್ದರೆ, ರಂಜನೆಯನ್ನಿತ್ತು ಬದುಕನ್ನು ಸಂಸ್ಕರಿಸುವ ಉದ್ದೇಶ ಮೈಸೂರಿನವರದಾಯಿತು. ಮೈಸೂರ ಭಾಗದ ವೃತ್ತಿರಂಗಭೂಮಿಯ ಸ್ವರೂಪದಲ್ಲಿ ಆಧುನಿಕ ಹಾಗೂ ಪ್ರಾಚೀನ ಶಿಷ್ಟರಂಗಭೂಮಿಯ ಅಂಶಗಳನ್ನು ಅಳವಡಿಸಿಕೊಂಡ ನಾಗರಿಕ ಪ್ರಜ್ಞೆ ಹಾಗೂ ವೈಭವ ಕಂಡು ಬಂದರೆ ಉತ್ತರ ಕರ್ನಾಟಕದ ವೃತ್ತಿರಂಗಭೂಮಿಯ ಸ್ವರೂಪದಲ್ಲಿ ಜಾನಪದ ಪ್ರಜ್ಞೆ ಹಾಗೂ ಅವೈಭವ ಕಂಡುಬರುತ್ತದೆ. ಒಂದಕ್ಕೆ ರಾಜಾಶ್ರಯವಿತ್ತು. ಇನ್ನೊಂದಕ್ಕೆ ಜನಾಶ್ರಯವಿತ್ತು. ಅಂತೆಯೇ ಮೈಸೂರ ವಿಭಾಗದ ವೃತ್ತಿರಂಗಭೂಮಿಗಿಂತ ಉತ್ತರಕರ್ನಾಟಕ ವೃತ್ತಿರಂಗಭೂಮಿ ಬಹು ಬೇಗ ಜನಸಾಮಾನ್ಯರನ್ನು ಸ್ಪಂದಿಸುವಂತಾಯಿತು. ಹೀಗೆ ವಿಭಿನ್ನ ಪ್ರೇರಣೆ- ಧೋರಣೆಗಳನ್ನೊಳಗೊಂಡ, ಬೇರೆ ಬೇರೆ ಪ್ರದೇಶಗಳಲ್ಲಿ ಹುಟ್ಟಿಕೊಂಡ ಈ ಕಂಪನಿಗಳು ಸಾಧಿಸಿದ ಇನ್ನೊಂದು ಮಹತ್ತರವಾದ ಸೇವೆ ಹಾಗೂ ಸಾಧನೆಯೆಂದರೆ ಬೇರೆ ಬೇರೆ ಆಡಳಿತಕ್ಕೆ ಹರಿದು ಹಂಚಿಹೋಗಿದ್ದ ಕರ್ನಾಟಕದ ಪ್ರದೇಶಗಳಲ್ಲಿ ಸಾಂಸ್ಕೃತಿಕ ಸಂಬಂಧ ಮತ್ತು ಸಾಮರಸ್ಯವನ್ನು ಕಾಪಾಡಿಕೊಂಡು ಬಂದದ್ದು. ಮೈಸೂರ ವಿಭಾಗದ ಕೆಲವು ಕಂಪನಿಗಳು ಉತ್ತರಕರ್ನಾಟಕದ ಹಲವಾರು ಸ್ಥಳಗಳಲ್ಲಿ ಸಂಚರಿಸಿ ಯಶಸ್ವಿಯಾದಂತೆ ಉತ್ತರ ಕರ್ನಾಟಕದ ಕೆಲವು ಕಂಪನಿಗಳು ಮೈಸೂರ ಭಾಗದ ಬೇರೆ ಬೇರೆ ಸ್ಥಳದಲ್ಲಿ ಸಂಚರಿಸಿ ಯಶಸ್ವಿಯಾದದ್ದನ್ನು ನಿದರ್ಶನಕ್ಕಾಗಿ ನೆನೆಯಬಹುದು. ಈ ಒಂದು ಬಾಂಧವ್ಯವನ್ನು ಕರ್ನಾಟಕ ವೃತ್ತಿರಂಗಭೂಮಿಯ ಚರಿತ್ರೆಯ ಉದ್ದಕ್ಕೂ ಒಂದಿಲ್ಲೊಂದು ರೀತಿಯಲ್ಲಿ ಗುರುತಿಸಬಹುದಾಗಿದೆ. ಎರಡನೆಯದಾಗಿ ಆಗಿನ ಜನಸಾಮಾನ್ಯರಲ್ಲಿಯೂ ಸಂಗೀತದ ಸಂಸ್ಕಾರವನ್ನು ತಕ್ಕಮಟ್ಟಿಗಾದರೂ ಬಳಸಿಕೊಂಡುಬಂದದ್ದು: ಅದಕ್ಕಿಂತಲೂ ಹೆಚ್ಚಾಗಿ ಆಗಿನ ಮಹಾರಾಷ್ಟ್ರ ರಂಗಭೂಮಿಗೆ ವಲಸೆ ಹೋಗಬಹುದಾಗಿದ್ದ ಸಂಗೀತ ಹಾಗೂ ಅಭಿನಯ ಪ್ರತಿಭೆಯನ್ನು ಕಾಪಾಡಿಕೊಂಡು ಬಂದದ್ದು ಅತಿ ದೊಡ್ಡ ಶ್ರೇಯಸ್ಸು ಇಲ್ಲದೇ ಹೋಗಿದ್ದರೆ, ಕರ್ನಾಟಕದ ಗುರ್ಲಹೊಸೂರಿನವರೇ ಆದ ಅಣ್ಣಾಸಾಹೇಬ ಕಿರ್ಲೋಸ್ಕರ ಹಾಗೂ ಕುಂದಗೋಳದ ಸವಾಯಿ ಗಂಧರ್ವ

ರಂತೆ ಅದೆಷ್ಟೊ ಕನ್ನಡ ಪ್ರತಿಭೆ ಪಲಾಯನವಾಗಬಹುದಾಗಿದ್ದ ಸಾಧ್ಯತೆಯನ್ನು ನೆನೆದರೆ ಈ ಮಾತಿನ ಮಹತ್ವ ಅನುಭವಕ್ಕೆ ಬರುತ್ತದೆ. ಅರುಣೋದಯದ ಈ ಕಾಲ ಒಂದು ಸುದೀರ್ಘವಾದ ಉತ್ಕೃಷ್ಟ ಪರಂಪರೆಗೆ ಅಸ್ತಿವಾರ ಹಾಕಿತೆಂದೇ ಮಹಾಮಹಾ ಸಂಗೀತ ವಿದ್ವಾಂಸರು, ಪ್ರತಿಭಾವಂತ ನಟ-ನಟಿಯರು, ಮತ್ತಿತರ ಕಲಾವಿದರು ಕರ್ನಾಟಕದಲ್ಲಿ ಉಳಿದುಕೊಂಡು ಬರುವಂತಾಯಿತು.

ವೃತ್ತಿರಂಗಭೂಮಿ ಎಷ್ಟೆ ಆಧುನಿಕತೆಯನ್ನು ಅಳವಡಿಸಿ ಕೊಂಡಿದ್ದರೂ ಆರಂಭದ ಕಾಲದಲ್ಲಿ ಅದಕ್ಕಿದ್ದ ಒಂದು ಮಿತಿಯನ್ನು ಮರೆಯುವಂತಿಲ್ಲ. ನಟರ ಮುಂಭಾಗ ವರ್ಣಿಕೆ-ವೇಷಭೂಷಣಗಳಿಂದ ಒಪ್ಪಾಗಿ ಕಾಣಬಹುದಾಗಿದ್ದರೂ ಅವರ ಹಿಂಭಾಗವೆಲ್ಲ ಸಹಜ ವಿಕೃತಿಯಿಂದ ಕೂಡಿಕೊಂಡಿರುತ್ತಿತ್ತು. ಅಂತಾಗಿ ಒಂದು ಕಾಲಕ್ಕೆ ಪ್ರೇಕ್ಷಕರಕಡೆಗೆ ಬೆನ್ನು ತಿರುವಿ ಮಾತಾಡುವದೂ ನಟರ ಬಹುದೊಡ್ಡ ಅಪರಾಧವೆನಿಸುತ್ತಿತ್ತು. ಹೀಗಾಗಿ ಪಾತ್ರಗಳ ಕ್ರಿಯೆಗಳಿಗೆ ಸಿಗಬೇಕಾದ ಅವಕಾಶ ತಪ್ಪಿಹೋಗುತ್ತಿತ್ತು ಆದ್ದರಿಂದ ಪುರ-ಪರೇ ಧರಿಸುತ್ತಿದ್ದ ಆ ಕಾಲದ ಸ್ತ್ರೀಪಾತ್ರದ ಅಭಿನಯವೆಂದರೆ–ಮುಂಗಾಲನ್ನು ಮಣಿಸಿ ಹಿಂಗಾಲಮೇಲೆ ಭಾರಹಾಕಿ ನಿಂತುಕೊಳ್ಳುವದು. ಸೀರೆಯ ಸೆರಗನ್ನು ಬೆರಳಿಗೆ ಸುತ್ತಿಕೊಳ್ಳುವದು. ಬಹಳವೆಂದರೆ ಮೇಲಿಂದ ಮೇಲೆ ಕೂದಲವನ್ನು ಸರಿಪಡಿಸಿಕೊಳ್ಳುವಂತೆ, ಸೆರಗನ್ನು ಸರಿಪಡಿಸಿಕೊಳ್ಳುವಂತೆ. ನೀರಿಗೆಯನ್ನು ಸರಿಪಡಿಸಿಕೊಳ್ಳುವಂತೆ ವರ್ತಿಸುವದು; ಮುಖದಲ್ಲಿ ಕೃತಕ ಹಾವಭಾವಗಳನ್ನು ಪ್ರದರ್ಶಿಸುತ್ತ, ಕೈಮಾಡಿ ಕೋಮಲವಾದ ಕಂಠದಿಂದ ವೈಯಾರವನ್ನು ಪ್ರದರ್ಶಿಸುತ್ತ ಗಟ್ಟಿಯಾಗಿ ಮಾತುಹೇಳುವದಾಗಿತ್ತು. ಪುರುಷರ ಪಾತ್ರವಾದರೆ ದೈತ್ಯ-ದೇವತೆಗಳ ಠೀವಿಯಲ್ಲಿ ನಿಂತುಕೊಂಡು ಆವೇಶ ಭರಿತವಾಗಿ ಕಿವಿಗಡಚಿಕ್ಕುವಂತೆ ಅಬ್ಬರಿಸಿ ಮಾತು ಹೇಳುವದು. ಹಾಸ್ಯಪಾತ್ರವಾದರೆ ಅಂಗವಿಕಾರಗಳ ಚೇಷ್ಟೆಯನ್ನು ಮಾಡುವದು–ಇವಿಷ್ಟು ಅಭಿನಯದಲ್ಲಿ ಎದ್ದು ಕಾಣುವ ಅಂಶಗಳಾಗಿದ್ದವು.

ಹೀಗೆ ಬೆಳಕು ಹಾಗೂ ಧ್ವನಿವರ್ಧಕಗಳಂಥ ರಂಗಪರಿಕರಗಳ ಅಭಾವ ಆಗಿನ ರಂಗಭೂಮಿಗೆ ವಸ್ತು-ಸನ್ನಿವೇಶಗಳನ್ನು ಅರ್ಥೈಸಿಕೊಡುವಲ್ಲಿ, ಭಾವ–ರಸಗಳನ್ನು ಅನುಭವಕ್ಕೆ ತಂದುಕೊಡುವಲ್ಲಿ ಸಂಭಾಷಣೆಯಷ್ಟೇ ಸಂಗೀತವೂ ಕೂಡ ಒಂದು ಸಮರ್ಥ ಮಾಧ್ಯಮವೆನಿಸಿತ್ತು. ಅತ್ಯಂತ ಸೂಕ್ಷ್ಮವಾದ ಸಂಚಾರಿಭಾವಗಳ ಅಭಿವ್ಯಕ್ತಿಗೆ ಆಂಗಿಕಾಭಿನಯ ಅತ್ಯಂತ ಸ್ಥೂಲ ಮಾಧ್ಯಮವಾಗಿ ಬಿಡುವ ಅಪಾಯವಿರುತ್ತಿತ್ತು. ಒಂದ ರಸದ ಸಂಚಾರಿ ಭಾವಗಳನ್ನು ಆಂಗಿಕಾಭಿನಯದಿಂದಲೇ ಅರ್ಥೈಸಿಕೊಡುವದು ಅಸಾಧ್ಯವಾದಾಗ ಸಂಗೀತದ ರಾಗಗಳು, ಅದರ ಸ್ವರ, ಆಲಾಪ, ತಾನಗಳು ಅರ್ಥಪೂರ್ಣವಾದ ಸಮರ್ಥ ಪೂರಕಗಳಾಗುತ್ತಿದ್ದವು. ದುಷ್ಯಂತನ ವಿರಹ

ದಲ್ಲಿದ್ದ ಶಕುಂತಲೆಯ ಅವಸ್ಥೆಯನ್ನು ಅನುಭವಕ್ಕೆ ತಂದು ಕೊಡಬೇಕಾದಾಗ ಬಳಸುವ ಸಂಗೀತ ಹೆಚ್ಚು ಪರಿಣಾಮಕಾರಿಯಾಗಿರುತ್ತಿತ್ತು. ರಂಗಭೂಮಿಯ ಮೇಲೆ ಯಾವುದು ಅಭಿನಯಾತೀತವಾಗಿ ಆಭಾಸವೆನಿಸುತ್ತಿತ್ತೊ ಅಂಥ ಭಾವಾನುಭವವನ್ನು ಸಂಗೀತ ನಿರ್ವಹಿಸಿ ಕೊಡುತ್ತಿತ್ತು.[೧] ಆ ಸಂಗೀತದ ಹಾಗೂ ಅದರ ಸಾಹಿತ್ಯದ ಅರ್ಥವಾಗದೇ ಹೋದರೂ ಅಂಥ ಪ್ರೇಕ್ಷಕರು ಅದನ್ನು ಸಾಂಕೇತಿಕವಾಗಿ ಗ್ರಹಿಸಿ ಅನುಭವಿಸಬಲ್ಲವರಾಗಿರುತ್ತಿದ್ದರು. ಈ ಒಂದು ಪರಂಪರೆ ನಮ್ಮ ಪ್ರೇಕ್ಷಕ ವರ್ಗದ ಮೇಲೆ ಎಂಥ ಪ್ರಭಾವವನ್ನು ಬೀರಿತ್ತೆಂದರೆ ಸಂಗೀತದ ಗಂಧವೂ ಗೊತ್ತಿಲ್ಲದ ಜನ ರಂಗ ಸಂಗೀತದ ಪ್ರಭಾವಕ್ಕೊಳಗಾಗಿ ತಮ್ಮಷ್ಟಕ್ಕೆ ತಾವೇ ಕಂಟ್ರಿತಾನಗಳನ್ನು ಹೊಡೆಯುತ್ತ ನಲಿದಾಡುತ್ತಿದ್ದರು.

ಹೀಗೆ ಕ್ರಿಯೆಗಳ ಮೂಲಕ ವಸ್ತು–ಪಾತ್ರ–ಸನ್ನಿವೇಶಗಳನ್ನು ಸಾಕ್ಷಾತ್ಕರಿಸಿ ಕೊಡುವ ಸಾಧ್ಯತೆ ತಪ್ಪಿಹೋದಾಗ, ಅದೆಲ್ಲಕ್ಕೂ ಸಂಗೀತ ಮತ್ತು ಸಂಭಾಷಣೆಯ ಬಳಕೆ ಅನಿವಾರ್ಯವಾಯಿತು. ಪೌರಾಣಿಕ ನಾಟಕಗಳ ಪ್ರಯೋಗ ಒಂದು ರೀತಿಯಲ್ಲಿ ಇಂಥ ಅಭಿವ್ಯಕ್ತಿಗೆ ಹೆಚ್ಚು ಅನುಕೂಲವಾಯಿತು. ಅಂತೆಯೇ ಮೈಸೂರ ಅರಮನೆಯ ಕಂಪನಿಯಲ್ಲಿ ಪ್ರಯೋಗಿಸುತ್ತಿದ್ದ 'ಓಥೆಲೊ'ದಂಥ ಅನುವಾದಿತ ಸಾಮಾಜಿಕ ದುರಂತ ನಾಟಕಗಳನ್ನು ಬಿಟ್ಟರೆ ಉತ್ತರ ಕರ್ನಾಟಕದಲ್ಲಿ ಶ್ರೀಮತಿ ಪರಿಣಯ, ದ್ರೌಪದಿ ವಸ್ತ್ರಾಹರಣ, ಕೀಚಕ, ಬಾಣಾಸುರ, ಶ್ರೀಯಾಳ ಸತ್ವಪರೀಕ್ಷೆ, ಶಕುಂತಲೋತ್ಪತ್ತಿ, ಸುಧನ್ವವಧಾ, ವಿರಾಟಪರ್ವ ನಾಟಕಗಳು ಹಾಗೂ ಮೈಸೂರ ಭಾಗದಲ್ಲಿ ಶಾಕುಂತಲ, ಚಂಡಕೌಶಿಕ, ಹರಿಶ್ಚಂದ್ರ, ವೇಣೀಸಂಹಾರ, ಮಾಲತೀಮಾಧವ ಮೊದಲಾದ ಪೌರಾಣಿಕ ನಾಟಕಗಳೇ ಪ್ರದರ್ಶನಗೊಂಡವು.

ಕಳೆದ ಶತಮಾನದ ಕೊನೆಯ ದಶಕದಲ್ಲಿ ಪ್ರಯೋಗಾವಸ್ಥೆಯಲ್ಲಿದ್ದ ವೃತ್ತಿ ರಂಗಭೂಮಿ ಈ ಶತಮಾನದ ಪೂರ್ವಾರ್ಧದಲ್ಲಿ ಒಂದು ಖಚಿತವಾದ ರೂಪವನ್ನು ತಾಳಿ ಅತ್ಯಂತ ಸಮೃದ್ಧವಾದ ಪರಂಪರೆಯಾಗಿ ಬೆಳೆದು ಬಂದಿತು. ವೃತ್ತಿರಂಗಭೂಮಿಗೆ ಸಂಬಂಧಿಸಿದಂತೆ ಎಲ್ಲ ಅಂಶಗಳಲ್ಲಿಯೂ ಎಲ್ಲ ವಿಧದಿಂದಲೂ ನಡೆದ ಸಂಸ್ಕರಣ ಹಾಗೂ ಹಲವು ಸಿಟ್ಟಿನಲ್ಲಿ ಕೈಕೊಂಡ ದಿಟ್ಟ ಪ್ರಯೋಗದಿಂದಾಗಿ ವೃತ್ತಿ ರಂಗಭೂಮಿ ಕ್ರಾಂತಿಕಾರಕ ಹೊಸ ಆಯಾಮಗಳನ್ನು ಪಡೆಯುವಂತಾಯಿತು. ಸಂಗೀತ ಹಾಗೂ ಅಭಿನಯಗಳ ಸಾಮರಸ್ಯ, ಅಭಿನಯಕ್ಕೆ ಉಂಟಾದ ಪ್ರಾಶಸ್ತ್ಯ, ಪೌರಾಣಿಕ ನಾಟಕಗಳೊಡನೆ ಸಮಕಾಲೀನ ಪ್ರಜ್ಞೆಯುಳ್ಳ ಸಾಮಾಜಿಕ ನಾಟಕಗಳು,

೧. ನೋಡಿರಿ : "ಕನ್ನಡ ರಂಗಭೂಮಿ : ಅಂದು-ಇಂದು"—ಪ್ರೊ. ಕೀರ್ತಿನಾಥ ಕುರ್ತಕೋಟಿ ಪ್ರ. (೧೯೭೪), ಕ. ವಿ. ವಿ. ಧಾರವಾಡ, ಪು. ೧೬-೧೭.

ಐತಿಹಾಸಿಕ ಹಾಗೂ ರಾಷ್ಟ್ರೀಯ ಪ್ರಜ್ಞೆಯಿಂದ ಕಳಕಳಿಸಿ ಮೂಡಿಬಂದ ಐತಿಹಾಸಿಕ ನಾಟಕಗಳು ಕಂಪನಿ ಮಾಲಕರ ಅದಮ್ಯ ಉತ್ಸಾಹ, ನಟ–ನಟಿಯರ ಕಲಾನಿಷ್ಠೆ ಎಲ್ಲಕ್ಕೂ ಮಿಗಿಲಾಗಿ ಉತ್ತೇಜನಕಾರಿಯಾದ ಜನತೆಯ ಪ್ರತಿಕ್ರಿಯೆ—ಇವೆಲ್ಲ ಮೇಳ ಗೊಂಡು ರಂಗಭೂಮಿಯ ಪರಂಪರೆಯಲ್ಲಿ ಒಂದು ಸುವರ್ಣಯುಗವನ್ನೇ ನಿರ್ಮಿಸಿ ದವು. ಕರ್ನಾಟಕದ ಒಟ್ಟು ರಂಗಭೂಮಿಯೇ ಈ ಕಾಲದ ವೃತ್ತಿರಂಗಭೂಮಿಯ ಹೆಸರನ್ನು ಹೇಳಿ ಬೀಗುವಂತಾಯಿತು.

ಈ ಕಾಲದಲ್ಲಿ ಅಂದರೆ ೧೯೦೦–೧೯೫೦ರ ವರೆಗಿನ ಕಾಲದಲ್ಲಿ ಕರ್ನಾಟಕದ ತುಂಬೆಲ್ಲ, ಅದರಲ್ಲೂ ಉತ್ತರ ಕರ್ನಾಟಕದಲ್ಲಿಯಂತೂ ಹಲವಾರು ಕಾರಣಗಳಿಂದ ಊರಿಗೊಂದು ಕಂಪನಿಗಳು ಹುಟ್ಟಿಕೊಂಡವು. ರಂಗಕಲೆಯ ಗುಂಗನ್ನು ಹಚ್ಚಿಕೊಂಡ ಕೆಲವು ಶ್ರೀಮಂತರಿಗೆ ಕಂಪನಿಗಳನ್ನು ಕಟ್ಟುವದು ಒಂದು ಹವ್ಯಾಸವೆನಿಸಿತು, ಪ್ರತಿಷ್ಠೆಯ ಹಾಗೂ ವಿಲಾಸದ ರಂಗವೂ ಆಯಿತು. ಕೆಲವು ಧನಿಗಳ ಉಪಪತ್ನಿಯ ರಿಗೆ ಉಪಜೀವನಕ್ಕೆ ಒಂದು ಮಾರ್ಗವೂ ಆಯಿತು. ಹೊಟ್ಟೆಯ ಪಾಡಿಗಾಗಿಯೋ, ಸಹಜ ಒಲವಿನಿಂದಲೋ ಒಂದು ಕಂಪನಿಯನ್ನು ಸೇರಿಯಾದ ಮೇಲೆ ಯಾವುದೋ ಕಾರಣಕ್ಕಾಗಿ ಆ ಕಂಪನಿ ನಿಂತು ಹೋದಾಗ ಅಲ್ಲಿಯ ಕೆಲವು ಕಲಾವಿದರು ಕೂಡಿ ಕೊಂಡು ಅನಿವಾರ್ಯವಾಗಿ ಬೇರೊಂದು ಕಂಪನಿಯನ್ನು ಕಟ್ಟುವ ಸಂಧರ್ಭ ಒದಗುತ್ತಿತ್ತು. ಇನ್ನು ಕೆಲವರಿಗೆ ತಮ್ಮ ನಟನಾಸಾಮರ್ಥ್ಯದ ಬಗ್ಗೆ, ತಮ್ಮ ವ್ಯಕ್ತಿ ತ್ವದ ಬಗ್ಗೆ ಭರವಸೆಯುಳ್ಳ ನಟರು ಬೇರೊಂದು ಸ್ವತಂತ್ರ ಕಂಪನಿಯನ್ನು ಕಟ್ಟುವ ಸಾಹಸಕ್ಕೂ ಮುಂದಾಗುತ್ತಿದ್ದರು. ಇವೆಲ್ಲವುಗಳೊಡನೆ ಪಂಚಾಕ್ಷರ ಗವಾಯಿಗಳಂಥವರು ಸಾಮಾಜಿಕ ಕಳಕಳಿಯ ಒತ್ತಡಕ್ಕೆ ಒಳಗಾಗಿ ಕಂಪನಿ ಯನ್ನು ಕಟ್ಟಿ ಅದನ್ನೊಂದು ಸಮಾಜ ಸೇವೆಯ ಸಾಧನವನ್ನಾಗಿ ಮಾಡಿಕೊಂಡದ್ದೂ ಉಂಟು.

ರಂಗಭೂಮಿಯ ಒಂದು ಪರಂಪರೆಯ ನಿರ್ಮಾಣದಲ್ಲಿ ಈ ಎಲ್ಲ ಕಂಪನಿಗಳು ಅನುಭವಿಸಿದ ಸಂಕಷ್ಟಗಳು, ಮಾಡಿದ ತ್ಯಾಗ, ಗೈದ ಬಲಿದಾನ ನಿಜಕ್ಕೂ ವರ್ಣನಾ ತೀತ. ಮನೆ-ಮಠಗಳನ್ನು ಬಿಟ್ಟು ಅಲೆಮಾರಿ ಜನಾಂಗದಂತೆ ಚಳಿಮಳೆಯನ್ನದೆ, ಬೇನೆ ಬೇಸರಿಕೆಯನ್ನು ಲೆಕ್ಕಿಸದೆ ಊರಿಂದ ಊರಿಗೆ, ಜಾತ್ರೆಯಿಂದ ಜಾತ್ರೆಗೆ ವಾಹನ ಸೌಕರ್ಯವೂ ಇಲ್ಲದ, ಸರಿಯಾದ ರಹದಾರಿಗಳೂ ಇಲ್ಲದ ಕಾಲದಲ್ಲಿ ಸಂಚರಿಸಬೇಕಾಗು ತ್ತಿತ್ತು. ಅಡ್ಡಗಟ್ಟಿ ನಿಲ್ಲುವ ಕೌಟುಂಬಿಕ ಸಮಸ್ಯೆಗಳನ್ನೂ ಎದುರಿಸಬೇಕಾಗು ತ್ತಿತ್ತು. ನಾಟಕ ಕಂಪನಿಯ ಜನರೆಂದರೆ ಬಾಳುವೆಗೆಟ್ಟ ದರಿದ್ರ ಜನರೆಂದೇ ಭಾವಿಸ ಲಾಗುತ್ತಿದ್ದ ಆ ಕಾಲದಲ್ಲಿ ವಾಸ್ತವ್ಯಕ್ಕೆ ಮನೆಗಳೂ ಸಿಕ್ಕುತ್ತಿರಲಿಲ್ಲ. ಥೇಟರ ಹಾಕುವ ದಕ್ಕೂ ಉಚಿತ ಸ್ಥಳವೂ ದೊರೆಯುತ್ತಿರಲಿಲ್ಲ. ಕಾರಣಾಂತರದಿಂದ ಲೈಸನ್ಸ ಇಲ್ಲ

ದೆಯೂ ಪೇಚಾಡಬೇಕಾಗುತ್ತಿತ್ತು. ಹಿರಿಕಿರಿಯ ಅಧಿಕಾರ ಕಿರಿಕಿರಿಯನ್ನೂ ಸಹಿಸಬೇಕಾಗುತ್ತಿತ್ತು. ಮಳೆಗಾಲದಲ್ಲಿಯ ಮೋಡಗಳಂತೂ ಕರಾಳ ಸಮಸ್ಯೆಯನ್ನೇ ತರುತ್ತಿದ್ದವು. ಬಿರುಗಾಳಿಗೆ ಸಿಕ್ಕು ಪರದೆಗಳೆಲ್ಲ ಹರಿದುಹೋಗುವದು. ಥೇಟರ ಮುಗ್ಗರಿಸಿ ಬೀಳುವದು. ಮಳೆಯಿಂದಾಗಿ ಪ್ರಯೋಗಗಳು ನಿಂತು ಹೋಗುವದು ಇವೆಲ್ಲ ಸಾಮಾನ್ಯ ಸಂಗತಿಗಳು. ಆದಾಯವಿಲ್ಲದಾಗ ನೂರಾರು ಜನರಿಗೆ ಕೂಳು-ನೀರು ಪೂರೈಸುವದೂ ಜಡವಾಗಿ ಹೋಗುತ್ತಿತ್ತು. ಎಷ್ಟೋ ಸಲ ಸಾಮಾನುಗಳನ್ನು ಅಡವಿಟ್ಟು ಸಾಲ ಮಾಡಿ ಅರೆಹೊಟ್ಟೆ ತಿಂದು ನಿದ್ದೆಗೆಡಬೇಕಾಗುತ್ತಿತ್ತು. ಕಂಪನಿಗಳಲ್ಲಿಯ ಪರಸ್ಪರ ಸಹಕಾರ-ಸೌಹಾರ್ದತೆಗಳಿಗೆ ಬೇಕಾದಷ್ಟು ನಿದರ್ಶನಗಳಿದ್ದರೂ, ಎಷ್ಟೋ ಕಂಪನಿಗಳು ಪರಸ್ಪರ ಸ್ಪರ್ಧೆ-ದ್ವೇಷ-ಅಸೂಯೆಗಳಲ್ಲಿ ಉರಿದು ಹೋಗುತ್ತಿದ್ದವು. ಹಣದಾಸೆ ತೋರಿಸಿ ಒಂದು ಕಂಪನಿಯ ನಟ-ನಟಿಯರನ್ನು ಅಪಹರಿಸುವದನ್ನೂ ಮೊದಲುಗೊಂಡು ಮಾಟ-ಮಂತ್ರಗಳ ವರೆಗೂ ಈ ದ್ವೇಷ ಮುಂದುವರೆಯುತ್ತಿತ್ತು. ಇಂಥ ಸ್ಪರ್ಧೆಯ ಭಯದಿಂದಲೇ ಎ. ವ್ಹಿ. ವರದಾಚಾರ್ಯರು ಅರಮನೆಯ ರಂಗಭೂಮಿಂ ಪ್ರದರ್ಶಿಸಿದ ನಾಟಕಗಳ ಪ್ರದರ್ಶನವನ್ನೂ ನಿಲ್ಲಿಸಿಬಿಟ್ಟಿದ್ದು, 'ವಿಕ್ರಮೋರ್ವಶೀಯ' ನಾಟಕವನ್ನು ಅರಮನೆಯಲ್ಲಿ ಪ್ರದರ್ಶಿಸಲು ಅವಕಾಶ ದೊರೆಯದೇ ಹೋದದ್ದು[೧]. ಇವೇ ಮೊದಲಾದವುಗಳನ್ನು ಉದಾಹರಣೆಗಾಗಿ ಸ್ಮರಿಸಿಕೊಳ್ಳಬಹುದು.

ಇಷ್ಟೆಲ್ಲ ಸಮಸ್ಯೆಗಳ ಮಧ್ಯದಲ್ಲಿಯೂ ಕಂಪನಿಗಳು ರಂಗಭೂಮಿಯ ಬಗೆಗೆ ಅಪಾರವಾದ ದೈವಿಭಾವನೆಯನ್ನು ಇಟ್ಟುಕೊಂಡು ಛಲದಿಂದ ಬದುಕಿಬಂದಿದ್ದವು. ಒಂದು ನಾಟಕದ ತಾಲೀಮನ್ನು ಆರಂಭಿಸಬೇಕಾದರೆ ಆ ನಾಟಕದ ಪುಸ್ತಕವನ್ನು ಮೊದಲುಗೊಂಡು, ಮಾತುಗಳ ಚೋಪಡಿಯನ್ನೂ ಶ್ರದ್ಧೆಯಿಂದ ಪೂಜಿಸಲಾಗುತ್ತಿತ್ತು. ಥೇಟರನ್ನು ಹೂಡಬೇಕಾದಾಗಲೂ ಇಂಥ ಪೂಜೆ ಅನಿವಾರ್ಯ. ರಂಗಮಂದಿರದಲ್ಲಿ ಕಟ್ಟುನಿಟ್ಟಾದ ಮಡಿ-ಹುಡಿಯನ್ನು ಪಾಲಿಸಲಾಗುತ್ತಿತ್ತು. ನಾಟಕದ ಆರಂಭವಾಗುವದಕ್ಕೆ ಮೊದಲು ರಂಗಭೂಮಿಯನ್ನು ಪೂಜಿಸಿ ಧೂಪ ಹಾಕಿ ಆ ನಾಟಕದ ಹಿನ್ನೆಲೆಗೆ ಸಂಬಂಧಿಸಿದಂತೆ ಶಿವನನ್ನೋ, ಸರಸ್ವತಿಯನ್ನೋ ಇಲ್ಲವೆ ಭಾರತ ಮಾತೆಯನ್ನೋ ಕರ್ನಾಟಕ ಮಾತೆಯನ್ನೋ ಕುರಿತ ನಾಂದಿಪದವನ್ನು ಹಾಡಲಾಗುತ್ತಿತ್ತು. ಇದರಿಂದ ಒಂದು ಬಗೆಯ ಗಂಭೀರ ಹಾಗೂ ಸಾತ್ವಿಕ ವಾತಾವರಣ ರಂಗಭೂಮಿಯನ್ನು ತುಂಬಿ ಬಿಡುತ್ತಿತ್ತು. ಕೆಲವು ಭಕ್ತಿ ಪ್ರಧಾನ ನಾಟಕಗಳಲ್ಲಿ ಕೆಲವೊಂದು ಪಾತ್ರಗಳನ್ನು ಮುಟ್ಟಾದ ಹೆಣ್ಣುಮಕ್ಕಳು ನಿರ್ವಹಿಸುವಂತೆಯೂ

---

೧. ನೋಡಿರಿ : "ಕನ್ನಡ ರಂಗಭೂಮಿ ನಡೆದು ಬಂದ ದಾರಿ" (೧೯೮೩) ಬಿ. ಪುಟ್ಟಸ್ವಾಮಿ. ಪ್ರ : ಕನ್ನಡ ಮತ್ತು ಸಂಸ್ಕೃತ ನಿರ್ದೇಶನಾಲಯ ಬೆಂಗಳೂರು ಪುಟ : ೨೫ ಮತ್ತು ೨೮.

ಇರಲಿಲ್ಲ. ಆಕಸ್ಮಿಕವಾಗಿ ಅಂಥ ಸಂದರ್ಭ ಒದಗಿದರೆ ಬೇರೆಯವರು ಆ ಪಾತ್ರವನ್ನು ನಿರ್ವಹಿಸಬೇಕಾಗುತ್ತಿತ್ತು. ಕೆಲವು ಸಂದರ್ಭದಲ್ಲಿ ಬೋರ್ಡಿಂಗಿನ ಮನೆಯಲ್ಲಿಯೇ ಸತ್ಯನಾರಾಯಣ ಪೂಜೆಯನ್ನೋ, ವರದ ಶಂಕರ ಪೂಜೆಯನ್ನೋ, ಇಲ್ಲವೇ ಇನ್ನಾವದೋ ಪೂಜೆಯನ್ನು ಇಟ್ಟುಕೊಳ್ಳಲಾಗುತ್ತಿತ್ತು—ಇವೆಲ್ಲ ನಮ್ಮ ವೃತ್ತಿರಂಗಭೂಮಿ ಶ್ರದ್ಧೆಯಿಂದ ಕಾಪಾಡಿಕೊಂಡು ಬಂದ ಸಾಂಸ್ಕೃತಿಕ ಮೌಲ್ಯಗಳು.

ನಮ್ಮ ಜನ ಕೆಲವು ಕಲಾವಿದರ ವೈಯಕ್ತಿಕ ಬದುಕಿನ ಬಗೆಗೆ ತಾತ್ಸಾರಗೊಳುತ್ತಿದ್ದರೂ ಸಮಗ್ರ ದೃಷ್ಟಿಯಿಂದ ನೋಡಿದಾಗ ವೃತ್ತಿರಂಗಭೂಮಿಗೂ ಹಾಗೂ ಸಮಾಜಕ್ಕೂ ಒಂದು ಬಗೆಯ ಆಂತರಿಕ ಸೌಹಾರ್ದತೆ ಪರಂಪರೆಯ ಉದ್ದಕ್ಕೂ ಬೆಳೆದು ಬಂದಿರುವದು ವೇದ್ಯವಾಗುತ್ತದೆ. ಒಂದು ಕಂಪನಿ ಕಷ್ಟಕ್ಕೊಳಗಾದರೆ ಊರವರೆಲ್ಲರೂ ಸೇರಿ ಹಣಸಂಗ್ರಹಿಸಿ ಕೊಡುತ್ತಿದ್ದ ಇಲ್ಲವೇ ಕೊನೆಯ ಒಂದು ಪ್ರಯೋಗವನ್ನು ಹೆಚ್ಚಿನ ಹಣಕೊಟ್ಟು ನೋಡುತ್ತಿದ್ದ ಉದಾಹರಣೆಗಳಿಗೆ ನಮ್ಮಲ್ಲಿ ಕೊರತೆ ಇಲ್ಲ. ಕೆಲವು ಶ್ರೀಮಂತರು ಅನಿಮಿತ್ತ ಬಾಂಧವರಾಗಿ ಬಿಡುತ್ತಿದ್ದರು. ಒಂದು ಸಲ ಗರುಡರ ಒಡೆತನದ "ಶಿವಸುತ ಪ್ರಾಸಾದಿಕ ನಾಟಕ ಮಂಡಳಿ" ರಾಯಚೂರಲ್ಲಿ ಕ್ಯಾಂಪು ಹಾಕಿದಾಗ ಅಲ್ಲಿಯ ಧನಿಕರಾದ ಅಮೀಚಂದ ಜ್ಯೋತಿಚಂದ ಶೇಠರು ಫಲಾಪೇಕ್ಷೆ ಇಲ್ಲದೆ ತನು-ಮನ-ಧನದಿಂದ ಸಹಾಯವಿತ್ತರಲ್ಲದೆ ಒಂದು ಡೇರಾ, ಎರಡು ಗ್ಯಾಸದೀಪ, ಇಪ್ಪತ್ತು ಕುರ್ಚಿಗಳನ್ನು ಕೊಟ್ಟು ಆಶೀವದಿಸಿದ್ದುಂಟು; ಇನ್ನು ಗುಲಬುರ್ಗಾ ಜಿಲ್ಲೆಯ ಅಂದೋಲಾ ಎಂಬ ಊರಿನ ನೂರು ಎತ್ತಿನ ಕಮತವಿಟ್ಟಿದ್ದ ಶ್ರೀಮಂತ ಗುರುಲಿಂಗಪ್ಪ ಗೌಡರು ಉತ್ತರ ಕರ್ನಾಟಕದ ಪ್ರಚಂಡ ಕಲಾವಿದರಾದ ಹಂದಿಗನೂರ ಸಿದ್ಧರಾಮಪ್ಪನವರ ಹರಿಶ್ಚಂದ್ರ ನಾಟಕವನ್ನು ಮೆಚ್ಚಿ ೭೫ ತೊಲಿಯ ಬೆಳ್ಳಿಯ ಕಿರೀಟ, ಒಂದು ತೊಲಿಯ ಉಂಗುರವನ್ನು ಉಡುಗರೆಯನ್ನಿತ್ತು ಸತ್ಕರಿಸಿದ್ದು.[೩] ಚಿಕ್ಕೋಡಿ ಶಿವಲಿಂಗ ಸ್ವಾಮಿಗಳು ಕಿತ್ತೂರಲ್ಲಿ ಆರು ತಿಂಗಳ ಕಾಲ ನಿಂತು "ಕಿತ್ತೂರ ಚನ್ನಮ್ಮಾ" ನಾಟಕ ಬರೆಯುವಾಗ ಊರ ಪ್ರಮುಖರು ಮತ್ತು ನೇಮಿಚಂದ್ರ ಜೈನರು ಸ್ವಾಮಿಗಳ ವೆಚ್ಚವನ್ನು ವಹಿಸಿಕೊಂಡದ್ದು[೪]—ಇವೆಲ್ಲ ಯಾವ ರಾಜ-ಮಹಾರಾಜರೂ ಯಾವ ವೀರನಿಗೂ ಮಾಡಿದ ಸನ್ಮಾನಕ್ಕಿಂತ, ಯಾವ ಗುಡಿ-ಗುಂಡಾರಗಳಿಗೂ ಕೊಟ್ಟ ದತ್ತಿಗಿಂತ ಏನೂ ಕಡಿಮೆಯಲ್ಲ. ಇಂಥ ಅಸಂಖ್ಯಾತ

---

೩. 'ರಂಗಭೂಮಿಯ ನಟಸಾರ್ವಭೌಮ ಸಿದ್ಧರಾಮಪ್ಪ ಹಂದಿಗನೂರ'
–ಡಾ. ಬಿ. ಆರ್. ನಾಡಗೌಡ (೧೯೮೦), ಕ. ವಿ. ವಿ. ಧಾರವಾಡ; ಪು. ೪೩-೪೪

೪. "ಏಣಗಿ ಬಾಳಪ್ಪನವರ ಆತ್ಮಕಥೆ" ನಿರೂಪಣೆ : ದು. ನಿಂ. ಬೆಳಗಲಿ, 'ಬಣ್ಣದ ಬದುಕು'
–ಸುಧಾ, ಮಾರ್ಚ ೨೧, ೧೯೭೧; ಪು. ೭೭.

ಉದಾಹರಣೆಗಳಿಂದ ವೃತ್ತಿರಂಗಭೂಮಿ ತುಂಬಿಕೊಂಡಿರುವದನ್ನು ಮರೆಯುವಂತಿಲ್ಲ. ಅಷ್ಟೇ ಅಲ್ಲ, ಒಂದು ಒಳ್ಳೆಯ ಕಂಪನಿ ಊರಿಗೆ ಬಂದರೆ ಆದರ ಒಡೆಯನನ್ನು ಸಾರ್ವಜನಿಕವಾಗಿ ಪ್ರಶಂಶಾ ಪತ್ರವನ್ನಿತ್ತು ಸತ್ಕರಿಸುವದು ಮಾತ್ರವಲ್ಲ, ಕಂಪನಿಯ ಎಲ್ಲ ನಟರನ್ನು ಒಳಗೊಂಡಂತೆ ಊಟಕ್ಕೆ ಆಮಂತ್ರಿಸುವ ಸ್ಪರ್ಧೆಯೂ ಏರ್ಪಡುತ್ತಿತ್ತು. ಹೆಚ್ಚಿನ ಹಣಕೊಟ್ಟು ನಾಟಕಗಳನ್ನು ನೋಡುವವರ ಮೂಲಕ ನಟ-ನಟಿಯರ ಮನೆಯಲ್ಲಿ ನಡೆಯುವ ಮದುವೆ ಮುಂಜಿವೆಗಳಿಗೆ ಕುಲ-ಗೋತ್ರವನ್ನೂ ನೋಡದೆ ಸಹಾಯ ಮಾಡಲಾಗುತ್ತಿತ್ತು.

ಇದಕ್ಕೆ ಪ್ರತಿಯಾಗಿ ವೃತ್ತಿರಂಗ ಭೂಮಿಯ ಕಂಪನಿಗಳು ಸಮಾಜದ ಬಗ್ಗೆ ಇಟ್ಟುಕೊಂಡ ಶ್ರದ್ಧೆ-ಗೌರವಗಳೂ ಕಡಿಮೆಯಾಗಿರಲಿಲ್ಲ. ಒಂದು ಕಂಪನಿ ಯಾವುದೇ ಊರಲ್ಲಿ ನೆಮ್ಮದಿಯಿಂದ ಕ್ಯಾಂಪ ಮುಗಿಸಿದರೆ ಸಾಕು ಕ್ಯಾಂಪು ಕೀಳುವ ಮೊದಲು ಯಾವುದಾದರೂ ಒಂದು ನಾಟಕದ ಆದಾಯವನ್ನು ಆ ಊರಿನ ಗುಡಿ-ಗುಂಡಾರಗಳ ಜೀರ್ಣೋದ್ಧಾರಕ್ಕೊ, ಶಿಕ್ಷಣ ಸಂಸ್ಥೆಗೊ.ಮಹಿಳಾ ಮಂಡಳಕ್ಕೊ ಕೊಡುವ ಪರಿಪಾಠವನ್ನು ಇಟ್ಟುಕೊಳ್ಳಲಾಗಿತ್ತು. ಕಟ್ಟಾ ರಾಷ್ಟ್ರಾಭಿಮಾನಿಯಾಗಿದ್ದ ಗರುಡ ಸದಾಶಿವರಾಯರು ರಾಷ್ಟ್ರೀಯ ಕಾರ್ಯಕ್ರಮಗಳಿಗೆ, ಶೈಕ್ಷಣಿಕ ಸಂಸ್ಥೆಗಳಿಗೆ ಸೇವಾದಳಕ್ಕೆ ಧಾರಾಳ ಮನಸ್ಸಿನಿಂದ ಧನಸಹಾಯವನ್ನಿತ್ತಿದ್ದರು. ಗುಬ್ಬಿ ವೀರಣ್ಣನವರು ಕಾಣಿಕೆಯಾಗಿ-ಪಾರಿತೋಷಕವಾಗಿ ಬಂದಿದ್ದ ಎರಡು-ಮೂರು ಕಪಾಟುಗಳಷ್ಟಿದ್ದ ಬೆಳ್ಳಿಯ ಸಾಮಾನುಗಳನ್ನೆಲ್ಲ ತೂಕಹಾಕಿಸಿ ತಮ್ಮ ಆರಾಧ್ಯ ದೈವವಾದ ಗುಬ್ಬಿ ಚೆನ್ನಬಸವೇಶ್ವರ ದೇವಾಲಯದ ಗರ್ಭಗುಡಿಯ ಬಾಗಿಲುವಾಡಕ್ಕೆ ಬಳಸಿದ್ದರು. ಹುಟ್ಟುಗುರುಡರಾಗಿದ್ದ ಪಂಚಾಕ್ಷರ ಗವಾಯಿಗಳಂತೂ ಅಂಧಮಕ್ಕಳ ಉದ್ಧಾರಕ್ಕಾಗಿಯೇ ನಾಟಕ ಕಂಪನಿಯನ್ನು ಕಟ್ಟಿದ್ದರು. ಅದರಿಂದಾಗಿ ಎಷ್ಟೋ ಕುರುಡರು ಶ್ರೇಷ್ಠಕಲಾವಿದರಾಗಿ ರಂಗಭೂಮಿಗೆ ಉತ್ಕೃಷ್ಟ ಸೇವೆಯನ್ನು ಸಲ್ಲಿಸಿದರು.

ಉತ್ತರ ಕರ್ನಾಟಕ ವೃತ್ತಿರಂಗ ಭೂಮಿಯಂತೂ, ಅಪ್ರತ್ಯಕ್ಷವಾಗಿಯಾದರೂ ಚಿಂತೆಯಿಲ್ಲ. ಸಂಭವಿಸಬಹುದಾದ ಯಾವ ಗಂಡಾಂತರವನ್ನು ಲೆಕ್ಕಿಸದೆ ರಾಷ್ಟ್ರೀಯ ಚಳುವಳಿಯಲ್ಲಿ ಪಾಲುಗೊಂಡದ್ದು ಭಾರತೀಯ ರಂಗಭೂಮಿಯ ಚರಿತ್ರೆಯಲ್ಲಿಯೇ ಚಿರಸ್ಮರಣೀಯ ವಿಷಯ. ೧೯೪೨ರ ಸ್ವಾತಂತ್ರ್ಯ ಚಳುವಳಿಯ ಎಷ್ಟೋ ಜನ ಹೋರಾಟಗಾರರಿಗೆ, ಭೂಗತ ಕಾರ್ಯಕರ್ತರಿಗೆ ಏಣಗಿ ಬಾಳಪ್ಪ ಹಾಗೂ ಇನಾಮದಾರರು ಕೂಡಿ ನಡೆಸುತ್ತಿದ್ದ ವೈಭವಶಾಲಿ ನಾಟ್ಯಸಂಘವು ಆಶ್ರಯವನ್ನಿತ್ತು ಪೋಲಿಸರಿಂದ ರಕ್ಷಿಸಿದ್ದು, ಎಲ್ಲ ಕಾರ್ಯಕರ್ತರಿಗೂ ಕಂಪನಿಯ ಬೋರ್ಡಿಂಗಿನಲ್ಲಿಯೇ ಊಟದ ವ್ಯವಸ್ಥೆಯನ್ನು ಮಾಡಿದ್ದು, ಅದೇ ಕಾರಣಕ್ಕಾಗಿ ಕಂಪನಿ ಲೈಸನ್ಸ ಕಳೆದುಕೊಂಡು ಒದ್ದಾಡಿದ್ದು ಮತ್ತು ಈ ಮೊದಲೇ ರಾಷ್ಟ್ರೀಯ ಚಳುವಳಿಯ ಭಾವನೆ

ಗಳನ್ನು ಜನರಲ್ಲಿ ಪ್ರಚೋದಿಸಲು ಮುಂದಾದ ಕಾರಣಕ್ಕಾಗಿಯೇ ಅಬ್ಬಿಗೇರಿ ಕಂಪನಿ ಅವಸಾನ ಹೊಂದಿದ್ದು ವೃತ್ತಿರಂಗಭೂಮಿಯ ಚರಿತ್ರೆಯಲ್ಲಿ ರೋಮಾಂಚನಕಾರಿಯಾದ ಘಟನೆಗಳು.

ನಾಡಿನ ಇಲ್ಲವೆ ರಾಷ್ಟ್ರದ ಯಾವಮೂಲೆಗಾದರೂ ಆಪತ್ತು ಕಾಣಿಸಿಕೊಂಡ ಸಂದರ್ಭದಲ್ಲಿ ಅದರ ಪರಿಹಾರಕ್ಕೆ ಎಷ್ಟೋ ಕಂಪನಿಗಳು ಸ್ವಯಂ ಪ್ರೇರಣೆಯಿಂದ ಮುಂದೆ ಬರುತ್ತಿದ್ದ ಉದಾಹರಣೆಗಳಿಗಂತೂ ಲೆಕ್ಕವಿಲ್ಲ. ಸಾಮಾನ್ಯವಾಗಿ ಅಂಥ ಸಂದರ್ಭದಲ್ಲಿ ಎಲ್ಲ ಕಂಪನಿಗಳು ಒಂದು ದಿನದ ತಮ್ಮ ಆದಾಯವನ್ನು ಬಿಟ್ಟು ಕೊಡುತ್ತಿದ್ದವು. ಕೆಲವು ಸಲ ಸಂಗೀತ ಕಚೇರಿಗಳನ್ನು ನಡೆಸಿಯಾದರೂ ಪರಿಹಾರ ಧನವನ್ನು ಒದಗಿಸುತ್ತಿದ್ದವು. ೧೯೫೦ರಲ್ಲಿ ಪ್ರಕೃತಿಯ ಪ್ರಕೋಪಕ್ಕೀಡಾಗಿದ್ದ ಆಸ್ಸಾಮ ಪರಿಹಾರ ನಿಧಿಗೆ ಸೋನುಬಾಯಿ ದೊಡ್ಡಮನಿಯಂಥವರು ಸಂಗೀತ ಕಚೇರಿಗಳನ್ನು ನಡೆಸಿಕೊಟ್ಟದ್ದು[೫] ರಂಗ ಕಲಾವಿದರ ಔದಾರ್ಯಕ್ಕೆ ಮಾನವೀಯ ಕಳಕಳಿಗೆ ಕೇವಲ ಒಂದು ಉದಾಹರಣೆ ಮಾತ್ರ.

ಉತ್ತರ ಕರ್ನಾಟಕದಲ್ಲಿ ಈ ಶತಮಾನದ ಆರಂಭದ ಅಂಚಿನಲ್ಲಿಯೇ ರಾವ ಬಹಾದ್ದೂರ ಶಿವಮೂರ್ತಿಸ್ವಾಮಿ ಕಣಬರ್ಗಿಯವರು, ಶಿರಹಟ್ಟಿ ವೆಂಕೋಬ ರಾಯರು, ಅಬ್ಬಿಗೇರಿಯವರು ಅನಂತರ ಏರಾಶಿ ಭರಮಪ್ಪ—ಮೊದಲಾದವರು ಹುಚ್ಚೆದ್ದು ಹಣ ಸುರಿದು ಕಂಪನಿಗಳನ್ನು ಕಟ್ಟಿ ವೃತ್ತಿರಂಗಭೂಮಿಗೆ ಅಭೂತಪೂರ್ವ ವೈಭವವನ್ನು ತಂದುಕೊಟ್ಟರು; ಮೈಸೂರ ಭಾಗದಲ್ಲಿ ಗುಬ್ಬಿವೀರಣ್ಣ, ಸುಬ್ಬಯ್ಯ ನಾಯುಡು ಮೊದಲಾದವರು ವೈಭವಯುತವಾದ ಸೆಟ್ಟುಗಳನ್ನು ತಯಾರಿಸಿ, ಆಶ್ಚರ್ಯಕರವಾದ ರಂಗತಂತ್ರಗಳನ್ನು ಬಳಕೆಗೆ ತಂದುಕೊಂಡರು, ೧೯೦೧ರಲ್ಲಿಯೇ ಕೊಣ್ಣೂರ ಕಂಪನಿಯಲ್ಲಿ ಡೈನಮ್‌ದಿಂದ ವಿದ್ಯುದ್ದೀಪಗಳು ಬೆಳಗಲಾರಂಭಿಸಿದವು. ಈ ಎಲ್ಲ ಸೌಲಭ್ಯ ಮತ್ತು ರಂಗತಂತ್ರಗಳಿಂದ ಸೂಕ್ಷ್ಮಾಭಿನಯಕ್ಕೆ ಹೆಚ್ಚಿನ ಅವಕಾಶ ದೊರೆಯಿತಲ್ಲದೆ, ಅತಿವಾಸ್ತವವಾದ ಘಟನೆಗಳನ್ನು ದೃಶ್ಯಗಳನ್ನು ವಾಸ್ತವವಾಗಿ ಸಾಕ್ಷಾತ್ಕರಿಸಿ ಕೊಡಲು ಸಾಧ್ಯವಾಯಿತು. ಆಕಾಶದಿಂದಲೇ ನಾರದನು ಇಳಿದುಬರುವದು, ಕಂಬವನ್ನು ಸೀಳಿ ನರಸಿಂಹ ಪ್ರತ್ಯಕ್ಷಗೊಳ್ಳುವದು, ಅಂತರ್ಗತವಾದ ಶಕ್ತಿ ದೇವತೆಗಳು ವ್ಯಕ್ತಿಯ ಎದೆಯಿಂದಲೇ ಮೂಡಿಬಂದು ಆಕಾರತಾಳ ನಿಲ್ಲುವದು ಅರ್ಜುನನ ಬಾಣದಿಂದ ಕತ್ತರಿಸಿದ ಜೈದ್ರಥನ ರುಂಡ ಆತನ ತಂದೆಯ ಕೈ ಸೇರುವದು—ಇಂಥ ಅತಿವಾಸ್ತವವೆನಿಸುವ ಘಟನೆಗಳನ್ನು ವಾಸ್ತವೀಕರಣಗೊಳಿಸುವ

೫. "ರಂಗ ಕಲಾವಿದೆ ಸೋನುಬಾಯಿ ದೊಡ್ಡಮನಿ" (೧೯೮೦) ಡಾ. ಎಸ್. ಎಸ್. ಕೋತಿನ, ಪು-೧೦೨

ಪ್ರಯತ್ನ ಮೊದಲಾಯಿತು.[೬] ತಿರುಗುವ ರಂಗಸಜ್ಜಿಕೆ. ಕೋಟೆಕೊತ್ತಳಗಳು, ಕೋಟೆ ಮೇಲಿನ ಪಹರೆದಾರರು ಇವೇ ಮೊದಲಾದವುಗಳಿಂದ ದೃಶ್ಯಗಳನ್ನು ಸಾಕ್ಷಾತ್ಕರಿಸಿ ಕೊಡಲಾಯಿತು. ಆದರೆ ಇಂಥ ವಾಸ್ತವೀಕರಣದ ಇತಿಮಿತಿಯನ್ನು ಮತ್ತು ಇಂಥ ಮಾಯಾಲೋಕದಲ್ಲಿ ಅಭಿಜಾತ ಕಲಾವಿದರ ಪ್ರತಿಭೆಯೂಕೂಡ ಮರೆಯಾಗಿ ಹೋಗುವ ಅಪಾಯವನ್ನು ನಮ್ಮ ಕಂಪನಿಗಳು ಅರ್ಥಮಾಡಿಕೊಳ್ಳಲಿಲ್ಲ. ಒಟ್ಟಿನಲ್ಲಿ ಮಿತಿಮೀರಿದ ರಂಗತಂತ್ರ–ವೈಭವಗಳು ನಾಟ್ಯಕಲೆಗೆ ಪೂರಕವಾಗಿ ನಿಂತುಕೊಳ್ಳದೆ ತಂತ್ರ–ವೈಭವಗಳ ಪ್ರದರ್ಶನವೇ ನಾಟಕಪ್ರದರ್ಶನ ಎಂಬ ಭ್ರಮೆ ಮುಂದೆ ಕೆಲವು ಶ್ರೀಮಂತ ಕಂಪನಿಗಳಲ್ಲಿ ತಲೆದೋರಿತು. ಹಿಂದಿನ ನಮ್ಮ ಜಾನಪದ ರಂಗಭೂಮಿಯ ಮೇಲೆ ಕೇವಲ ಅರ್ಥೋಪಕ್ಷೇಪಕಗಳಿಂದ ಆಗುತ್ತಿದ್ದ ಪರಿಣಾಮವನ್ನೂ ಕೂಡ ಈ ರಂಗ-ತಂತ್ರ-ವೈಭವ ಮಾಡದೇಹೋಯಿತು; ಅಂದರೆ ಜನಪದ ರಂಗಭೂಮಿಯ ಅಟ್ಟದಮೇಲೆ ಒಂದು ಪಾತ್ರಬಂದು. ಒಂದು ಕುಣಿತವನ್ನು ಕುಣಿದು. ಆಹಾಃ ಈಗ ನಾನು ಇಂದ್ರನ ಅಮರಾವತಿಗೆ ಬಂದುಬಿಟ್ಟೆ ಎಂದು ಒಂದು ಸಣ್ಣಮಾತನ್ನು ಹೇಳಿ ಅದರ ವೈಭವವನ್ನು ಕುರಿತು ಹಾಡುವ ಹಾಡು ಸಾಂಕೇತಿಕವಾಗಿ ಮಾಡಬಹುದಾದ ಪರಿಣಾಮವನ್ನೂ ಈ ರಂಗತಂತ್ರ ಹಾಗೂ ರಂಗವೈಭವಗಳು ಮಾಡದೇ ಹೋದವು. ಮುಖ್ಯವಾಗಿ ಅವೆಲ್ಲ ನಮ್ಮ ಪ್ರೇಕ್ಷಕರ ಕಲ್ಪನಾಶಕ್ತಿಗೆ ಮಬ್ಬುಗವಿಸಲಾರಂಭಿಸಿದವು. ನಮ್ಮ ಜನಕ್ಕೆ ಇಂಥ ಕೃತಕ ತಂತ್ರಗಳಿಗಿಂತ ಅಭಿನಯ–ಸಂಗೀತ ಹೆಚ್ಚು ಇಷ್ಟವಾಗಿದ್ದವು. "ನಾವು ಬಣ್ಣದ ಸೀನರಿ ನೋಡಾಕ ಹೊಂಟಿಲ್ಲ ಸಿದ್ರಾಮಪ್ಪನ ಪಾರ್ಟನೋಡಾಕ ಹೊಂಟೇವಿ[೭]"—ಹಂದಿಗನೂರ ಸಿದ್ಧರಾಮಪ್ಪನನ್ನು ಕುರಿತು ಆಡಿದ ಸಾಮಾನ್ಯ ಜನರ ಈ ಮಾತು ಆಗಿನಕಾಲದ ಪ್ರೇಕ್ಷಕರ ಸಂಸ್ಕಾರವನ್ನು, ಪ್ರವೃತ್ತಿಯನ್ನು ಪ್ರತಿಪಾದಿಸುವಂತಿದೆ. ಇಂಥ ಆಧುನಿಕ ವಿಚಿತ್ರ ರಂಗಸಜ್ಜಿಕೆಯಿಂದ. ಅಡಂಬರದಿಂದ ಕೂಡಿದ ಕೆಲವು ಕಂಪನಿಗಳು ಇದೇಕಾರಣಕ್ಕಾಗಿ ಇನ್ನೊಂದು ಹೊಸ ಸಂಕಟವನ್ನು ತಮಗೆ ಅರಿವಿಲ್ಲದೇ ಎದುರು ಹಾಕಿಕೊಂಡವು. ಇಂಥ ಅದ್ದೂರಿಯ ಸೆಟ್ಟುಗಳಿಗಾಗಿ ತೊಡಗಿಸಿದ ಬಂಡವಾಳದ ದೃಷ್ಟಿಯಿಂದ, ಪ್ರದರ್ಶನದ ವೆಚ್ಚ. ಸಾರಿಗೆಯ ವೆಚ್ಚ ಎಲ್ಲವನ್ನೂ ನಿಭಾಯಿಸುವದಕ್ಕಾಗಿ ಟಿಕೆಟ್ಟಿನ ದರಗಳನ್ನು ಅನಿವಾರ್ಯವಾಗಿ ಹೆಚ್ಚುಮಾಡಬೇಕಾಯಿತು. ಇದರಿಂದ ಕಲೆಯೊಂದನ್ನೇ ಮೂಲ ಬಂಡವಾಳವನ್ನಾಗಿ ಮಾಡಿಕೊಂಡು ಪ್ರವೇಶ ಶುಲ್ಕವನ್ನು ಕಡಿಮೆಗೊಳಿಸುತ್ತಿದ್ದ ಸಣ್ಣ ಕಂಪನಿಗಳೆದುರು ಶ್ರೀಮಂತ ಕಂಪನಿಗಳು ನೆಲ ಕಚ್ಚದಿದ್ದರೂ ನಾಲಿಗೆಯನ್ನಂತೂ ಕಚ್ಚಿಕೊಳ್ಳಬೇಕಾಯಿತು. ಒಟ್ಟಿನಲ್ಲಿ ರಂಗ

೬. ಕನ್ನಡ ರಂಗಭೂಮಿ : ಅಂದು-ಇಂದು"—ಪ್ರೊ. ಕೀರ್ತಿನಾಥ ಕುರ್ತಕೋಟಿ, "ಕನ್ನಡ ರಂಗಭೂಮಿ : ಅಂದು-ಇಂದು"—ಕ. ವಿ. ವಿ. ಧಾರವಾಡ (೧೯೭೯).

೭. "ರಂ. ಭೂ. ಯ ನಟಸಾರ್ವಭೌಮ ಸಿದ್ಧರಾಮಪ್ಪ ಹಂದಿಗನೂರ"—ಡಾ. ಬಿ. ಆರ್. ಪಾಟೀಲ (೧೯೮೦) ಕ. ವಿ. ವಿ. ಧಾರವಾಡ, ಪು-೫

ತಂತ್ರದ ಅತಿರೇಕ ಕೆಲವು ಕಂಪನಿಗಳಿಗೆ ಆತಂಕವಾಗಿದ್ದರೂ ಅವರ ಔಚಿತ್ಯಪೂರ್ಣ ಬಳಕೆ ಈ ಕಾಲದ ಬಹಳಷ್ಟು ಕಂಪನಿಗಳಿಗೆ ಒಂದು ವರವಾಗಿ ರಂಗಭೂಮಿಯ ಪರಂಪರೆಯ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದು ಸುಳ್ಳಲ್ಲ.

೧೯ನೆಯ ಶತಮಾನದ ರಂಗಭೂಮಿಯಲ್ಲಿದ್ದ ಸಂಗೀತದ ಅತಿರೇಕವನ್ನು ನಿಯಂತ್ರಿಸಿ ಅಭಿನಯಕ್ಕೆ ಒಂದು ಸಂಸ್ಕಾರವನ್ನು ತಂದುಕೊಡುವ ಮತ್ತು ಸಂಗೀತ ಸಂಭಾಷಣೆ–ಅಭಿನಯಗಳಲ್ಲಿ ಸಾಮರಸ್ಯವನ್ನು ಸಾಧಿಸಿ ಕೊಡುವ ಒಂದು ಪ್ರಯತ್ನ ಈ ಶತಮಾನದ ಆರಂಭದ ದಶಕಗಳ ವೈಶಿಷ್ಟ್ಯಗಳಲ್ಲಿ ಒಂದು. ಈ ಪ್ರಯತ್ನ ಅತ್ಯಂತ ಸಾರ್ಥಕವಾಗಿ, ಯಶಸ್ವಿಯಾಗಿ ನಡೆದದ್ದು ಎ. ವ್ಹಿ. ವರದಾಚಾರ್ಯರಿಂದ. ತತ್ಪೂರ್ವದ ಅಥವಾ ಸಮಕಾಲೀನ ಕಂಪನಿಗಳು ಸಂಗೀತಕ್ಕಿರಬೇಕಾದ ಇತಿಮಿತಿಯನ್ನು ಅರ್ಥ ಮಾಡಿಕೊಳ್ಳದೇ ಹೋದದ್ದನ್ನು ಮತ್ತು ಒಬ್ಬ ನಟ ತಾನು ಅಭಿನಯಿಸಬೇಕಿದ್ದ ಪಾತ್ರದಲ್ಲಿ ತಾದಾತ್ಮ್ಯವನ್ನು ಸಾಧಿಸಿದೆ, ತಾನೊಬ್ಬ ಸಂಗೀತಗಾರನಾಗಿ ತಾನ-ಗಮಕಗಳ ಚಾತುರ್ಯವನ್ನು ಪ್ರದರ್ಶಿಸಲು ಹೊರಡುವ ದೌರ್ಬಲ್ಯವನ್ನು ಮತ್ತು ಅದರಿಂದಾಗುವ ಆಭಾಸವನ್ನು ಆಚಾರ್ಯರು ಗುರುತಿಸಿದವರಾಗಿದ್ದರು. ಅಂತೆಯೇ ಅಭಿನಯಕ್ಕೆ ಸಂಗೀತವನ್ನು ಪೂರಕವಾಗಿ ಬಳಸಿಕೊಳ್ಳುವ ಕಲೆಯನ್ನು ಅವರ ಕ್ರಿಯಾಶೀಲ ನಾಟ್ಯಪ್ರತಿಭೆ ರಂಗಭೂಮಿಗೆ ಕಲಿಸಿಕೊಟ್ಟಿತು. ವಿಕ್ರಮೋರ್ವಶೀಯ ನಾಟಕದ ಪುರೂರವ ಪಾತ್ರ, ಊರ್ವಶಿಯ ವಿರಹದಲ್ಲಿ ಪಶುಪಕ್ಷಿಗಳಿಗೆ ಮೊರೆ ಇಡುವ ಸನ್ನಿವೇಶದಲ್ಲಿ ವರದಾಚಾರ್ಯರು ೭–೮ ವೃತ್ತಛಂದಗಳನ್ನು ಮುಕ್ಕಾಲು ತಾಸಿನವರೆಗೆ ಸಾಭಿನಯವಾಗಿ ಹಾಡಿದರೆ ಜನ ಮಂತ್ರಮುಗ್ಧರಾಗುತ್ತಿದ್ದರಂತೆ.[೮]

ಮುಂದೆ ಟಿ. ರಾಘವರು, ಗರುಡ ಸದಾಶಿವರಾಯರು, ಮಹಮ್ಮದ ಪೀರ ಅವರ ಪ್ರಯತ್ನದಿಂದಾಗಿ ಗದ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರೆಯಿತು. ಉಚ್ಚಾರಣೆಯ ಅತಿರೇಕಗಳನ್ನು ನಿಯಂತ್ರಿಸಿ ಅಭಿನಯದ ಸೂಕ್ಷ್ಮ ರಹಸ್ಯಗಳನ್ನು, ಅದರ ಪರಿಣಾಮಕಾರಿತ್ವವನ್ನು ಈ ಎಲ್ಲ ಕಲಾವಿದರು ತೋರಿಸಿಕೊಟ್ಟರು. ಇವರಿಂದಾಗಿ ಕೆಲವು ಕಂಪನಿಗಳಲ್ಲಿ ಸಂಗೀತ ಪ್ರಧಾನವಾದ ನಾಟಕಗಳು ಪ್ರದರ್ಶನಗೊಂಡರೆ ಇನ್ನು ಕೆಲವು ಕಂಪನಿಗಳು ಗದ್ಯಪ್ರಧಾನವಾದ ನಾಟಕಗಳನ್ನು ಪ್ರದರ್ಶಿಸಿದವು. ಈ ಗದ್ಯ-ಪದ್ಯಗಳೆರಡನ್ನೂ ಮೀರಿದ ಅಭಿನಯ ಸಾಮರ್ಥ್ಯವನ್ನು ಪ್ರಕಟಿಸಬಲ್ಲ ಕಲಾವಿದರೂ ರಂಗಭೂಮಿಯಲ್ಲಿ ಕಾಣಿಸಿಕೊಂಡರು. ಸಂಗೀತದಿಂದಲೇ ಆಗಲಿ, ಸಂಭಾಷಣೆಯಿಂದಲೇ ಆಗಲಿ ಅಭಿನಯಕ್ಕೆ ಅಪಚಾರವಾಗಬಾರದೆಂಬುದು ಈ ಕಲಾವಿದರ ಅತಿ ಮುಖ್ಯವಾದ ಧೋರಣೆಯಾಗಿತ್ತು. ಈ ಹಿನ್ನೆಲೆಯಲ್ಲಿ ಟಿ.

---

೮. "ಕ ರಂ. ಭೂ. ನಡೆದು ಬಂದ ದಾರಿ"–ಬಿ. ಪುಟ್ಟಸ್ವಾಮಯ್ಯ; ಕ ಮತ್ತು ಸಂ. ನಿರ್ದೇಶನಾಲಯ ಬೆಂಗಳೂರು, ಪು–೨೨

ರಾಘವ, ಗರುಡ ಸದಾಶಿವರಾಯರು. ಮಹಮ್ಮದ ಪೀರ, ಹಂದಿಗನೂರ ಸಿದ್ಧರಾಮಪ್ಪ, ಕೆರೂರಿನ ಅದೃಶಪ್ಪಾ ಮಾನ್ವಿ ಇವರೆಲ್ಲ ಮಹತ್ವದ ಕ್ರಾಂತಿಯನ್ನು ಮಾಡಿದ ಪ್ರತಿಭಾವಂತ ಕಲಾವಿದರು. 'ಉಷಾ ಸ್ವಯಂವರದಲ್ಲಿ ಸಿದ್ಧರಾಮಪ್ಪನವರು ಬಾಣಾಸುರನ ಪಾತ್ರವನ್ನು ಅಭಿನಯಿಸುತ್ತಿದ್ದ ಒಂದು ಸನ್ನಿವೇಶ—ಬಾಣಾಸುರನ ಆಸ್ಥಾನಕ್ಕೆ ಸೇವಕನೊಬ್ಬನು ಬಂದು "ಉಷೆಯ ಅಂತಃಪುರದಲ್ಲಿ ಪ...ರ... ಪು...ರು...ಷ..." ಎಂದು ನುಡಿಯುತ್ತಿರುವಾಗಲೇ ಕರಕರ ಹಲ್ಲುಕಡಿಯುತ್ತ, ಕಣ್ಣುಗಳಿಂದ ಕಿಡಿಕಾರುತ್ತ, ಮೀಸೆ ಕುಣಿಸುತ್ತ.' ಸಿಂಹಾಸನದ ತೋಳುಗಳನ್ನು ಬಡಿದು ರಭಸದಿಂದ ಸಿಂಹಾಸನದಿಂದ ಎದ್ದು ಬಂದು ಗದೆಯನ್ನು ಬಲವಾಗಿಬೀಸಿ ಹೆಗಲಮೇಲೆ ಇಟ್ಟುಕೊಂಡಾಗ ರೌದ್ರಾಭಿವ್ಯಕ್ತಿಗೆ ಜನಕರತಾಡನ ಮಾಡುತ್ತಿತ್ತು. ಒಂದು ಸಲವಂತೂ ಮುಂದೆ ಕುಳಿತ ಹಿರಿಯ ಅಧಿಕಾರಿಯೊಬ್ಬ ಬೆದರಿ ಎರಡೂ ಕಾಲುಗಳನ್ನು ಎತ್ತಿ ಕುರ್ಚಿಯ ಮೇಲಿಟ್ಟುಕೊಂಡು ಮುದುಡಿ ಕುಳಿತಸಂಗತಿ ವನ್ನ ಮೋರ ಎನಿಸಿಕೊಳ್ಳುವ ಸಂಗೀತಕ್ಕಿಂತಲೂ ಈ ಸತ್ವಯುತವಾದ ಅಭಿನಯ ಸಾಮರ್ಥ್ಯ ಹೆಚ್ಚು ಸಾರ್ಥಕವಾಗಿತ್ತು. ಅದೃಶಪ್ಪಾ ಮಾನ್ವಿಯವರ ಭೀಮಸಪಾತ್ರದ ಅಭಿನಯವನ್ನು ಬಸುರಿದ್ದ ಹೆಣ್ಣುಮಕಳು ನೋಡುವಂತಿರಲಿಲ್ಲ. ಆಹಾರಾಭಿನಯದ ಆಡಂಬರವಿಲ್ಲದೆ, ಕೇವಲ ಒಂದು ಪೀತಾಂಬರವನ್ನುಟ್ಟು ಕೂದಲವನ್ನು ಹಿಂಬದಿಗೆ ಬಾಚಿ, ಹಣೆಯಮೇಲೆ ಅಗಲವಾದ ಕುಂಕುಮವನ್ನಿಟ್ಟು, ಬರಿಮೈಯಲ್ಲಿ ಎದ್ದು ಕಾಣುವ ವ್ಯಕ್ತಿತ್ವ ಅದ್ಭುತ ಪರಿಣಾಮವನ್ನು ಮಾಡುತ್ತಿತ್ತು. ನೇರವಾಗಿ ಅಬ್ಬರದಿಂದ ಮಾತುಗಳನ್ನು ಹೇಳದೆ ಹೊಟ್ಟೆಯೊಳಗಿಂದ ತಂದ ಉಸಿರನ್ನು ಎದೆಯಲ್ಲಿ ಸಂಗ್ರಹಿಸಿ ಅದಮ್ಯಗೊಳಿಸುತ್ತ ನಿದಾನವಾಗಿ ಕಂಠದಿಂದ ಹೊರಸೂಸುತ್ತಿದ್ದಂತೆ ಅದರಲ್ಲಿ ಮಾತುಗಳು ಕರಗಿ ರಸಪಾಕಗೊಳ್ಳುತ್ತಿದ್ದುದು ಅದೃಶಪ್ಪನವರ ಅಭಿನಯದ ಆಕರ್ಷಕ ವೈಶಿಷ್ಟ್ಯವಾಗಿರುತ್ತಿತ್ತು.

ಇಷ್ಟಾಗಿಯೂ ಸಂಗೀತದ ಸಂಬಂಧ ವ್ಯಾಮೋಹ ವೃತ್ತಿರಂಗಭೂಮಿಗೆ ತಪ್ಪಲಿಲ್ಲ. ಈ ಶತಮಾನದ ಮೂರು–ನಾಲ್ಕು ದಶಕಗಳಲ್ಲಿಯಂತೂ ವೃತ್ತಿರಂಗಭೂಮಿ ಸಂಗೀತವನ್ನು ಅತ್ಯಂತ ಶ್ರದ್ಧೆಯಿಂದ ಬೆಳಸಿಕೊಂಡು ಬಂದಿತು. ಉತ್ತರ ಕರ್ನಾಟಕದ ಹಿನ್ನೆಲೆಯಲ್ಲಿ ಹೇಳುವ ದಾದರಂತೂ ಇಲ್ಲಿಯ ಸಂಗೀತದ ಬೆಳವಣಿಗೆಗೆ ರಂಗಭೂಮಿಯೇ ಆಶ್ರಯವನ್ನಿತ್ತಿತು. ಸಂಗೀತ ಪ್ರಧಾನವಾಗಿದ್ದ ಒಂದೊಂದು ನಾಟಕದ ಪ್ರವರ್ಶನವಂತೂ ಸಂಗೀತದ ಕಚೇರಿಯೂ ಆಗಿರುತ್ತಿತ್ತು. ಸಂಗೀತ ಸಾಧನೆ ನಟರ ಅರ್ಹತೆಯ ಮಹತ್ವದ ಮಾನದಂಡವಾಗಿತ್ತು. ಏಕಕಾಲಕ್ಕೆ ಸಂಗೀತ ಪ್ರವೀಣರಾದ

೯. "ರಂಗಭೂಮಿ ನಟಸಾರ್ವಭೌಮ ಸಿದ್ಧರಾಮಪ್ಪ ಹಂದಿಗನೂರ"–ಡಾ. ಬಿ. ಆರ್. ನಾಡಗೌಡ (೧೯೮೦), ಕ. ವಿ. ವಿ. ಧಾರವಾಡ.

ಇಬ್ಬರ ನಟರು ರಂಗಭೂಮಿಯ ಮೇಲೆ ಕಾಣಿಸಿಕೊಂಡರಂತೂ ಸಂಗೀತದ ಸ್ಪರ್ಧೆಯೇ ಏರ್ಪಡುತ್ತಿತ್ತು. ತಾನ–ಗಮಕಗಳ ಚಮತ್ಕಾರಣೆ ಕರತಾಡನ–ವನ್ಸ ಮೋರಗಳ ಜಡಿಮಳೆ. ಪ್ರೇಕ್ಷಕರಲ್ಲಿ ಭಕ್ಷೀಸುಕೊಡುವ ಪೈಪೋಟಿ ಎಷ್ಟೋ ಕಂಪನಿಗಳು ಕಂಪನಿಯಲ್ಲಿಯ ಮಕ್ಕಳಿಗೆ ಸಂಗೀತ ಹೇಳಿಕೊಡಲೆಂದೇ ನಾಡಿನ ಖ್ಯಾತ ಸಂಗೀತ ವಿದ್ವಾಂಸರನ್ನು ಕಂಪನಿಯಲ್ಲಿ ಇಟ್ಟುಕೊಂಡು ಉಪಚರಿಸುತ್ತಿದ್ದರು. ಎಷ್ಟೋ ಆಸಕ್ತರು ಸಂಗೀತಗುರುವಿನ ಆಶ್ರಯ ಪಡೆಯಲೆಂದೇ ನಾಟಕ ಕಂಪನಿಗಳಿಗೆ ಮೊರೆಹೋಗುತ್ತಿದ್ದರು. ಕರೀಂ ಖಾನರ ಶಿಷ್ಯರಾದ ಕುಂದಗೋಳ ಫಕೀರಪ್ಪ, ನೀಲಕಂಠಬುವಾ, ವೆಂಕಟರಾವ್ ರಾಮದುರ್ಗ, ಗುರುರಾವ್ ದೇಶಪಾಂಡೆ, ಹೊಸಮನಿ ತುಕಾರಾಮಬುವಾ. ಮುದೋಳ ರಾಮಪ್ಪ, ಪಂಚಾಕ್ಷರ ಗವಾಯಿಗಳು, ಅವರ ಶಿಷ್ಯರಾದ ಪುಟ್ಟರಾಜಗವಾಯಿಗಳು, ಮಳವಳ್ಳಿ ಸುಬ್ಬಣ್ಣ ಮಾತ್ರವಲ್ಲ ಭಾರತದ ಖ್ಯಾತ ಸಂಗೀತ ತಪಸ್ವಿಗಳಾದ ಪಂಡಿತ ಮಲ್ಲಿಕಾರ್ಜುನ ಮನ್ಸೂರ ಮೊದಲಾದವರು ಈ ಯುಗದ ರಂಗಭೂಮಿಯ ಸಂಗೀತಕ್ಕೆ ಪ್ರಚಂಡ ಸೇವೆಯನ್ನು ಸಲ್ಲಿಸಿದರು. ಸಂಗೀತಗಾರರ ಒಂದು ಪೀಳಿಗೆಯನ್ನೇ ನಿರ್ಮಾಣ ಮಾಡಿದ್ದು ಸಂಸ್ಮರಣೀಯ ವಿಷಯ. ಎ. ವಿ. ವರದಾಚಾರ್ಯ, ಸಿ. ಬಿ. ಮಲ್ಲಪ್ಪ, ಗೌರೀನರಸಿಂಹಯ್ಯ, ಬಸವರಾಜ ಮನ್ಸೂರ, ವಾಮನರಾವ್ ಮಾಸ್ತರ, ಚಿತ್ರರಗಿ ಮುಪ್ಪಯ್ಯಸ್ವಾಮಿ, ಜೀ. ನಾಗೇಶರಾಯರು. ಎಲ್ಲೂಬಾಯಿ ಗುಳೇದಗುಡ್ಡ, ಬಚ್ಚಾಸಾನಿ, ಗಂಗೂಬಾಯಿ ಗುಳೇದಗುಡ್ಡ, ಸೋನುಬಾಯಿ ದೊಡ್ಡಮನಿ, ಹಾವೇರಿಯ ಮದ್ರಾಜಾನ್, ಅಮೀರಬಾಯಿ ಕರ್ನಾಟಕಿ, ಮಳವಳ್ಳಿ ಸುಂದರಮ್ಮ, ಅಶ್ವತ್ಥಮ್ಮ ಸಂಗೀತದಲ್ಲಿ ಸಾಕಷ್ಟು ಸಾಧನೆಯುಳ್ಳ ಆಗಿನ ಕಾಲದ ವೃತ್ತಿರಂಗಭೂಮಿಯ ನಟ–ನಟಿಯರಾಗಿದ್ದರು. ಯರಾಶಿ ಭರಮಪ್ಪನವರು ಆಗಿನಕಾಲದಲ್ಲಿ ಸಾರಂಗಿ ಬಾರಿಸುವ ದಕ್ಕಾಗಿಯೇ ದಿಲ್ಲಿಯಿಂದ ಇಬ್ಬರು ಪರಿಣತ ಸೋದರರನ್ನು ತಂದಿದ್ದರು. ಗುಬ್ಬಿ ವೀರಣ್ಣನವರು ರವೀಂದ್ರಸಂಗೀತದ ಮಾದರಿಯನ್ನು ಅಳವಡಿಸಿಕೊಂಡು ಶಾಸ್ತ್ರಬದ್ಧ ಸಂಗೀತಕ್ಕೆ ಒಂದು ಹೊಸ ಆಯಾಮವನ್ನು ತಂದುಕೊಟ್ಟರು. ಎಲ್ಲಕ್ಕೂ ಮಿಗಿಲಾಗಿ ವಚನ ಸಾಹಿತ್ಯವನ್ನು ಸಂಗೀತಕ್ಕೆ ಅಳವಡಿಸಿ ರಂಗಭೂಮಿಯ ಮೇಲೆ ತಂದದ್ದು ದೊಡ್ಡ ಕೊಡುಗೆ. ಮೈಸೂರ ಪ್ರದೇಶದಲ್ಲಿ ದಕ್ಷಿಣಾದಿ ಪದ್ಧತಿಯ ಹಿನ್ನೆಲೆಯಲ್ಲಿ, ಉತ್ತರ ಕರ್ನಾಟಕದಲ್ಲಿ ಉತ್ತರಾದಿ ಸಂಗೀತ ಪದ್ಧತಿಯ ಹಿನ್ನೆಲೆಯಲ್ಲಿ ಬೆಳೆದು ಬಂದ ರಂಗಸಂಗೀತ, ತನ್ನದೇ ಆದ ವಿಶಿಷ್ಟಪರಂಪರೆಯಲ್ಲಿ ಮುಂದುವರೆಯಿತು. ಐದನೆಯ ದಶಕದ ಕೊನೆಯ ಸುಮಾರಿಗೆ ಸಂಗೀತಸಾಧನೆಯಲ್ಲಿ, ಅಭ್ಯಾಸದಲ್ಲಿ ನಟರ ಪ್ರಾಮಾಣಿಕತೆ ತಪ್ಪುತ್ತ ಹೋಗಿ, ಪ್ರೇಕ್ಷಕರ ಅಭಿರುಚಿ ಬೇರೆಯಾಗಿ, ಚಿತ್ರಗೀತೆಗಳ ಅನುಕರಣೆಯಿಂದಾಗಿ ರಂಗಭೂಮಿಗೆ ಸಂಗೀತವೇ ಒಂದು ಶಾಪವೆನಿಸಿಬಿಟ್ಟಿತು.

ಕಳೆದ ಶತಮಾನದ ಕೊನೆಯವರೆಗೂ ರಂಗಭೂಮಿಯ ಮೇಲೆ ಸ್ತ್ರೀಯರಿಗೆ ಪ್ರವೇಶವಿರಲಿಲ್ಲ. ಪುರುಷರೇ ಸ್ತ್ರೀಪಾತ್ರಕ್ಕೆ ಪಳಗಿದವರಾಗಿರುತ್ತಿದ್ದರು. ಆದ್ದರಿಂದ

ಈ ಶತಮಾನದಲ್ಲಿ ಮಹಿಳೆಯರೂ ರಂಗಮಂಚವನ್ನೇರಿದ್ದು ಒಂದು ದೊಡ್ಡ ಕ್ರಾಂತಿ ಎನಿಸಿತು. ಸ್ತ್ರೀಯರನ್ನು ರಂಗಭೂಮಿಯ ಮೇಲೆ ತರುವದೆಂದರೆ ಇಲ್ಲ-ಸಲ್ಲದ ಸಮಸ್ಯೆಗಳನ್ನು ಮೈಮೇಲೆ ಹಾಕಿಕೊಂಡಂತೆ ಎಂಬ ಭಾವನೆ, ರಂಗಭೂಮಿಯ ನೈತಿಕತೆ ಕುಸಿಯಬಹುದೆಂಬ ಭೀತಿ ಈ ಶತಮಾನದ ಆರಂಭದ ಕೆಲವು ಕಂಪನಿಗಳಲ್ಲಿ ಕಂಡುಬರುತ್ತಿತ್ತು. ಅರಮನೆಯ ಕಂಪನಿಯಲ್ಲಂತೂ ಸರಿಯೆ ವರದಾಚಾರ್ಯರ ಕಂಪನಿಯಲ್ಲೂ, ಗರುಡರ ಕಂಪನಿಯಲ್ಲೂ ಅವಕಾಶವಿರಲಿಲ್ಲ. ೧೯೩೦ರಲ್ಲಿ ಗರುಡರು ರಂಗಭೂಮಿಯ ಮೇಲೆ ಸ್ತ್ರೀಯರ ಪ್ರವೇಶವನ್ನು ಸಮ್ಮತಿಸಿ ಆದವಾನಿ ಸರಸಸಾನಿಗೆ ಪ್ರವೇಶಕೊಟ್ಟರು. ಮೈಸೂರ ಪ್ರದೇಶದಲ್ಲಿ ಟಿ. ರಾಘವ ಅವರ ಪ್ರಯತ್ನದಿಂದಾಗಿ ಈ ಶತಮಾನದ ಮೂರನೆಯ ದಶಕದಲ್ಲಿ ವಿದ್ಯಾವಂತ ಮಹಿಳೆಯರು ಮೊದಲು ಅಮೆಚೂರ ನಾಟಕಗಳಲ್ಲಿ ಕಾಣಿಸಿಕೊಂಡರು. ಅನಂತರ ವೃತ್ತಿರಂಗಭೂಮಿಯೂ ಅದನ್ನೇ ಆದರ್ಶವನ್ನಾಗಿ ಮುಂದುವರೆಸಿಕೊಂಡು ಬಂದಿತು. ಇದರ ಪರಿಣಾಮವಾಗಿ ಜಿ. ವಿ. ಸುಂದರಮ್ಮ, ಎಂ. ವ್ಹಿ. ರಾಜಮ್ಮ, ಜಿ. ವ್ಹಿ. ಸುವರ್ಣಮ್ಮ, ಮಳವಳ್ಳಿ ಸುಂದರಮ್ಮ, ಬಿ. ಜಯಮ್ಮ, ಲಕ್ಷ್ಮೀಬಾಯಿ ಮೊದಲಾದವರು ತಮ್ಮ ಸಂಗೀತ ಹಾಗೂ ಅಭಿನಯ ಕಲೆಯಿಂದ ವೃತ್ತಿರಂಗಭೂಮಿಯ ಎದ್ದುಕಾಣುವ ಆಕರ್ಷಣೆಗೆ ಕಾರಣರಾದರು. ಈ ಶತಮಾನದ ಆರಂಭ ಕಾಲದಲ್ಲಿಯೇ ಉತ್ತರ ಕರ್ನಾಟಕದ ಕೊಣ್ಣೂರ ಕಂಪನಿಯಲ್ಲಿ ಎಲ್ಲೂಬಾಯಿ ಗುಳೇದಗುಡ್ಡ ಅವರು ಕರ್ನಾಟಕ ವೃತ್ತಿರಂಗಭೂಮಿಯ ಪ್ರಥಮ ಕಲಾವಿದೆಯಾಗಿ ಕಾಣಿಸಿಕೊಂಡಿದ್ದರು. ಅನಂತರ ಗುಳೇದಗುಡ್ಡ ಗಂಗೂಬಾಯಿ, ಅಮೀರಬಾಯಿ ಕರ್ನಾಟಕಿ, ಭಾಗೀರಥಿಬಾಯಿ, ಸೋನುಬಾಯಿ ದೊಡ್ಡಮನಿ, ಮರ್ದಾಜಾನ್, ಗೋಹರ್ಜಾನ್ ಕರ್ನಾಟಕಿ, ಕಾಶಿಬಾಯಿ, ನಾಲವತವಾಡ, ಲಲಿತಕುಮಾರಿ ದೊಡ್ಡಮನಿ, ಬಸರೂರ ಸುಶೀಲಾಬಾಯಿ, ರತ್ನಾಬಾಯಿ, ಲಕ್ಷ್ಮಿಬಾಯಿ ಮೊದಲಾದವರು ವೃತ್ತಿರಂಗಭೂಮಿಗೆ ಗಮನಾರ್ಹ ಸೇವೆ ಸಲ್ಲಿಸಿದರು. ಬಚ್ಚಾಸಾನಿ, ಸೋನುಬಾಯಿ ದೊಡ್ಡಮನಿ, ಗಂಗೂಬಾಯಿ ಗುಳೇದಗುಡ್ಡ, ಮಳವಳ್ಳಿ ಸುಂದರಮ್ಮ ಮೊದಲಾದವರು ಸ್ವತಂತ್ರ ಕಂಪನಿಯನ್ನು ಕಟ್ಟಿ ಈ ಕಾಲದ ಒಟ್ಟು ರಂಗಭೂಮಿ ಘನತೆಯ ಹೆಚ್ಚಿಸಿದರು. ಬಚ್ಚಾಸಾನಿಯಂತೂ ೧೯೨೦ರ ಸುಮಾರಿಗಾಗಲೇ 'ಸ್ತ್ರೀ ನಾಟಕ ಮಂಡಳಿ' ಎಂಬ ಹೆಸರಿನಲ್ಲಿ ಕಂಪನಿಯನ್ನು ಕಟ್ಟಿ ರಂಗಭೂಮಿಯ ಮೊದಲ ದೊರೆಸಾನಿಯಾದಳು. ಈ ಕಂಪನಿಯಲ್ಲಿ ಪುರುಷ ಪಾತ್ರವನ್ನು ಮೊದಲುಗೊಂಡು ಗೇಟಕೀಪರನವರೆಗೂ ಸ್ತ್ರೀಯರೇ ಇದ್ದುದು ಒಂದು ವಿಶೇಷ. ಆದರೆ ರಂಗಭೂಮಿಗೆ ಮಹಿಳೆಯರ ಪ್ರವೇಶ ವೈಭವ ಹಾಗೂ ಆಕರ್ಷಣೆಯನ್ನು ತಂದಂತೆ ಹಲವಾರು ಸಮಸ್ಯೆಗಳನ್ನು ತಂದಿತು. ನಟಿಯನ್ನು ಉಳಿಸಿಕೊಳ್ಳುವದೇ ಕಂಪನಿಗಳಿಗೆ ಒಂದು ದೊಡ್ಡ ಹೋರಾಟವೆನಿಸಿತು: ಒಳ ಜಗಳ ಸ್ಪರ್ಧೆ ಕಾಣಿಸಿಕೊಳ್ಳಲಾರಂಭಿಸಿದವು. ಇಂಥ ಕಿರಿಕಿರಿಯನ್ನು ತಪ್ಪಿಸಿಕೊಳ್ಳಲೆಂದೇ ಎಷ್ಟೋ

ಕಂಪನಿಯ ಒಡೆಯರು ತಮ್ಮ ಕಂಪನಿಯ ಹಿತಾಸಕ್ತಿಯನ್ನು ಗಮನಿಸಿ ಪ್ರತಿಭಾವಂತ ನಟಿಯರನ್ನು ಉಪಪತ್ನಿಯರನ್ನಾಗಿ ಸ್ವೀಕರಿಸುತ್ತ ಹೋದ ಉದಾಹರಣೆಗಳೂ ಉಂಟು.

ಇನ್ನು ಮಹಿಳೆಯರು ರಂಗಭೂಮಿಯನ್ನು ಸೇರಲು ಮುಂದಾಗುತ್ತಿದ್ದರೂ ದಿನೇ ದಿನೇ ಬೆಳೆಯುತ್ತ ಹೊರಟ ಕಂಪನಿಗಳಿಗೆ ಮಹಿಳೆಯರ ಅಭಾವ ತಪ್ಪುತ್ತಿರಲಿಲ್ಲ. ಇದರಿಂದ ಪುರುಷರೇ ಸ್ತ್ರೀಪಾತ್ರವನ್ನು ಧರಿಸುವ ಪದ್ಧತಿ ಮತ್ತೂ ಮುಂದುವರೆಯಿತು. ಎಂಥ ಪ್ರತಿಭಾವಂತ ಲಾವಣ್ಯವತಿಗೂ ಕಡಿಮೆಯಲ್ಲದ ಅಭಿನಯವನ್ನು ಪುರುಷರೇ ಅತ್ಯಂತ ನೈಜವಾಗಿ ಪೂರೈಸಿಕೊಡಬಲ್ಲವರಾಗಿದ್ದರು. ಹುಚ್ಚಪ್ಪ ಸೂಡಿ, ತೊಡಬಳೆ ಸುಬ್ಬಣ್ಣಭಟ್ಟರು, ಹಮ್ಮಿಗಿ ನೀಲಕಂಠಪ್ಪ, ಮುದ್ವೀರಾಚಾರ್ಯ, ಬಸವಣ್ಣೆಪ್ಪ ಹೊಸಮನಿ, ಏಣಗಿ ಬಾಳಪ್ಪ, ಚಿತ್ತರಗಿ ಮುಪ್ಪಯ್ಯ, ಮೈಸೂರ ಭಾಗದಲ್ಲಿ ಗೌರೀನರಸಿಂಹಯ್ಯ, ಬೋಧರಾಯರು, ತುಮಕೂರಿನ ಸೀತಾರಾಮಯ್ಯ, ನಾಗೇಂದ್ರರಾಯರು ಸೊಗಸಾದ ತಮ್ಮ ಅಭಿನಯ ನೈಪುಣ್ಯದಿಂದ ಸ್ತ್ರೀಯರ ಅಭಾವವನ್ನು ತುಂಬಿಕೊಟ್ಟರು. ತುಮಕೂರಿನ ಸೀತಾರಾಮಯ್ಯನವರದಂತೂ ಅಸಾಮಾನ್ಯ ನೈಪುಣ್ಯವೆಂದು ಹೇಳುತ್ತಾರೆ. ಅವರಿಗೆ ಸರಿಸಾಟಿಯಾಗಿ ರಾಣಿಪಾತ್ರವನ್ನು ಧರಿಸಬಲ್ಲ ನಟರೇ ಕರ್ನಾಟಕದಲ್ಲೇ ಇರಲಿಲ್ಲವೆಂದು, ತೆಲುಗಿನ ರಂಗಭೂಮಿಯ ಸ್ಥಾನಂ ಅವರು ಮಾತ್ರ ಅವರ ಅಭಿನಯವನ್ನು ನೆನಪಿಗೆ ತಂದುಕೊಡುತ್ತಿದ್ದರೆಂದೂ ಹೇಳಲಾಗುತ್ತದೆ; ಅಷ್ಟೇಅಲ್ಲ ಜಗದ್ವಿಖ್ಯಾತನಾದ ಮೈ ಲಾನ್ ಫಾಂಗ (Mei lan fong) ಎಂಬ ಚೀನದ ಸ್ತ್ರೀಪಾತ್ರಧಾರಿಗೆ ಹೋಲಿಸಿ ವರ್ಣಿಸುವವರೂ ಉಂಟು[೧೦] ಆದರೆ ಸ್ತ್ರೀ ಪಾತ್ರವನ್ನು ಧರಿಸಬಲ್ಲ ಪ್ರಖ್ಯಾತ ನಟರಿದ್ದರೂ ಕಾರಣಾಂತರದಿಂದ ಹತ್ತಾರು ವರುಷಗಳಲ್ಲಿಯೇ ಪುರುಷ ಪಾತ್ರಕ್ಕೆ ತಿರುಗಿ ಬಿಡುತ್ತಿದ್ದರು.

ಆಗಿನ ಕಾಲದ ರಂಗಭೂಮಿಯಲ್ಲಿ ಒಬ್ಬೊಬ್ಬ ನಟ-ನಟಿಯರು ಒಂದೊಂದು ಪಾತ್ರಕ್ಕಾಗಿ ಹುಟ್ಟಿ ಬಂದವರಷ್ಟು ಕೌಶಲವನ್ನು ಪ್ರಕಟಿಸಬಲ್ಲವರಾಗಿದ್ದರು. ಅವರೆಲ್ಲರು ಒಂದೇ ಕಂಪನಿಯಲ್ಲಿ ಉಳಿದುಕೊಳ್ಳುವದು ಲಾಭದಾಯಕವೆನಿಸುತ್ತಿರಲಿಲ್ಲ. ಉಳಿದ ಕಂಪನಿಗಳ ದೃಷ್ಟಿಯಿಂದ ಉಚಿತವೂ ಆಗಿರಲಿಲ್ಲ. ಆದ್ದರಿಂದ ಹನುಮಂತನ ಪಾತ್ರಕ್ಕೆ ಹೆಸರಾದ ಹರಿಹರದ ಬಿ. ನಂಜುಂಡಪ್ಪ ಭೀಮನ ಪಾತ್ರಕ್ಕೆ ಹೆಸರಾದ ಕೆರೂರಿನ ಅದೃಶಪ್ಪಾ ಮಾಸ್ತಿ, ಚಿತ್ರಾಂಗದೆಯ ಪಾತ್ರಕ್ಕೆ ಖ್ಯಾತಳಾದ ಸೋನುಬಾಯಿ ದೊಡ್ಡಮನಿ—ಇವರೇ ಮೊದಲಾದವರು ಅತಿಥಿ ಕಲಾವಿದರಾಗಿ ಕಂಪನಿಗಳ ಆಪದ್ಬಂಧುಗಳಾಗಿರುತ್ತಿದ್ದರು. ಒಟ್ಟಿನಲ್ಲಿ ೧೯೩೦ರ ನಂತರ ಇದೊಂದು ಗುರುತಿಸ

---

೧೦. "ಕನ್ನಡ ರಂಗಭೂಮಿ ನೂರು ಶತಮಾನ"-ಬಿ. ಪುಟ್ಟಸ್ವಾಮಿ,
"ಅಭಿನಯ ವಿಶಾರದೆ" ಹ. ಮೊ. ಸೀತಾರಾಮಯ್ಯ, ಪು. ೧೧

ಬಹುದಾದ ವೈಶಿಷ್ಟ್ಯಗಳಲ್ಲೊಂದಾಗಿದೆ. ಸುಮಾರು ೧೯೫೦ ಈಚೆಗೆ ಸಿನೇಮಾ ನಟ-ನಟಿಯರು ಅತಿಥಿ ಕಲಾವಿದರಾಗಿ ಕಾಣಿಸಿಕೊಳ್ಳುವದು ವಿಶೇಷವಾಯಿತು.

ಈ ಕಾಲದ ಅತಿ ಮುಖ್ಯವಾದ ಇನ್ನೊಂದು ವೈಶಿಷ್ಟ್ಯದೆಂದರೆ—ಹಲವಾರು ಸಂಸ್ಕರಣ, ಪರಿಷ್ಕರಣ, ಪ್ರಯೋಗಗಳಿಂದ ಕಾವೇರಿದ ಕರ್ನಾಟಕ ರಂಗಭೂಮಿ ಅದಮ್ಯ ಉತ್ಸಾಹದಿಂದ ಬೆಳೆದು ಮರಾಠಿ ರಂಗಭೂಮಿಗೆ ಸರಿದೊರೆಯಾಗಿ ನಿಂತು ಮೆರೆಯುವಂತಾಯಿತು. ಇದರಿಂದ ಉತ್ತರ ಕರ್ನಾಟಕದಲ್ಲಿ ಉರಿದಾಡುತ್ತಿದ್ದ ಮರಾಠಿ ಕಂಪನಿಗಳ ಉರವಣಿಗೆ ಕಡಿಮೆಯಾಗುತ್ತ ಬಂದಿತು; ಮರಾಠಿ ಕಂಪನಿಗಳಿಗೆ ಮರಾಠಿ ಮಾದರಿಯಲ್ಲೇ ಉತ್ತರಿಸಬೇಕಾದ ಕಾರಣವೋ, ಉತ್ತಮಿಕೆಯನ್ನು ರೂಢಿಸಿಕೊಳ್ಳಬೇಕೆಂಬ ಉದಾರ ಬುದ್ಧಿಯೊ, ಇಲ್ಲವೆ ವೃತ್ತಿರಂಗಭೂಮಿಯ ಮುತ್ಸದ್ದಿತನವೋ—ಕಾರಣ ಏನೇ ಇರಲಿ ಮರಾಠಿ ನಾಟಕ, ಹಾಡು-ಚಾಲುಗಳು ಕನ್ನಡ ನಾಟಕಗಳಿಗೆ ಹೊಸ ಆಯಾಮವನ್ನು ವಿನ್ಯಾಸವನ್ನು ತಂದುಕೊಟ್ಟವು. ಆರಂಭದಲ್ಲಿ ಸ್ವೀಕರಣಕ್ಕಿಂತ ಅನುಕರಣವೇ ಮಿಗಿಲಾಗಿ ಕಂಡರೂ ನಮ್ಮ ಜನರಲ್ಲಿ ಮರಾಠಿಯ ವ್ಯಾಮೋಹವನ್ನು ತಪ್ಪಿಸಲು ಈ ಮಾರ್ಗ ಬಹಳಷ್ಟು ಸಹಕಾರಿಯಾಯಿತು ಎಂಬುದನ್ನು ಅಲ್ಲಗಳೆಯಲಾಗದು. ಹೀಗಾಗಿ ಗೋವಿಂದ ಬಲ್ಲಾಳ ದೇವಲ್‌ರ ಸಂಶಯ ಕಲ್ಲೋಳ (ಸಂದೇಹ ಸಾಮ್ರಾಜ್ಯ), ಪಂತಾಂಚಿಸೂನ (ರಾಯರ ಸೊಸೆ), ಮೈದನಗಿರಿಯ ನಾಗಪ್ಪ ಬೋರಾಮಣಿ ಅನುವಾದಿಸಿದ 'ಏಕಚ ಪ್ಯಾಲಾ' ಮೊದಲಾದ ಸಾಮಾಜಿಕ ನಾಟಕಗಳ ನೂರಾರು ಪ್ರಯೋಗಗಳು ಕನ್ನಡ ಕಂಪನಿಗಳಿಗೆ ಕನಕಾಭಿಷೇಕ ಮಾಡಿದವು. ಅಲ್ಲದೆ ಆಗ ಪ್ರಯೋಗದಲ್ಲಿದ್ದ ಸೌಭದ್ರ ಉಷಾ ಸ್ವಯಂವರ, ಮನೋವಿಜಯ, ದ್ರೌಪದಿ ಸ್ವಯಂವರ, ವೀರ ಅಭಿಮನ್ಯು, ಮಹಾನಂದಾ, ತುಕಾರಾಮ್, ಸಂತಸಖೂಬಾಯಿ, ಪುಂಡಲೀಕ, ಬಾಜಿರಾವ್ ಪೇಶವೆ ಮೊದಲಾದ ಪೌರಾಣಿಕ ಹಾಗೂ ಐತಿಹಾಸಿಕ ನಾಟಕಗಳೆಲ್ಲ ಮರಾಠಿಯ ಅನುವಾದಿತ ಕೃತಿಗಳೇ ಆಗಿದ್ದವು. ಏಣಗಿ ಬಾಳಪ್ಪನವರು ಒಂದೇ ಸೆಟ್ಟಿನಲ್ಲಿ ಪ್ರಯೋಗಿಸುತ್ತಿದ್ದ 'ಕುಂಕುಮ' ಎಂಬ ಸ್ವತಂತ್ರ ಸಾಮಾಜಿಕ ನಾಟಕಕ್ಕೆ ಭೋಟಾ ಗಂಧರ್ವರ 'ಕಲಾವಿಕಾಸ ನಾಟ್ಯ ಸಂಘ'ದಲ್ಲಿ ಪ್ರಯೋಗಿಸುತ್ತಿದ್ದ ನಾಗೇಶ ಜೋಶಿಯವರ ಫೂಲ ಪಾಖರೂ, ಮೈಲಾಚ ದಗಡ, ದೇವಮಾಣೂಸ ನಾಟಕಗಳದೇ ಪ್ರೇರಣೆ. ಗರುಡ ಸದಾಶಿವರಾಯರ ಸಮಕಾಲೀನ ರಾಜಕೀಯ ಛಾಯೆಯನ್ನೊಳಗೊಂಡ ಪೌರಾಣಿಕ ನಾಟಕಗಳಿಗೆ ಮತ್ತು ಅವರಲ್ಲಿ ಬೆಳೆದುಬಂದ ರಾಷ್ಟ್ರೀಯ ಪ್ರಜ್ಞೆಗೆ 'ಪಾಂಡುರಂಗ ಕೃಷ್ಣ ಆಣಿ ಮಂಡಳಿ'ಯಲ್ಲಿ ಅವರೊಡನೆ ಬೆಳೆದುಬಂದ ಒಡನಾಟವೇ ಕಾರಣ. ಒಂದುಕಡೆ ಗರುಡರು "ಅವರೇ (ಪಾಂಡುರಂಗ ಕೃಷ್ಣ) ನನ್ನ ಅಭಿನಯಕತೆಯ ಮೊದಲಗುರು" ಎಂದು ಹೇಳಿಕೊಂಡದ್ದೂ ಉಂಟು. ಆದ್ದರಿಂದ ಆಧುನಿಕ ವೃತ್ತಿರಂಗಭೂಮಿಯ ಪರಂಪರೆಯಲ್ಲಿ ಮರಾಠಿ ವೃತ್ತಿರಂಗಭೂಮಿಯ ಪಾತ್ರ ಅಲ್ಪವೂ ಅಲ್ಲ, ಉಪೇಕ್ಷಣೀಯವೂ ಅಲ್ಲ ಎನ್ನುವುದರಲ್ಲಿ ಮುಚ್ಚುಮರೆ ಇಲ್ಲ.

ಕಳೆದ ಶತಮಾನದಲ್ಲಿ ಕೇವಲ ಪೌರಾಣಿಕ ನಾಟಕಗಳೇ ಪ್ರದರ್ಶನಗೊಳುತ್ತಿದ್ದರೆ ಈ ಕಾಲದಲ್ಲಿ ಪೌರಾಣಿಕ ನಾಟಕಗಳೊಡನೆ ಸಾಮಾಜಿಕ ಹಾಗೂ ಐತಿಹಾಸಿಕ ನಾಟಕಗಳೂ ಬೆಳೆದು ಬಂದವು. ಗರುಡರ ಸತ್ಯಸಂಕಲ್ಪ, ವಿಷಮ ವಿವಾಹ, ನಮ್ಮ ಭಾಗ್ಯೋದಯ, ಕ್ರಾಂತಿ, ಉಗ್ರಕಲ್ಯಾಣ, ನಲವಡಿ ಶ್ರೀಕಂಠಶಾಸ್ತ್ರಿಗಳ '೧೯೩೧', ಎಚ್. ಎಲ್. ಎನ್. ಸಿಂಹ ಅವರ 'ಸಂಸಾರ ನೌಕ' ಚಿಕ್ಕೋಡಿ ಶಿವಲಿಂಗ ಸ್ವಾಮಿಗಳ "ಗುರುವಿರಕ್ತ", ಇನಾಮದಾರರ 'ಪಠಾಣಿ ಪಾಶ', ಕಂದಗಲ್‌ರ ಬಡತನ ಭೂತ, ಮಾತಂಗ ಕನ್ಯೆ, ಬೆಳ್ಳಿಚಿಕ್ಕಿ, ಹಾಗೂ ಹಲಗೇರಿ ಜಟ್ಟೆಪ್ಪನವರ ಕಂಪನಿಯಲ್ಲಿ ಪ್ರದರ್ಶನ ಗೊಳ್ಳುತ್ತಿದ್ದ 'ಬಿ ಎ.', 'ಸ್ತ್ರೀ', ಚಲ್ತಿದುನಿಯಾ—ಮೊದಲಾದ ಸಾಮಾಜಿಕ ನಾಟಕಗಳು ತಮ್ಮ ಸಾಮಾಜಿಕ ಕಳಕಳಿ, ಹಾಗೂ ಪಜ್ಞೆಯಿಂದ ರಂಗಭೂಮಿಯ ಮೇಲೆ ಮಹತ್ವದ ಕ್ರಾಂತಿಯನ್ನು ಮಾಡಿದವು; ಹದಗೆಟ್ಟ ಸಾಮಾಜಿಕ ವ್ಯವಸ್ಥೆಯ ಎಲ್ಲ ಪದರುಗಳನ್ನು ದೌಜನ್ಯದ ಎಲ್ಲ ಮುಖಗಳನ್ನು, ಪಾಶ್ಚಾತ್ಯ ಸಂಸ್ಕೃತಿಯ ಆಕ್ರಮಣದ ಅರಿಷ್ಟ ಪರಿಣಾಮಗಳನ್ನು ಚಿತ್ರಿಸಲು ಮುಂದಾದವು. ಗರುಡರ ನಾಟಕಗಳು ಗಾಂಧೀವಾದಿ ಧೋರಣೆಗಳಿಂದ ವಿಶೇಷ ಪ್ರಭಾವಿತವಾದವುಗಳು. ಇಂಥ ನಾಟಕಗಳ ಮೂಲಕ ತಮ್ಮ ಸಮಕಾಲೀನ ಸಾಮಾಜಿಕ ಪರಿಸರಕ್ಕೆ ಪ್ರೇಕ್ಷಕರನ್ನು ಸ್ಪಂದಿಸುವಂತೆ ಮಾಡಿದವು. ಕೆಲವು ನಾಟಕಗಳಲ್ಲಿ ಸಾಹಿತ್ಯಿಕ ಮೌಲ್ಯಗಳು ಕಾಣಿಸಿಕೊಳ್ಳದಿದ್ದರೂ ಪ್ರಯೋಗದ ದೃಷ್ಟಿಯಿಂದ ಇವೆಲ್ಲ ಆ ಕಾಲದ ಅತ್ಯಂತ ಯಶಸ್ವಿಯಾದ ಪ್ರೇಕ್ಷಕರಿಗೆ ಹೊಸರುಚಿಯನ್ನು ತೋರಿಸಿಕೊಟ್ಟ ನಾಟಕಗಳು. ವಿಧವಾ ಸಮಸ್ಯೆ, ವರದಕ್ಷಿಣೆಯ ಸಮಸ್ಯೆ, ದಾಂಪತ್ಯ ಸಮಸ್ಯೆ, ಹರಿಜನ ಸಮಸ್ಯೆಯಂಥ ಸಾಮಾಜಿಕ ಸಮಸ್ಯೆಗಳನ್ನು ಎತ್ತಿಕೊಂಡ ಗರುಡರು ಅಂದಿನ ಯಾವ ಅಭಿಜಾತ ನಾಟಕಕಾರರಿಗಿಂತಲೂ ಕಡಿಮೆ ಯಾಗಿರಲಿಲ್ಲ.

ಪೌರಾಣಿಕ ನಾಟಕಗಳಲ್ಲಿ ಬಹಳಷ್ಟು ನಾಟಕಗಳು, ಸಾಮಾನ್ಯವಾಗಿ ದೃಶ್ಯ ಮಾಧ್ಯಮದಿಂದ ಒಂದು ವಸ್ತುವನ್ನು ಭಾವಪೂರ್ಣವಾಗಿ ಅರ್ಥೈಸಿ ಕೊಡುವ ಪ್ರಯತ್ನಕ್ಕೆ ತೊಡಗಿದವುಗಳಾಗಿದ್ದವು. ಇನ್ನು ಒಂದು ಕಂಪನಿಯಲ್ಲಿ ಯಾವುದೇ ಒಂದು ಪೌರಾಣಿಕ ಪಾತ್ರಕ್ಕೆ ಪ್ರಖ್ಯಾತನಾದ ನಟನಿದ್ದರೆ, ಆ ನಟನಿಗಾಗಿಯೇ ಪೌರಾಣಿಕ ನಾಟಕಗಳು ರಚನೆಯಾಗಲಾರಂಭಿಸಿದವು. ಕೆರೂರಿನ ಅದೃಶಪ್ಪಾ ಮಾನ್ವಿಯವರನ್ನೇ ದೃಷ್ಟಿಯಲ್ಲಿಟ್ಟು ಕೊಂಡು ಕಂದಗಲ್‌ರು ಬಾಣಸಿಗ ಭೀಮ, ಅಕ್ಷಯಾಂಬರದಂಥ ನಾಟಕಗಳನ್ನು ರಚಿಸಿರುವದನ್ನು ಇಲ್ಲಿ ಸ್ಮರಿಸಬಹುದು. ಆದರೆ ಕೆಲವು ಪೌರಾಣಿಕ ಹಾಗೂ ಐತಿಹಾಸಿಕ ನಾಟಕಗಳು ಸಮಕಾಲೀನ ರಾಜಕೀಯ ದೌರ್ಜನ್ಯದ ಬ್ರಿಟಿಶ ವಸಾಹತು ಶಾಹಿ ಪ್ರವೃತ್ತಿಯ ಅಭಿವ್ಯಕ್ತಿಗೆ ಧ್ವನಿಪೂರ್ಣ ದೃಶ್ಯ ಮಾಧ್ಯಮಗಳಾದವು. ಗರುಡರ ಕೀಚಕವಧ, ಪಾದುಕಾ, ಮಾತೃಬಂಧ ವಿಮೋಚನೆಯಂಥ ರಾಜಕೀಯ ಧ್ವನಿಯನ್ನುಳ್ಳ ನಾಟಕಗಳನ್ನು ನೆನೆಯಬೇಕು. ಅಲ್ಲದೆ ಕಿತ್ತೂರ ಚನ್ನಮ್ಮ

ರಾಣಿ ರುದ್ರಮ್ಮ, ಚಲೇಜಾವ್ ಮೊದಲಾದ ಸ್ವಾತಂತ್ರ ಹೋರಾಟದ ಹಿನ್ನೆಲೆಯುಳ್ಳ ವಸ್ತುವನ್ನೊಳಗೊಂಡ ಐತಿಹಾಸಿಕ ನಾಟಕಗಳು ಜನರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಕೆರಳಿಸಿ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲುಗೊಳ್ಳುವಂತೆ ಪ್ರಚೋದಿಸಿದವು. ಅಬ್ಬಿಗೇರಿ ಕಂಪನಿಯು (೧೯೨೬) ಪ್ರದರ್ಶಿಸುತ್ತಿದ್ದ ಚಿಕ್ಕೋಡಿ ಶಿವಲಿಂಗ ಸ್ವಾಮಿಗಳ "ಕಿತ್ತೂರ ಚೆನ್ನಮ್ಮಾ" ನಾಟಕದಲ್ಲಿ ಚೆನ್ನಮ್ಮನ ಪಾತ್ರದ ರತ್ನಮ್ಮ "ನನ್ನಂಥ ಬಳೆ ತೊಟ್ಟ ಅಬಲೆ ಕೈಯಲ್ಲಿ ಶಸ್ತ್ರಧರಿಸಿ ಸನ್ನದ್ಧಳಾದಾಗ ಪುರುಷರೆಂದು ಮೀಸೆ ಹೊತ್ತವರು ಸುಮ್ಮನೇ ಕೂಡ್ರುವದು ನಾಚಿಕೆ ಗೇಡಿತನ" ಎಂದು ವೀರಾವೇಶದಿಂದ ಆರ್ಭಟಿಸಿದಾಗ ನೆರೆದಿದ್ದ ಪ್ರೇಕ್ಷಕರಲ್ಲಿ "ಗಾಂಧೀಜೀ ಕಿ ಜೈ" ಎಂಬ ಜೈಕಾರ ಕೇಳಿ ಬರುತ್ತಿತ್ತು.[೧೧] ಅದೇ ಶಿವಲಿಂಗ ಸ್ವಾಮಿಗಳು ಬರೆದ "ಜಗಜ್ಜ್ಯೋತಿ ಬಸವೇಶ್ವರ" ರಾಷ್ಟ್ರೀಯ ಭಾವನೆಯನ್ನು ಕೆರಳಿಸುವ, ಗಾಂಧಿಯವರ ಸ್ವದೇಶಿ ತತ್ವವನ್ನು ಬಿತ್ತಿ ಬೆಳೆಸುವ ಧೋರಣೆಯುಳ್ಳದ್ದಾಗಿತ್ತು. ಉದ್ದೇಶ ಪೂರ್ವಕವಾಗಿಯೇ ಅದಕ್ಕೆ "ಅಸ್ಪೃಶ್ಯತಾ ನಿವಾರಣೆ" ಎಂದೇ ತಲೆಬರಹ ಕೊಟ್ಟಿದ್ದರು. ಗಾಂಧೀಜಿಯವರ ಆಂದೋಲನವನ್ನು ಸಾಂಕೇತಿಕವಾಗಿ ಗರ್ಭೀಕರಿಸಿಕೊಂಡ ಈ ನಾಟಕದಲ್ಲಿ ಬಸವಣ್ಣ ಕಲ್ಯಾಣಬಿಟ್ಟು ಹೋಗುವಾಗ "ವೀರಶೈವರು ತಯ್ಯಾರಿಸಿದ ವಸ್ತುಗಳನ್ನೇ ವೀರ ಶೈವರು ಉಪಯೋಗಿಸಬೇಕು" ಎಂದು ಚೆನ್ನಬಸವಣ್ಣನವರ ಸಂದೇಶವನ್ನು ಸಾರುವದು ಎಷ್ಟು ಸಮಕಾಲೀನ ಮತ್ತು ಎಷ್ಟು ಅರ್ಥಪೂರ್ಣ ಎಂಬುದನ್ನು ಗಮನಿಸಬೇಕು. ಇಲ್ಲಿ ಜಾತವೇದ ಮುನಿ ಗಾಂಧಿಯನ್ನು ಪ್ರತಿನಿಧಿಸಿದರೆ ಬಸವಣ್ಣನ ಪಾತ್ರ ನೆಹರು ಅವರನ್ನು ಪ್ರತಿನಿಧಿಸುತ್ತಿತ್ತು. ರಾಷ್ಟ್ರೀಯ ಪ್ರಜ್ಞೆಯನ್ನು ಕೆರಳಿಸುವ ಇಂಥ ನಾಟಕಗಳನ್ನೇ ಪ್ರಯೋಗಿಸುವ ಹಟದಿಂದಾಗಿಯೇ ಭಾರಿ ಪ್ರಮಾಣದ ಬಂಡವಾಳವನ್ನು ಹಾಕಿ ಕಟ್ಟಿದ ಅಬ್ಬಿಗೇರಿ ಕಂಪನಿ ಸರಕಾರದ ದಮನಕಾರೀ ಪ್ರವೃತ್ತಿಗೆ ಒಳಗಾಗಿ ಲೈಸನ್ಸ ಕಳೆದುಕೊಂಡು ಹುತಾತ್ಮರಲ್ಲಿ ಹುತಾತ್ಮವಾಯಿತು.

ಕರ್ನಾಟಕ ವೃತ್ತಿರಂಗಭೂಮಿ ತನ್ನ ಜೀವಮಾನದಲ್ಲಿ ಏನೆಂಥ ಗಂಡಾಂತರಗಳನ್ನು, ಎಂಥೆಂಥ ಅನಾಹುತಗಳನ್ನು ದಕ್ಕಿಸಿಕೊಂಡು ಬದುಕಿ ಬಂದಿದ್ದರೂ ಬುದ್ಧಿಜೀವಿಗಳ ಹವ್ಯಾಸಿರಂಗಭೂಮಿಯ ಗಂಡಾಂತರಗಳನ್ನು ಎದುರಿಸುವಲ್ಲಿ ಮಾತ್ರ ಹತಾಶಗೊಂಡಿತು. ಹವ್ಯಾಸಿರಂಗಭೂಮಿ ಮರಾಠಿ ರಂಗಭೂಮಿಯಂತೆ ನೇರವಾಗಿ ಸ್ಪರ್ಧೆಗೆ ನಿಲ್ಲದೆ ಅಪಪ್ರಚಾರಕ್ಕೆ ನಿಂತು ಅವರ ತೇಜೋವಧೆಯನ್ನು ಮಾಡಿದ್ದು ವೃತ್ತಿರಂಗಭೂಮಿಯ ಚರಿತ್ರೆಯಲ್ಲಿ ಒಂದು ದೊಡ್ಡದುರಂತವಾದರೆ ಹವ್ಯಾಸಿ ರಂಗಭೂಮಿಯ ಚರಿತ್ರೆಯಲ್ಲಿ ಒಂದು ದೊಡ್ಡ ಕಲಂಕ. ಬುದ್ಧಿಜೀವಿಗಳ ಹವ್ಯಾಸಿರಂಗ

೧೧. "ಏಣಗಿ ಬಾಳಪ್ಪನವರ ಆತ್ಮಕಥೆ" ನಿರೂಪಣೆ : ಮ. ನಿಂ. ಬೆಳಗಲಿ, 'ಬಣ್ಣದ ಬದುಕು' –ಸುಧಾ, ಮಾರ್ಚ ೨೧, ೧೯೭೧; ಪು. ೭೯.

ಭೂಮಿಯಿಂದ ವೃತ್ತಿರಂಗಭೂಮಿಗೆ ಬಿದ್ದ ಪೆಟ್ಟು ಶಿಲ್ಪಗಳ ಉಳಿಯ ಪೆಟ್ಟಾಗಿರಲಿಲ್ಲ, ಅಲ್ಪರ ಸುತ್ತಿಗೆಯ ಪೆಟ್ಟಾಗಿತ್ತು; ಇದರಿಂದ ವೃತ್ತಿರಂಗಭೂಮಿ ದಿನಗಳೆದಂತೆ ವಿರೂಪಗೊಳ್ಳುತ್ತ ಹೋಯಿತು. ಇಂಗ್ಲೀಷ ನಾಟಕಗಳಿಂದ ಸ್ಫೂರ್ತಿಯನ್ನು ಪಡೆದ ಕೆಲವು ಸುಶಿಕ್ಷಿತ ಸೃಜನಶೀಲರಿಗೆ ಒಂದು ಸ್ವತಂತ್ರವಾದ ರಂಗಪರಂಪರೆಯನ್ನು ನಿರ್ಮಿಸುವದೂ ಆಗದೆ, ವೃತ್ತಿರಂಗದ ಜೊತೆಗೆ ಒಪ್ಪಂದವನ್ನು ಸಾಧಿಸುವದೂ ಆಗದೆ ವಿಕ್ಷಿಪ್ತಾವಸ್ಥೆಯನ್ನು ಅನುಭವಿಸಲಾರಂಭಿಸಿತು, ಅಂಥ ಸಂದರ್ಭದಲ್ಲಿ ವೃತ್ತಿರಂಗ ಭೂಮಿಯ ದೋಷ-ದೌರ್ಬಲ್ಯಗಳ ವಿಡಂಬನೆಯೊಂದೇ ಅವರ ಉಪಯುಕ್ತ ಅಸ್ತ್ರವಾಯಿತು. ವೃತ್ತಿರಂಗಭೂಮಿಗೆ ನಾಟಕಕಾರರಾದ ಚಿಕ್ಕೋಡಿ ಶಿವಲಿಂಗ ಸ್ವಾಮಿ, ಗರುಡ ಸದಾಶಿವರಾಯ, ವಿದ್ವಾನ್ ವೆಂಕಟಾಚಾರ್ಯ, ವೆಂಕಟಾಚಾರ್ಯ ಅಗಳಗಟ್ಟಿ, ವಾಮನರಾವ್ ಮಾಸ್ತರ, ಕಂದಗಲ್ ಹನುಮಂತರಾಯ, ಎಚ್. ಎಲ್. ಎನ್. ಸಿಂಹ, ಬಿ. ಪುಟ್ಟಸ್ವಾಮಿ, ಜಿ. ಜಿ. ಹೆಗಡೆ, ಆರ್. ಡಿ. ಕಾಮತ, ಅಚ್ಯುತರಾವ್ ಹುಯಿಲಗೋಳ ಮೊದಲಾದವರಿಗೆ — ಸಾಹಿತ್ಯಿಕ ದೌರ್ಬಲ್ಯಗಳೇನೇ ಇರಲಿ — ರಂಗ ಭೂಮಿಯ ಪ್ರತ್ಯಕ್ಷ ಅನುಭವವಿದ್ದು, ತಮ್ಮ ನಾಟಕಗಳನ್ನು ಯಶಸ್ವಿಯಾಗಿ ಪ್ರಯೋಗಿಸುವ ನೈಪುಣ್ಯವಿತ್ತು. ಅದಕ್ಕೆ ಅನಿವಾರ್ಯವಾದ ಸ್ಥಿರವಾದ ರಂಗ ಭೂಮಿಯೂ ಇತ್ತು. ನಟರಿಗೂ ಕೂಡ ಪ್ರೇಕ್ಷಕರ ಬೇಕು-ಬೇಡುಗರ ಕಲ್ಪನೆಯಿತ್ತು, ಜನರ ನಿಕಟಸಂಪರ್ಕವೂ ಇತ್ತು. ಆದರೆ ಇಂಥ ಮೂಲಭೂತ ಅರ್ಹತೆ ಹಾಗೂ ಸೌಲಭ್ಯಗಳಿರವ ಆಧುನಿಕ ಹವ್ಯಾಸಿಗಳು ವರುಷಕ್ಕೆ ಒಂದೆರಡು ಸಲ — ಯಾವದೋ ಊರಲ್ಲಿ ನಾಟಕಗಳನ್ನು ಪ್ರದರ್ಶಿಸಿ ಒಂದು ರಂಗಭೂಮಿಯ ಪರಂಪರೆಯ ನಿರ್ಮಾಪಕರಾಗಲು ಹೊರಟರು. ಅದಕ್ಕಾಗಿ ವೃತ್ತಿರಂಗಭೂಮಿಗೆ ಸಂಬಂಧಿಸಿದಂತೆ ಕಾಲೇಜು ವಿದ್ಯಾರ್ಥಿಗಳನ್ನು ಮೊದಲುಗೊಂಡು ಸುಶಿಕ್ಷಿತರ, ನೌಕರ ಶಾಹಿಗಳ ಮನಸ್ಸನ್ನು ಕೆಡೆಸಿದರು. ಇಂಥ ಪೀಳಿಗೆ ಪಾಶ್ಚಾತ್ಯ ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರಭಾವಕ್ಕೊಳಗಾಗಿ ಭಾರತೀಯ ಪರಂಪರೆಯ ಮೌಲ್ಯಗಳನ್ನೂ ಉಪೇಕ್ಷಿಸ ಹತ್ತಿದರು. ಇಂಥ ವಿದ್ಯಾವಂತರ ಮತ್ತು ನೌಕರ ಶಾಹಿಗಳ ಸಂಖ್ಯೆ ಹೆಚ್ಚಾದಷ್ಟು[೧೨] ವೃತ್ತಿರಂಗ ಭೂಮಿಯ ಮುಖ ಬಣ್ಣಗೆಡುತ್ತ ಹೋಯಿತು. ಕೇವಲ ಸಾಮಾನ್ಯ ಅಭಿರುಚಿಯ ಸಾಮಾನ್ಯ ಜನರಿಗಾಗಿ ನಾಟಕಗಳನ್ನು ಆಡುವದು, ಅವರ ಅಭಿರುಚಿಗೆ ಹೊಂದಿಕೊಳ್ಳುವದು ಅನಿವಾರ್ಯವಾಯಿತು. ಇದರಿಂದ ರಂಜಿಸಲು ಏನೆಲ್ಲ ಸಾಮಗ್ರಿ ಬೇಕಾಗಿತ್ತೊ ಅದೆಲ್ಲವನ್ನೂ ಯಾವ ಮುಲಾಜೂ ಇಲ್ಲದೆ ಧೈರ್ಯವಾಗಿ ಬಳಸಿಕೊಂಡರು. ನೆಪಕ್ಕೊಂದು ನಾಟಕವನ್ನು ಇಟ್ಟುಕೊಂಡು ಹಾಸ್ಯವನ್ನೊ, ರಂಜನೆಯನ್ನೊ ಮುಂದು ಮಾಡಿದರು. ಆಂಗಿಕ ಹಾಗೂ ವಾಚಿಕಾಭಿನಯದಲ್ಲಿ ಲೈಂಗಿಕ

---

೧೨. ನೋಡಿರಿ: "ಪ್ರೇಕ್ಷಕರು ಮತ್ತು ಕಲಾಭಿರುಚಿ"-ಡಾ. ಶಂಕರ ಮೊಕಾಶಿ ಪುಣೇಕರ(೧೯೭೪) "ಕನ್ನಡ ರಂಗಭೂಮಿ ಅಂದು-ಇಂದು" ಕ. ವಿ. ವಿ. ಧಾರವಾಡ; ಪು. ೭೮-೮೨

ವಿಕಾರವನ್ನು ತುಂಬಿದರು; ಕ್ಯಾಬರೆಗಳೂ ಕಾಣಿಸಿಕೊಂಡವು. ನಾಯಕ–ನಾಯಕಿ ಯರು ಹಳೆಯ ಪರಂಪರೆಯಲ್ಲಿ, ಆದರೆ ಪಾತ್ರ–ಸನ್ನಿವೇಶಗಳ ಔಚಿತ್ಯವನ್ನು ಮೀರಿ ಕಿರುಚಿ ಮಾತು ಹೇಳುವದೂ ಮುಂದಾಯಿತು. ಇಂಥ ಅಶುಭ ಲಕ್ಷಣಗಳು ಈ ಶತ ಮಾನದ ಆರನೆಯ ದಶಕದಲ್ಲಿ ಅಷ್ಟಿಷ್ಟು ಕಾಣಿಸಿಕೊಳ್ಳುತ್ತಿದ್ದರೂ ಹಳೆಯ ಪರಂ ಪರೆಯ ಕಂಪನಿಗಳು ವೃತ್ತಿರಂಗಭೂಮಿಯ ಮರ್ಯಾದೆಯ ರಕ್ಷಾಕವಚಗಳಾಗಿದ್ದವು. ಮುಂದೆ ಹಳೆಯ ಕಂಪನಿಗಳು ಜೀರ್ಣಗೊಳ್ಳುತ್ತ ಹೋದ ಮೇಲಂತೂ ಹೊಸ ಕಂಪನಿಗಳು ಅನಿಯಂತ್ರಿತವಾದವು. ವೃತ್ತಿರಂಗಭೂಮಿಯ ಹಳೆಯ ಪರಂಪರೆಯ ಕಲಾಮೌಲ್ಯಗಳೆಲ್ಲ ಮಣ್ಣುಪಾಲಾದವು. ಬರುಬರುತ್ತ ಪೌರಾಣಿಕ ಹಾಗೂ ಐತಿ ಹಾಸಿಕ ನಾಟಕಗಳು ಹಿಂದೆ ಬಿದ್ದು ಸಾಮಾಜಿಕ ನಾಟಕಗಳೇ ಪ್ರದರ್ಶನಕ್ಕೆ ರಂಜನೆಗೆ ಸಿದ್ಧವಾದವು; ನಾಟಕಗಳು ಮರಾಠಿಯ ತಮಾಶಾಗಳಾದವು. ಮರಾಠಿಯಲ್ಲಿ 'ತಮಾಶಾ'ಗಳೇ ಬೇರೆ ನಾಟಕಗಳೇ ಬೇರೆ ಎಂಬ ಕಲ್ಪನೆಯಿರುವಂತೆ ಕನ್ನಡ ವೃತ್ತಿ ರಂಗ ಭೂಮಿಯಲ್ಲಿ ಉಳಿಯಲಿಲ್ಲ. ಒಟ್ಟಿನಲ್ಲಿ ಹತಾಶಾಯುಗವೆಂದು ಗುರುತಿಸಬಹು ದಾದ ೧೯೫೦ರ ಈಚೆಗಿನ ಗುಬ್ಬಿಕಂಪನಿ, ಕೆ. ಬಿ. ಆರ್. ಡ್ರಾಮಾ ಕಂಪನಿ, ಸುಳ್ಳದ ದೇಸಾಯಿಯವರ ಕಂಪನಿ, ಪ್ರಕಾಶ ಕಡಪಟ್ಟಿಯವರ ಕಂಪನಿ, ಚಿತ್ತರಗಿಯವರ ಕಂಪನಿ, ಬಿ. ಆರ್. ಅರಿಷಣಗೋಡಿಯವರ ಕಂಪನಿ—ಮೊದಲಾದವುಗಳು ವೃತ್ತಿ ರಂಗಭೂಮಿಯ ಪರಂಪರೆಯನ್ನು ಇಂದಿಗೂ ಮುಂದುವರೆಸಿಕೊಂಡು ಬಂದಿರು ವದು ಸ್ತುತ್ಯಾರ್ಹವಾದ ಪ್ರಯತ್ನ.

ಆದರೆ ಬಹುದಿನಗಳಿಂದ ವಿದ್ಯಾವಂತರಿಂದ ಉಪೇಕ್ಷಿಸಲ್ಪಟ್ಟು ಸ್ವತಂತ್ರ ವಾಗಿಯೇ ಬೇರೊಂದು ಗತಿಯಲ್ಲಿ ಬೆಳೆದು ಬಂದ ವೃತ್ತಿರಂಗಭೂಮಿ ಹಾಗೂ ಹವ್ಯಾಸಿ ರಂಗಭೂಮಿಗಳ ನಡುವೆ ತುಂಬಲಾರದ ಬಹುದೊಡ್ಡ ಕಂದರ ಬೆಳೆದು ಬಂದಿರುವದು ಎದ್ದು ಕಾಣುವ ಅಂಶ. ಹವ್ಯಾಸಿ ಮತ್ತು ವೃತ್ತಿರಂಗಭೂಮಿಯ ನಡುವಿನ ಈ ಕಂದರವನ್ನು ಕೊನೆಗಾಣಿಸಲು ೨೬ ಸಪ್ಟಂಬರ್, ೧೯೭೪ ರಂದು ರಾಜ್ಯ ನಾಟಕ ಅಕಾಡಮಿ ಹಮ್ಮಿಕೊಂಡ ಯೋಜನೆಯ ಪ್ರಯತ್ನ ನಿರಾಶೆಯಲ್ಲಿ ಪರ್ಯವಸಾನಗೊಳ್ಳಬೇಕಾಯಿತು. ಬಹುಕಾಲದಿಂದ ತನ್ನದೇ ಆದ ಒಂದು ಪ್ರೇಕ್ಷಕ ವರ್ಗವನ್ನು ನಿರ್ಮಾಣ ಮಾಡಿ, ಅದರೊಡನೆ ಒಪ್ಪಂದ ಸಾಧಿಸಿಕೊಂಡ ವೃತ್ತಿರಂಗ ಭೂಮಿ ಆ ಒಪ್ಪಂದವನ್ನು ಇದ್ದಕ್ಕಿದ್ದಂತೆಯೇ ಮುರಿದು ಹವ್ಯಾಸಿ ರಂಗದೊಡನೆ ಸಂಬಂಧವನ್ನು ಸಾಧಿಸುವದು ಅನಿವಾರ್ಯವಾದ ಕಷ್ಟ. ಇಂದಿನ ವಿದ್ಯಾವಂತರು, ಹವ್ಯಾಸಿಗಳು, ವಿಮರ್ಶಕರು, ಪತ್ರಿಕಾಕರ್ತರು ಹೆಚ್ಚು ಸಂಯಮತೆಯಿಂದ ಕಳಕಳಿ ಯಿಂದ ಉದಾರವಾದಿಗಳಾಗಿ ಒಲವು-ಆಸಕ್ತಿಯನ್ನು ಪ್ರೇಕ್ಷರಾಗಿಯೂ ತೋರಿದರೆ, ಸರಕಾರ ಹಾಗೂ ಅಕಾಡೆಮಿಗಳು ಹೆಚ್ಚು ಮುತವರ್ಜಿಯನ್ನು ವಹಿಸಿದರೆ, ಪ್ರತಿ ಯೊಂದು ಊರಲ್ಲಿ ರಂಗಮಂದಿರಗಳು ನಿರ್ಮಾಣವಾದರೆ, ನಟ–ನಟಿಯರಲ್ಲಿ

ಆಧುನಿಕ ಕಲಾತಂತ್ರ ಹಾಗೂ ಮೌಲ್ಯಗಳ ಬಗ್ಗೆ ಅಭಿರುಚಿಯನ್ನು ಹುಟ್ಟಿಸಿದರೆ ಕಳೆದುಹೋದ ವೃತ್ತಿರಂಗಭೂಮಿಯ ಮೌಲ್ಯಗಳನ್ನು ಮತ್ತೆ ಬೆಳೆಸಿಕೊಳ್ಳಲು ಸಾಧ್ಯ.

ಇಂದಿನ ವೃತ್ತಿರಂಗ ಭೂಮಿಯ ದೌರ್ಬಲ್ಯಗಳೇನೆ ಇರಲಿ, ಕನ್ನಡ ರಂಗ ಭೂಮಿಗೆ ಒಂದು ಸುದೀರ್ಘಕಾಲದ ಅವಿಚ್ಛಿನ್ನ ಪರಂಪರೆಯನ್ನು ನಿರ್ಮಿಸಿದ ಬಹು ದೊಡ್ಡ ಶ್ರೇಯಸ್ಸು ಖಂಡಿತವಾಗಿಯೂ ವೃತ್ತಿರಂಗಭೂಮಿಗೆ ಸಲ್ಲುತ್ತದೆ.

## ಗ್ರಂಥಋಣ


೧. ಕರ್ನಾಟಕ ರಂಗಭೂಮಿ — ಡಾ. ಎಚ್. ಕೆ. ರಂಗನಾಥ

೨. ಕನ್ನಡ ರಂಗಭೂಮಿ : ಅಂದು-ಇಂದು—ಕ. ವಿ. ವಿ. ಧಾರವಾಡ (೧೯೭೪)

೩. ಕನ್ನಡ ರಂಗಭೂಮಿಯ ಪುರೋಭಿವೃದ್ಧಿ—ಆದ್ಯ ರಂಗಾಚಾರ್ಯ (೧೯೬೮)

೪. ರಂಗಕಲಾವಿದೆ ಸೋನುಬಾಯಿ ದೊಡ್ಡಮನಿ—ಡಾ. ಎಸ್. ಎಸ್. ಕೋತಿನ (೧೯೮೦)

೫. ಕನ್ನಡ ರಂಗಭೂಮಿ ನಡೆದು ಬಂದ ದಾರಿ — ಬಿ. ಪುಟ್ಟಸ್ವಾಮಯ್ಯ (೧೯೮೩)

೬, ಕಂದಗಲ್ ಹನುಮಂತರಾಯರು — ಕಣವಿ ಮಹಾದೇವ (೧೯೭೬)

೭. ಅಭಿನಯ ವಿಶಾರದೆ—ಹ. ವೆಂ. ಸೀತಾರಾಮಯ್ಯ (೧೯೭೫)

೮. 'ಏಣಗಿ ಬಾಳಪ್ಪನವರ ಆತ್ಮಕಥೆ' (೧೯೭೧) ನಿರೂ : —ದು. ನಿಂ. ಬೆಳಗಲಿ, —ಸುಧಾ (೧೯೭೧)

೯. ರಂಗಭೂಮಿಯ ನಟಸಾರ್ವಭೌಮ ಸಿದ್ಧರಾಮಪ್ಪ ಹಂದಿಗನೂರ— —ಡಾ. ಬಿ. ಆರ್. ನಾಡಗೌಡ (೧೯೮೦) ಕ. ವಿ. ವಿ. ಧಾರವಾಡ

೧೦. ಪ್ರೊ. ಬಸವರಾಜ ಜಗಜಂಪಿಯವರು ಸಂಗ್ರಹಿಸಿದ ಕೆಲವು ಟಿಪ್ಪಣೆಗಳು.

# ಕ್ಷೇತ್ರ ಭಾಷಾವಿಜ್ಞಾನ: ಉದ್ದೇಶ ಮತ್ತು ವ್ಯಾಪ್ತಿ

● ವಿಲ್ಯಂ ಮಾಡ್ತ

ಭಾಷಾವೈಜ್ಞಾನಿಕ ಅಧ್ಯಯನಕ್ಕೆ ಬೇಕಾದ ಭಾಷಿಕ ದತ್ತಸಂಗ್ರಹಣೆ ಮಾಡುವ ಹಾಗೂ ಅದರ ಅಧ್ಯಯನ ನಡೆಯಿಸುವ ವೈಜ್ಞಾನಿಕ ಕ್ರಮವೇ ಕ್ಷೇತ್ರಭಾಷಾ ವಿಜ್ಞಾನ (Field–Linguistics). ಇಲ್ಲಿ ನೇರವಾಗಿ ಭಾಷಾವೈಜ್ಞಾನಿಕ ವಿಶ್ಲೇಷಣೆಯ ಪದ್ಧತಿಗಳ ಚರ್ಚೆ ಮಾಡದಿದ್ದರೂ ಕ್ಷೇತ್ರ ಕಾರ್ಯ (Field–work)ದಲ್ಲಿ ಬಳಸಬೇಕಾದ ವಿವಿಧ ತಂತ್ರಗಳು (Techniques) ಮತ್ತು ಎದುರಿಸಬೇಕಾದ ಸಮಸ್ಯೆಗಳು-ಇವುಗಳನ್ನು ಕುರಿತ ಚರ್ಚೆಗೆ ಹೆಚ್ಚಿನ ಆಸ್ಪದವನ್ನೀಯುತ್ತಾರೆ. ದತ್ತಾನ್ವೇಷಣೆಯಲ್ಲಿ ನಿರೂಪಕ (Informant) ರನ್ನು ಆರಿಸಿಕೊಳ್ಳುವಲ್ಲಿ ಹಾಗೂ ಬಳಸಿಕೊಳ್ಳುವಲ್ಲಿ ಕ್ಷೇತ್ರ ಭಾಷಾ ವಿಜ್ಞಾನಿ (Field linguist) ಬಹು ಎಚ್ಚರಿಕೆಯಿಂದ ವರ್ತಿಸಬೇಕಾಗುತ್ತದೆ. ಈ ವಿಷಯದಲ್ಲಿ ಕ್ಷೇತ್ರಭಾಷಾವಿಜ್ಞಾನ ಆತನಿಗೆ ಸರಿಯಾದ ಬೆಳಕನ್ನು ನೀಡುತ್ತದೆ.

ಕ್ಷೇತ್ರಭಾಷಾವಿಜ್ಞಾನ ಕೇವಲ ಭಾಷಾವಿಜ್ಞಾನಿಗಳಿಗೆ ಅಷ್ಟೇ ಅಲ್ಲದೆ ಮಾನವ ಕುಲ ವಿಜ್ಞಾನಿಗಳಿಗೆ (Ethnographers), ಸಂಗೀತಶಾಸ್ತ್ರಜ್ಞರಿಗೆ, ಜಾನಪದ ವಿಜ್ಞಾನಿಗಳಿಗೆ, ಸಾಮಾಜಿಕ-ವಿಜ್ಞಾನಿಗಳಿಗೆ, ಹಾಗೂ ಮನೋವಿಜ್ಞಾನಿಗಳಿಗೂ ಅತ್ಯುಪಯುಕ್ತವಾಗಿದೆ. ಇವರೆಗೆಲ್ಲರಿಗೂ ನಿರೂಪಕ ಹಾಗೂ ಆತನ ಬಗೆಗಿರುವ ಸಮಸ್ಯೆಗಳು ಇದ್ದೇ ಇರುತ್ತವೆ. ಸಾಹಿತ್ಯ ಮಟ್ಟಕ್ಕೆ ಏರಿರದ ಭಾಷೆಗಳನ್ನು ಕಲಿಯುವಲ್ಲಿಯೂ ಕ್ಷೇತ್ರ ಭಾಷಾವಿಜ್ಞಾನ ಬಹಳ ಸಹಾಯಕಾರಿ. ಈ ಭಾಷಾವಿದ್ಯಾರ್ಥಿಗಳು ನೇರವಾಗಿ ಭಾಷಿಕ ಕ್ಷೇತ್ರಕ್ಕೆ ಹೋಗಬೇಕಾಗುತ್ತದೆ; ಅಲ್ಲಿ ನಿರೂಪಕರನ್ನು ಆರಿಸಿ, ಅವರನ್ನು ಬಳಸಬೇಕಾಗುತ್ತದೆ. ಇಂತಹ ಕಠಿಣ ಕಾರ್ಯದಲ್ಲಿ ಕ್ಷೇತ್ರಭಾಷಾ ವಿಜ್ಞಾನದ ನೆರವು ಬಹಳ ಸಹಾಯಕಾರಿ.

ನಮ್ಮ ದೇಶದಲ್ಲಿ, ರಾಜ್ಯದಲ್ಲಿ ಹಾಗೂ ಪ್ರದೇಶದಲ್ಲಿ ಪರಿಶಿಷ್ಟ ಜಾತಿಗಳ, ಬುಡಕಟ್ಟಿನ ಜನರ, ನಿಮ್ನ ವರ್ಗದವರ ಭಾಷೆಗಳಿವೆ. ಪ್ರಜಾಪ್ರಭುತ್ವದ ಬೆಳಕಿನಲ್ಲಿ ಇವೆಲ್ಲವುಗಳ ಪರಿವೀಕ್ಷಣೆ, ವಿಶ್ಲೇಷಣೆಗಳು ನಡೆಯಬೇಕಾಗಿವೆ. ಈ ದೆಸೆಯಲ್ಲಿ ಕ್ಷೇತ್ರಭಾಷಾವಿಜ್ಞಾನ ಅನಿವಾರ್ಯ. ಕ್ಷೇತ್ರಕಾರ್ಯದಲ್ಲಿ ಎದುರಿಸಬೇಕಾದ ಸಮಸ್ಯೆ

ಗಳನ್ನು ಅರ್ಥೈಸುವಲ್ಲಿ ಹಾಗೂ ಸೂಕ್ತ ಪರಿಹಾರ ಕಂಡು ಹುಡುಕುವಲ್ಲಿ ಕ್ಷೇತ್ರ ಭಾಷಾವಿಜ್ಞಾನ ಅತ್ಯಗತ್ಯ.

ಕ್ಷೇತ್ರಭಾಷಾವಿಜ್ಞಾನದಲ್ಲಿ ನಿರೂಪಕ/ರು ಹಾಗೂ ಕ್ಷೇತ್ರಭಾಷಾವಿಜ್ಞಾನಿ ಬಹು ಪ್ರಮುಖರು. ನಿರೂಪಕರು ಕೇವಲ ಆಕರಗಳಲ್ಲ; ಮೌಲ್ಯ ನಿರ್ಣಯಕಾರರೂ ಹೌದು. ಕ್ಷೇತ್ರಭಾಷಾವಿಜ್ಞಾನಿ ಮುಂದೊಡ್ಡುವ ಪ್ರತಿಯೊಂದು ನುಡಿಯ ಮೌಲ್ಯ ವನ್ನೂ ಆತ ನಿರ್ಣಯಿಸುತ್ತಾನೆ. ಈ ಕಾರಣದಿಂದ ಈ ಕ್ಷೇತ್ರಕಾರ್ಯವಿಧಾನವನ್ನು ನಿರೂಪಕ ವಿಧಾನ (Informant method) ಎಂದು ಕರೆಯುತ್ತಾರೆ. ಪ್ರಸ್ತುತ ಅನ್ವೇಷಣೆ (Investigation)ಯಲ್ಲಿ ಆತ್ಮೀಯ ಸಂಪರ್ಕಕ್ಕೆ ಮಹತ್ವವಿರುವುದರಿಂದ ಅದನ್ನು ಸಂಪರ್ಕ ವಿಧಾನ (Contact method) ಎಂದೂ ಕರೆಯುವುದುಂಟು.

ಕ್ಷೇತ್ರಕಾರ್ಯಕ್ಕಾಗಿ ಅನ್ವೇಷಕ (Investigater) ಕ್ಷೇತ್ರ (Field)ಕ್ಕೆ ಹೋಗ ಬಹುದು. ಅಥವಾ ಕ್ಷೇತ್ರವನ್ನು ತನ್ನಲ್ಲಿಗೆಯೇ ತರಬಹುದು. ಹೀಗೆ ಹಲವಾರು ಸಲ ನಿರೂಪಕರನ್ನು ತಮ್ಮ ಕಡೆಗೆಯೇ ಕರೆತಂದು ಕ್ಷೇತ್ರಕಾರ್ಯವನ್ನು ನಡೆಯಿಸುವು ದುಂಟು. ವಿಶ್ವವಿದ್ಯಾಲಯಗಳ ಸ್ನಾತಕೋತ್ತರ ಭಾಷಾವಿಜ್ಞಾನ ವಿಭಾಗಗಳಲ್ಲಿ ವಿದ್ಯಾರ್ಥಿಗಳು ಸಾಮಾನ್ಯವಾಗಿ ಇದೇ ರೀತಿಯಲ್ಲಿ ಕ್ಷೇತ್ರಕಾರ್ಯ ಮಾಡುವುದನ್ನು ನಾವು ಗಮನಿಸಿರಬಹುದು.

ಭಾಷಾಧ್ಯಯನದಲ್ಲಿ ಕ್ಷೇತ್ರಭಾಷಾವಿಜ್ಞಾನದ ಪಾತ್ರ ಬಹಳ ಹಿರಿದು. ಭಾಷೆಯ ಬಗೆಗೆ ತಿಳಿಯಲು ಗ್ರಂಥಗಳನ್ನೇ ನಾವು ಅವಲಂಬಿಸಿಕೊಂಡರೆ ನಮ್ಮ ಜ್ಞಾನ ಪರಿಮಿತಗೊಳ್ಳುವುದರಲ್ಲಿ ಸಂದೇಹವಿಲ್ಲ. ಈಗಾಗಲೇ ಹಲವಾರು ಅನ್ವೇಷಣ ಶೀಲ ವ್ಯಕ್ತಿಗಳು ಪ್ರಚುಲಿತವಲ್ಲದ ಭಾಷೆ ಉಪಭಾಷೆಗಳ ಸಾಮಗ್ರಿಯನ್ನು ವೈಯಕ್ತಿಕ ವಾಗಿ ಸಂಗ್ರಹಿಸಿಕೊಂಡು ಇಟ್ಟುಕೊಂಡದ್ದು ನಮ್ಮ ಸುದೈವವೇ ಸರಿ. ಭಾಷಾ ವಿಜ್ಞಾನದ ಪ್ರಗತಿಯಿಂದಾಗಿ ಕ್ಷೇತ್ರಭಾಷಾವಿಜ್ಞಾನದ ಬೆಳವಣಿಗೆಗೆ ಇತ್ತೀಚೆಗೆ ಬಹಳ ಅನುಕೂಲ ಪರಿಸ್ಥಿತಿಯುಂಟಾಗಿದೆ.

ಜಗತ್ತಿನಲ್ಲಿರುವ ಭಾಷೆಗಳ ಬಗೆಗೆ ನಮಗೆ ಇನ್ನೂ ಸಂಪೂರ್ಣ ಹಾಗೂ ಅಧಿಕೃತ ಮಾಹಿತಿ ಸಿಗುತ್ತಿಲ್ಲ. ಅವುಗಳ ಸಂಖ್ಯೆಯನ್ನು ಕೂಡಾ ನಿರ್ಣಯಾತ್ಮಕವಾಗಿ ಹೇಳು ವುದು ಅಸಾಧ್ಯವಾಗಿಯೇ ಉಳಿದಿದೆ. ೧೯೪೦ರ ಸುಮಾರಿಗೆ ಪ್ರಪಂಚದಲ್ಲಿರುವ ಭಾಷೆ ಗಳ ಸಂಖ್ಯೆ ೨,೫೦೦ ರಿಂದ ೩,೫೦೦ (Gray 1939 : 418) ಹೇಳಿದರೆ, ಇತ್ತೀಚೆ ಗಿನ ಅಧ್ಯಯನದ ಪ್ರಕಾರ ಸು. ೪,೦೦೦ ರಿಂದ ೭,೦೦೦ (Ferguson 1964) ಎಂಬ ಅಭಿಪ್ರಾಯವಿದೆ. ದ್ವಿಭಾಷಿಕತೆ(Bilingualism) ಯಿಂದಾಗಿ ಎಷ್ಟೋ ಭಾಷೆ ಗಳು ಕಾಲಕ್ರಮೇಣ ಅಳಿದು ಹೋಗುತ್ತವೆ. ಉದಾಹರಣಾರ್ಥಕವಾಗಿ ಉತ್ತರ

ಅಮೆರಿಕನ್ ಇಂಡಿಯನ್ ಭಾಷೆಗಳಲ್ಲಿ ಹತ್ತಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ೪೦–೫೦ ಭಾಷೆಗಳು ೧೯೬೦ರ ಸುಮಾರಿಗೆ ಇದ್ದುವು. ಆ ಭಾಷಿಗರ ವಯಸ್ಸು ಆಗ ಸರಾಸರಿ ಸು. ೫೦ ವರ್ಷ! ಬಹುಶಃ ಈಗ ಅವು ಹೆಚ್ಚು ಕಡಿಮೆ ಸತ್ತಿರಬೇಕು. ಹೀಗೆ ಸಾಯುತ್ತಿರುವ ಭಾಷೆಗಳ ಅಧ್ಯಯನ ಮಾಡದಿದ್ದರೆ ಭಾಷಿಕ ಅಧ್ಯಯನಕ್ಕೆ ಆಗುವ ಹಾನಿ ಅಪಾರ. (ನೋಡಿ : Chafe 1962, 1965).

ನಮಗೆ ಗೊತ್ತಿರುವ ಭಾಷೆಗಳಲ್ಲಿ ಕೂಡಾ ಎಷ್ಟೋ ಭಾಷೆಗಳಿಗೆ ಸರಿಯಾದ ವೈಜ್ಞಾನಿಕ ತಳಹದಿಯ ಮೇಲೆ ಬರೆದ ವ್ಯಾಕರಣಗಳಿಲ್ಲ. (ಉದಾ : ಕುಡುಬಿ, ನವಾಯತ, ನಾಡೋರು, ಭೈರರು……) ಜಗತ್ತಿನಲ್ಲಿ ಅಸ್ತಿತ್ವದಲ್ಲಿರುವ ಭಾಷೆಯ ಅಧ್ಯಯನ ಭಾಷಾವಿಜ್ಞಾನದ ಜವಾಬ್ದಾರಿ. ಈಗಾಗಲೇ ವ್ಯಾಕರಣಗಳನ್ನು ಬರೆಯಲಾದ ಭಾಷೆಗಳ ನಾನಾ ಮುಖಗಳ ಆಳವಾದ ಅಧ್ಯಯನ (ಧ್ವನಿ ವಿಜ್ಞಾನ, ಧ್ವನಿಮಾ ವಿಜ್ಞಾನ, ಆಕೃತಿಮಾ ವಿಜ್ಞಾನ, ಸಂಧಿ ವಿವರಣೆ, ವಾಕ್ಯರಚನೆ……) ನಡೆಯಬೇಕಾಗಿದೆ.

ಭಾಷಾವಿಜ್ಞಾನದ ಸರ್ವತೋಮುಖ ಅಭಿವೃದ್ಧಿಗೆ ಕ್ಷೇತ್ರಭಾಷಾವಿಜ್ಞಾನ ಪೂರಕ ಹಾಗೂ ಅತ್ಯಗತ್ಯ (ನೋಡಿ : F. G. Lounsbury in C. F. Vorgelin 1950 : 299). ಭಾಷೆಯ ಸಮಗ್ರ ಇತಿಹಾಸವನ್ನು ಬರೆಯಲು ಪ್ರತಿಯೊಂದು, ಅದರಲ್ಲಿಯೂ ಕಣ್ಮರೆಯಾಗುತ್ತಿರುವ, ಭಾಷೆಯನ್ನು ಶಾಶ್ವತ ರೂಪದಲ್ಲಿ ದಾಖಲು ಗೊಳಿಸುವ ಹಾಗೂ ಅದರ ವಿವರಣೆಯನ್ನು ನೀಡುವ ಪ್ರಯತ್ನ ನಡೆಯಬೇಕು. ಭಾಷಾ ಸಾರ್ವತ್ರಿಕಗಳನ್ನು (Language Universals) ತಿಳಿದುಕೊಳ್ಳಲೂ ಕ್ಷೇತ್ರಕಾರ್ಯ ಹೆಚ್ಚು ಸಹಾಯಕಾರಿಯಾಗಿದೆ. (Teeter 1966) ಭಾಷಾವಿವರಣೆಗೂ ಕ್ಷೇತ್ರಕಾರ್ಯಕ್ಕೂ ನೇರವಾದ ಸಂಬಂಧವಿದೆ ಎಂದರೆ ತಪ್ಪಾಗದು. (Lyons, 1962 : 127).

ಭಾಷಾವಿಜ್ಞಾನಿಗೆ ಭಾಷಾಕ್ಷೇತ್ರವೆಂಬುದು ಪ್ರಯೋಗಶಾಲೆ (Laboratory) ಇದ್ದಂತೆ. ಒಂದು ಸಮಗ್ರ ಪರಿಪೂರ್ಣ ವ್ಯಾಕರಣ ಬರೆಯಬೇಕಾದರೆ ಆತನು ಈ ಮೊದಲು ರೂಪಿಸಿದ ಭಾಷಾಪ್ರಮೇಯ (Hypotheses) ಗಳನ್ನು ಆತ ಆಗಾಗ ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸಬೇಕಾಗುತ್ತದೆ. ಇದಕ್ಕಾಗಿ ಆತನ ದತ್ತಸಂಗ್ರಹಣೆಯ ಪಾಠ (Text) ಗಳನ್ನೂ ಪರಿಶೀಲಿಸಿ ನಿರೂಪಕರೊಡನೆ ಚರ್ಚಿಸಬೇಕಾಗುತ್ತದೆಯಾದುದರಿಂದ ಕ್ಷೇತ್ರಭಾಷಾವಿಜ್ಞಾನ ಅನಿವಾರ್ಯ. ಭಾಷಾವಿಜ್ಞಾನಿಗಳ ಎಲ್ಲ ಪ್ರಮೇಯಗಳೂ ಸಿದ್ಧಾಂತಗಳೂ ಕ್ಷೇತ್ರಕಾರ್ಯದಿಂದಾಗಿ ಪಡೆದುಕೊಂಡ ದತ್ತವನ್ನು ಅವಲಂಬಿಸಿರುತ್ತವೆ. ಕ್ಷೇತ್ರಭಾಷಾವಿಜ್ಞಾನದಿಂದ ಪುಷ್ಟಿಯನ್ನು ಪಡೆದುಕೊಳ್ಳದ ಸಿದ್ಧಾಂತಗಳು ನಿರುಪಯುಕ್ತ ಹಾಗೂ ಅವೈಜ್ಞಾನಿಕ.

ಭಾಷಾವಿಜ್ಞಾನ ಮಾತ್ರವಲ್ಲದೆ ಮಾನವವಿಜ್ಞಾನ (Anthropology)ವೇ ಮೊದಲಾದ ಸಾಮಾಜಿಕ ವಿಜ್ಞಾನಗಳಿಗೂ ದತ್ತಸಂಗ್ರಹಣೆಗೆ, ಪ್ರಯೋಗಗಳನ್ನು ನಡೆಸಯಿಸಲಿಕ್ಕೆ ಹಾಗೆಯೇ ಸಂಶೋಧನೆಯನ್ನು ರೂಪಿಸಿಕೊಳ್ಳಲಿಕ್ಕೆ ಕ್ಷೇತ್ರಭಾಷಾ ವಿಜ್ಞಾನದ ಅವಶ್ಯಕತೆಇದೆ. ಮಾನವಕುಲವಿಜ್ಞಾನ (Ethnography) ದ ಕ್ಷೇತ್ರ ಕಾರ್ಯಕ್ಕೆ ಭಾಷೆ ಒಂದು ಪ್ರಮುಖ ಸಾಧನ. (ನೋಡಿ: Boas 1911, Beals 1957, Boharman 1958 a, b, Lowie 1940, Mead 1939, McEver 1959, Rodin 1949). ಇತ್ತೀಚೆಗೆ ಭಾಷಾವಿಜ್ಞಾನ ಒಂದಲ್ಲ ಒಂದು ರೀತಿಯಿಂದ ಅನೇಕ ಜ್ಞಾನಶಾಖೆಗಳನ್ನು ಪ್ರವೇಶಿಸಿದೆ: ತತ್ತ್ವಶಾಸ್ತ್ರ, ಮನೋ ವಿಜ್ಞಾನ, ದೇವಶಾಸ್ತ್ರ ಮೊದಲಾದ ಶಿಸ್ತುಗಳಲ್ಲಿ ಭಾಷಾವಿಜ್ಞಾನಕ್ಕೆ ಪ್ರಮುಖ ಸ್ಥಾನ ಪ್ರಾಪ್ತವಾಗಿದೆ. ಮಾನವ ವಿಜ್ಞಾನಿಗಳು ಇಂದು ಹಲವಾರು ಐತಿಹಾಸಿಕ, ರಚನಾತ್ಮಕ ಮತ್ತು ಕ್ರಿಯಾತ್ಮಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಅವುಗಳಿಗೆ ಪರಿಹಾರ ಕಂಡುಹುಡುಕುವಲ್ಲಿ ಅವುಗಳ ಭಾಷಾವೈಜ್ಞಾನಿಕ ಅಧ್ಯಯನ ಅತ್ಯಗತ್ಯವಾಗಿದೆ. ಅರ್ಥಕ್ಕೆ ಸಂಬಂಧಪಟ್ಟ ರಚನೆಗಳು ಪ್ರತಿಯೊಂದು ಸಂಸ್ಕೃತಿಗೆ ವಿಶಿಷ್ಟವಾಗಿ ಇವೆಯೋ ಅಥವಾ ಅವು ಎಲ್ಲ ಸಂಸ್ಕೃತಿಗಳಲ್ಲಿಯೂ ಸಾರ್ವತ್ರಿಕ ಅಂಶವಾಗಿ ಇವೆಯೋ ಎಂಬೀ ಮೊದಲಾದ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವಲ್ಲಿ ಸಂಸ್ಕೃತಿಯ ವಿಶಿಷ್ಟ ಲಕ್ಷಣಗಳನ್ನು ನೋಡಿಕೊಳ್ಳಬೇಕಾಗುತ್ತದೆ. ಇಂತಹ ಕಾರ್ಯ ಮಾಡುವ ಅನ್ವೇಷಕರಿಗೆ ಕ್ಷೇತ್ರ ಭಾಷಾವಿಜ್ಞಾನ ಬೇಕೇಬೇಕು.

ಅನೇಕ ರಾಷ್ಟ್ರಗಳು ಪಾರತಂತ್ರದಿಂದ ಬಿಡುಗಡೆ ಹೊಂದಿ ಸ್ವತಂತ್ರವಾದ ಹಿನ್ನೆಲೆಯಲ್ಲಿ ಅವು ತಮಗೆ ತಕ್ಕುದಾದ ಭಾಷಾ ಯೋಜನೆ (Languge Planning) ಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ; ಭಾಷಾಶಿಲ್ಪ (Language Engineering) ದಲ್ಲಿ ತೊಡಗಬೇಕಾಗುತ್ತದೆ. ಒಂದು ರಾಷ್ಟ್ರದಲ್ಲಿ ಎಷ್ಟು ಭಾಷೆಗಳಿವೆ ? ಶಿಕ್ಷಣ ಮಾಧ್ಯಮವಾಗಿ ಯಾವುದನ್ನು ಆರಿಸಿಕೊಳ್ಳಬೇಕು ? ಆಡಳಿತ ಭಾಷೆಯಾಗಿ ಯಾವ ಭಾಷೆ ಹೆಚ್ಚು ಸಮಂಜಸ? ಇಂದಿನ ವಿಜ್ಞಾನ ಯುಗದಲ್ಲಿ ನಮ್ಮ ಭಾಷೆಗಳು ಉತ್ತಮ ಸಂಪರ್ಕ ಸಾಧನಗಳಾಗಬೇಕಾದರೆ ಅವುಗಳಲ್ಲಿ ಯಾವ ರೀತಿಯ ಬದಲಾವಣೆಗಳನ್ನುಂಟು ಮಾಡಬೇಕು ? ಗ್ರಾಮ್ಯ ಭಾಷೆಗಳ ಶಿಷ್ಟೀಕರಣ ಮಾಡುವ ಬಗೆ ಹೇಗೆ ? ಭಾಷಾ ಸಂಶೋಧನೆ ಯಾವ ದಿಕ್ಕಿನಲ್ಲಿ ಯಾವ ಗತಿಯಲ್ಲಿ ಮುಂದುವರಿಯಬೇಕು ? ವಿಭಿನ್ನ ಭಾಷೆಗಳ ವ್ಯಾಕರಣ, ನಿಘಂಟು, ಸಾಹಿತ್ಯ (ವ್ಯಷ್ಟಿ ಹಾಗೂ ಸಮಷ್ಟಿ) ಇತ್ಯಾದಿಗಳನ್ನು ಬೆಳಕಿಗೆ ತರಲು ಯಾವ ಯೋಜನೆಗಳನ್ನು ಸಿದ್ಧಪಡಿಸಬೇಕು— ಇವೇ ಮೊದಲಾದ ವಿಷಯಗಳನ್ನು ಸೂಕ್ತ ರೀತಿಯಲ್ಲಿ ನಿರೂಪಿಸಲು ಕೂಡಾ ಕ್ಷೇತ್ರ ಭಾಷಾವಿಜ್ಞಾನದ ಉಪಯೋಗ ಅಷ್ಟಿಷ್ಟಲ್ಲ.

ಒಟ್ಟಿನಲ್ಲಿ ೨೧ನೆಯ ಶತಮಾನದತ್ತ ಮುನ್ನುಗ್ಗುವ ನಮ್ಮ ದೇಶದಲ್ಲಿ ಹಾಗೂ ಮಾನವ ಕುಲದಲ್ಲಿ ಕ್ಷೇತ್ರಭಾಷಾ ವಿಜ್ಞಾನದ ಕಾರ್ಯ ವ್ಯಾಪ್ತಿ ಅಗಾಧವಾದುದು; ಅದರ ಜವಾಬ್ದಾರಿ ಬಹು ಹಿರಿದಾದುದು.

## ಸಾಹಿತ್ಯ ಸೂಚಿ


BEALS, RALPH L., Native terms and Anthropological Methods American Anthropologist, (1957)

BOAS, FRANZ, Introduction. In Hand book of American Indian Languages.

Washington, D. C. Govt. Printing Office (Smithsanian Institution, Bureau of American Ethnology, Bulletin 40) Vol. 1 Reprinted with a foreword by C. I. J. M. Stuart. Washington, D. C. Georgetown University Press, (1911 First)

BOHANNAN, PAUL, on Anthropologists' use of languages American Anthropologist, 60 : 161–162 (1958 a)

Rejoinder to Taylor. American Anthropologist, 60 : 941-942 (1958 b).

CHAFE, WALLACE L., Estimates regarding the present speakers of North American Indian languages, International Journal of American Linguistics. (IJAL) 28 : 162-171 (1962). Corrected Estimates regarding speakers of Indian languages, (IJAL) 31 : 345.346 (1965).

FERGUSON, CHARLES A., On linguistic information (a lunchoor address) In C. I. J. M. stuart (Ed) Georgetown university, Monograph Series on languages and linguistics Number 17(Report of the 15th Annual Round Table Meeting on Linguistics and language studies). Washington, D. C. Georgetown University, (1964).

Gray, Louis H., Foundations of Language, New york : the MacMillan Company, (1939)

GOLDSTEIN, KENNETH S., A Guide for Field Workers in Folklore, Hatboro, Pa. : Folklore Associates (Memoirs of the American Folklore Society, Vol. 52), (1964).

GREENBERG, JOSEPH H. (Ed), Universals of Language, Cambridge, Mass. : M. I. T. Press, (1963).

HOCKETT, CHARLES F., A Course in Modern Linguistics, Newyork. The Macmillan Company, (1958)
LOUNSBURY, FLOYD G., Field Methods and Techniques in Linguistics.

In A. L. Krober (Ed), Anthropology Today an Encyclopedic Inventory. Chicago : University of Chicago Press, (1953).

LOUIE, ROBERT H., Native Languages as ethnographic tools. American Anthropologist. Vol. 42, 81-89 (1940).

LYONS, JOHN Phonemic and non Phonemic Phonology:Some typological reflections, IJAL Vol : 28, 127-134 (1962).

Mc EUCN, WILLIAM J. Native Language and Field problems American Anthropologist Vol. 61 : 681-685 (1957).

MEAD, MARGARET, Native languages as Field Work tools American Anthropologist, 41 : 189-205 (1939)

SAMARIN, WILLIAM J. Field Linguistics Newyork: Holt Rirelant and Winston (1966).

TEETER, KARL V., The history of linguistic New lamps for old. A Paper read at the Seventeenth Annual Round Table Meeting on linguistics and Language Studies, Georgtown university, Washington, D. C., (1966).

VOEGELIN, KARL F., Magnetic recording of American Indian Languages and the relationship of this to other kinds of memory, Proceedings of the American Philosophical Society 94: 295-300 (1950).

●

# ಕರ್ನಾಟಕದ ಗ್ರಾಮವೊಂದರಲ್ಲಿನ ಹಾಗೂ ಅದರ ಸುತ್ತಮುತ್ತಲ ಸ್ಥಳನಾಮಗಳು

(Place names in and around a Karnataka Village)†

---

● ಹೆಚ್. ಎಂ. ಮಹೇಶ್ವರಯ್ಯ

ಗ್ರಾಮನಾಮಗಳ ಅಧ್ಯಯನದ ಜೊತೆಯಲ್ಲಿಯೇ ಆ ಗ್ರಾಮಗಳ ಒಳಗಿನ ಹಾಗೂ ಸುತ್ತಮುತ್ತಲಿನ ವಸತಿ ಹಾಗೂ ನಿರ್ವಸತಿಯ ಪ್ರದೇಶಗಳ ಅಧ್ಯಯನ ಆಗಬೇಕಾಗಿದೆ. ಏಕೆಂದರೆ ಗ್ರಾಮನಾಮದಂತೆ, ಗ್ರಾಮದೊಳಗಿನ ಹಾಗೂ ಅದರ ಸುತ್ತಮುತ್ತಲಿನ ಸ್ಥಳನಾಮಗಳು ಗ್ರಾಮೀಣರ ಬದುಕಿನ ಅವಿಭಾಜ್ಯ ಅಂಗಗಳಾಗಿರುತ್ತವೆ. ಅವರ ವ್ಯವಹಾರವಲ್ಲಿ ಆ ಹೆಸರುಗಳು ಒಂದಿಲ್ಲೊಂದು ರೀತಿಯಲ್ಲಿ ಭಾಗವಹಿಸುತ್ತಿರುತ್ತವೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಗ್ರಾಮ ಒಂದರ ಒಳಗಿನ ಹಾಗೂ ಅದರ ಸುತ್ತಮುತ್ತಲ ಸ್ಥಳನಾಮಗಳ ಅಧ್ಯಯನ, ಈ ಲೇಖನದಲ್ಲಿ ಮಾಡಲಾಗಿದೆ.

'ಹಿತ್ತಲ' ಎಂಬ ಗ್ರಾಮ, ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯ, ಶಿಕಾರಿಪುರ ತಾಲೂಕಿನಲ್ಲಿದೆ. ಇದು ನನ್ನ ಹುಟ್ಟೂರು ಆಗಿರುವುದರಿಂದ, ಅಧ್ಯಯನಕ್ಕೆ ಇದನ್ನು ಆಯ್ಕೆಮಾಡಿಕೊಂಡಿದ್ದೇನೆ. 'ಹಿತ್ತಲ' ಎಂಬ ಹೆಸರು ಹೇಗೆ ಬಂದಿದೆ ಎಂಬುದು ಗೊತ್ತಿಲ್ಲ. ಆದರೂ ಜಾನಪದ ನಿಷ್ಪತ್ತಿಯಂತೆ ಸೂಳೆಯೊಬ್ಬಳು ಈ ಊರಿನ ಕೆರೆಯನ್ನು ಕಟ್ಟಿಸಿದಳಂತೆ. ಕೆರೆಯನ್ನು ಕಟ್ಟಿಸಲು ಒಬ್ಬ ಮುಸ್ಲೀಮನಿಗೆ ನೇಮಿಸಿದಳಂತೆ. ಸೂಳೆಯ ಹಣವನ್ನು ಪಡೆದು ಕೆಲಸ ಪೂರೈಸದೆ ಅವನು ಮನೆಯ ಹಿತ್ತಲಿನಿಂದ ತಪ್ಪಿಸಿಕೊಂಡು ಪರಾರಿಯಾದನಂತೆ. ಅವನು ಹಿತ್ತಲಿನಿಂದ ಹೋದದ್ದರಿಂದ ಹಿತ್ತಲ ಎಂಬ ಹೆಸರು ಬಂದಿದೆ ಎನ್ನುತ್ತಾರೆ.

'ಹಿತ್ತಲ' ಶಿವಮೊಗ್ಗದಿಂದ ಉತ್ತರಕ್ಕೆ ೪೦ ಕಿ. ಮೀ. ದೂರದಲ್ಲಿಯೂ, ಶಿಕಾರಿಪುರದಿಂದ ದಕ್ಷಿಣಕ್ಕೆ ೧೫ ಕಿ. ಮೀ. ದೂರದಲ್ಲಿಯೂ ಇದೆ. ಈ ಊರಿನ ಒಟ್ಟು ಭೌಗೋಳಿಕ ವಿಸ್ತೀರ್ಣ ೫೨೬೦.೦೪ ಎಕರೆಗಳು. ಇದರಲ್ಲಿ ಗ್ರಾಮಠಾಣ್ಯ ೮೪.೦೧ ಎಕರೆ, ಕೆರೆಗಳು ೧೭೧.೧೮ ಎಕರೆ, ಹಳ್ಳಿ ೩೨.೧೩ ಎಕರೆ, ಮಾರ್ಗ ೨೧.೧೪ ಎಕರೆ, ಖರಾಬು ಗೋಮಾಳ ೧೧೮೫.೧೮ ಎಕರೆ, ನಾಲಾತರಿ ೮೧೯.೦೮ ಎಕರೆ,

ಖುಷ್ಕಿ ೨೨೭.೧೬ ಎಕರೆ, ಹಾಗೂ ಇತ್ಯಾದಿ ಸೇರಿರುತ್ತದೆ. ಸುಮಾರು ೩೧ ಜಾತಿಗಳ ೨೫ ವೃತ್ತಿಯ ಜನಗಳು ವಾಸಿಸುವ ಈ ಊರಿನ ಒಟ್ಟು ಜನಸಂಖ್ಯೆ ೩೪೪೦.

ಸ್ಥಳನಾಮಗಳಲ್ಲಿ ಸಾಮಾನ್ಯವಾಗಿ ಎರಡು ಆಕೃತಿಮಾಗಳಿರುತ್ತವೆ. ಒಂದು ಆಕೃತಿಮಾವನ್ನು 'ನಿರ್ದಿಷ್ಟ' (Specific) ವೆಂತಲೂ ಮತ್ತೊಂದನ್ನು 'ವಾರ್ಗಿಕ' (generic) ವೆಂತಲೂ ಕರೆಯಬಹುದು. 'ನಿರ್ದಿಷ್ಟ' ಆಕೃತಿಮಾ, ಸ್ಥಳದ, ಅಥವ ಹೆಸರಿನ ಉಗಮವನ್ನು ಸೂಚಿಸಿದರೆ 'ವಾರ್ಗಿಕ' ಆಕೃತಿಮಾ, ಹಳ್ಳಿ, ಪಟ್ಟಣ, ಭೂ ಪ್ರದೇಶ, ಜಲ, ಕಾಡು, ಮುಂತಾದವುಗಳನ್ನು ಸೂಚಿಸುತ್ತದೆ. ಮೇಲೆ ಸೂಚಿಸಿದ ಊರಿನಲ್ಲಿ ಈ ಕೆಳಗಿನ ವಾರ್ಗಿಕ ಆಕೃತಿಮಾಗಳನ್ನು ಗುರುತಿಸಬಹುದಾಗಿದೆ.

–ಮನೆ, –ಹಿತ್ತಲು, –ಕೆರೆ, –ಕಟ್ಟೆ, –ಕೇರಿ, –ಹಳ್ಳ, –ಹೊಂಡ, –ಬಾವಿ, –ಹೊಳೆ, –ಬಯಲು, –ಹರ, –ಸರ, –ಗದ್ದೆ, –ಪಾಲು, –ದಳೆ, –ಹಾಳಿ, –ಬೀಳು –ಮಟ್ಟಿ, –ಗುಂಡಿ, –ಮರಡಿ, –ಬಾಗಿಲು, –ಹಂಕಲು, –ಕೋಡಿ, –ಏರಿ.

**ಮನೆ :**

ಮನೆಯಿಂದಲೇ ನಾವು ಸ್ಥಳನಾಮಗಳ ವಿವರಣೆಗೆ ಪ್ರಾರಂಭಿಸಬಹುದು. ಮನೆಯ ಮುಂಭಾಗವನ್ನು **ಅಂಗಳ**ವೆಂದೂ, ಮನೆಯ ಪ್ರವೇಶದ್ವಾರದ ಅಕ್ಕಪಕ್ಕದಲ್ಲಿ ಇರುವ ಜಾಗವನ್ನು **ಜಗಲಿ** ಎಂದೂ ಮಣ್ಣಿನ ಚಡಿಯನ್ನು ಹಾಕಿ ಕುಳಿತುಕೊಳ್ಳಲು ಮಾಡಿದ ಜಾಗವನ್ನು **ಕಟ್ಟೆ** ಎಂದೂ ಕರೆಯುತ್ತಾರೆ. ಮನೆಯ ಮುಂಭಾಗವನ್ನು ಕಬ್ಬಿಣದ ಸರಳು ಅಥವ ಮರದ ತುಂಡುಗಳನ್ನು ಉಪಯೋಗಿಸಿ ಗೋಡೆ ನಿರ್ಮಿಸಿದ್ದರೆ **ಕಟಂಜನ** ಎಂದು ಕರೆಯುತ್ತಾರೆ. ಮನೆಯ ಮಧ್ಯಭಾಗವನ್ನು **ನಡುಮನೆ**, ಅಡುಗೆಯಕೋಣೆಯನ್ನು **ಅಡುಗೆಮನೆ** ಒಚ್ಚಲುಕೋಣೆಯನ್ನು **ಬಚ್ಚಲು ಮನೆ**, ದೇವರ ಕೋಣೆ **ದೇವರಮನೆ**, ದನಗಳನ್ನು ಕಟ್ಟುವ ಜಾಗವನ್ನು **ಹಟ್ಟಿ** ಅಥವ **ಕೊಟ್ಟಿಗೆ** ಎಂದು ಕರೆಯುತ್ತಾರೆ. ಮನೆಯ ಹಿಂಭಾಗವನ್ನು **ಹಿತ್ತಲು**, ಮನೆಯನ್ನು ಬೆಳಸಿ ಅಕ್ಕಪಕ್ಕದಲ್ಲಿ ಎರಡು ಕೋಣೆಗಳನ್ನು ನಿರ್ಮಿಸಿದ್ದರೆ ಅದಕ್ಕೆ **ವಂಕ**ವೆಂದು ಕರೆಯುತ್ತಾರೆ. ಧಾನ್ಯಗಳನ್ನು ಸಂಗ್ರಹಿಸುವ ಜಾಗವನ್ನು ಪಳಿತಲಾ ಪಣತ ಎಂದು ಕರೆದರೆ, ಎರಡು ಮನೆಗಳ ಮಧ್ಯೆ ದನ, ಜನಗಳು ಓಡಾಡುವ ಜಾಗವನ್ನು **ಮುಡಕಿ** ಎಂದು ಕರೆಯುತ್ತಾರೆ. ಸಂಭಾಷಣೆಯಲ್ಲಿ, ಎರಡು ಮನೆಗಳಿದ್ದರೆ **ಆಮನೆ**, **ಈಮನೆ** ಎಂದು ಗುರುತಿಸುತ್ತಾರೆ.

**ಕೇರಿ :**

ಜನ ಹಾಗೂ ಎತ್ತಿನಗಾಡಿ ಓಡಾಡಲು ಮಧ್ಯೆ ಜಾಗವನ್ನು ಬಿಟ್ಟು ಎರಡೂ ಪಕ್ಕದಲ್ಲಿ ಸಾಲು ಮನೆಗಳನ್ನು ಕಟ್ಟಿರುತ್ತಾರೆ. ಇಂತಹ ಸಾಲು ಮನೆಗಳಿಂದ ಕೂಡಿದ

ನಿರ್ದಿಷ್ಟ ಜಾತಿ, ವೃತ್ತಿಯ ಜನಗಳು ಗುಂಪಾಗಿ ವಾಸಿಸುವ ಪ್ರದೇಶವನ್ನು **ಕೇರಿ, ಗೇರಿ** ಎಂದು ಕರೆಯುತ್ತಾರೆ. ಕೆಲವೊಮ್ಮೆ ಒಂದೇಕೇರಿಯಲ್ಲಿ ಬೇರೆ ಬೇರೆ ಜನಾಂಗದವರೂ ವಾಸಿಸುತ್ತಾರೆ. ಇಂತಹ ಕೇರಿಗಳನ್ನು ಅಲ್ಲಿ ವಾಸಿಸುವ ಜನಗಳ ಜಾತಿಯಿಂದ ಹೆಸರಿಸುತ್ತಾರೆ. ಉದಾಹರಣೆಗೆ **ದೇವಾಂಗದಕೇರಿ, ಕುರುಬರಕೇರಿ, ಸಾಬರಕೇರಿ. ಮಾದರಕೇರಿ, ಮಾದಿಗ್ಗೇರಿ, ತಳವಾರಕೇರಿ.** ಕೆಲವು ಕೇರಿಗಳನ್ನು ಅಲ್ಲಿ ವಾಸಿಸುವ ಜನಗಳ ವೃತ್ತಿಯಿಂದ ಗುರುತಿಸುತ್ತಾರೆ. ಉದಾಹರಣೆಗೆ **ಸರಾಯಗಾರರಕೇರಿ. ಕುಂಬಾರಕೇರಿ**, ಇತ್ಯಾದಿ ಅಲ್ಲದೇ ಆ ಕೇರಿಯಲ್ಲಿ ವಾಸಿಸುವ ಪ್ರಮುಖ ವ್ಯಕ್ತಿಯ ಅಥವ ಅವನ ಮನೆಯ ಹೆಸರಿನಿಂದ ಕರೆಯುವುದೂ ಉಂಟು. **ಕಬೂಲ ಸಾಬರಕೇರಿ, ಬಾಳೇರಕೇರಿ,** ಗೌಡರಕೇರಿ ಇತ್ಯಾದಿ. ಲಿಂಗಾಯತರು, ಮಾಂಸಾಹಾರ ತೆಗೆದುಕೊಳ್ಳುವ ಜನರಕೇರಿಯನ್ನು **ಕಾಟಿಗ್ಗೇರಿ** ಕಟುಗರಕೇರಿ ಎಂದೂ ಕರೆಯುತ್ತಾರೆ. ಸಂಭಾಷಣೆಯಲ್ಲಿ **ಆಚೆಕೇರಿ, ಈಚೆಕೇರಿ, ಹಿಂದಲಕೇರಿ, ಮುಂದಲಕೇರಿ, ನಡೋಕೇರಿ, ಕಡೇಕೇರಿ** ಎಂದು ಬಳಿಸುತ್ತಾರೆ.

**ಹೊಳೆ :**

ಊರಿನ ಸುತ್ತ ಇರುವ ಕೆರೆ, ಕಟ್ಟೆ. ಹೊಂಡ, ಬಾವಿಗಳಂತೆ 'ಹೊಳೆ' ಕೂಡ ಹೇಗೆ ಆ ಗ್ರಾಮದ ಬದುಕಿನ ಅವಿಭಾಜ್ಯ ಅಂಗವಾಗಿ ಬೆರತಿದೆ ಎಂಬುವನ್ನು ನೋಡಬಹುದು. ನೀರು ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಒಂದು. ಕುಮುದ್ವತಿ ನದಿ ಹಿತ್ತಲದ ಪೂರ್ವದ ಗಡಿಯಿಂದ ಪ್ರಾರಂಭವಾಗಿ ಪಶ್ಚಿಮಾಭಿಮುಖವಾಗಿ ಹರಿದು ಹೋಗಿದೆ. ಆ ಊರಿನ ವಿಸ್ತಾರವಾದ ಪ್ರದೇಶದ ಬೇರೆಬೇರೆ ಸ್ಥಳಗಳಲ್ಲಿ ನದಿಯನ್ನು ಬಳಸಿಕೊಂಡಿದ್ದಾರೆ. ಅಲ್ಲದೇ ಆ ಸ್ಥಳಗಳಿಗೆಲ್ಲ ಬೇರೆ ಬೇರೆ ಹೆಸರುಗಳನ್ನಿಟ್ಟಿದ್ದಾರೆ ಕ್ರಮವಾಗಿ ಈ ರೀತಿ ಹೆಸರಿಸಲಾಗಿದೆ. **ಬಾರೆಮರದ ಹೊಳೆ** (ಬಾರೆ ಹಣ್ಣಿನ ಮರವಿರುವ ಜಾಗ) **ಕಲ್ಲುಹೊಳೆ** (ಕಲ್ಲುಗಳು ಹೆಚ್ಚಿಗೆ ಇರುವ ಜಾಗ) **ಯರೇಬೈಲು** (ಯರೇಮಣ್ಣಿನ ಹೊಲಗಳ ಮಧ್ಯೆ ಹೊಳೆ ಹರಿದಿದೆ) **ಚೆನ್ನಿಹೊಳೆ** (ಹಿಂದೆ ಚೆನ್ನಯ್ಯನೆಂಬುವನು ಹೊಳೆಯ ದಡದಲ್ಲಿ ವಾಸಿಸುತಿದ್ದನಂತೆ) **ಮುಟ್ಟಿಹೊಳೆ** (ಕಡಿದಾದ ಪ್ರದೇಶ) **ಪಾಂಡುವೀರಣ್ಣನಹೊಳೆ** (ಪಾಂಡವರು ಅಲ್ಲಿ ಊಟ ಮಾಡಿದರೆಂದು ನಂಬಿಕೆ ಇದೆ) **ಅಗಸರಹೊಳೆ** (ಅಗಸರು ಬಟ್ಟೆ ತೊಳೆಯುವ ಜಾಗ) **ಹರಗೋಲುಹೊಳೆ। ದೋಣಿಹೊಳೆ**(ಅಲ್ಲಿ ಮೊದಲು ದೋಣಿಯಿಂದ ಹೊಳೆದಾಟುತ್ತಿದ್ದ ಜಾಗ) **ಬೋರುಗಲ್ಲಹೊಳೆ** (ಕಲ್ಲಿನಬಂಡೆಗಳಮೇಲೆ ನೀರು ಹರಿಯುವಾಗ ನೀರು ಬೋರುಗುಡುತ್ತದೆ) **ಕಲಕೊಪ್ಪದಹೊಳೆ, ಗಬ್ಬೂರುಹೊಳೆ** (ಹಿಂದೆ ಈ ಊರುಗಳು ಅಲ್ಲಿದ್ದಿರಬಹುದು. ಮೇಲೆ ಹೆಸರಿಸಿದ ಸ್ಥಳನಾಮಗಳು ಒಂದೆ ನದಿಯು ಬೇರೆ ಬೇರೆ ಜಾಗಕ್ಕೆ ಕರೆಯಲ್ಪಡುತ್ತಿರುವುದು, ಅದರೊಡನೆ ಆ ಊರಿನ ಜನಗಳಿಗಿ

ರುವ ಗಾಢವಾದ ಸಂಬಂಧವನ್ನು ಸೂಚಿಸುತ್ತದೆ. ಈ ಹೆಸರುಗಳು ಆ ಸ್ಥಳದ ನಿರ್ದೇಶನಗಳಾಗಿ ಆ ಜನಗಳ ಭಾವಕೋಶದಲ್ಲಿ ನೆಲಸಿವೆ.

**ಬಾವಿ :**

ಊರಿನಲ್ಲಿರುವ ಸಾರ್ವಜನಿಕ ಹಾಗೂ ಖಾಸಗಿ ಬಾವಿಗಳನ್ನು ದೇವರ, ವ್ಯಕ್ತಿಯ ಅಥವ ಜಾತಿ, ಮನೆತನದ ಹೆಸರಿನಿಂದ ಗುರುತಿಸುವ ವಾಡಿಕೆ ಇದೆ. **ಮಾರಿ ಗುಡಿಬಾವಿ** ಹಾಗೂ **ಸಿದ್ಧಪ್ಪನಗುಡಿಬಾವಿ** ದೇವರ ಗುಡಿಯ ಹತ್ತಿರ ಇರುವ ಬಾವಿ ಗಳಾದರೆ, **ಈರಪ್ಪನಬಾವಿ** ಆ ವ್ಯಕ್ತಿಯ ಒಡೆತನಕ್ಕೆ ಸೇರಿದ ಖಾಸಗಿ ಬಾವಿ ಯಾಗಿದೆ. **ಆಳಿದಳ್ಳೇರ ಬಾವಿ, ಗೌಡ್ರಬಾವಿ** ಸಹ ಆಯಾ ಮನೆಗಳ ಹೆಸರನ್ನು ಹೊಂದಿದ ಹೆಸರುಗಳಾಗಿವೆ. **ನಾದರಬಾವಿ, ದಾಸರಬಾವಿ** ಅಲ್ಲಿ ವಾಸಿಸುವ ಜಾತಿಯ ಜನಗಳು ಬಳಸುವ ಬಾವಿಗಳಾಗಿವೆ.

**ಕೆರೆ :**

ಕೆರೆಗಳು, ಹೊಂಡ, ಕಟ್ಟೆಗಳಿಗಿಂತ ದೊಡ್ಡವಾಗಿರುತ್ತವೆ. ಅಲ್ಲದೇ ಹೆಚ್ಚು ಭೂಮಿಗೆ ನೀರುಣಿಸುವ ಸಾಮರ್ಥ್ಯ ಪಡೆದಿದ್ದು, ಕೆಲವು ಕೆರೆಗಳಿಗೆ ನದಿಯಿಂದ ನಾಲಾದ ಮೂಲಕ ನೀರು ಬರುವ ವ್ಯವಸ್ಥೆ ಇರುತ್ತದೆ. ಹಿತ್ತಲದಲ್ಲಿ ೧೩ ಕೆರೆಗಳಿವೆ. ಇವುಗಳು ಊರಿನ ಹೆಸರು. ಹಾಗೂ ಅಲ್ಲಿಯ ಭೂಗುಣಗಳ ಹೆಸರನ್ನೊಳಗೊಂಡಿವೆ. ಉದಾಹರಣೆಗೆ : **ಕೊಪ್ಪದಕೆರೆ, ಮಾಡ್ರವಳ್ಳಿಕೆರೆ. ನೇರಲಹಳ್ಳಿಕೆರೆ, ಮಳಿ ಕೊಪ್ಪದಕೆರೆ ಕೋಗಿಲಗೆರೆ, ಬೀರನಕೆರೆ, ಜಡ್ಡಿನಕೆರೆ, ಕೆಂಗಲಗೆರೆ** ಇತ್ಯಾದಿ.

**ಕಟ್ಟೆ :**

ಕಟ್ಟೆಗಳು ಕೆರೆಗಳಿಗಿಂತ ಗಾತ್ರದಲ್ಲಿ ಚಿಕ್ಕವಾಗಿದ್ದು ಕಡಿಮೆ ಭೂಮಿಗೆ ನೀರುಣಿ ಸುವ ಸಾಮರ್ಥ್ಯಪಡೆದಿರುತ್ತವೆ. ಇವುಗಳ ಒಟ್ಟು ಸಂಖ್ಯೆ ೧೪. ಈ ಕಟ್ಟೆಗಳ ಹೆಸರು ಅಲ್ಲಿಯ ಭೂಪ್ರದೇಶ, ಅಕ್ಕಪಕ್ಕದಗುಡ್ಡಗಳ ಹೆಸರು, **ವ್ಯಕ್ತಿಯಹೆಸರು** ದೈವದ ಹೆಸರು, ಪ್ರಾಣಿಯ ಹೆಸರು, ಊರಿನಹೆಸರನ್ನೊಳಗೊಂಡಿರುತ್ತವೆ. ಉದಾ ಹರಣೆಗೆ : **ಜಾಲಿಕಟ್ಟೆ, ಆರಂಭೀಸರದಕಟ್ಟೆ ಬೀರನಕಟ್ಟೆ, ನಾಗನಕಟ್ಟೆ, ಮಾಸ್ತಿಕಟ್ಟೆ, ಕಡವನಕಟ್ಟೆ ಮಳಕಟ್ಟೆ** ಮರಳಕಟ್ಟೆ ಮುಂತಾದವು.

**ಹೊಂಡ :**

ಹೊಂಡಗಳು ಊರಿನ ಹಾಳು ನೀರು ಶೇಖರವಾಗುವ ಜಾಗಗಳಾಗಿವೆ. ಇವು ಕೆರೆ, ಕಟ್ಟೆಗಳಿಗಿಂತ ಚಿಕ್ಕದಾಗಿರುತ್ತವೆ. ಇವುಗಳ ಸಂಖ್ಯೆ ೭. ಈಹೊಂಡಗಳು ದೇವರ ಹೆಸರು. ಪ್ರಾಣಿಯ ಹೆಸರು. ಗೊಬ್ಬರ, ತೊಗಲು, ಮುಂತಾದ ಹೆಸರನ್ನೊಳ

ಗೊಂಡಿರುತ್ತದೆ. ಉದಾಹರಣೆಗೆ ಬಸವನಹೊಂಡ, ಆನೆಹೊಂಡ (ಆನೆಗಳನ್ನು ಕೆಡವಿ ಹಿಡಿಯುತ್ತಿದ್ದ ಜಾಗ) ಚೌಡಿಹೊಂಡ, ನಾರಿಹೊಂಡ, ಗೊಬ್ಬರದಹೊಂಡ ತುಗಲೂಹೊಂಡ, ಹಳ್ಳಿಹೊಂಡ, ಹಾಳುಹೊಂಡ.

**ಹಳ್ಳ :**

ಹಳ್ಳಗಳು ಕೆರೆಗಳಿಗಿಂತ ದೊಡ್ಡ ಪ್ರಮಾಣದಲ್ಲಿರುತ್ತವೆ. ಇವು ಸಾಮಾನ್ಯವಾಗಿ ಕಾಡಿನ ಮಧ್ಯೆ ಇರುತ್ತವೆ. ಊರಿಗೆ ಸೇರಿಕೊಂಡಿರುವಂತೆ ಇರುವ ಕಾಡಿನ ಮಧ್ಯೆ ಮಳೆ ಜೋರಾಗಿ ಬಂದಾಗ ಗುಡ್ಡಗಳ ಇಳಿಜಾರಿನ ಮೂಲಕ ನೀರು ಹರಿದು ನದಿಗಳಿಗೆ ಸೇರುತ್ತದೆ. ಸಾಮಾನ್ಯವಾಗಿ ಈ ಹಳ್ಳಗಳು ಎರಡು ಗುಡ್ಡಗಳ ಮಧ್ಯೆ ಹರಿಯುತ್ತವೆ. ಕೆಲವು ಹಳ್ಳಗಳಿಗೆ ಒಡ್ಡನ್ನು ನಿರ್ಮಿಸಲಾಗಿದೆ. ಹಳ್ಳಗಳು ದೈವ, ಪ್ರಾಕೃತಿಕ ಸಂಪತ್ತು, ಬೇಟೆಗಾರನ ಜಾಗ, ಮುಂತಾದ ಹೆಸರುಗಳನ್ನೊಳಗೊಂಡಿವೆ. ಉದಾಹರಣೆಗೆ ಬೆನಕನಹಳ್ಳ (ಬೆನಕ ದೇವಾಲಯದ ಹತ್ತಿರ ಇದೆ), ಕಟ್ಟೆಗೇಹಳ್ಳ, ಮಲೇಮತ್ತಿಹಳ್ಳ, ದೊಡ್ಡಹಳ್ಳ, ಬ್ಯಾಡನಹಳ್ಳ, ಇತ್ಯಾದಿ.

**ಹರ :**

ಹಳ್ಳಿಯ ಜನಗಳ ಪ್ರಧಾನ ವೃತ್ತಿ ಕೃಷಿಯಾದುದರಿಂದ, ಭೂಮಿಯನ್ನು ಬೇರೆ ಬೇರೆ ಭಾಗಗಳಾಗಿ ವಿಂಗಡಿಸುವ, ಅವನ್ನು ತಮ್ಮ ದಿನನಿತ್ಯದ ವ್ಯವಹಾರದಲ್ಲಿ ಹೆಸರಿಸುವ ಕಾರ್ಯ ನಡೆದಿರುತ್ತದೆ. ಪ್ರತಿಯೊಂದು ಹೆಸರೂ ಸಹ ಆ ಊರಿನ ಜನಗಳ ಭಾವಕೋಶದಲ್ಲಿ ಸೇರ್ಪಡೆಯಾಗಿರುತ್ತದೆ. ಹರ ಎಂಬುದು ವಿಸ್ತಾರವಾದ, ಕೃಷಿಭೂ ಪ್ರದೇಶ ಎನ್ನಬಹುದು. ಮಲೆನಾಡಿನ ಗದ್ದೆಗಳನ್ನು ಅವು ಹರಡಿಕೊಂಡಿರುವ ಭೂಪ್ರದೇಶವನ್ನು ಹರ ಎಂಬ ಹೆಸರಿನಿಂದಲೇ ಗುರುತಿಸುತ್ತಾರೆ. ಈ ಹರಗಳು ಕೆಲವು ವೇಳೆ ನೂರಾರು ಎಕರೆಗಿಂತ ಹೆಚ್ಚು ಭೂಪ್ರದೇಶವನ್ನೊಳಗೊಂಡಿರಬಹುದು. ಹರಗಳನ್ನು ಗುರುತಿಸುವಾಗ ಕೃಷಿಭೂಮಿಯ ವಿಶಿಷ್ಟಗುಣ, ಅಲ್ಲಿ ಬೆಳೆಯುವ ಮರಗಳು, ಅದಕ್ಕೆ ಸಂಬಂಧಿಸಿದಂತೆ ಇರುವ ಕೆರೆ, ಕಟ್ಟೆಗಳು ಅಥವ ಊರು ಮುಂತಾದವುಗಳನ್ನೊಳಗೊಂಡಿರುವುದು ವಾಡಿಕೆ. ಹಿತ್ತಲದಲ್ಲಿ ೧೪ ಹರಗಳಿವೆ. ಅವುಗಳೆಂದರೆ ಕಲ್‌ಗದ್ದೆಹರ, ಮೂಲೆಗದ್ದೆಹರ, ಕಾರಹರ (ಕಾರಲುಭೂಮಿ), ಮಳ್ಳಹರ (ಮರಳುಭೂಮಿ), ಬಸ್ಲಿಕೆರೆಹರ, ಬೆಂಡೆಕಟ್ಟೆಹರ, ಕುಂಬಾರಗುಂಡಿಹರ, ಹುಣಸೇಕೊಪ್ಪದಹರ, ಮುತ್ಲಹರ, ಬೀಳುಗದ್ದೆಹರ, ಉಂಬಳಿಗದ್ದೆಹರ, ಜಾಲಿಕಟ್ಟೆಹರ, ಕಲ್ಮಿಕ್ಕಿಹರ.

**ಪಾಲು :**

ತಂಭೂಮಿಯನ್ನು ಕೆಳಪಾಲು, ಖುಷ್ಕಿಭೂಮಿಯನ್ನು ಮೇಲುಪಾಲು, ಯರೆಭೂಮಿಯನ್ನು ಯರೆಪಾಲು ಎಂದು ಕರೆಯುತ್ತಾರೆ.

**ಗದ್ದೆ :**

ಗದ್ದೆ ಎಂಬುದು ನಿರಾವರಿ ಭೂಮಿಗೆ ಕರೆಯುವ ಹೆಸರು. ಗದ್ದೆಯಲ್ಲಿ ಸಾಮಾನ್ಯವಾಗಿ ಭತ್ತವನ್ನು ಬೆಳೆಯುತ್ತಾರೆ. ಇದು ಹರದಂತೆ ವಿಶಾಲವಾದ ಭೂ ಪ್ರದೇಶವಾಗಿರದೆ ಸಣ್ಣ ಪ್ರಮಾಣದ ಭೂಪ್ರದೇಶವನ್ನು ಸೂಚಿಸುತ್ತದೆ. ಸಾಮಾನ್ಯವಾಗಿ ವ್ಯಕ್ತಿಯ ಒಡತನಕ್ಕೆ ಸೇರಿದ ಗದ್ದೆಯನ್ನು ಬೇರೆ ಬೇರೆ ಹೆಸರುಗಳಿಂದ ಗುರುತಿಸುತ್ತಾರೆ. ಭೂಮಿಯಗುಣ, ಅಲ್ಲಿರುವ ದೈವ, ಅದರ ಒಡೆಯನ ಹೆಸರು. ಮಾಜಿ ಒಡೆಯನ ಹೆಸರು ಮುಂತಾದವನ್ನು ಒಳಗೊಂಡಿರುತ್ತದೆ. ಉದಾಹರಣೆಗೆ, **ತೆಗ್ಗಿನ ಗದ್ದೆ, ಒಡ್ಡಿನಗದ್ದೆ, ಮೂಲೆಗದ್ದೆ, ಕುಣೆಗದ್ದೆ, ಸರದಗದ್ದೆ, ತೋಟದಗದ್ದೆ, ಶಾನೇರಗದ್ದೆ, ಗೌಡ್ರಗದ್ದೆ, ರಜಾಕ್‌ಸಾಬ್ರಗದ್ದೆ, ದೇವರಗದ್ದೆ, ಉಂಬಳಿಗದ್ದೆ, ಈರಪ್ಪನಮಠದಗದ್ದೆ** (ವಿರಕ್ತಮಠದಗದ್ದೆ), **ಸಂಘದಗದ್ದೆ, ಸ್ಕೂಲ್‌ಗದ್ದೆ, ಭೂತನಗದ್ದೆ, ಚೌಡಿಗದ್ದೆ** ಇತ್ಯಾದಿ.

**ದಳೆ :**

ಹಾಳಿಗಳ ಪಟ್ಟಿಗೆ ದಳೆ ಎನ್ನುತ್ತಾರೆ. ಒಂದಾದ ಮೇಲೆ ಒಂದರಂತೆ ನೇರವಾಗಿ ಜೋಡಿಸಿದಂತೆ ಇರುವ ಹಾಳೆಗಳ ಪಟ್ಟಿಗೆ ದಳೆ ಎನ್ನಬಹುದು. **ದೇವರದಳೆ** ಎನ್ನುವ ಹೆಸರು ದೇವಸ್ಥಾನಕ್ಕ ಸೇರಿದ ಭೂಮಿಯನ್ನು ಸೂಚಿಸುತ್ತದೆ.

**ಹಾಳೆ ~ ಹಾಳಿ :**

ನಾಲ್ಕು ಬದುಗಳನ್ನೊಳಗೊಂಡ ತುಂಡು ಭೂಮಿಗೆ ಹಾಳೆ ~ ಹಾಳಿ ಎಂದು ಕರೆಯುತ್ತಾರೆ. ನೀರು ನಿಲ್ಲಲು ಚೌಕಾಕೃತಿಯಲ್ಲಿ ಅಥವಾ ಆಯತಾಕೃತಿಯಲ್ಲಿ ಮಣ್ಣಿನ ಒಡ್ಡನ್ನು ಹಾಕಿರುತ್ತಾರೆ. ಎತ್ತರದ ಹಾಳಿಯನ್ನು **ಮೇವಾಳಿ** (ಮೇಲಿನಹಾಳಿ), ಕೆಳಗಿನ ಹಾಳಿಯನ್ನು **ಕಿಪ್ಪಾಳಿ** ಎನ್ನುತ್ತಾರೆ.

**ಸರ :**

**ಸರ** ಎನ್ನುವುದು ತಗ್ಗಾದ ಪ್ರದೇಶದಲ್ಲಿರುವ ಭೂಮಿಯ ಹೆಸರು. ಸಾಮಾನ್ಯವಾಗಿ ಯಾವಾಗಲೂ ಇದಕ್ಕೆ ನೀರಿನಸೌಕರ್ಯವಿರುವುದರಿಂದ ನೆಲ ಜೌಗಾಗಿರುತ್ತದೆ. ಇದನ್ನು ವ್ಯಕ್ತಿಯ ಹೆಸರಿನಿಂದಲೂ ಕರೆಯುತ್ತಾರೆ. ಉದಾಹರಣೆಗೆ **ಸಣ್ಣೀರಪ್ಪನ ಸರ**

**ಬದ :**

ಹಾಳೆಯ ಅಂಚಿನಲ್ಲಿ ಹಾಕಿದ ಮಣ್ಣಿನ ಒಡ್ಡಿಗೆ **ಬದು** ಎನ್ನುತ್ತಾರೆ. ನೀರು ಹಾಳಿಯಲ್ಲಿ ನಿಲ್ಲಲು ಅನುಕೂಲವಾಗುವುದರ ಜೊತೆಗೆ ಗದ್ದೆಯಲ್ಲಿ ಓಡಾಡಲು ಈ **ಬದು** ಉಪಯೋಗವಾಗುತ್ತದೆ. ಕಿರಿಯ ಬದುವನ್ನು **ಕಿರಿಬದ** ಎಂದೂ ದೊಡ್ಡ ಬದುವನ್ನು **ಹೆಬ್ಬದ** ಎಂದೂ ಕರೆಯುತ್ತಾರೆ.

**ಹಂಕಲು :**

ರಾಗಿ ಹಾಗೂ ಶೇಂಗ, ಮೆಣಸಿನಕಾಯಿ, ಹುರಳಿಯನ್ನು ಬೆಳೆಯುವ, ನೀರಿನ ಸೌಕರ್ಯವಿಲ್ಲದೇ ಮಳೆಯ ಆಶ್ರಯದಿಂದಲೇ ಫಸಲನ್ನು ಬೆಳೆಯುವ ಭೂಮಿ **ಹಂಕಲು.** ಮನೆತನದ ಹೆಸರು ವ್ಯಕ್ತಿಯ ಹೆಸರಿನಿಂದ ಇದು ಕರೆಯಲ್ಪಡುತ್ತದೆ. ಉದಾಹರಣೆಗೆ : **ಹುಚ್ಚೀರಪ್ಪನಹಂಕಲು, ಯತ್ನಳ್ಳೀರಹಂಕಲು, ಪಚ್ಚಪ್ಪನ ಹಂಕಲು** ಇತ್ಯಾದಿ.

**ಬೀಳು :**

ಖಾಸಗೀ ಒಡೆತನಕ್ಕೆಸೇರಿದ ದನಕರುಗಳು ಮೇಯುವ, ಹುಲ್ಲು ಬೆಳೆಯುವ ಭೂಮಿಯನ್ನು **ಬೀಳು** ಎಂದು ಕರೆಯುತ್ತಾರೆ. ಉದಾಹರಣೆಗೆ : **ಗೌಡ್ರಬೀಳು, ಅಯ್ನೋರ್ ಬೀಳು, ತರಂದೋರ್‌ಬೀಳು** ಇತ್ಯಾದಿ.

**ಮಟ್ಟಿ :**

ಊರಿನ ಪಶ್ಚಿಮಗಡಿಯಲ್ಲಿ ಹಬ್ಬಿರುವ ಗುಡ್ಡಗಳ ಸಾಲನ್ನು ವಿವಿಧ ಹೆಸರುಗಳಿಂದ ಗುರುತಿಸಲಾಗುತ್ತದೆ. ಊರಿನ ಜನಗಳು ಗುಡ್ಡಗಳೊಡನೆ ನಿಕಟಸಂಬಂಧ ಹೊಂದಿದ್ದಾರೆ. ಕಟ್ಟಿಗೆ. ಮರದಮುಟ್ಟು, ಕವಳೆ, ಪರಿಗಿ, ಸುಂಗಲಡಕ ತುಮ್ರಿ, ಗೇರುಹಣ್ಣುಗಳು, ಜೇನು ವಿಪುಲವಾಗಿ ದೊರೆಯುವುದರಿಂದ ಜನಗಳು ಗುಡ್ಡಗಳಿಗೆ ಪದೇಪದೇ ಹೋಗುತ್ತಿರುತ್ತಾರೆ. ಈ ಗುಡ್ಡಗಳನ್ನು ಮಟ್ಟಿ ಎಂದು ಕರೆಯುತ್ತಾರೆ. ದಟ್ಟವಾದ ಅರಣ್ಯದಿಂದ ಕೂಡಿದ ಈ ಮಟ್ಟಿಗಳನ್ನು ವಿಂಗಡಿಸಿ ಬೇರೆ ಬೇರೆ ಹೆಸರುಗಳಿಂದ ಗುರುತಿಸುವುದು ಮತ್ತು ಊರಿನ ಎಲ್ಲರಿಗೂ ಆ ಹೆಸರುಗಳು ಚಿರಪರಿಚಿತವಾಗಿರುವುದು ತಿಳಿದುಬರುತ್ತದೆ. ಈ ಮಟ್ಟಿಗಳೂ ಸಹ ಇತರ ನಾಮಗಳಂತೆ, ದೇವರು, ಕಾಡುಪ್ರಾಣಿಗಳಹೆಸರು, ಪ್ರಾಣಿಗಳ ಆಕಾರ. ಕೆರೆಯಹೆಸರು, ಇತ್ಯಾದಿಗಳನ್ನೊಳಗೊಂಡಿರುವುದು ಕಂಡು ಬರುತ್ತವೆ. ಉದಾಹರಣೆಗೆ ರಾಮನಮಟ್ಟಿ, ಬೆನಕನಮಟ್ಟಿ, ಗುಲಗಂಜಿರಾಯನಮಟ್ಟಿ, ಕಲ್ದೀಮಟ್ಟಿ, ಕೋಣನತಲೆಮಟ್ಟಿ (ಕೋಣನತಲೆ ಆಕಾರದ ಮಟ್ಟಿ) ಎಮ್ಮೆಮಟ್ಟಿ, ಬೀರನಕೆರೆಮಟ್ಟಿ, ಸುಡುಗಾಡ ಮಟ್ಟಿ, ಹುಣಸೇಮಟ್ಟಿ, ಕಲ್‌ಮಟ್ಟಿ ಇತ್ಯಾದಿ.

**ಮರಡಿ :**

ಸಣ್ಣ ಗುಡ್ಡಗಳನ್ನು ಮರಡಿ ಎಂದು ಕರೆಯುತ್ತಾರೆ. ಸಂಗಮೇಶ್ವರ ದೇವಾಲಯವಿರುವ ಗುಡ್ಡವನ್ನು **ಅಯ್ಯನಮರಡಿ** ಎಂದು ಕರೆಯುತ್ತಾರೆ.

**ಗುಂಡಿ :**

ತಗ್ಗುಪ್ರದೇಶವನ್ನು ಗುಂಡಿ ಎಂದು ಕರೆಯುತ್ತಾರೆ. ಊರಿನ ಹತ್ತಿರವಿರುವ

ಕೆಂಗಲುಮಣ್ಣಿನ ತಗ್ಗುಪ್ರದೇಶವನ್ನು **ಗೊಚ್ಚಿನಗುಂಡಿ,** ಕುಂಬಾರರು ಮಣ್ಣು ಒಯ್ಯುವ ಜಾಗವನ್ನು **ಕುಂಬಾರಗುಂಡಿ,** ಹಾಗೂ ಸಣ್ಣಸಣ್ಣ ಕಂದಕಗಳಿರುವ ಪ್ರದೇಶವನ್ನು **ಕಪ್ಸೆಗುಂಡಿ** ಎಂದು ಹೆಸರಿಸುತ್ತಾರೆ.

**ಬಯಲು :**

ಹರಗಳಂತಹ ವಿಸ್ತಾರವಾದ ಕೃಷಿ ಭೂಪ್ರದೇಶವನ್ನು **ಬಯಲು** ಎಂದು ಗುರುತಿಸುತ್ತಾರೆ, ಮಾಸ್ತಿಗುಡಿ ಇರುವ ಬಯಲು ಪ್ರದೇಶವನ್ನು **ಮಾಸ್ತಿಬಯಲು** ಎಂದೂ, ಆನೆಗಳು ಹಿಂದೆ ವಾಸಿಸುತಿದ್ದ ಜಾಗವನ್ನು ಈಗ **ಆನಿಗನಬಯಲು** ಎಂದೂ ಗುರುತಿಸುತ್ತಾರೆ.

**ಅಗಸಿಬಾಗಿಲು :**

ಊರಿನ ಮಧ್ಯಭಾಗ ಅಥವ ಆಯುಕಟ್ಟಿನ ಜಾಗವನ್ನು **ಅಗಸಿಬಾಗಿಲು** ಎಂದು ಕರೆಯುತ್ತಾರೆ.

**ಹಾಳುಹಿತ್ತಿಲು :**

ಊರಿನ ಕೆಲವು ಭಾಗ ಹಾಳುಬಿದ್ದಿದೆ. ಅದನ್ನು **ಹಾಳುಹಿತ್ತಲು** ಎಂದು ಗುರುತಿಸುತ್ತಾರೆ. ಹಿಂದೆ ಅಲ್ಲಿ ಮನೆಗಳಿದ್ದವೆಂಬುದು ಅಲ್ಲಿರುವ ಹಂಚು, ನೆಲಗಟ್ಟಿನಿಂದ ತಿಳಿದು ಬರುತ್ತದೆ.

**ಏರಿ :**

ನಾಲಾ ಮತ್ತು ಕೆರೆಯ ಅಕ್ಕಪಕ್ಕದ ಮಣ್ಣಿನ ಒಡ್ಡು ಮತ್ತು ಹಾದಿಯನ್ನು **ನಾಲಾದೇರಿ, ಕೆರೆ ಏರಿ** ಎಂದು ಗುರುತಿಸುತ್ತಾರೆ.

**ಕೆರೆಕೋಡಿ :**

ಕೆರೆಯು ನಿರ್ದಿಷ್ಟ ಮಟ್ಟಕ್ಕೆ ತುಂಬಿದ ಮೇಲೆ ಹೆಚ್ಚಾದ ನೀರು ಕೋಡಿಯಿಂದ ಕೆಳಕ್ಕೆ ಹರಿದು ಹೋಗುವ ವ್ಯವಸ್ಥೆ ಇದೆ. ಅದನ್ನೇ ಕೆರೆಕೋಡಿ ಎಂದು ಕರೆಯುತ್ತಾರೆ.

**ಬೇಚರ ಗ್ರಾಮಗಳು :**

ನಮ್ಮೂರಿನ ಕೆಲವು ನಿರ್ವಸತಿಯ ಸ್ಥಳಗಳಿಗೆ ಊರಿನ ಹೆಸರುಗಳಿವೆ. ಇವು ಊರಿನ ಗಡಿಯಲ್ಲಿ ಅಲ್ಲಲ್ಲಿ ಇಂದಿಗೂ ಕರೆಯಲ್ಪಡುವುದು ಕಂಡುಬರುತ್ತದೆ. ಉದಾಹರಣೆಗೆ **ಮೂಡ್ರವಳ್ಳಿ** ಎನ್ನುವ ಹೆಸರು **ಮೂಡ್ರಳ್ಳಿಕೆರೆ** ಎನ್ನುವ ಹೆಸರಾಗಿ ಉಳಿದುಕೊಂಡಿದೆ. ಅಲ್ಲದೇ **ದೀಗಳ್ಳಿ, ಬಿಜಗೆರೆ, ಮಳಕೊಪ್ಪ, ಒಡಗಟ್ಟೆ, ಆಂಬೈಲು, ನೇರತೀಹಳ್ಳಿ, ಸನ್ಯಾಸಿಕೊಪ್ಪ** ಮುಂತಾದ ಹೆಸರುಗಳು, ಕೃಷಿ ಹಾಗೂ ಕೃಷಿಯೇತರ ಭೂಮಿಗಳ ಹೆಸರಾಗಿ ಇಂದಿಗೂ ಉಳಿದು ಕೊಂಡಿರುವುದು ಕಂಡುಬರುತ್ತದೆ. ಇವು ಊರಿನ ಗ್ರಾಮಪಂಚಾಯಿತಿ ದಾಖಲೆಗಳಲ್ಲಿ **ಬೇಚರ ಗ್ರಾಮಗಳು** ಎಂಬ

ಹೆಸರಿನಿಂದ ದಾಖಲಾಗಿವೆ, ಕೆಲವು ದಾಖಲಾಗಿರದೆ ಜನಗಳ ವ್ಯವಹಾರದಲ್ಲಿ ಮಾತ್ರ ಉಳಿದುಕೊಂಡಿವೆ.

ಈ ಲೇಖನದಲ್ಲಿ ಒಂದೇ ಊರಿನಲ್ಲಿ ಬಳಕೆಯಾಗುತ್ತಿರುವ ವಿವಿಧ ಸ್ಥಳನಾಮಗಳನ್ನು ಗುರುತಿಸಲಾಗಿದೆ. ಗ್ರಾಮನಾಮದಂತೆಯೇ ಗ್ರಾಮದ ಒಳಗೆ ಹಾಗೂ ಅಕ್ಕಪಕ್ಕದಲ್ಲಿರುವ ವಸತಿ ಹಾಗೂ ನಿರ್ವಸತಿಯ ಸ್ಥಳನಾಮಗಳು ಗ್ರಾಮಜೀವನದ ಅವಶ್ಯಕ ಭಾಗಗಳಾಗಿ ಹೇಗೆ ಜನರ ಭಾವಕೋಶದಲ್ಲಿ ಸದಾ ನೆಲಸಿರುತ್ತವೆ ಎಂಬುದನ್ನು ನೋಡಬಹುದಾಗಿದೆ. ಒಂದೇ ಊರಿನ ಒಳಗೆ ಇನ್ನೂರಕ್ಕೂ ಅಧಿಕ ಸ್ಥಳನಾಮಗಳಿವೆ ಎಂಬುದು ಆಶ್ಚರ್ಯವನ್ನುಂಟು ಮಾಡುವ ಸಂಗತಿಯಾಗಿದೆ. ಸ್ಥಳನಾಮವನ್ನು ಅಧ್ಯಯನ ಮಾಡುವವರಿಗೆ ಈ ರೀತಿಯ ಸಾಮಗ್ರಿಯನ್ನೊದಗಿಸುವುದರಿಂದ, ಇಲ್ಲಿ ಹೆಸರಿಡುವ ಕ್ರಿಯೆ ಹೇಗೆ ಕೆಲಸಮಾಡುತ್ತದೆ. ಜನಗಳು ಹೆಸರನ್ನಿಡುವಾಗ ಏನನ್ನು ಆಧಾರವಾಗಿ ಇಟ್ಟುಕೊಳ್ಳುತ್ತಾರೆ. ಅವರ ಸೂಕ್ಷ್ಮದೃಷ್ಟಿ, ಸ್ಥಳಗಳ ವರ್ಗೀಕರಣದಲ್ಲಿ ಹೇಗೆ ಕೆಲಸಮಾಡುತ್ತದೆ ಎಂಬುದು ತಿಳಿಯುತ್ತದೆ. ಆ ಊರಿನ ಹೆಸರಿನಷ್ಟೇ ಆ ಊರಿನ ಒಂದೊಂದು ಭಾಗದ ಹೆಸರೂ ಅವರ ದಿನನಿತ್ಯದ ವ್ಯವಹಾರದಲ್ಲಿ ಮುಖ್ಯವಾಗಿರುತ್ತವೆ. ಬೇಚರ ಗ್ರಾಮಗಳು ಹೇಗೆ ಅವು ಒಂದು ಕಾಲದಲ್ಲಿ ವಸತಿಯ ಸ್ಥಳಗಳಾಗಿದ್ದು ಈಗಲೂ ನಿರ್ವಸತಿಯ ಸ್ಥಳಗಳ ಹೆಸರುಗಳಾಗಿ ಬಳಕೆಗೊಳ್ಳುತ್ತಾ ಬಂದಿವೆ, ಎಂಬುದನ್ನು ಗಮನಿಸಿದರೆ ಈ ಹೆಸರುಗಳು ಎಷ್ಟು ಭದ್ರವಾಗಿ ನೆಲೆಯೂರಿರುತ್ತವೆ ಎಂಬುದು ತಿಳಿಯುತ್ತದೆ. ಈ ಬೇಚರ ಗ್ರಾಮದ ಹೆಸರುಗಳು ಸರ್ಕಾರಿ ದಾಖಲೆಯಲ್ಲಿ ಸಿಗದೇ ಆ ಊರಿನಲ್ಲಿ ವಾಸಿಸುವ ಜನಗಳ ಭಾವಕೋಶದಲ್ಲಿ ಮಾತ್ರ ಸ್ಥಾನ ಪಡೆದಿವೆ. ಇವುಗಳನ್ನು ದಾಖಲಿಸುವುದು, ಅಭ್ಯಸಿಸುವುದು ಮುಖ್ಯವಾಗಿದೆ. ಸ್ಥಳನಾಮಗಳ ಸಾಮಾನ್ಯ ಸಿದ್ಧಾಂತಗಳನ್ನು ನಿರ್ಮಿಸುವಲ್ಲಿ ಈ ಅಧ್ಯಯನ ಪೂರಕ ಪ್ರಯತ್ನವೆಂದು ನಾನು ನಂಬಿದ್ದೇನೆ. ಇಂತಹ ಪ್ರಯತ್ನಗಳು ಬೇರೆ ಬೇರೆ ಭಾಗಗಳಲ್ಲಿ ನಡೆದರೆ ಅದರಿಂದ ವಿಪುಲ ಸಾಮಗ್ರಿ ದೊರೆಯುತ್ತದೆ, ಹಾಗೂ ಮುಂದೆ ಅವುಗಳ ವಿಶ್ಲೇಷಣೆಯಲ್ಲಿ ತೊಡಗುವವರಿಗೆ ಅನುಕೂಲವಾಗುತ್ತದೆ.

●

# ಅನುಬಂಧ

1. ಬೇಚರಗ್ರಾಮಗಳು
   ದೀಗಳ್ಳಿ
   ಬಿಜಗೆರೆ
   ಕೊಪ್ಪದಕೆರೆ
   ಮಾಸ್ತಿಬಯಲು
   ಒಡಗಟ್ಟೆ
   ಅಡಗಂಟಿ
   ಆಂಬಯಲುಕೆರೆ
   ಮಾಡ್ರವಳ್ಳಿ
   ಮಳಕೊಪ್ಪ
   ಸನ್ಯಾಸಿಕೊಪ್ಪ
   ನೇರಳೇಹಳ್ಳಿ
2. ಹರಗಳು
   ಕಲ್ಮಿಕ್ಕಿಹರ
   ಜಾಲಿಕಟ್ಟೆಹರ
   ಮಳಕಟ್ಟೆಹರ
   ಬೆಂಡೆಕಟ್ಟೆಹರ
   ಕಾರಹರ
   ಕಲ್‌ಗದ್ದೆಹರ
   ಮರಳಹರ
   ಬಸ್ಲಿಕೆರೆಹರ
   ಮುತ್ಲಹರ
   ಮೂಲೆಗದ್ದೆಹರ
   ಬೀಳುಗದ್ದೆಹರ
   ಉಂಬಳಿಗದ್ದೆಹರ
   ಕುಂಬಾರಗುಂಡಿಹರ
   ಹುಣಸೇಕೊಪ್ಪದಹರ
3, ಸರ
   ಸರ
   ಸಣ್ಣೀರಪ್ಪನಸರ
4. ಗದ್ದೆ
   ತೆಗ್ಗಿನಗದ್ದೆ
   ಮೂಲೆಗದ್ದೆ
   ಕುಣೆಗದ್ದೆ
   ಒಡ್ಡಿನಗದ್ದೆ
   ತೋಟದಗದ್ದೆ
   ಭೂತನಗದ್ದೆ
   ಸರದಗದ್ದೆ
   ಉಂಬಳಿಗದ್ದೆ
   ಚೌಡಿಗದ್ದೆ
   ಸಂಘದಗದ್ದೆ
   ದೇವರಗದ್ದೆ
   ಸ್ಕೂಲ್‌ಗದ್ದೆ
   ಶಾನೇರಗದ್ದೆ
   ಬಾವೇರಗದ್ದೆ
   ಗೌಡರಗದ್ದೆ
   ಈರಪ್ಪಮಠದಗದ್ದೆ
   ರಜಾಕ್‌ಸಾಬ್ರುಗದ್ದೆ
5. ಪಾಲು
   ಕೆಳಪಾಲು
   ಮೇಲ್‌ಪಾಲು
   ಯರೆಪಾಲು
6 ದಳಿ
   ದೇವರದಳಿ
7. ಹಾಳಿ
   ಕಿಪ್ಪಾಳಿ
   ಮೇವಾಳಿ
8. ಬದ
   ಕಿರಿಬದ
   ಹೆಬ್ಬದ

9. ಹಂಕಲು

ಗೊಗ್ಗರಿ ಹಂಕಲು
ಹುಳ್ಳೀಹಂಕಲು
ಹುಚ್ಚೀರಪ್ಪನಹಂಕಲು
ಯತ್ನಳ್ಳೀರಹಂಕಲು
ಪಚ್ಚಪ್ಪನಹಂಕಲು

10. ಬೀಳು

ಅಯ್ನೋರ್‌ಬೀಳು
ಗೌಡ್ರಬೀಳು
ತರಂದೋರ್‌ಬೀಳು

11. ಗುಂಡಿ

ಗೊಚ್ಚಿನಗುಂಡಿ
ಕಪ್ಪೆಗುಂಡಿ
ಕುಂಬಾರಗುಂಡಿ

12. ಕೇರಿಗಳು

ಕಾಟಿಗ್ಗೇರಿ
ಬಾಳೇರಕೇರಿ
ಕುರುಬರಕೇರಿ
ಸಾಬರಕೇರಿ
ಮಾದರಕೇರಿ
ತಳವಾರಕೇರಿ
ಕಬೂಲ್‌ಸಾಬ್ರಕೇರಿ
ಗೌಡರಕೇರಿ
ಸರಾಯುಗಾರರಕೇರಿ
ಆಚೆಕೇರಿ
ಈಚೆಕೇರಿ
ಹಿಂದಲಗೇರಿ
ಮುಂದಲಗೇರಿ
ಕಡೇಕೇರಿ
ನಡೋಕೇರಿ

13. ಮನೆ

ಆಮನೆ
ಈಮನೆ
ನಡುಮನೆ
ದೇವರಮನೆ
ಅಡುಗೆಮನೆ
ಬಚ್ಚಲುಮನೆ
ಪಳತದಮನೆ
ದನಿನಮನೆ
ಹಿತ್ತಲು
ಜಗಲಿ
ಮುಡಕಿ
ವಂಕ

14. ಅಗಸಿಬಾಗಿಲು

15. ಮರಡಿ

ಅಯ್ಯನಮರಡಿ

16. ಮಟ್ಟಿ

ರಾಮನಮಟ್ಟಿ
ಆರಂಭೀಸರದಮಟ್ಟಿ
ಕಲ್‌ಮಟ್ಟಿ
ಹುಣಸೇಮಟ್ಟಿ
ಹಾನಗಲ್ಲ್‌ಮಟ್ಟಿ
ಎಮ್ಮೆಮಟ್ಟಿ
ಕೋಣನತಲೆಮಟ್ಟಿ
ಬೆನಕನಮಟ್ಟಿ
ಬುಗಡೀಸರದಮಟ್ಟಿ
ಜಿರ್ಲೀಮಟ್ಟಿ
ಸಪ್ಪಿನಮಟ್ಟಿ
ಯಮನಾಳಮಟ್ಟಿ
ದೊಡ್ಡಮಟ್ಟಿ

ಬೀರನಕೆರೆಮಟ್ಟಿ
ಗುಲಗಂಜೀರಾಯನಮಟ್ಟಿ
ಸುಡಗಾಡಮಟ್ಟಿ

17. **ಹಾಳುಹಿತ್ತಲು**
18. **ಏರಿ**
ನಾಲಾದೇರಿ
ಕೆರೆಏರಿ
19. **ಕೋಡಿ**
ಕೆರೆಕೋಡಿ
20. **ಕೆರೆಗಳು**
ಮಾಗನಕಟ್ಟೆಕೆರೆ
ಬೀರನಕೆರೆ
ಬಾಳದಕೆರೆ
ಬಸಲೀಕೆರೆ
ಜಡ್ಡಿನಕೆರೆ
ಕೆಂಗಲಗೆರೆ
ಆಂಬೈಲುಕೆರೆ
ಕೊಪ್ಪದಕೆರೆ
ಮಳಕೊಪ್ಪದಕೆರೆ
ಜೊಂಡಿಲಗೆರೆ
ಮಾಡ್ರವಳ್ಳಿಕೆರೆ
ಕೋಗಿಲಗೆರೆ
ನೇರಲಹಳ್ಳೀಕೆರೆ.
21. **ಕಟ್ಟೆಗಳು**
ಬೇಂಡೇಕಟ್ಟೆ
ಜಾಲಿಕಟ್ಟೆ
ಮಳಕಟ್ಟೆ
ಕಡವನಕಟ್ಟೆ
ಹುಲಾಲುಬೈಲುಕಟ್ಟೆ
ಆರಂಭೀಸರದಕಟ್ಟೆ
ಬೀರನಕಟ್ಟೆ
ಬುಲ್ಡೇಕಟ್ಟೆ
ಅರಳೀಮರದಕಟ್ಟೆ
ಮಾಗನಕಟ್ಟೆ
ಜೊಡಕಟ್ಟೆ
ಜಾಡನಕಟ್ಟೆ
ಮಾಸ್ತಿಕಟ್ಟೆ
22. **ಹೊಂಡಗಳು**
ಬಸವನಹೊಂಡ
ಆನೇಹೊಂಡ
ಬಾಡಿಹೊಂಡ
ಹಳ್ಳಹೊಂಡ
ಗೊಬ್ಬರದಹೊಂಡ
ತುಗಲಾಹೋಂಡ
ಮಾರಿಹೊಂಡ
23. **ಹಳ್ಳಗಳು**
ಬೆನಕನಹಳ್ಳ
ಬ್ಯಾಡರಹಳ್ಳ
ಕಟ್ಟೆಗೇಹಳ್ಳ
ಮಲೇಮತ್ತಿಹಳ್ಳ
ದೊಡ್ಡಹಳ್ಳ
24. **ಹೊಳೆ**
ಬಾರೆಮರದಹೊಳೆ
ಕಲ್ಲುಹೊಳೆ
ಯರೇಬೈಲುಹೊಳೆ
ಒಡ್ಡಹೊಳೆ
ಚೆನ್ನಹೊಳೆ
ಮಟ್ಟೆಹೊಳೆ
ಪಾಂಡುವೀರಣ್ಣನಹೊಳೆ
ಅಗಸರಹೊಳೆ
ಹರಗೋಲುಹೊಳೆ
ದೋಣಿಹೊಳೆ
ಬೋರುಗಲ್ಲುಹೊಳೆ
ಕಲಕೊಪ್ಪದಹೊಳೆ
ಗಬ್ಬೂರುಹೊಳೆ

---

† ಇದು ೧೯೮೩ರಲ್ಲಿ ತಂಜಾವೂರ್‌ನಲ್ಲಿ ನಡೆದ ಹದಿಮೂರನೇ ಅಖಿಲ ಭಾರತ ದ್ರಾವಿಡ ಭಾಷಾ ವಿಜ್ಞಾನಿಗಳ ಸಮ್ಮೇಳನದಲ್ಲಿ ಸಾದರಪಡಿಸಲಾದ ಇಂಗ್ಲೀಷ್ ಲೇಖನದ ಕನ್ನಡ ಅನುವಾದ.

# 'ಶ್ರೀ ರಾಮಾಯಣ ದರ್ಶನ'ದಲ್ಲಿ ಧಾನ್ಯಮಾಲಿನಿ

● **ಮಧು ವೆಂಕಾರೆಡ್ಡಿ**

ಭಾರತೀಯ ಕಾವ್ಯ ಪರಂಪರೆಗೆ ಜಗನ್ಮಾನ್ಯತೆ ದೊರಕಿಸಿಕೊಟ್ಟವರು ವಿಶ್ವಕವಿ ರವೀಂದ್ರರು. ಅವರ ಕಲ್ಪನಾ ಸಾಮರ್ಥ್ಯದಿಂದ ವಾಲ್ಮೀಕಿ, ಕಾಳಿದಾಸ, ಬಾಣಾದಿಗಳ ನಾಯಕ–ನಾಯಿಕೆಯರು ಮರುಹುಟ್ಟು ಪಡೆದು ಮೆರೆದಂತೆ, ಪ್ರಾಚೀನ ಕಾವ್ಯಗಳಲ್ಲಿ ಉಪೇಕ್ಷಿತರಾದವರ ವಿಚಾರದಲ್ಲಿಯೂ ಹೊಸ ಬೆಳಕು ಮೂಡುವಂತಾಯಿತು.

ಕಾವ್ಯದಲ್ಲಿ ಎಲ್ಲ ಪಾತ್ರಗಳಿಗೂ ಸಮಾನವಾದ ಪ್ರಾಶಸ್ತ್ಯ ದೊರೆಯದೆಂಬುದೇನೊ ನಿಜ! ಕವಿ ತನ್ನ ಕಾವ್ಯದ ಅವಶ್ಯಕತೆಗೆ ತಕ್ಕಂತೆ, ನಾಯಕ–ನಾಯಿಕೆಯರಿಗಾಗಿ ಇನ್ನಿತರ ಎಷ್ಟೋ ಪಾತ್ರ, ಸನ್ನಿವೇಶಗಳನ್ನು ಸೃಷ್ಟಿಸಿ ಕೊನೆಗೆ ನಿರ್ಮಮತೆಯಿಂದ ನಿಕ್ಷೇಪಮಾಡಿಬಿಡುತ್ತಾನೆ. ಹಾಗೆ ತಳ್ಳಿದಾಕ್ಷಣ ಅವರು ಸಂಪೂರ್ಣವಾಗಿ ಮರೆತು ಹೋಗದೆ ಸಹೃದಯರ ಆಶ್ರಯ ಪಡೆಯುತ್ತಾರೆ. ಕವಿಯಿಂದ ಉಪೇಕ್ಷಿತರಾದವರು ಓದುಗರ ಬಹುಮಟ್ಟಿನ ಅಪೇಕ್ಷೆಗೆ ಕಾರಣರಾಗುತ್ತಾರೆ.

ಇತಿಹಾಸದ ತೇಲುನೋಟಕ್ಕೆ ಜಾಜ್ವಲ್ಯಮಾನರಾದ ವ್ಯಕ್ತಿಗಳು ಗೋಚರಿಸುತ್ತಾರೆಯೇ ಹೊರತು ಎಲೆಯಮರೆಯ ಕಾಯಿಯಂತಿದ್ದು ಮೌನ ತಪಸ್ಸಿನಲ್ಲಿ ತೊಡಗಿರುವವರು ಗೋಚರಿಸುವುದಿಲ್ಲ. ಕೆಲವರು ನಿರ್ಝರಣಿಯರಾಗಿ ಲೋಕವನ್ನೇ ಆಕರ್ಷಿಸಿದರೆ ಇನ್ನಿತರರು ಗುಪ್ತಗಾಮಿನಿಗಳಾಗಿ ಕೆಲವರನ್ನು ಮಾತ್ರ ಉದ್ಧರಿಸಬಲ್ಲರು. ಮೊದಲನೆಯ ವರ್ಗದವರು ಅಸಾಮಾನ್ಯರು. ಎರಡನೆಯ ವರ್ಗದವರು ಸಾಮಾನ್ಯರು. ಆದರೆ ಕುವೆಂಪು ಅವರ ದೃಷ್ಟಿಯಲ್ಲಿ ಸಾಮಾನ್ಯರೆಂದರೆ ಶ್ರೀ ಸಾಮಾನ್ಯರು ಭಗವಂತನಿಗೆ ಅಸಾಮಾನ್ಯತೆಗಿಂತ ಸಾಮಾನ್ಯತೆಯಲ್ಲಿಯೇ ಹೆಚ್ಚು ಒಲವರ :

"ಶ್ರೀಸಾಮಾನ್ಯವೆ ಭಗವನ್ ಮಾನ್ಯಂ, ಶ್ರೀಸಾಮಾನ್ಯನೆ ಭಗವದ್ ಧನ್ಯಂ।
ಸಾಮಾನ್ಯತೆ ಭಗವಂತನ ರೀತಿ; ಸಾಮಾನ್ಯವೆ ದಿಟ ಭಗವತ್ ಪ್ರೀತಿ।"

ಯಾವುದೇ ಸಾಮಾಜಿಕ ಪರಿಸರದಲ್ಲಿ ವ್ಯಕ್ತಿಗಿರುವ ಅಗಣ್ಯತೆ ಅಲಕ್ಷತೆಗಳು ಶ್ರೀ ಸಾಮಾನ್ಯತೆಯ ಸಾಮಾನ್ಯ ಲಕ್ಷಣಗಳು. ಇಂಥ ಜೀವಿಗಳು ಅಸಹಾಯಕರೂ ಪರಾವ

ಲಂಬಿಗಳೂ ಆಗಿದ್ದು ಅವರು ನಿಷ್ಠೆ, ವಿಧೇಯತೆ, ಮೊದಲಾದ ಸದ್ಗುಣಗಳನ್ನು ರೂಢಿಸಿಕೊಳ್ಳುವುದೂ ಅನುಸರಿಸುವುದೂ ಅನಿವಾರ್ಯವಾಗುತ್ತದೆ.

ಒಂದು ಕೃತಿ ನಿರ್ಧಿಷ್ಟ ತತ್ವವನ್ನೊಳಗೊಂಡು ಅಭಿವ್ಯಕ್ತ ತತ್ವದ ಮೌಲ್ಯ ಉತ್ತಮವಾಗಿದ್ದು ಸಶಕ್ತ ನಿರೂಪಣಾಶಕ್ತಿ ಹೊಂದಿದ್ದರೆ ಅದು ಮಹತ್ವದ ಕೃತಿ ಎಂದು ಮಾನ್ಯತೆ ಪಡೆಯುತ್ತದೆ. ಕಾವ್ಯಕ್ಕೆ ವಸ್ತು ಒಂದೇಯಾದರೂ ದುಷ್ಟನಿಗ್ರಹ–ಶಿಷ್ಟಪರಿಗ್ರಹ ಇದು ವಾಲ್ಮೀಕಿಯ ನೋಟವಾದರೆ, ಶಿಷ್ಟ ಪರಿಗ್ರಹ–ದುಷ್ಟಪರಿವರ್ತನ ಕುವೆಂಪು ದೃಷ್ಟಿ. ಅವರು ತಮ್ಮ ವಿಶಿಷ್ಟವಾದ ಪಾತ್ರ, ಸನ್ನಿವೇಶಗಳ ಸೃಷ್ಟಿಯಿಂದ, ಪಾತ್ರಗಳ ಮನಸ್ಸು ಸಂಸ್ಕಾರ ಇತ್ಯಾದಿಗಳಿಂದ ಮೂಲಕ್ಕಿಂತ ಅನೇಕ ಕಡೆಗಳಲ್ಲಿಯ ವ್ಯತ್ಯಾಸಗಳೊಂದಿಗೆ ವಾಲ್ಮೀಕಿಗಿಂತ ಭಿನ್ನವಾದ ನಿಲುವಿನಲ್ಲಿದ್ದಾರೆ.

ಕುವೆಂಪು ಅವರದು ಕೂಪಮಂಡೂಕ ಪ್ರವೃತ್ತಿಯಲ್ಲ. ವಾಲ್ಮೀಕಿ ರಾಮಾಯಣದಲ್ಲಿ ಕವಿಯ ಅನಾದರಕ್ಕೆ ಪಾತ್ರರಾದ ಊರ್ಮಿಳೆ, ಅನಲೆ, ಮಂಥರೆ, ಮಂಡೋದರಿಯರು ಶ್ರೀ ಕುವೆಂಪುರವರ ಅಭಿರುಚಿ ಸಂಸ್ಕಾರಗಳಿಗನುಗುಣವಾಗಿ ಅವರಿಂದ ಉದಾತ್ತತೆಯ ದೀಕ್ಷೆ ಪಡೆದು ಶ್ರೀ ಸಾಮಾನ್ಯ ಪಾತ್ರಗಳಾಗಿ ತನ್ನ ಸಮಾಜದ ಆಸೆ ಆಕಾಂಕ್ಷೆಗಳನ್ನು ಗರ್ಭೀಕರಿಸಿಕೊಂಡು ಸೂಕ್ಷ್ಮ ರೀತಿಯಲ್ಲಿ ಅಪೂರ್ವವಾದ ಬೆಳವಣಿಗೆ ಪಡೆದಿವೆ.

ಮೂಲ ರಾಮಾಯಣದಲ್ಲಿ ದಶಾನನ ಉಪಪತ್ನಿ ಎಂದು ಕೇವಲ ನಾಮಮಾತ್ರಳಾಗಿ ಕಾಣಿಸಿಕೊಂಡ ಧಾನ್ಯಮಾಲಿನಿ 'ಶ್ರೀ ರಾಮಾಯಣ ದರ್ಶನ ಕಾವ್ಯದಲ್ಲಿ ಕವಿಯ ಔದಾರ್ಯದಿಂದ ಪತಿವ್ರತಾ ಪಟ್ಟ ದೊರಕಿಸಿಕೊಂಡಿದ್ದಾಳೆ. ಪಾತಿವ್ರತ್ಯಕ್ಕೆ ಹೆಚ್ಚಿನ ಬೆಲೆಕೊಟ್ಟು ಅದನ್ನು ತಮ್ಮ ಕಾವ್ಯದ ಪರಮ ಮೌಲ್ಯವನ್ನಾಗಿಸಿಕೊಂಡ ಕುವೆಂಪುರವರು ವಾಲ್ಮೀಕಿ ರಾಮಾಯಣದಲ್ಲಿ ಹೇಳಿಲ್ಲವಾದರೂ ವಾಲಿಯೊಡನೆ–ತಾರೆಯನ್ನೂ, ರಾವಣನೊಡನೆ–ಮಂಡೋದರಿಯನ್ನೂ ಸಹಗಮನ ಮಾಡಿಸಿ ಧಾನ್ಯಮಾಲಿನಿಯನ್ನೂ ಅಸಹಾಯಕತೆ ಮತ್ತು ಪಶ್ಚಾತ್ತಾಪದಲ್ಲಿ ಬೇಯಿಸಿ ಕೊನೆಗೆ ಹದಿಬದೆಯ ಸ್ಥಾನಕ್ಕೇರಿಸಿ ಪ್ರಾಣಬಿಡಿಸಿದ್ದಾರೆ. ಕುವೆಂಪು ರಾಮಾಯಣದ ಸುವಿಸ್ತಾರ ಕ್ಷೇತ್ರದಲ್ಲಿ ಧಾನ್ಯಮಾಲಿನಿ ಆಕ್ರಮಿಸಿರುವ ಸ್ಥಾನ ಬಹಳ ಕಿರಿದಾದರೂ ಬಾಹ್ಯ ಚಕ್ಷುವಿಗೆ ಅವ್ಯಕ್ತವಾದ ಅವಳ ವ್ಯಕ್ತಿತ್ವ ಅಂತ ಶ್ಚಕ್ಷುವಿಗೆ ಸದಾ ವ್ಯಕ್ತ ಅಪೂರ್ಣದಿಂದ ಪೂರ್ಣತೆಗೆ, ತಮಸ್ಸಿನಿಂದ ಜ್ಯೋತಿ ಎಡೆಗೆ ಕೈಕೊಂಡ ಈ ಯಾತ್ರೆಯಲ್ಲಿ, "ಪಶ್ಚಾತ್ತಾಪದಿಂದ ಪಾಪಿಯುದ್ಧಾರ" ವೆಂಬ ಭಾರತೀಯ ನಿತ್ಯ ಸತ್ಯಸಿದ್ಧಾಂತಕ್ಕನುಗುಣವಾಗಿ ರಾಮಾಯಣದ ಪ್ರತಿನಾಯಕನಾದ ರಾವಣ ತನ್ನಲ್ಲಿರುವ ರಜಸ್ತಮೋಗುಣಗಳನ್ನು ಕಳೆದುಕೊಂಡು, ರಾಮತ್ವಕ್ಕೇರುವಲ್ಲಿ ಸಹಾಯಕರಾಗುವ ಸತೀ ಶಕ್ತಿಗಳಾದ ಸೀತೆ, ಮಂಡೋದರಿಯರಂತೆ ಧಾನ್ಯಮಾಲಿನಿಯೂ ಒಬ್ಬಳು. ದುಷ್ಟ

ಮತ್ತು ಶಿಷ್ಟ ಶಕ್ತಿಗಳ ಸಂಘರ್ಷಣೆಯಲ್ಲಿ ಅನೇಕವೇಳೆ ಸತ್‌ಶಕ್ತಿಗಳು ಆಸುರೀ ಶಕ್ತಿಯ ವಜ್ರಮುಷ್ಟಿಗೆ ಸಿಕ್ಕು ನರಳಬೇಕಾಗುತ್ತದೆ. ಅಂಥಹ ಕಷ್ಟ ಸಂಕಷ್ಟಗಳಿಗೆ ಬಲಿಯಾದವರಲ್ಲಿ ಸೀತೆ ಮತ್ತು ಧಾನ್ಯ ಮಾಲಿನಿಯರು ಒಂದೇ ಸಾಲಿನಲ್ಲಿ ನಿಲ್ಲ ಬಹುದಾದರೂ, ಯಾರಾದರೂ ಸೀತೆಯ ವಿರಹ ತಾಪದೊಂದಿಗೆ, ಮಂಡೋದರಿಯ ಹೃದಯ ಸಂಕಟದೊಂದಿಗೆ, ಊರ್ಮಿಳೆಯ ದೀರ್ಘತ ಪಸ್ಸಿನೊಂದಿಗೆ ಧಾನ್ಯಮಾಲಿ ನಿಯನ್ನು ಹೋಲಿಸಿದರೆ ಕಾವ್ಯದಲ್ಲಿಯ ಅವಳ ಆ ಮೌನ ಯಾತನೆ ಎಲ್ಲದಕ್ಕೂ ಉತ್ತರವಾಗಬಲ್ಲುದು. ದೈವೀಶಕ್ತಿ ತಾನಾಗಿಯೇ ಆಸುರೀ ಶಕ್ತಿಯನ್ನು ಸಂಧಿಸಿ ರೂಪಾಂತರಗೊಳಿಸುತ್ತದೆಯೆಂಬ ಸತ್ಯ ಗುಪ್ತಸಂತಪ್ತೆಯಾಗಿದ್ದ ಧಾನ್ಯಮಾಲಿನಿ ಯಲ್ಲಿ ವ್ಯಕ್ತವಾಗುತ್ತದೆ.

೧

ಸೀತಾಪಹರಣದ ನಂತರ ರಾಮ-ರಾವಣರ ಯುದ್ಧ ಆರಂಭವಾಗಿದೆ. ಸಮರ ದಲ್ಲಿ ರಾಕ್ಷಸ ಪ್ರಮುಖರನೇಕರು ಮಡಿದಿದ್ದಾರೆ. ಇಂದ್ರಜಿತು ಶಕ್ತಿ ಸಂಪಾದನೆ ಗೋಸ್ಕರ ಯಜ್ಞಶಾಲೆ ಹೊಕ್ಕಿದ್ದಾನೆ ಅಂದಿನ ರಾತ್ರಿ ವೈರಿಗಳನ್ನು ತಡೆಯುವ ಕೆಲಸ ಅತಿಕಾಯನದು.

ಧಾನ್ಯಮಾಲಿನಿಯುದರದಲ್ಲಿ ತನಗೆ ಸಂಭವಿಸಿದ ತನ್ನ ಅದ್ಭುತ ಕುಮಾರ ನನ್ನು ಕರೆದು ರಾಕ್ಷಸೇಂದ್ರ ಹೇಳುತ್ತಾನೆ

"ವಿಷಮ ಸಮಯಮಂ ನೆನೆದೀ
ನಿಶಾಯುದ್ಧಮಂ ಪೂಡಿದರ್ ಶತ್ರುಗಳ್, ವತ್ಸ
ಕುಂಭಕರ್ಣಂ ಮಡಿದನಿಂದ್ರಜಿತು ತಾಂಪೊಣ್ದು
ಪೊಕ್ಕನ್ ನಿಕುಂಭಲಾ ಯಾಗಮಂಟಪಕೆ. ನೀಂ
ಪಗೆಗೆ ಕಾಳಗಗೊಡಲ್ ವೇಳ್ಪುವೀ ಒಂದಿರುಳ್
..................... ....................
................................................
................................ರಾಮನಂ
ರಣಕೆ ಹೋಮಂಗೊಳ್ವವದು ದಿಟಂನಾಳಿನ
ಮಹೋಗ್ರ ಸಂಗ್ರಾಮ ಯಜ್ಞದಲಿ! ನೀನನ್ನೆಗಂ
ರಕ್ಷೆಯಾಗಿರು ನಮ್ಮ ಭಾಗ್ಯಕ್ಕೆ, ದುರ್ಗಕ್ಕೆ,
ಮೇಣ್ ದೈತ್ಯ ಸ್ವರ್ಗಕ್ಕೆ! ನಡೆ, ಕಂದ, ತಡೆ ಹಗೆಯ
ಮುನ್ನಡೆಯನಾ ಕಾಣ್ಬ ಕೇಸುರಿ ಪೋಟಮಂ"

ತಂದೆಯಾಣತಿಯನ್ನು ಸಿರಸಾವಹಿಸಿ ಹೊರಡಲಿದ್ದ ತನ್ನ ಮುದ್ದು ಕುಮಾರನನ್ನು ಕರೆದು ಮತ್ತೆ ಮಮತೆಯಿಂದ 'ಎದೆಯೊಳಗೇನೊ ತನಗಾದ ಭಯಚಲನಮಂ' ಕಂಡು ರಾವಣ

"ವೀರನಾದೊಡಂ, ನಿನಗೆ
ಸಾವೆಂಬುದೊಂದು ನಗೆವಿಷಯಮಾದೊಡವೋಂದು
ಬಗೆಯ ಬಿನ್ನಪವೊರೆಯೆ ತವರಸುತ್ತಿರ್ಪುದೆರ್ದೆ
ರಾಜಾಜ್ಞೆಯಲ್ತು, ಪೆತ್ತವರೊಂದು ಬಿನ್ನಪಂ:
ನಿನ್ನ ತಾಯ್ ಧಾನ್ಯಮಾಲಿನಿಯುಸಿರ್ ನಿನ್ನಿಂದೆ.
ನಿನಗಾಗಿ, ತಡೆದಿರ್ಪುದಿಲ್ಲ ಮರೆಯದಿರದನ್
ಸಮರ ಸಂಭ್ರಮದಿ"

ಹೀಗೆಂದು ಎಚ್ಚರಿಸುತ್ತಾನೆ.

ತಂದೆಯ ಮಾತುಗಳನ್ನು ಆಲಿಸುತ್ತಿದ್ದಂತೆಯೆ,

"ಅತಿಕಾಯನಾಯ ತನು
ಕು ನುಂಗಿತ್ತು ನುಡಿಗಳಿಂತಕೆ:"

ತಾನು ಚಿಕ್ಕವನಿದ್ದಾಗಿನಿಂದಲೂ ಅಮ್ಮನ ಮೂಕ-ಯಾತನೆಯನ್ನು ಗುರುತಿಸಿದ್ದ ಅತಿಕಾಯನಿಗೆ ಕಳೆದ ದಿನಗಳ ನೆನಪಾಗುತ್ತದೆ. ತನ್ನ ತಾಯಿ ತನಗೆ ತಾಯಾಗುವ ಮುನ್ನ ಇನ್ನೊಬ್ಬನ ಅರಸಿಯಾಗಿದ್ದಳೆಂಬುದನ್ನು. ದಾದಿಯರ 'ಪರ್ಚುನುಡಿ' ಅವರ 'ಕಣ್‌ಮಿಗಿ'ನಿಂದ ಗ್ರಹಿಸಿರುತ್ತಾನೆ. ಆಗಳೆ ಆ ಎಳೆಯ ಹೃದಯದಲ್ಲ ಅವಳ ದುಃಖಕ್ಕೆ ತನ್ನ ತಂದೆಯೇ ಕಾರಣನಿರಬಹುದೆಂಬ ಅಸ್ಪಷ್ಟ ಭಾವನೆ ಮೂಡಿರಬೇಕು. ಆ ಪುಟ್ಟ ಮನಸ್ಸು ನಿಗೂಢ ಸಂಕಟಕ್ಕೆ ಒಳಗಾಗಿರಬೇಕು.

"ತನ್ನ ತಾಯೇಗಳುಂ
ಅದಾವುದೊ ವಿಷಾದದಂತರ್‌ಜ್ವಾಲೆಯಿಂ. ಬೆಂದು
ಕೃಶಳಾದೊಡಂ, ತನಗದಂ ತೋರಗೊಡದಂತೆ
ಮೇಲ್ ನಗುತ್ತಿರ್ದುದನರಿತು, ಕೇಳ್ದನೊರ್‌ದಿನಂ
ತನ್ನಬ್ಬೆಯನೆ, ದಾದಿಯರ ಮಾತಿನಾ ಮರ್ಮಮಂ
ತನಗರುಹಬೇಕೆಂದು"
ಆದರೆ ಆ ತಾಯಿ ಏನು ಉತ್ತರ ಹೇಳಬಲ್ಲಳು!
"ಧಾನ್ಯಮಾಲಿನಿ ಹೃದಯ ಸಂಕಟದ ಮರ್ಮಮಂ
ತಿಳಿವರಾರ್, ಹದಿಬದೆಯರಂತಸ್ಥಮಂ ?"

ಅವಳ ಕಳೆದ ಬಾಳಿನ ಕಥೆ ಗೋಳಿನ ಕಥೆ!
"ಒರೆಯುದೇನೊಂದುಮಂ
ಮಗನ ಮುದ್ದಿನ ಮೊಗಕೆ ಮೊಗವಿಟ್ಟು, ಸುಯ್ಯುಳ್ತು,
ಮಿಸಿಸಿರ್ದ್ದಳದನಶ್ರುತೀರ್ಥದಲಿ. ಪೆತ್ತಳಾ
ಮೂಗಳ್ಕೆ ಕೈಶೋರ ಮುಗ್ಧಹೃದಯಕೆ ವಾಗ್ಮಿ
ತಾನಾಯ್ತು, ನೂರುಪನ್ಯಾಸಂಗಳಿಂ ಮಿಗಿಲ್
ಧ್ವನಿಪೂರ್ಣಮೆಂಬಂತೆವೋಲ್"

ಬುದ್ಧಿಗ್ರಾಹ್ಯವಾಗದಿದ್ದರೂ. ಭಾವಗ್ರಾಹ್ಯವಾದ ಅಂಬೆಯ ಅಳಲು ಅತಿಕಾಯನ ಮನದಲ್ಲಿ ಅತಿಯಾದ ವೇದನೆಯನ್ನುಂಟು ಮಾಡುತ್ತದೆ. ಅಂದು ಮೊದಲಾಗಿ ಅವನು ತನ್ನ ಇರ್ಮಡಿಸಿದಳ್ಪರೆಯನ್ನು ಎರೆದು ತಾಯಿಯ ಅಳಲಿಗೆ ಸಂತೈಕೆಯನ್ನು ತರಲೆಳಸುತ್ತಾನೆ. ಆದರೆ ಆ ತಾಯಿಗೆ ತನ್ನ ಹಿಂದಿನ ಆ ಸುಂದರ ಸಂಸಾರವನ್ನು ಮರೆಯಲಾದೀತೆ ?

"ಪತಿ-ವ್ರತೆಗದೇಂ ಸುಲಭಮೇನ್
ಮರೆಯಲಾ ಪ್ರಥಮಮುಂ ಪ್ರೇಮಮುಂ ದಶಕಂಠ
ದುರ್ಮೋಹ ವಜ್ರಾಘಾತಕೆ ಕೆಡೆದ ಸಂಸಾರ
ಗೋಪುರ ಪವಿತ್ರಮುಂ ?"

೨

ರಾಕ್ಷಸ ರಾವಣ! ವಾಲ್ಮೀಕಿಯ ರಾವಣನ ಹೆಸರನ್ನು ಕೇಳಿದರೇನೇ ರಕ್ತ ಹೆಪ್ಪುಗಟ್ಟುತ್ತಿತ್ತು ತ್ರೇತಾಯುಗದಲ್ಲಿ ಕುವೆಂಪುರವರ ರಾವಣನೂ ತ್ರಿಜಗದ್‌ಭಯಂಕರ. ಅಪ್ರತಿಮ ಪರಾಕ್ರಮಿಯಾದ ಅವನ ಒಳ್ಳೆಯ, ಕೆಟ್ಟ ಗುಣಗಳೆಲ್ಲ ಪ್ರಕಟವಾದುದು ಇನ್ನೊಂದು ಮುಖದಿಂದ-ಅದು ಅವನ ಕಾಮ.

ತ್ರಿಲೋಕ ವಿಜಯಿ ದಶಕಂಠ ಹುಟ್ಟುವಾಗಲೆ 'ನೆತ್ತರೊಳೆ ಪೆಣ್ಣೊಡಲಿನಾಸೆಯಾ ಬೀಟಮುಂ' ಹೊತ್ತು ಹುಟ್ಟಿದ ಮಹಾನುಭಾವ! ಹೆಣ್ಣಿನ ವ್ಯಾಮೋಹ ಅವನ ಜನ್ಮದೌರ್ಬಲ್ಯ ಅದನ್ನು ಜಯಿಸಲು ಆತ್ಮವನ್ನೇ ಬೇಯಿಸಿದ. ಪಾತಿವ್ರತ್ಯವ ನಂಬಿ, ಪತ್ನೀವ್ರತ್ಯಕ್ಕೆಳಸಿ ಮುಗ್ಧಬುದ್ಧಿಯಿಂದ ತಾರುಣ್ಯವನ್ನೇ ಕಳೆದ. ಅನಂತರ ಅಪರ ಪಾತಿವ್ರತ್ಯವನ್ನು ಪರಿಕಿಸಲು ಹೊರಟ. ಆದರೆ ಆದದ್ದಾದರೂ ಏನು! ಅವನು ಹೆಣ್ಣನ್ನು ಬಯಸುವ ಮೊದಲೆ ಹೆಣ್ಣೆ ಅವನನ್ನು ಬಯಸಿತು. ಇವನ ರೂಪಕ್ಕೆ, ರಸಿಕತೆಗೆ, ಐಶ್ವರ್ಯಕ್ಕೆ, ಶೌರ್ಯಕ್ಕೆ ಸೋಲದ ಹೆಣ್ಣುಗಳೊಬ್ಬರನ್ನೂ ಕಾಣದಾದ. ಪ್ರಬಲವಾದ ಭೋಗಭಾವನೆಯ ಕಾಮಪ್ರವಾಹದಲ್ಲಿ ಕೊಚ್ಚಿ–ಹೋದ ಹೋದೆಡೆಯಲ್ಲೆಲ್ಲಾ ಕಣ್ಣಿಗೆ ಬಿದ್ದ ರೂಪಸಿಯರನ್ನೂ, ಹದಿಬದೆಯರನ್ನೂ, ತನ್ನ ಬುದ್ಧಿ ಚತುರತೆಯಿಂದಲೋ, ಬೆದರಿಕೆಯಿಂದಲೋ, ಕೊನೆಗೆ ಯುದ್ಧದಲ್ಲಿ ಜಯಿಸಿಯೋ ಅವರನ್ನು ಎಳೆದು ತಂದು ತನ್ನ ಅಂತಃಪುರಕ್ಕೆ ಸೇರಿಸಿಕೊಂಡ.

ಮತ್ತೊಮ್ಮೆ ಹದಿಬದೆಯೆಂದು ಹೆಸರಾದ ಧಾನ್ಯಮಾಲಿನಿಯೆಂಬ ರೂಪಸಿಯನ್ನು ಪರೀಕ್ಷಿಸುವ ಹಿರಿಯಾಸೆಯಿಂದ ಅವಳ ಅರಸನ ಜೊತೆಗೆ ಯುದ್ಧ ಮಾಡುತ್ತಾನೆ.

"ತಂದೆನವಳರಸನಂ ಸೋಲಿಸಿ ಸೆರೆಗೆ ನೂಂಕಿ
ಧಾನ್ಯಮಾಲಿನಿಯೆಂಬಾಕೆಯಂ............
.............ರಾವಣನ ಬೇಟಕ್ಕೆ
ಸೋಲದವಳೊರ್ವಳಂ ಕಾಣ್ಬೆನೆಂದರೆ, ಕಟ್ಟ
ಕಡೆಗಾಕೆಯುಂ ಸೋಲ್ತಳೆನಗೆ"

ಮತ್ತೆ ಹೀಗೆ ಭಾವಿಸುತ್ತಾನೆ ರಾವಣ:

"ಹದಿಬದೆಯರೆಂದು ಹೆಸರಾಂತ ಹೆಣ್ಮಣಿಗಳಂ
ಪರಿಕಿಸಿದೆನವರುಂ ಸುಲಭಮಾದರಯ್, ಕಡೆಗೆ ಕೇಳ್,
ಹದಿಬದೆಯರಿಹರೆಂಬ ನಂಬುಗೆ ಸತ್ತುದೆನ್ನೆದೆಗೆ!"

ಧಾನ್ಯಮಾಲಿನಿಯನ್ನು ಹೊತ್ತು ತಂದು ತನ್ನ ಉಪಪತ್ನಿಯಾಗಿಸಿಕೊಳ್ಳುತ್ತಾನೆ. ಅಂದಿನಿಂದ ಲಂಕೇಶ್ವರನ ಶಯನವನ್ನು ನಿಜವಾಗಿಯೂ ಹಳಿದು ಹೇಸುವ ಹೆಣ್ಣೇ ಇಲ್ಲ ಎಂಬ ಅಚಲ ಅಹಂಕಾರ ಅವನಲ್ಲಿ ಮನೆ ಮಾಡುತ್ತದೆ.

ತಾನು ಹೊತ್ತು ತಂದ ಹೆಣ್ಣುಗಳನ್ನು ತನ್ನ ವಶಮಾಡಿಕೊಳ್ಳಲು ರಾವಣ ಏನೆಲ್ಲ ತಂತ್ರಗಳನ್ನೂ ಬಳಸುತ್ತಿದ್ದ. ಅವರು ಆತ್ಮಹತ್ಯೆಗೆ ಪ್ರಯತ್ನಿಸಿದರೆ 'ಅದೆ ಚಿತೆಯನೇರುವೆನ್, ಪೆಣದೆಡೆಯೆ ಪವಡಿಪೆನ್' ಎಂದು ಅದಕ್ಕೂ ಅವರು ಹೇಸುವಂತೆವರ್ತಿಸುತ್ತಿದ್ದ.

ಪತಿವ್ರತೆಯಾದ ಸೀತೆಯನ್ನು ಕದ್ದು ತಂದ ರಾವಣ ಅವಳಿಗೆ ಹತ್ತು ತಿಂಗಳ ಅವಧಿಯನ್ನು ದಯಪಾಲಿಸಿ ಅಷ್ಟರೊಳಗೆ ವಶವಾಗದಿದ್ದರೆ ಬಲಾತ್ಕಾರ ಪ್ರಯೋಗ ಮಾಡಬೇಕಾಗುತ್ತದೆ ಎಂಬ ಬೆದರಿಕೆಯನ್ನು ಹಾಕುತ್ತಾನೆ. ಗಂಡನಿಂದ ದೂರವಾಗಿ ಸುಖತ್ಯಕ್ತಳಾಗಿ ಅಶೋಕ-ವನದಲ್ಲಿ ವಿರಹ ತಾಪದಿಂದ ನರಳುವ ಸೀತೆಗೆ, ರಾವಣನಿಗಿಂತಲೂ ಅಧಿಕ ತೇಜಸ್ಸು, ಯೌವ್ವನ, ಐಶ್ವರ್ಯವನ್ನು ಹೊಂದಿದ ಪತಿ ರಾಮ ಎಂದಾದರೂ ತನ್ನ ಪರಾಕ್ರಮಬಲದಿಂದ ತನ್ನನ್ನು ಮರಳಿಕೊಂಡೊಯ್ಯುವನೆಂಬ ಗಾಢ ನಂಬುಗೆ ಇತ್ತು. ನಿದ್ದೆ, ನೀರಡಿಕೆ, ಉಣಿಸು, ವಿೂಹಂಗಳನ್ನು ಬಿಟ್ಟು ರಾಮ ನಾಮ ಧ್ಯಾನದ ಕಠೋರ ತಪಸ್ಸಿನಲ್ಲಿ ನಿರತಳಾಗುತ್ತಾಳೆ. ಅಧರ್ಮ ನಾಶಕ್ಕೆ ಸಂಕಲ್ಪ ರೂಪದ ತಪಃಶಕ್ತಿಯೂ ಕಾರಣವಾಗುತ್ತದೆ. ಅದೊಂದು ಮಾನಸಿಕ ಶಕ್ತಿ. ಅದ

ರಿಂದ ಏನನ್ನಾದರೂ ಸಾಧಿಸಬಹುದೆಂಬುದನ್ನು ಸೀತೆ ತಿಳಿದಿದ್ದಳು. ಕೊನೆಗೆ ಅವಧಿ ತೀರುವ ಪೂರ್ವದಲ್ಲೇ ಯುದ್ಧ ಪ್ರಾರಂಭವಾಗುತ್ತದೆ. ಈ ಮಧ್ಯ ಏಕಾಂಗಿ ಯಾದ ಸೀತೆಗೆ ತ್ರಿಜಟೆ, ಅನಲೆ, ಚಂದ್ರನಖಿ, ಅಲ್ಲದೆ ಮಂಡೋದರಿಯಂಥವರ ಅನುಕಂಪ ವಾತ್ಸಲ್ಯಗಳೂ ದೊರೆಯುತ್ತವೆ. ಅಂತೆಯೇ ಸೀತೆಗೆ ರಾವಣನನ್ನು ಎದುರಿಸುವ ಧೈರ್ಯವಿರುತ್ತದೆ

ಧಾನ್ಯಮಾಲಿನಿಗೆ ಸೀತೆಯ ಹಾಗೆ ಆ ಮನಸ್ಸಿನ ದೃಢತೆಯನ್ನು ಉಳಿಸಿ ಕೊಳ್ಳಲು ಸಾಧ್ಯವೇ ಇರಲಿಲ್ಲ. ಅವಳ ಅರಸ ಎಂದೂ ತಿರುಗಿ ಬರದಂತೆ, ಅವನನ್ನು ಸೆರೆಗೆ ಅಟ್ಟಿಯೇ ರಾವಣ ಆಕೆಯನ್ನು ತಂದಿದ್ದಾನೆ. ಬಹುಶಃ ಅವಳೂ ಸೀತೆಯಂತೆ ಆತ್ಮಹತ್ಯೆಗೆ ಹೇಸುವಂತೆ ರಾವಣ ವರ್ತಿಸಿರಲಿಕ್ಕೆ ಸಾಕು. ಇಲ್ಲಿ ಇವಳಿಗೆ ಯಾರ ಸಹಾನುಭೂತಿಯೂ ದೊರಕದೆ ರಾವಣ ಒಡ್ಡುವ ನಾನಾ ಬಗೆಯ ಬಲೆಯಲ್ಲಿ ಸಿಕ್ಕು ಅಸಹಾಯಕಳಾಗಿ ಪರಿಸ್ಥಿತಿಯಿಂದ ಪಾರಾಗುವದು ಸಾಧ್ಯವಾಗದೆ ಅವನ ಕೈವಶ ವಾಗಿರಬಹುದು. ನಂತರ ಅತಿಕಾಯನ ಜನನ ಮುಂದೆ ಬದುಕು ಅವಳ ಪಾಲಿಗೆ ಅನಿವಾರ್ಯ.

ಹೀಗೆ ರಾಕ್ಷಸನ ದುರ್ಮೋಹಕ್ಕೆ ಕಾಲಾಂತರಕ್ಕೆ ಓತ ಧಾನ್ಯಮಾಲಿನಿಗೆ

"ಮನವೊಪ್ಪದಿರ್ದವಕೆ
ತನುವೊಪ್ಪಿದವಳ ಬಾಳ್ ನರಕಮಾದುದು"

ಆದರೂ,

"ಪತಿದೂರೆಯಾದಾ ಪತಿವ್ರತೆಯ ಸಂಕಟದ
ಜೀವಿತಕೆ ಜೀವಾತುವೋಲಿರ್ದ"

ತನ್ನ ಕುಮಾರನಿಗಾಗಿ ಬದುಕಿದಳು

"ಸುತನ
ಸುಸ್ಮಿತ ಸ್ವರ್ಗದಿಂದಾ ನರಕ ಕೂಪಮಂ
ಬಾಸಣಿಸಿ ಬದುಕುತಿರ್ದಳು"

ಧಾನ್ಯಮಾಲಿನಿ, ರಾವಣನ ಅರಮನೆಯಲ್ಲಿ ಸಕಲ ಸುಖಭೋಗಗಳ ಮಧ್ಯದಲ್ಲೂ, ತನ್ನ ಅಗಲಿದ ಜವ್ವನಿಗ ಗಂಡನಿಗಾಗಿ ಹಗಲಿರುಳೂ ಪರಿತಪಿಸುವ ಈ ನಿರ್ಭಾಗ್ಯಳಿಗೆ 'ಬ್ರಹ್ಮವರಬಲ ಸಮರ ಶೂರನಾದ' ಅತಿಕಾಯನಂತಹ ಮಗನಿದ್ದರೂ ಸುಖವಿಲ್ಲ. ರಾವಣನ ಉಪಪತ್ನಿಯಾಗಿ ಮಂಡೋದರಿಯ ನೆರಳಿನಲ್ಲಿ ಬದುಕಿಯೂ ಸತ್ತಂತಿದ್ದ ಳವಳು. ತನ್ನ ಪತಿಯ ಪಶುವೃತ್ತಿಗಾಗಿ ಮಾತ್ರ ಸಂಕಟವನ್ನನುಭವಿಸುವ ಮಂಡೋ ದರಿಗಿಂತ, ತನ್ನ ಒಡೆದ ಸಂಸಾರಕ್ಕಾಗಿ ಮನದಲ್ಲೇ ಕೊರಗಿ ಕಣ್ಣೀರು ಹಾಕುವ,

ಮನಸ್ಸಿಲ್ಲದಿದ್ದರೂ ಅದೇ ಪಶುವೊಂದಿಗೆ ಕೊರಡಿನಂತೆ ಬಾಳ್ವೆ ನಡೆಸಬೇಕಾದ ಧಾನ್ಯ ಮಾಲಿನಿಯ ಸ್ಥಿತಿ ನಿಜಕ್ಕೂ ದಾರುಣವಾದುದು.

೩

ಪಶ್ಚಾತ್ತಾಪದಿಂದ ಬೆಂದ ಧಾನ್ಯಮಾಲಿನಿಯ ಉದ್ಧಾರಕ್ಕಾಗಿ ವಿಧಿ ಈಗ ಅನುವು ಮಾಡಿಕೊಟ್ಟಿತ್ತು. ಅವಳ ಸುಪ್ತಚಿತ್ತದಲ್ಲಿ ಅಡಗಿದ್ದ ಆತ್ಮೋದ್ಧಾರಶಕ್ತಿಯನ್ನು ಜಾಗ್ರತಗೊಳಿಸಿ ಸದ್ಗತಿಯನ್ನು ದೊರಕಿಸಿಕೊಡುವ ಕಾಲ ಒದಗಿ ಬಂದಿತ್ತು. ಅವಳಿಗೂ ಸೀತೆಯನ್ನು ಕಾಣುವ ಸುಯೋಗ ಲಭಿಸಿತ್ತು. ಸೀತೆಯ ದರ್ಶನ ಅವಳಿಗೆ ಮೂಕದೀಕ್ಷೆಯಾಯಿತು. ತನ್ನ ಹಿಂದಿನ ಅಂತಹುದೇ ಆಗಿದ್ದ ಪವಿತ್ರ ಜೀವನದ ನೆನಪು ಇಮ್ಮಡಿಯಾಗಿ ಮರುಕಳಿಸಿತು.

"ಸೀತೆಯಂ ಕಂಡಂದು
ಧಾನ್ಯಮಾಲಿನಿಗೆ, ಸಿದ್ಧಿಯನಾಂತ ಯೋಗಿಯಂ
ಕಾಣ್ಬ ಯೋಗಭ್ರಷ್ಟನಂತಾಗೆ, ಪೂರ್ವಮಂ
ನೆನೆದು ಕೊರಗಿದಳೊದಗಿದಾತ್ಮ ಪತನಕೆ"
ಅವಳ ಹೃದಯದಲ್ಲಿ ಶೋಕಾಗ್ನಿ ಧಗದಗಿಸತೊಡಗಿತು.

"ಮಾಸಿದುದು ಮೊಗದ ಮೋದರುಚಿ,
ಮೂಡಿತು ವಿಷಾದ ಕಳೆ; ದನಿ ಕುಗ್ಗಿ, ನುಡಿ ತಗ್ಗಿ,
ಸುತ್ತಿಸುಳಿದುದು ನೀರವತೆ."

ರಾವಣನ ಪ್ರಣಯವಂತಿರಲಿ, ಮಗನ ಮೋಹವೂ ಬೇಡವಾಯಿತು. ಅನ್ಯರು ಅರಿಯದಂತೆ ತನ್ನಲ್ಲಿಯೇ ತಪಸ್ಸಿಗೆ ತೊಡಗಿದಳು.

'ಶ್ರೀ ರಾಮಾಯಣ ದರ್ಶನ' ಕಾವ್ಯದಲ್ಲಿ ಅನೇಕ ಕಡೆಗಳಲ್ಲಿ ಮನೋವೈಜ್ಞಾನಿಕ ಹೊಳಹುಗಳನ್ನು ಗುರುತಿಸಬಹುದು. ವ್ಯಕ್ತಿಗಳ ಸುಪ್ತಚೇತನಗಳ ವ್ಯಾಪಾರಗಳ ಪರೋಕ್ಷ ಅಭಿವ್ಯಕ್ತತೆಯು ವೈವಿಧ್ಯಪೂರ್ಣವಾಗಿರುತ್ತದೆ. ಭಾವಾಘಾತದ (Trauma) ಫಲವಾಗಿ ನೈಜಸ್ಥಿತಿಯನ್ನು ಮರೆಮಾಚಿ, ತನ್ನ ಪರಿಸ್ಥಿತಿಯೊಂದಿಗೆ ಹೊಂದಿಕೊಂಡು ತಾತ್ಕಾಲಿಕವಾಗಿ ಬಗೆಯ ಸಮತೆ mental equi-librium) ಯನ್ನು ಕಾಯ್ದುಕೊಳ್ಳಲು ವ್ಯಕ್ತಿಯು ನಾನಾರೀತಿಯ ಮನೋತಂತ್ರ (mental mechanism) ಗಳನ್ನು ಅನುಸರಿಸುತ್ತಾನೆ. ಮುಂದೆ ಸೂಕ್ತ ಪ್ರಚೋದನೆ ದೊರೆತಾಗ ಬಚ್ಚಿಟ್ಟ ಅಳಲು, ಆಸೆ ಆಕಾಂಕ್ಷೆಗಳು, ಹಳೆಯ ಅನುಭವಗಳು ನೆನಪಿನಾಳಗಳಿಂದ ಮರುಕಳಿಸುತ್ತವೆ.

ಧಾನ್ಯಮಾಲಿನಿ ತನ್ನ ಪ್ರೀತಿಯ ಮೊದಲಿನ ಪತಿ, ಸುಂದರ ಜೀವನ, ತನ್ನ ಜೀವಕ್ಕೊದಗಿದ ಪತನ, ಸಂಕಟಗಳನ್ನು ತಾತ್ಕಾಲಿಕವಾಗಿ ತನ್ನ ಮಗನಿಗಾಗಿ ಮರೆತು ಪರಿಸ್ಥಿತಿಗೆ ಹೊಂದಿಕೊಂಡಿದ್ದಳು. ಮುಂದೆ ಸೀತೆಯ ಸಂದರ್ಶನದಿಂದ, ಅವಳ ಸಂಸರ್ಗ ಪ್ರಭಾವ (social facilitation–ಸಾಮಾಜಿಕ ಅನುಕೂಲನ)ದಿಂದ ಅವಳಲ್ಲಿ ಸುಪ್ತವಾಗಿ ಅಡಗಿದ್ದ ಪಾತಿವ್ರತ್ಯದ ಕಿಡಿ ಪ್ರಜ್ವಲಿಸುತ್ತದೆ. ತನ್ನ 'ಪೂರ್ವಮಂ ನೆನೆದು' ತನಗೊದಗಿದ ಆತ್ಮಪತನಕ್ಕೆ ಮರುಗುತ್ತಾಳೆ. ರಾವಣನ ಸಂಗ, ಸುತನ ವಾತ್ಸಲ್ಯಗಳನ್ನೆಲ್ಲ ತೊರೆದು ಸದಾಕಾಲ ತಪಸ್ಸಿನಲ್ಲಿ ತೊಡಗುವಷ್ಟು ಪರಿವರ್ತನೆ ಪಡೆಯುತ್ತದೆ ಅವಳ ಆತ್ಮ. ಯಾರಿಗೂ ಅರಿಯದ ಅವಳ ಮೌನ ತಪಸ್ಸು ಅವಳಲ್ಲಿಯ ಭಾವಶುದ್ಧಿಯನ್ನು ಅಭಿವ್ಯಕ್ತ ಪಡಿಸುತ್ತದೆ.

ಊರ್ಮಿಳಾದೇವಿ ತನ್ನ ಪತಿಯ ಉದ್ಧಾರಕ್ಕಾಗಿ, ಕ್ಷೇಮಕ್ಕಾಗಿ ಸರಯೂ ನದಿಯ ತಟದಲ್ಲಿ ಸಕಲ ರಾಜ ಸುಖ–ಸಂತೋಷಗಳನ್ನು ದೂರ ಸರಿಸಿ ಒಬ್ಬ ತಪಸ್ವಿನಿಯಂತೆ ಕೈಕೊಳ್ಳುವ ಸುದೀರ್ಘ ಏಕಮುಖವಾದ ತಪಸ್ಸು ಇಡೀ ಲೋಕವನ್ನೇ ಆಕರ್ಷಿಸುತ್ತದೆ. 'ಶ್ರೀ ರಾಮಾಯಣ ದರ್ಶನ' ಕಾವ್ಯದಲ್ಲಿ ಅವಳಿಗಾಗಿಯೇ ಕವಿ ಒಂದು 'ಸಂಚಿಕೆ'ಯನ್ನು ಮೀಸಲಾಗಿರಿಸಿದ್ದಾರೆ. ಆದರೆ ಧಾನ್ಯಮಾಲಿನಿ ರಾವಣನ ಕೈಸೇರಿದ ದಿನದಿಂದ ಮನಸ್ಸಿನ ದ್ವಂದ್ವ ಹೋರಾಟಕ್ಕೆ ಸಿಲುಕಿ, ನೊಂದು, ಬೆಂದು ಅಗಲಿದ ಪತಿಯನ್ನು ನೆನೆನೆನೆದು ಮನದಲ್ಲೇ ಕೊರಗುವ ಇಂತಹ ತಪಸ್ಸು, ನಂತರ ತನ್ನ ಆತ್ಮೋದ್ಧಾರಕ್ಕಾಗಿ ಕೈಕೊಳ್ಳುವ ತಪಸ್ಸು ಎರಡೂ ಮೌನ ತಪಸ್ಸುಗಳು ಅವ್ಯಕ್ತವಾದವುಗಳು.

೪

ಅತಿಕಾಯನು ಹಿಂದಿನಂತೆ ಈಗ ತನ್ನ ಮಾತೆಯನ್ನು ತನ್ನ ಅಕ್ಕರೆಯಿಂದ ಸಂತೈಸಲು ಅಸಮರ್ಥನಾಗುತ್ತಾನೆ. ದಾರಿ ಕಾಣದ ಅವನಿಗೆ ಅದೇ ವೇಳೆಗೆ ಕಾಳಗಕ್ಕೆ ದೊರೆತ ತಂದೆಯ ಆಣತಿ ವರವಾಗಿ ಪರಿಣಮಿಸುತ್ತದೆ.

"ತೊರೆವನೇನ್ ವೀರೋಚಿತದ ರಣದ ಮರಣದ
ಸುಯೋಗಮಂ ?"

ತನ್ನ ತಾಯಿ ತನಗಾಗಿ ಬದುಕಿದ್ದಾಳೆ. ಅವಳನ್ನು ಈ ಕಷ್ಟದಿಂದ ಪಾರುಮಾಡಲು ಒಂದೇ ಉಪಾಯ. ಅದುವೇ ತನ್ನ ಅವಸಾನ.

"ನನ್ನಿಂದೆ, ನನಗಾಗಿ, ನನ್ನ ತಾಯ್
ಬರ್ದುಕಿ ಬೇಯುತ್ತಿಹಳ್ ? ನನ್ನ ಸಾವಿರ್ದಗ್ಗೆ
ತಾಯ್ಗೆನಗೆ, ಶಾಂತಿಯಂ"

ಎಂದು ಯೋಚಿಸಿ ಹೊರಟ ಅತಿಕಾಯ ರಣರಂಗದಲ್ಲಿ ಮರಣವನ್ನಪ್ಪುತ್ತಾನೆ ಮಗನ ಸಾವು ಧಾನ್ಯಮಾಲಿನಿಗೆ ಆಘಾತವನ್ನುಂಟು ಮಾಡುತ್ತದೆ. ಯಾಕಿಗೋಸ್ಕರ ಎಲ್ಲ ದುಃಖವನ್ನು ಮರೆಮಾಚಿದ್ದಳೋ ಅವನೇ ಇಲ್ಲವಾದಾಗ ಅವಳಲ್ಲಿಯ ಬಗೆಯ ಸಮತೆ (mental equilibrium) ಉಳಿಯದೆ ಹೋಗುತ್ತದೆ.

೫

ಧಾನ್ಯಮಾಲಿನಿಯ ಈಗಿನ ದೃಶ್ಯ ಅತ್ಯಂತ ಭಾವಪೂರ್ಣವಾದುದು. ಅವಳು ಸಾವಿನ ಉಡಿಯಲ್ಲಿ ಬೀಳುವ ಕ್ಷಣಗಳಿವು.

"ಧಾನ್ಯಮಾಲಿನಿದೇವಿಗಸ್ತಮಿಸುತಿರ್ಪುದಸು !
ಅತಿಕಾಯನೊಡಲುಳಿದುದಂ ಕೇಳಿದುದೆ ತಡಂ
ಒಡೆಯ, ಮೂರ್ಛೆಗೆ ಸಂದಳಿನ್ನುಪಚರಿಸಿಹರ್ ದಾದಿಯರ್ ।

ಎಂದು ದಾಸಿಯರರುಹುತ್ತಾರೆ.

ತನ್ನ ಜೀವನದ ಈ ವರೆಗಿನ ದಿನಗಳಲ್ಲಿಯ ಒಗರು, ಹುಳಿಯು ಕಳೆದು ತಾನಾಗಿಯೇ ಹಣ್ಣಾಗುವಂತಹ ಪರಿಸ್ಥಿತಿಯನ್ನು ರಾವಣನಿಗಾಗಿ ಕವಿ ಇಲ್ಲಿ ನಿರ್ಮಾಣ ಮಾಡಿದ್ದಾರೆ. ಅಸಂಖ್ಯ ರಾಕ್ಷಸ ಪರಿವಾರದ ಸಾವು, ತಮ್ಮ ಕುಂಭಕರ್ಣ, ನೆಚ್ಚಿನ ಮಗ ಇಂದ್ರಜಿತು, ಕುಮಾರ ಅತಿಕಾಯರ ಮರಣ. ಈಗ ಮೆಚ್ಚಿನ ಉಪಪತ್ನಿ ಧಾನ್ಯಮಾಲಿನಿಯ ಸರದಿ.

"ಏರಮೇಲೆರ್ಗೊಂಡ ಸಿಂಗದೋಲ್" ಬಾರಿಬಾರಿಗೆ ಬಿಸುಸುಯ್ಯುತ್ತ ಮಗನನ್ನು ಕಳೆದುಕೊಂಡ ಮಂಡೋದರಿಯನ್ನು ಸಂತೈಸುತ್ತಿದ್ದ ರಾವಣ ಅವಳನ್ನು ದಾಸಿಯರ ಕೈಗೊಪ್ಪಿಸಿ ಧಾನ್ಯಮಾಲಿನಿಯರ ಮನೆಗೆ ಬರುತ್ತಾನೆ. ಅಲ್ಲಿಯ ಅವಳ ಆ ಸ್ಥಿತಿಯನ್ನು ಕಂಡಾಗ ಮೂರುಲೋಕವನ್ನೇ ಗೆದ್ದ ಮಹಾ ಸಾಮ್ರಾಟನಿಗೂ ಆ ಕ್ಷಣ ತನ್ನ ಶೌರ್ಯ ಐಶ್ವರ್ಯವೆಲ್ಲವೂ ಅರ್ಥಹೀನವಾಗಿ ತೋರುತ್ತದೆ. ಬಾಳಿನಲ್ಲಿಯ ಭ್ರಮೆ ಅಳಿದುಹೋಗುತ್ತದೆ. ಜೀವನದಲ್ಲಿ ಜಿಗುಪ್ಸೆ ಮೂಡುತ್ತದೆ. ಈ ಬಾಳೆಂಬುದು ಕ್ಷಣಿಕ, ಅಶಾಶ್ವತ ಅನಿತ್ಯವೆಂಬ ಸಾಕ್ಷಾತ್ಕಾರವಾಗುತ್ತದೆ.

"ಬಾಳ್!
ಕಳ್ಳನೊರೆದೊಂದ ಸುಳ್ಳಿನ ಸಂತೆ! ಬರಿ ಬೊಂತೆ!
ಕಡೆಗೆ, ಬೆಂಕಿಯ ಹೊರೆದು, ಬೂದಿರಾಸಿಯನುಳಿವ
ಅರ್ಥವಿಲ್ಲದ ಬಣಗು ಕಂಥೆ! ಇದಕೇಕಿನಿತು ಚಿಂತೆ ?

ಜೀವ ಇರುವವರೆಗೆ ಯಾವುದನ್ನು ಭ್ರಮಿಸಿ ಬೆನ್ನು ಹತ್ತಿ ಓಡುತ್ತಿತ್ತೊ, ಯಾವ ಸತಿ–ಸುತರು. ಬಂಧು–ಬಾಂಧವರು ವ್ಯಾಮೋಹ ಬಲವಾಗಿ ಹಿಡಿದಿತ್ತೊ, ಅವರೆಲ್ಲ ತನ್ನ ಕಣ್ಣೆದುರಿನಲ್ಲಿಯೆ ಒಬ್ಬರ ಮೇಲೊಬ್ಬರು ಉರುಳುವುದನ್ನು ಕಂಡಾಗ ರಾವಣನಿಗೆ ಅರಿವಿನ ಅರುಣೋದಯವಾಗುತ್ತದೆ, ಅಂತರಂಗ ವೈರಾಗ್ಯದ ಕಡೆಗೆ ತಿರುಗುತ್ತದೆ.

ಚಿಂತೆಯಿದ ರಾವಣ ಧಾನ್ಯಮಾಲಿನಿಯೆಡೆಯ ಪೀಠದಲ್ಲಿ ಕುಸಿಯುತ್ತಾನೆ. ಮೆಲ್ಲನೆ ತನ್ನ ಕರತಳವನ್ನು ಅವಳ ಸುಡುಹಣೆಗೆ ಸೋಂಕಿಸಿ ಮುಂಗುರುಳುಗಳನ್ನು ತೀಡುತ್ತಾನೆ. ಅವಳು ಅರೆಪ್ರಜ್ಞಾಸ್ಥಿತಿಯಲ್ಲಿದ್ದರೂ ಬೆಚ್ಚುತ್ತಾಳೆ. ನಿಟ್ಟುಸಿರು ಬಿಡುತ್ತ ಕಣ್ದೆರೆದು ಯಾರನ್ನೂ ಗುರುತಿಸದ ನೋಟದಿಂದ ನೋಡಿ, ತನ್ನೊಳಗೆ ತಾನು ಇನ್ನಾರೋ ಅಶರೀರಿಯೊಡನೆ ಮಾತಾಡುತ್ತಿದ್ದಳು, ದನುಜೇಂದ್ರನೂ ಅನಿಮೇಷನಾಗಿ ಆಲಿಸುವಂತೆ.

"ಮುನಿಯದಿರ್ ಸ್ವಾಮಿ. ಮೆಯ್‌ಸೊಲ್ತುದು ದಿಟಂ, ಮನಂ
ಸುಡುತಿರ್ದುದದನೇಗಳುಂ. ಮೆಯ್ಯನಲ್ಲದೇಂ
ಮನವನಿತ್ತೆನೆ ರಾಕ್ಷಸಂಗೆ ? ಕೈಬಿಡದಿರೀ
ದಾಸಿಯಂ. ಮನವನಲ್ಲದೆ ತನುವ ನೋಡುವನೆ
ಜಗದೀಶ್ವರಂ ? ನನಗೆ ನೀನೆ ಸರ್ವೇಶ್ವರಂ
ಸೀತೆಯುಂ, ಪೂಜ್ಯೆಯುಂ, ಆ ಲೋಕಮಾತೆಯುಂ.
ಪಶುರಾಕ್ಷಸಂ ಮುಟ್ಟಿ ಪೊತ್ತು ತಂದಾ ಕತದಿನ್
ಅಪವಿತ್ರಳಾದಳೇನಾ ಪತಿವ್ರತೆ ? ಸ್ವಾಮಿ
ನನ್ನ ಮುಡಿಯುಂ ನೋಡು. ನಿಚ್ಚಮುಂ ತ್ರಿಜಟೆಯಿಂ
ನಾಂ ಪಡೆದು ಮುಡಿದ ರಘುರಾಮನ ಮಡದಿಯಡಿಯಾ
ಪಾಪನಾಶಕ–ಧೂಳಿ! ಏನೊ ದುಃಸ್ವಪ್ನದೊಳ್
ಪ್ರಾರಬ್ಧ ಕರ್ಮ ಪರಿಪಾಕದಿಂದಗಲಿದೆವು
ನೀನು ನಾನ್. ಆ ಸ್ವಪ್ನವೊಡೆದುದಿನ್

ಧಾನ್ಯಮಾಲಿನಿಯ ಮನಸ್ಸನ್ನು ವಿಶ್ಲೇಷಿಸಿದಾಗ (phychoanalysis) ಇಷ್ಟು ದಿನಗಳ ವರೆಗೆ ಅವಳು ಬಚ್ಚಿಟ್ಟ ಗೌಪ್ಯ ಭಾವ ವಿರೇಚನ (Catharsis) ಕ್ರಿಯೆಯಿಂದ ಇಂದು ಪ್ರಜ್ಞಾಹೀನ ಸ್ಥಿತಿಯಲ್ಲಿ ಪ್ರಕಟವಾಗಿತ್ತು.

ಮತ್ತೆ ಕಣ್ಮುಚ್ಚಿದಳ್ ಧಾನ್ಯಮಾಲಿನಿ.
ಅವಳ ಕೊನೆಯ ಘಳಿಗೆಯಲ್ಲಿಯ ಮಾತುಗಳನ್ನು ಕೇಳಿದ ದಶಾನನ

"ಪಿಂತೆಂದುಮಾವ ಕಾರಣಕನುಭವಿಸದೊಂದು
ಮರ್ಮಘಾತದ ವೇಧೆಯಿಂ ನರಳ್ದನಾಳದಿಂ"

ಮಾರೀಚನೊಂದಿಗೆ ಅಂದು ಹೇಳಿದ ತನ್ನ ಮಾತುಗಳು ಒಂದೊಂದಾಗಿ ಅವನ ಕಣ್ಮುಂದೆ ಸುಳಿಯುತ್ತವೆ.

"ರಾಕ್ಷಸೇಶ್ವರನ ಪ್ರೈಸಿರಿಗೆ
ಪಿತ್ತೇಶಜೇತನೈಸಿರಿಗೆ, ದಿಕ್ಪಾಲರಂ
ಗೆಲ್ದ ಪೆಂಪಿಗೆ, ನಿಖಿಲ ಭೂಮಿನಾಥರನೊತ್ತಿ
ಬಾಯ್ಕೇಳಿಸಿದ ಯಶೋವೈಭವಕೆ, ರಾವಣನ
ರಸಿಕತೆಗೆ, ಸತ್ತ್ವಕ್ಕೆ, ವೀರ್ಯಕ್ಕೆ. ತೇಜಕ್ಕೆ
ಜೌವನಕೆ ಕಂಡೆನಿಲ್ಲಾಸೊರ್ವಳಂ, ನನಗೆ
ಮೆಚ್ಚಿ ವಶವಾಗಿರ್ದಾ ಪವಿತ್ರಾಂಗಿಯುಂ।"
..................................
..................................
"ಧಾನ್ಯಮಾಲಿನಿಯೆಂಬಾಕೆಯುಂ ಬಲ್ಲೆ ನೀನೆನ್ನ
ಮೆಚ್ಚಿನುಪಪತ್ನಿಯುಂ ರಾವಣನ ಬೇಟಕ್ಕೆ
ಸೋಲದವಳೊರ್ವಳಂ ಕಾಣ್ಬೆನೆಂದಿರೆ। ಕಟ್ಟ
ಕಡೆಗಾಕೆಯುಂ ಸೋಲ್ತಳೆನಗೆ.

ರಾವಣ ಭಾವಿಸಿದಂತೆ ಧಾನ್ಯಮಾಲಿನಿ ಅವನಿಗೆ ಎಂದೂ ಸೋತಿರಲಿಲ್ಲ. ಅವಳು ತನಗೆ ಸೋತಳೆಂಬ ಅವನ ಭ್ರಾಂತಿ ಈಗ ಒಡೆದು ಚೂರು ಚೂರಾಗಿತ್ತು. ಎಷ್ಟೋ ವರ್ಷಗಳ ವರೆಗೆ ತನ್ನೊಡನೆ ತನ್ನ ಮೆಚ್ಚಿನವಳಾಗಿ, ಉಪಪತ್ನಿಯಾಗಿ, ಅನ್ಯೋನ್ಯವಾಗಿದ್ದುಕೊಂಡೂ ಹದಿಬದೆಯಾಗಿಯೇ ಉಳಿದುದನ್ನು ಅವನಿಗೆ ಗುರುತಿಸಲಾಗಿರಲಿಲ್ಲ. ಹಿಂದೆಂದೂ ಯಾವ ಕಾರಣಕ್ಕೂ ಅನುಭವಿಸದ ವಜ್ರಾಘಾತ ಇಂದು ಅವನ ಒಳಗಣ್ಣನ್ನು ತೆರೆಸಿತ್ತು. ಕಾಮಮೋಹದಿಂದಾವರಿಸಿದ ತನ್ನ ಅವಿವೇಕ ತನದಿಂದ—

"ತನ್ನ ಕಾಮಾತಿಶಯದಿಂದೆ
ಶವದ ಸಹವಾಸದೊಳ್ ಭೋಗಿಯಾಗಿರ್ದವಂ
ಬೋಧೆ ತಿಳಿದೇಳುವೆ ಜಿಗುಪ್ಸೆಯಿಂದತಿ ನಾಣ್ಚಿ"

ಅತೀವವಾದ ಭ್ರಮನಿರಸನದ ವೇಧೆಯಿಂದ ಸಾವಕಾಶವಾಗಿ ಚೇತರಿಸಿಕೊಳ್ಳುತ್ತ

"ಧಾನ್ಯಮಾಲಿನಿಯಾತ್ಮಮಂ
ಕ್ಷಮೆಬೇಡುವಂದದಿಂ ಮುಡಿಮಣಿದನವಳಡಿಗೆ
ದೇವದಾನವ ಭಯಂಕರಾತ್ಮ ಸಂತಾಪ
ದೀನ ಮನನಾಗಿ."

ಇಲ್ಲಿ ರಾವಣನ ಹೃದಯ ಸಾಕಷ್ಟು ಹಣ್ಣಾಗಿದ್ದುದನ್ನು ಗುರುತಿಸಬಹುದು. ಧಾನ್ಯಮಾಲಿನಿಯ ಪಾತಿವ್ರತ್ಯಕ್ಕೆ ಮಣಿದ ರಾವಣನನ್ನು ಕಂಡು

"ಪುಲಕಿಸಿತು ಪರಶಿವನ ಮೆಯ್;
ಮುಗುಳು ನಗೆ ಮಲರಿದತ್ತಾದಿಶಕ್ತಿಯ ಮೊಗಕೆ,
ಮಾಯಾಂಗನೆಯ ಕಯ್ಯ ಮೋಹಪಾಶಂ ನಡುಗೆ,
ಕಠಿಬಿದಳು ಕಂಡು ಮುಕ್ತ್ಯಂಗನೆಯ ಹಸಿತಸಿತ
ವದನಾಬ್ಜಮಂ!

ಧಾನ್ಯಮಾಲಿನಿಯ ಮಹಾ ಮೌನ, ಅವಳ ಕೊನೆಯಲ್ಲಿಯ ಮರ್ಮಾಘಾತದ ಮಾತುಗಳು ರಾವಣನ ಜೀವನದ ದಿಕ್ಕನ್ನೇ ಬದಲಿಸಿ ಬಿಡುತ್ತವೆ. ಇದೀಗ ರಾವಣನ ಉದ್ಧಾರ ಸಮೀಪಿಸುತ್ತಿದೆ.

೬

ರಾವಣನನ್ನು ಸುತ್ತುವರಿದಿದ್ದ ಕ್ಷೇಮಕಾತರರ ಪ್ರಾರ್ಥನೆ, ಬುದ್ಧಿ ಮಾತುಗಳಿಂದ ಅವನ ಹೃದಯ ಪರಿವರ್ತನೆಯಾಗುತ್ತಿತ್ತೆಂಬುದೇನೊ ನಿಜ. ಸೀತೆಯ ತಿರಸ್ಕಾರ, ಅವಳು ನಿದ್ದೆ, ನೀರಡಿಕೆ ತೊರೆದು ಆಚರಿಸುತ್ತಿರುವ ಕಠೋರ ತಪಸ್ಸುಗಳು ಅವಳಲ್ಲಿಯ ರಾವಣನ ಕಾಮಾತುರತೆಯನ್ನು ಮುಸುಳಿಸಿರುತ್ತವೆ. ಆದರೂ ಆ ಕಾಮ ವಾಸನೆ ಆಗಾಗ ಅವನ ಮನದಲ್ಲಿ ತೀಡುತ್ತಿತ್ತು. ಹುಟ್ಟುವಾಗಲೆ ಹೆಣ್ಣಿನ ಆಸೆಯನ್ನು ಹೊತ್ತುಕೊಂಡೇ ಬಂದ ಕಾಮನಿಪುಣನ ಈ ದೌರ್ಬಲ್ಯ ಸೀತೆಯ ವರ್ತನೆ ಮಾತ್ರದಿಂದಲೇ ಒಂದಿಷ್ಟೂ ಉಳಿಯದೆ ಏಕಾಏಕಿಯಾಗಿ ಸಂಪೂರ್ಣ ಅಳಿದು ಹೋಗಿತ್ತಾದರೆ ಅದು ಅಸ್ವಾಭಾವಿಕ ಹಾಗೂ ಮಾನಸಿಕ ಶಾಸ್ತ್ರಕ್ಕೆ ವಿರೋಧವೂ ಆಗುತ್ತಿತ್ತು. ರಾವಣನಲ್ಲಿಯ ಕಾಮ ವಾಸನೆ ಸಂಪೂರ್ಣ ಅಳಿಯಬೇಕಾದರೆ ಅವನಿಗಿರುವ ಭ್ರಾಂತಿ–ತನ್ನ ಸಕಲ ಐಶ್ವರ್ಯ, ಭೋಗಗಳಿಗೆ ಸೋಲದ ಒಬ್ಬ ಹೆಣ್ಣೂ ಇಲ್ಲ ಎಂಬ ಹೆಣ್ಣಿನ ಬಗೆಗಿನ ಬಲವಾದ ಭ್ರಮೆಯನ್ನು ಕುಟ್ಟಿ ಪುಡಿ ಪುಡಿ ಮಾಡಬೇಕಿತ್ತು. ಆದ್ದರಿಂದ ಧಾನ್ಯಮಾಲಿನಿ ಅವನಲ್ಲಿಯ ಹೆಣ್ಣಿನ ಮೋಹವೂ ಅಹಂಕಾರವೂ ಸಂಪೂರ್ಣ ನಾಶವಾಗಲು ಕಾರಣಳಾಗುತ್ತಾಳೆ. ಆದ್ದರಿಂದಲೇ ಕೊನೆಕೊನೆಗೆ ರಾವಣನಿಗೆ ಸೀತೆಯಲ್ಲಿದ್ದ ಕಾಮದೃಷ್ಟಿ ಸಂಪೂರ್ಣ ಸುಟ್ಟುಹೋಗಿ ಬರಿ ಛಲ ಉಳಿದುಕೊಳ್ಳುತ್ತದೆ.

ಧಾನ್ಯಮಾಲಿನಿ ಪತಿತೆ, ನಿಜ. ಪತಿತೆಯ ಪತಿತ್ವವನ್ನೂ ಪೋಷಿಸುವುದು ಇಲ್ಲಿಯ ಉದ್ದೇಶವಲ್ಲ ವಸ್ತುವಿನ ನಿಜಸ್ಥಿತಿಯ ಅನ್ವೇಷಣೆ ಮತ್ತು ಪತಿತೆಯ ಉದ್ಧಾರ ಹಾಗೂ ಸತ್‌ಶಕ್ತಿಯಿಂದ ದುಷ್ಟಶಕ್ತಿಯಲ್ಲಿ ಉಂಟಾಗುವ ಪರಿವರ್ತನವನ್ನು ನಿರೂಪಿಸುವುದು. ಕಾವ್ಯದಲ್ಲಿ ಉಕ್ತವಾದುದರ ಜೊತೆಗೆ ಅನುಕ್ತವಾದುದೂ ಇರುತ್ತದೆ. ಹೀಗಾಗಿ ಎಷ್ಟೋ ಪಾತ್ರಗಳು ಅಪೂರ್ಣ ಚಿತ್ರಗಳಾಗಿ ಉಳಿದುಕೊಳ್ಳುತ್ತವೆ. ಅವುಗಳನ್ನು ತಮ್ಮ ಕಲ್ಪನೆ. ಪ್ರತಿಭೆಗಳಿಂದ ಪೂರ್ಣಗೊಳಿಸುವುದು ಓದುಗರ ಕರ್ತವ್ಯ.

"ಪೆಣ್ಗೆ ತನುವಲ್ತೆ ಹೃದಯಂ" ಎಂಬ ಮಂಡೋದರಿಯ ಮಾತಿನಲ್ಲಿ ಆಳವಾದ ತತ್ವ ಅಡಗಿದೆ. ಕೆಲವೊಮ್ಮೆ ಪಾಶವೀ ಶಕ್ತಿಗೆ ಹೆಣ್ಣಿನ ದೇಹಶಕ್ತಿ ಸೋಲಬಹುದು. ಆದರೆ ಹೃದಯ ಮನಸ್ಸುಗಳನ್ನು ಗೆಲ್ಲದ ಆ ದೇಹಕ್ಕೆ ಯಾವ ಬೆಲೆಯಿದೆ ? ಒಂದು ವ್ಯಕ್ತಿ ಪವಿತ್ರ ಆತ್ಮ ಹೊಂದಿದ್ದೂ ಪರಿಸ್ಥಿತಿಯ ಕೈಗೊಂಬೆಯಾಗಿ ದುಷ್ಟಶಕ್ತಿಯ ಹಿಡಿತಕ್ಕೆ ಸಿಕ್ಕು ಪತಿತಳಾದರೆ ಮಾನವೀಯತೆಯುಳ್ಳ ಯಾರಾದರೂ ಆ ವ್ಯಕ್ತಿಗೆ ಅನುಕಂಪ ತೋರಬೇಕಾಗುತ್ತದಲ್ಲದೆ ಯಶೋಧರ ಚರಿತೆಯಲ್ಲಿ ಬರುವ ಅಮೃತಮತಿಯಂತೆ ತನ್ನ ಅಧಃಪತನ ಅರಿತಿದ್ದೂ ರುಚಿ–ವೇಗದಲ್ಲಿ ಜಾರುವ ಪಾತ್ರಕ್ಕೆ ಅನುಕಂಪ ತೋರಲಾದೀತೆ ? ತನ್ನ ಪತಿಯಿಂದ ದೂರಾಗಿ. ಅವನಿಗಾಗಿ ಮರುಗಿ, ಕೊರಗಿ ಕಣ್ಣೀರ್ಗರೆಯುತ್ತ, ಇತ್ತ ರಾವಣನೊಂದಿಗೂ ಬಾಳುತ್ತ, ಮಾನಸಿಕವಾಗಿಯೂ, ದೈಹಿಕವಾಗಿಯೂ ಯಮಯಾತನೆಯನ್ನು ಅನುಭವಿಸುತ್ತಿರುವ ಧಾನ್ಯಮಾಲಿನಿ ಬಗೆಗೆ ಅನುಕಂಪ, ಸಹಾನುಭೂತಿಗಳು ಮೂಡುವದು ಸಹಜವೂ, ಅನಿವಾರ್ಯವೂ, ಸರ್ವಸಮ್ಮತವೂ ಆಗಿದೆ.

ಕವಿ ಕುವೆಂಪುರವರ ಕಾವ್ಯದಲ್ಲಿ ಕೀಳ್ತನಕ್ಕೆ ಎಷ್ಟೂ ಸ್ಥಾನವಿಲ್ಲ. ಅವರು ಸಮಕಾಲೀನ ಪ್ರಪಂಚದ ವಿದ್ಯಮಾನಗಳನ್ನು ನೋಡಿ, ಕೇಳಿ, ಅಧ್ಯಯನ ಚಿಂತನೆಗಳಿಂದ ಅವುಗಳ ಅಂತಃಸತ್ಯಗಳನ್ನೂ. ಹಿಂದು ಮುಂದಿನ ಅರಿವುಗಳನ್ನೂ ಹೊಂದಿ, ಅವುಗಳನ್ನೇ 'ಶ್ರೀರಾಮಾಯಣ ದರ್ಶನ' ಕಾವ್ಯದಲ್ಲಿ ಕಾವ್ಯವಸ್ತು ನಿರೂಪಣೆ; ಯುಗಧರ್ಮಗಳ ವ್ಯೈದಾಳಿಕೆ–ಈ ಮೂರು ಅಂಶಗಳಿಂದ ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಸಮಕಾಲೀನ ವಿದ್ಯಮಾನಗಳನ್ನು ಸಾರ್ವಕಾಲೀನ ಪ್ರಜ್ಞೆಯಿಂದ ಚಿತ್ರಿಸುವುದು ದೃಷ್ಟಾರನಾದ ಕವಿಗೆ ಮಾತ್ರ ಸಾಧ್ಯ. ವಾಲ್ಮೀಕಿ ವ್ಯಾಸರು ಸಾರ್ವಕಾಲೀನ ಪ್ರಜ್ಞೆಯುಳ್ಳ ಋಷಿಕವಿಗಳಾಗಿದ್ದರಿಂದ ಸಮಕಾಲೀನ ವಿದ್ಯಮಾನಗಳನ್ನೇ ಕೃತಿಗೈದರೂ ಆ ಕೃತಿಗಳು ಅಜರಾಮರವಾಗಿವೆ. ಕವಿಯ ರಸಾರ್ದ್ರ ಹೃದಯಕ್ಕೆ ಸಾಮಾನ್ಯರು ನೋಡುವ ಹೊರಚೆಲುವಿನ ಜೊತೆಗೆ ಅಂತಃಶ್ಚೈತನ್ಯರೂಪಿಯಾದ ನಿತ್ಯಸತ್ಯವೂ ಗೋಚರಿಸುತ್ತದೆ. ಅದನ್ನು ಪ್ರತಿಮಿಸುವುದೇ 'ಶ್ರೀರಾಮಾಯಣದರ್ಶನ' ಭವ್ಯ ಕಾವ್ಯದ ಚರಮ ಲಕ್ಷ್ಯ.

ಈ ದಿಶೆಯಿಂದ ನೋಡಿದಾಗ 'ಶ್ರೀ ರಾಮಾಯಣ ದರ್ಶನ' ಮಹಾಕಾವ್ಯದಲ್ಲಿ ಇಪ್ಪತ್ತನೆಯ ಶತಮಾನದ ಸಾಮಾಜಿಕ ಮತ್ತು ಮನೋವೈಜ್ಞಾನಿಕ ಪ್ರಜ್ಞೆಗಳು ಅಲ್ಲಲ್ಲಿ ಪ್ರಕಟವಾಗಿಯೂ ಕೆಲವೆಡೆ ಸೂಚ್ಯವಾಗಿಯೂ ಅಭಿವ್ಯಕ್ತವಾಗಿರುವುದನ್ನು ಕಾಣಬಹುದು.

ಆದಿಕವಿ ವಾಲ್ಮೀಕಿ ಮಹರ್ಷಿಗಳು ತಮ್ಮ ರಾಮಾಯಣದಲ್ಲಿ ಯಾವೊಂದು ಆದರ್ಶವನ್ನು ಇಟ್ಟುಕೊಂಡಿದ್ದರೊ ಕಾಲಾಂತರದಲ್ಲಿ ನಾನಾ ರೂಪ ತಾಳಿ ಬೇರೆ ಬೇರೆ ಭಾಷೆಗಳಲ್ಲಿ ಅಂದಿನಿಂದ ಇಂದಿನವರೆಗೆ ವಿರಾಟ್‌ರೂಪಿಯಾಗಿ, ಪಾತ್ರ, ಘಟನೆ, ಸನ್ನಿವೇಷಗಳಲ್ಲಿ ಅವುಗಳನ್ನು ನಡೆಸುವ ನುಡಿಸುವ ರೀತಿಯಲ್ಲಿ ವಿಕಾಸಕ್ರಮದ ಔನ್ನತ್ಯವನ್ನು ಕಾಣುತ್ತೇವೆ.

ರಾಷ್ಟ್ರಕವಿ ಕುವೆಂಪುರವರ 'ಶ್ರೀರಾಮಾಯಣ ದರ್ಶನ' ಈ ಶತಮಾನದ ಕನ್ನಡದ ಮಹಾಕಾವ್ಯ. ತನ್ನ ಸಮಕಾಲೀನ ಜನತೆಯ ಮೇರುಕೃತಿ. ವಸ್ತು ಹಳೆಯದಾದರೂ ಹಿಡಿದಾದ ಆತ್ಮಸಾಕ್ಷಾತ್ಕಾರದಿಂದ ಹೊಳೆದು ಹೊರಹೊಮ್ಮಿದ ದರ್ಶನ ಮಾತ್ರ ಹೊಸದು. ಅದು ಕುವೆಂಪುರವರದು. ಅವರ ಈ ಕಾವ್ಯದಲ್ಲಿಯ ಧಾನ್ಯಮಾಲಿನಿಯ ಪಾತ್ರ ಅನುಪಮ.

# ಸಂಸ್ಕೃತ ಸಾಹಿತ್ಯದಲ್ಲಿ 'ಧರ್ಮ'ದ ಚಿಂತನೆ

(ಧರ್ಮ=ಕರ್ತವ್ಯಕರ್ಮ=ಸುಖೀ ಜೀವನ ವಿಧಾನ)

---

● ದಯಾನಂದ ನರಸಿಂಹ ಶಾನಭಾಗ

ಮನುಷ್ಯ ಮನುಷ್ಯನಾಗಿ ಬಾಳತೊಡಗಿದಂದಿನಿಂದ 'ಧರ್ಮ'ದ ಬಗೆಗೆ ಚಿಂತನೆ ಮಾಡುತ್ತಲೇ ಬಂದಿದ್ದಾನೆ. ಇಂದು ಧರ್ಮದ ಬಗೆಗೆ ಮಾತನಾಡಬೇಕಾದರೆ ಉತ್ತರಿಸಬೇಕಾದ ಪ್ರಪ್ರಥಮ ಪ್ರಶ್ನೆಯೆಂದರೆ, ಈ ಆಧುನಿಕ ಯುಗದಲ್ಲಿ ಧರ್ಮದ ಕುರಿತು ಮಾತನಾಡುತ್ತ ವ್ಯರ್ಥ ಸಮಯವೇಕೆ ಕಳೆಯಬೇಕು ? ಇಂದು ನಮಗೆ ಧರ್ಮ ಬೇಕಿಲ್ಲ; ಆದುದರಿಂದ ಅದರ ಬಗ್ಗೆ ಮಾತೂ ಬೇಡ, ಉಪನ್ಯಾಸವೂ ಬೇಡ, ಸಮ್ಮೇಲನಗಳೂ ಬೇಡ, ಚಿಂತನೆಯೂ ಬೇಡ. ಅದು ಕೆಲವರು ಹೊಟ್ಟೆ ಪಾಡಿಗಾಗಿ ಮಾಡುವ ಚಿಂತೆಯೇ ಹೊರತು, 'ಧರ್ಮ' ದ ಅಗತ್ಯವನ್ನು ವೈಚಾರಿಕವಾಗಿ ಆಧುನಿಕರಿಗೆ ತಿಳಿಸಿಹೇಳುವ ಪ್ರಯತ್ನಗಳಲ್ಲ.

ಆದುದರಿಂದ, ಮೊಟ್ಟಮೊದಲು ನಮ್ಮ ಪೂರ್ವಜರು ಧರ್ಮದಿಂದ ಅಥವಾ ಧರ್ಮಾಚರಣೆಯಿಂದ ಸಾಧಿಸಿದ್ದ ಉತ್ತಮಸ್ಥಿತಿಯನ್ನು ತಿಳಿದುಕೊಂಡು ಆ ಬಳಿಕ ಆ ಉತ್ತಮಸ್ಥಿತಿ ನಮಗೆ ಬೇಕಿದ್ದರೆ ಧರ್ಮವೆಂದರೇನು ? ಅದರ ಅಗತ್ಯವೇನು ? ಎಂಬುದರ ಕುರಿತು ವಿವೇಚಿಸೋಣ.

ಮಹಾಭಾರತದಲ್ಲಿ 'ಕೃತಯುಗ'ದ ವರ್ಣನೆ ಬರುತ್ತದೆ. ಅದೊಂದು ಆದರ್ಶಸಮಾಜದ ಸ್ಥಿತಿ. ಆಗ ಜನರನ್ನು ಆಳುವ ಅರಸನೇ ಇರಲಿಲ್ಲವಂತೆ.

ನ ರಾಜ್ಯಂ ನ ಚ ರಾಜಾಸೀತ್ ನ ದಂಡೋ ನ ಚ ದಾಂಡಿಕಃ॥
ಧರ್ಮೇಣೈವ ಪ್ರಜಾಃ ಸರ್ವಾ ರಕ್ಷಂತಿ ಸ್ಮ ಪರಸ್ಪರಮ್॥

ಆ ಕಾಲದಲ್ಲಿ ರಾಜ್ಯವೂ ಇರಲಿಲ್ಲ, ರಾಜನೂ ಇರಲಿಲ್ಲ; ಶಿಕ್ಷೆಯೂ ಇರಲಿಲ್ಲ, ಶಿಕ್ಷೆ ಕೊಡುವವನೂ ಇರಲಿಲ್ಲ (ಅಂದರೆ ಅಪರಾಧಿಯೇ ಇರಲಿಲ್ಲ). ಜನರೆಲ್ಲರೂ ಕೂಡ 'ಧರ್ಮ' ಅಥವಾ ಧರ್ಮಾಚರಣೆಯಿಂದಲೇ ತಮ್ಮ-ತಮ್ಮನ್ನು ರಕ್ಷಿಸಿಕೊಳ್ಳುತ್ತಿದ್ದರು. ಅಂದರೆ, ತಮ್ಮ ಧರ್ಮಾಚರಣೆಯ ಮೂಲಕವೇ ಜನರು ಪರಸ್ಪರರನ್ನು ಪೀಡಿಸದೇ ಎಲ್ಲರೂ ಸುಖ-ಸಂತೋಷದಿಂದ ಇರುತ್ತಿದ್ದರು.

ಇಂತಹ ಅಪರಾಧರಹಿತ, ಪೀಡಾರಹಿತ, ಶೋಷಣ ರಹಿತ ಸಮಾಜ ನಮಗೆ ಬೇಡವೇ ? ಬೇಕೇ ಬೇಕೆಂಬುದು ಪ್ರತಿಯೊಬ್ಬನ ಬಯಕೆ. ಹಾಗಾದರೆ ಅದಕ್ಕೆ ಆಧಾರವಾಗಿದ್ದ 'ಧರ್ಮ'ದ ಕುರಿತು ನಾವು ತಿಳಿದುಕೊಳ್ಳುವದು ಅಗತ್ಯ ಮತ್ತು ನಮ್ಮ ಪೂರ್ವಜರು 'ಧರ್ಮ'ದ ಕುರಿತು ಮಾಡಿರುವ ಚಿಂತನೆ, ವಿಚಾರ ವಿನಿಮಯ ಮುಂತಾದವು ನಮ್ಮ ಸಂಸ್ಕೃತ ಸಾಹಿತ್ಯದಲ್ಲಿ ಪ್ರಕಟವಾಗಿದೆ.

'ಧರ್ಮ'ದ ಕುರಿತು ನಮ್ಮ ಹಿರಿಯರು ಮಾಡಿರುವ ಚಿಂತನೆಯನ್ನು ಪರಿಶೀಲಿಸುವ ಮೊದಲು ಮನುಷ್ಯ ಜೀವನದ ಬಗೆಗಿನ ಒಂದೆರಡು ಮೂಲಭೂತ ವಿಷಯಗಳನ್ನು ಗಮನಿಸಲೇಬೇಕು. ಮೊದಲನೆಯದಾಗಿ, ಪ್ರತಿಯೊಬ್ಬ ಮನುಷ್ಯ ಬದುಕುತ್ತಿರುವುದು ಸುಖಪ್ರಾಪ್ತಿಗಾಗಿ. ಸುಖದ ಬಗೆಗಿನ ಕಲ್ಪನೆಗಳು ಭಿನ್ನ-ಭಿನ್ನವಾಗಿದ್ದಿರಬಹುದು. ಆದರೆ ಪ್ರತಿಯೊಬ್ಬ ಪುರುಷನೂ ಸುಖಾಪೇಕ್ಷಿ. ಅವನಿಗೆ ಇಹದಲ್ಲಿಯೂ ಸುಖಬೇಕು, ಪರದಲ್ಲಿಯೂ ಸುಖ ಬೇಕು, ಶಾರೀರಿಕವಾಗಿಯೂ ಸುಖ ಬೇಕು, ಮಾನಸಿಕವಾಗಿಯೂ ಸುಖ ಬೇಕು. ಎರಡನೆಯದಾಗಿ, ಮನುಷ್ಯನು ಸಮಾಜಜೀವಿ. ಯಾವ ಮನುಷ್ಯನು ಸಹ ಒಬ್ಬೊಂಟಿಗನಾಗಿ ಬಾಳಲಾರ. ಅಂದರೆ ಅವನ ಸುಖ ಅವನೊಡನೆ ವಾಸಿಸುವ ಇತರರೊಡನೆ ಅಥವಾ ಇತರರ ಸುಖದೊಡನೆ ಹೊಂದಿಕೊಂಡಿದೆ. ಅವನು ತನ್ನವರೆಂದು ತಿಳಿದವರು ದುಃಖದಲ್ಲಿದ್ದಾಗ ಅವನ ಬಳಿ ಸುಖದಾಯಕ ಸಕಲಸಾಧನಗಳಿದ್ದರೂ ಅವನು ಸುಖ ಪಡೆಯಲಾರ, ಆದುದರಿಂದ ಅವನ ಸುಖ ಅವನ ಜನರ ಅರ್ಥಾತ್ ಅವನ ಸಮಾಜದ ಸುಖದ ಮೇಲೆ ಅವಲಂಬಿಸಿದೆ.

ಈ ರೀತಿಯಾಗಿ ತನ್ನ ಮತ್ತು ತನ್ನ ಸಮಾಜದ ಸುಖಕ್ಕಾಗಿ ಹೆಣಗಾಡುತ್ತಿರುವ ಮನುಷ್ಯನು ಸುಖದ ಸಾಧನವನ್ನು ತಿಳಿದುಕೊಳ್ಳುವದು ಅತ್ಯಗತ್ಯ ಮತ್ತು ಸುಖದ ಸಾಧನದ ಬಗೆಗೆ ಸಂಸ್ಕೃತದಲ್ಲಿ ಹೀಗೆ ಹೇಳಿದೆ—

> ಸುಖಾರ್ಥಾಃ ಸರ್ವಲೋಕಾನಾಂ ಮತಾಃ ಸರ್ವಾ ಪ್ರವೃತ್ತಯಃ ।
> ಸುಖಂ ಚ ನ ವಿನಾ ಧರ್ಮಾತ್ತಸ್ಮಾದ್ಧರ್ಮಪರೋ ಭವೇತ್ ॥

ಅಂದರೆ, ಎಲ್ಲ ಜನರ ಎಲ್ಲ ಚಟುವಟಿಕೆಗಳು ಕೇವಲ ಸುಖಕ್ಕಾಗಿಯೇ ನಡೆದಿವೆ. ಆದರೆ 'ಧರ್ಮ' ಅಥವಾ ಧರ್ಮಾಚರಣೆಯ ಹೊರತು ಸುಖವು ಅಸಾಧ್ಯ. ಆದ್ದರಿಂದ, ಪ್ರತಿಯೊಬ್ಬನೂ ಧರ್ಮಾಚರಣೆಯಲ್ಲಿ ತೊಡಗಬೇಕು.

ಅಲ್ಲದೆ, ಕೆಲವರು ಚತುರ್ವಿಧ ಪುರುಷಾರ್ಥಗಳಾದಂತಹ ಧರ್ಮ-ಅರ್ಥ-ಕಾಮ-ಮೋಕ್ಷಗಳಲ್ಲಿ ಕೇವಲ ಅರ್ಥ-ಕಾಮಗಳನ್ನು ಮಾತ್ರ ಬಯಸುತ್ತಾರೆ. ಅವರಿಗೆ ಧರ್ಮ ಬೇಡ; ಮೋಕ್ಷದಲ್ಲಿ ನಂಬಿಗೆಯಿಲ್ಲ. ಅವರಿಗೆ ಅರ್ಥ ಅಂದರೆ ಸಂಪತ್ತು ಮತ್ತು ಕಾಮ ಅಂದರೆ ಇಹಲೋಕದ ಶಾರೀರಿಕ ಸುಖ–ಇವೆರಡು ಇದ್ದರೆ ಸಾಕು.

ಇಂಥವರಿಗೂ 'ಧರ್ಮ'ದ ಅಗತ್ಯವಿದೆಯೇ ಎಂದರೆ ವ್ಯಾಸಮಹರ್ಷಿಗಳು ಮಹಾಭಾರತದಲ್ಲಿ ಸಾರಿ ಹೇಳುತ್ತಿದ್ದಾರೆ.

> ಊರ್ಧ್ವಬಾಹುರ್ವಿರೌಮ್ಯೇಷಃ ನ ಚ ಕಶ್ಚಿತ್ ಶೃಣೋತಿ ಮೇ
> ಧರ್ಮಾದರ್ಥಶ್ಚ ಕಾಮಶ್ಚ ಸ ಕಿಮರ್ಥಂ ನ ಸೇವ್ಯತೇ ॥

ಈ ಶ್ಲೋಕವು ಮಹಾಭಾರತದ ಕೊನೆಯಲ್ಲಿ ಬಂದಿದೆ. ಆಗ ಕಲಿಗಾಲವು ಪ್ರಾರಂಭವಾಗತೊಡಗಿತ್ತಂತೆ. ಆ ಕಲಿಯ ಪ್ರಭಾವದ ಮೂಲಕ ಜನರೆಲ್ಲ ಧರ್ಮವಿಮುಖರಾಗಿ ಅರ್ಥ–ಕಾಮಗಳನ್ನೇ ಪಡೆಯುವ ಹೆಬ್ಬಯಕೆಯಿಂದ ಹೆಣಗಾಡತೊಡಗಿದಾಗ ವ್ಯಾಸಮಹರ್ಷಿಗಳು ಒಂದು ವಿಧದ ನಿರಾಶಾಭಾವನೆಯಿಂದ ಈ ಶ್ಲೋಕವನ್ನು ಹೇಳಿದರಂತೆ: ನಾನಿಲ್ಲಿ ಎರಡೂ ಕೈಗಳನ್ನೆತ್ತಿ ಕೂಗಿ ಹೇಳುತ್ತಿದ್ದೇನೆ. ಆದರೆ ಯಾರೂ ನನ್ನ ಮಾತನ್ನು ಕೇಳುತ್ತಿಲ್ಲ: "ಧರ್ಮದಿಂದಲೇ ಅರ್ಥವೂ ಲಭ್ಯ; ಕಾಮವೂ ಲಭ್ಯ. ಅಂತಹ ಧರ್ಮವನ್ನು ನೀವೇಕೆ ಆಚರಿಸುತ್ತಿಲ್ಲ ?"

ಅಂದರೆ, ಕೇವಲ ಅರ್ಥ–ಕಾಮಗಳನ್ನು ಮಾತ್ರ ಬಯಸುವವರೂ 'ಧರ್ಮ'ವನ್ನು ಅರಿಯುವದೂ ಅದರಂತೆ ನಡೆಯುವುದೂ ಅತ್ಯಗತ್ಯವೆಂದಾಯಿತು.

ಮನುಷ್ಯನ ಜೀವನದಲ್ಲಿ ಧರ್ಮಕ್ಕಿರುವ ಸ್ಥಾನದ ಕುರಿತು ರಾಮಾಯಣದಲ್ಲಿ ಹೇಳಿರುವ ಮಾತು ಈ ಸಂದರ್ಭದಲ್ಲಿ ಗಮನಾರ್ಹ:

ಧರ್ಮಾದ್ವೈ ಲಭತೇ ಸರ್ವಂ ಧರ್ಮಸಾರಮಿದಂಜಗತ್॥ ಅಂದರೆ, ಮನುಷ್ಯನು ತಾನು ಬಯಸುವುದೆಲ್ಲವನ್ನೂ ಧರ್ಮದಿಂದಲೇ ಪಡೆಯಬಲ್ಲನು. ಇಡಿಯ ಜಗತ್ತಿನ ಸಾರಸರ್ವಸ್ವವೇ ಧರ್ಮವಾಗಿದೆ.

ಹೀಗೆ ೧) ಧರ್ಮದಿಂದ ಶೋಷಣರಹಿತ ಮತ್ತು ಸುಖ-ಶಾಂತಿ–ಸಂಪನ್ನ ಸಮಾಜಸ್ಥಾಪನೆಯಾದ ದಾಖಲೆಯಿದೆ: ೨) ಧರ್ಮದ ಹೊರತು ಸುಖ ಅಸಾಧ್ಯ; ೩) ಧರ್ಮದಿಂದಲೇ ಅರ್ಥ-ಕಾಮಗಳು ಲಭ್ಯ; ಮತ್ತು ೪) ಧರ್ಮವು ಸಕಲ ಲಾಭಕಾರಕ. ಹೀಗಿರುವದರಿಂದ ಮನುಷ್ಯನ ಜೀವನದಲ್ಲಿ ಧರ್ಮಕ್ಕಿರುವ ಮಹತ್ವದ ಸ್ಥಾನದ ಅರಿವಾಗಲಿಕ್ಕೆ ತೊಂದರೆಯಾಗಲಾರದು.

ಆದುದರಿಂದ. 'ಧರ್ಮ'ದ ಕುರಿತು ಸಂಸ್ಕೃತ ಸಾಹಿತ್ಯದಲ್ಲಿ ಬಂದಿರುವ ಬೇರೆ-ಬೇರೆ ವ್ಯಾಖ್ಯೆಗಳನ್ನೂ ವಿವರಣೆಗಳನ್ನೂ ಪರಿಶೀಲಿಸೋಣ :

೧) ಧರತಿ ಲೋಕಾನ್ ಇತಿ ಧರ್ಮಃ ॥

೨) ಧ್ರಿಯತೇ ಅನೇನ ಇತಿ ಧರ್ಮಃ ॥

೩) ಧಾರಯತಿ ಇತಿ ಧರ್ಮಃ । ಯೋ ಲೋಕಾನ್ ಧಾರಯತಿ,
ಯೇನ ಮಾನವಸಮಾಜೋ ಧೃತಃ ಸ ಧರ್ಮಃ ॥

೪) ಧರತಿ ವಿಶ್ವಮಿತಿ ಧರ್ಮಃ ॥

೫) ಧಾರಣಾದ್ ಧರ್ಮಮಿತ್ಯಾಹುಃ ಧರ್ಮೋ ಧಾರಯತೇ ಪ್ರಜಾಃ ।
ಯಃ ಸ್ಯಾದ್ಧಾರಣಸಂಯುಕ್ತಃ ಸ ಧರ್ಮ ಇತಿ ನಿಶ್ಚಯಃ ॥

೬) ಯತೋಽಭ್ಯುದಯನಿಃಶ್ರೇಯಸಸಿದ್ಧಿಃ ಸ ಧರ್ಮಃ ॥

೭) ಯ ಏವ ಶ್ರೇಯಸ್ಕರಃ ಸ ಏವ ಧರ್ಮಶಬ್ದೇನೋಚ್ಯತೇ ॥

೮) ಪತಿತಂ ಪತಂತಂ ಪತಿಷ್ಯಂತಂ ಧರತೀತಿ ಧರ್ಮಃ ॥

೯) ಅಲೌಕಿಕಶ್ರೇಯಃ ಸಾಧನತ್ವೇನ ವಿಹಿತಕ್ರಿಯಾತ್ವಂ ಹಿ ಧರ್ಮತ್ವಮ್॥

೧೦) ಧರ್ಮೇಣ ಗಮನಮೂರ್ಧ್ವಂ ಗಮನಮಧಸ್ತಾತ್ ಭವತ್ಯಧರ್ಮೇಣ॥

೧೧) ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ ॥

೧೨) ಪ್ರಾಣಿನಾಂ ಸಾಕ್ಷಾದಭ್ಯುದಯನಿಃಶ್ರೇಯಸಹೇತುರ್ಯಃ ಸ ಧರ್ಮಃ॥

೧೩) ಲೋಕಯಾತ್ರಾರ್ಥಮೇವೇಹ ಧರ್ಮಸ್ಯ ನಿಯಮಃ ಕೃತಃ ॥

೧೪) ಧರ್ಮೋ ದದಾತಿ ಧನಮಕ್ಷಯಮುತ್ತಮಂ ತು
ಧರ್ಮೋ ದದಾತಿ ಪದಮಕ್ಷಯಮಚ್ಯುತಸ್ಯ ।
ಧರ್ಮೋ ದದಾತಿ ವಿಮಲಾಂ ಧಿಯಮಾತ್ಮ ಸೌಖ್ಯಂ
ಧರ್ಮೋ ದದಾತಿ ಬಹುಪುತ್ರಯಶಾಂಸಿ ನೃಣಾಮ್ ॥

ಈ ರೀತಿಯಾಗಿ ಧರ್ಮದ ಮಹತಿಯನ್ನು ಕೊಂಡಾಡುವ ಹೇಳಿಕೆಗಳು ಸಂಸ್ಕೃತ ಸಾಹಿತ್ಯದಲ್ಲಿ ಹೇರಳವಾಗಿ ಕಾಣಸಿಗುತ್ತವೆ. ಮೇಲೆ ಕೊಟ್ಟಿರುವ ಸೂಕ್ತಿಗಳಲ್ಲಿ ಮೊದಲಿನ ಐದು ವಚನಗಳನ್ನು ಧರ್ಮದ ವ್ಯಾಖ್ಯೆಯೆಂಬುದಾಗಿ ಪರಿಗಣಿಸಬಹುದು. 'ಧರ್ಮ' ಈ ಶಬ್ದವು 'ಧೃ' ಎಂಬ ಧಾತುವಿನಿಂದ ಉಂಟಾಗಿದ್ದು 'ಆಧರಿಸು' ಅಥವಾ 'ಆಧಾರವಾಗಿರು' ಎಂಬ ಅರ್ಥವನ್ನು ಪಡೆದಿದೆ. ಅದಕ್ಕಾಗಿ ಆ ವಚನಗಳ ಅರ್ಥವು ಹೀಗಾಗುತ್ತದೆ: ೧) ಲೋಕಗಳಿಗೆ ಆಧಾರವಾಗಿರುವದರಿಂದ 'ಧರ್ಮ' ವೆಂದು ಕರೆಯಲ್ಪಡುತ್ತದೆ. ಅಂದರೆ ಧರ್ಮವು ಲೋಕಗಳಲ್ಲಿಯ ಚಟುವಟಿಕೆಗಳಿಗೆಲ್ಲ ಆಧಾರವು. ೨) ಸಕಲಕ್ಕೂ ಆಧಾರವಾಗಿರುವವರಿಂದ ಧರ್ಮವೆಂದು ಹೆಸರು. ಅಂದರೆ, ಧರ್ಮವು ಸಕಲಕ್ಕೂ ಆಧಾರ. ೩) ಧರ್ಮವೇ ಲೋಕಗಳಿಗೆ ಆಧಾರ; ಮಾನವಸಮಾಜಕ್ಕೆ ಆಧಾರ. ೪) ವಿಶ್ವಕ್ಕೆ ಧರ್ಮವೇ ಆಧಾರ. ೫) ಧಾರಣ ಮಾಡುವವರಿಂದ ಅಥವಾ ಆಧಾರವಾಗಿರುವದರಿಂದ 'ಧರ್ಮ'ವೆಂದು ಕರೆಯುತ್ತಾರೆ. ಧರ್ಮವೇ ಜನರಿಗೆಲ್ಲ ಆಧಾರ. ಆಧಾರ ನೀಡಬಲ್ಲುದೇ ಧರ್ಮವು.

'ಧರ್ಮ' ಈ ಶಬ್ದದ ಮೂಲಧಾತುವಾದ 'ಧೃ' ಇದರ ಅರ್ಥವನ್ನು ಪ್ರಮುಖವಾಗಿ ಈ ವ್ಯಾಖ್ಯೆಗಳು ಎತ್ತಿತೋರಿಸಿ ಇಡಿಯ ಲೋಕದೊಳಗಿನ ಜನ ಜೀವನಕ್ಕೆ ಆಧಾರವಾಗಿರುವದೇ ಧರ್ಮವೆಂದು ಒತ್ತಿ ಹೇಳಿವೆ. ಇದೇ ಅರ್ಥದ ವಿವರಣೆಯನ್ನು ಮುಂದಿನ ವಚನಗಳು ಪ್ರಕಟಪಡಿಸಿವೆ— ೬) ಯಾವುದರಿಂದ ಮನುಷ್ಯನ ಅಭ್ಯುದಯ ಅಂದರೆ ಇಹಲೋಕದೊಳಗಿನ ಉನ್ನತಿ ಮತ್ತು ನಿಃಶ್ರೇ-ಯಸ್ಸು ಅಂದರೆ ಪರಲೋಕದೊಳಗಿನ ಸುಖ-ಶಾಂತಿ ಇವೆರಡೂ ಉಂಟಾಗುತ್ತವೆಯೋ ಅದೇ ಧರ್ಮ. ಅಂದರೆ, ಧರ್ಮಾಚರಣೆಯಿಂದ ಇಹ-ಪರಗಳೆರಡರಲ್ಲೂ ಸುಖ-ಶಾಂತಿ ಸಾಧ್ಯ. ೭) ಒಳಿತನ್ನುಂಟು ಮಾಡುವದನ್ನು 'ಧರ್ಮ'ವೆಂದು ಕರೆಯುತ್ತಾರೆ. ೮) ಹಿಂದೆ ಅವನತಿ ಹೊಂದಿದವನಿಗೆ ಈಗ ಹೊಂದುತ್ತಿರುವವನಿಗೆ ಮತ್ತು ಮುಂದೆ ಹೊಂದಲಿರುವವನಿಗೆ ಆಧಾರ ನೀಡಿ ಎತ್ತಿ ಹಿಡಿಯುವದರಿಂದಲೇ ಅದಕ್ಕೆ 'ಧರ್ಮ' ಎನ್ನುತ್ತಾರೆ. ೯) ಧರ್ಮವೆಂದರೇನು ? ಅಸಾಮಾನ್ಯವಾದ ಸುಖಕ್ಕೆ ಸಾಧನವಾಗಿ ತನ-ತನಗೆ ವಿಧಿಸಲಾಗಿರುವ ಕರ್ತವ್ಯಗಳನ್ನು ಮಾಡುವುದೇ ಧರ್ಮವು. ೧೦) ಧರ್ಮಾಚರಣೆಯಿಂದ ಮನುಷ್ಯನು ಉನ್ನತಿಯನ್ನು ಸಾಧಿಸುತ್ತಾನೆ; ಅಧರ್ಮಾಚರಣೆಯಿಂದ ಅವನತಿಯನ್ನು ಹೊಂದುತ್ತಾನೆ. ಅಂದರೆ, ಉನ್ನತಿಯನ್ನು ಬಯಸುವ ಪ್ರತಿಯೊಬ್ಬನು ಕೂಡ ಧರ್ಮಾಚರಣೆಯನ್ನು ಮಾಡಬೇಕು. ೧೧) ಧರ್ಮವು ಇಡಿಯ ವಿಶ್ವದ, ಜಗತ್ತಿನ ಭದ್ರ ಆಧಾರವು. ೧೨) ಸಕಲ ಜೀವಿಗಳಿಗೆ ಇಹದಲ್ಲಿ ಉನ್ನತಿ ಮತ್ತು ಪರದಲ್ಲಿ ಸುಖ-ಶಾಂತಿಗಳನ್ನು ಕೊಡುವ ಸಾಧನವೆಂದರೆ ಧರ್ಮವು. ೧೩) ಜನರ ಜೀವನವು ಸುಗಮವಾಗಿ ನಡೆಯಲೆಂದೇ ಧರ್ಮಾಚರಣೆಯ ನಿಯಮಗಳನ್ನು ಮಾಡಲಾಗಿದೆ. ೧೪) ಧರ್ಮವು ಮನುಷ್ಯರಿಗೆ ಉತ್ತಮವೂ ಅಕ್ಷಯವೂ ಆದ ಸಂಪತ್ತನ್ನು ಕೊಡುತ್ತದೆ. ಧರ್ಮವು ವಿಷ್ಣು ಪರಮಾತ್ಮನ ಶಾಶ್ವತ ಲೋಕವನ್ನು ದೊರಕಿಸಿಕೊಡುತ್ತದೆ. ಧರ್ಮವು ಪರಿಶುದ್ಧವಾದ ಬುದ್ಧಿಯನ್ನು ಆತ್ಮ ಸುಖವನ್ನೂ ಕೊಡುತ್ತದೆ. ಮತ್ತು ಧರ್ಮವು ಜನರಿಗೆ ಬಹಳ ಸಂತತಿಯನ್ನೂ ವಿಶಾಲವಾದ ಕೀರ್ತಿಯನ್ನೂ ತಂದುಕೊಡುತ್ತದೆ.

ಇವೆಲ್ಲ ವಿವರಣೆಗಳಿಂದ ತಿಳಿದು ಬರುವ ಸಾಮಾನ್ಯ ಸಂಗತಿಯೆಂದರೆ ನಾವು ಬಯಸುವ, ಶಾಶ್ವತ ಸುಖ, ಉನ್ನತಿ, ಅಭಿವೃದ್ಧಿ, ಇಚ್ಛಾಪೂರ್ತಿ ಮೊದಲಾದವುಗಳಿಗೆಲ್ಲ ಸಾಧನವೆಂದರೆ 'ಧರ್ಮ' ಅಥವಾ ಧರ್ಮಾಚರಣೆ ಮತ್ತು ಅಧರ್ಮದಿಂದ ಅವನತಿ ಮತ್ತು ದುಃಖ. ಇಲ್ಲಿ ಒಂದು ಮಹತ್ವದ ಸಂಗತಿಯನ್ನು ನಾವೆಲ್ಲ ಅರಿಯಲೇಬೇಕು. ಅದೆಂದರೆ, ನಾವೆಲ್ಲ ಮನುಷ್ಯರು. ಮನುಷ್ಯರನ್ನು 'ಪುರುಷ'ರೆಂದೂ ಕರೆಯುತ್ತಾರೆ. 'ಪುರುಷ' ಈ ಶಬ್ದವನ್ನು ಹೀಗೆ ವಿವರಿಸಿದ್ದಾರೆ— "ಪುರಃ ಅಗ್ರೇ ಸರತಿ ಗಚ್ಛತಿ ಇತಿ ಪುರುಷಃ ॥" ಅಂದರೆ, ಮುಂದೆ ಮುಂದೆ, ಮೇಲೆ ಮೇಲೆ, ಹೋಗುವವನೇ ಪುರುಷನು. ನಿಜವಾದ ಮನುಷ್ಯನು ಉನ್ನತಿಯನ್ನು ಸಾಧಿಸಬೇಕು. ಎಷ್ಟೋ

ವಿಧದ ಜನ್ಮಗಳನ್ನು ತಳೆದ ಬಳಿಕ ನಮಗೆ ಮನುಷ್ಯ ಜನ್ಮ ದೊರಕಿದೆ. ಇದರ ಸದುಪಯೋಗವನ್ನು ನಾವು ಮಾಡಿಕೊಳ್ಳಲೇಬೇಕು. ಅಂದರೆ, ಇದರಲ್ಲಿ ದೊರಕಿರುವ ಸೌಲಭ್ಯ–ಸೌಕರ್ಯಗಳಿಂದ ಉನ್ನತಿಯನ್ನು ಸಾಧಿಸಬೇಕು. ಬಡವನಾಗಿ ಹುಟ್ಟಿದರೆ ಶ್ರೀಮಂತನಾಗಿ ಬೆಳೆಯಬೇಕು. ಅಶಿಕ್ಷಿತ ಮನೆತನದಲ್ಲಿ ಜನ್ಮ ಪಡೆದಿದ್ದರೆ ಸುಶಿಕ್ಷಿತನಾಗಬೇಕು. ಬಾಲ್ಯದಲ್ಲಿ ಅನಾರೊಗ್ಯದಿಂದಿದ್ದರೆ ಆರೋಗ್ಯ ಸಂಪನ್ನ ಯುವಕನಾಗಬೇಕು. ಪಶುಸದೃಶ ಜೀವನ ನಡೆಸುವ ಪರಿಸರದಲ್ಲಿದ್ದರೆ ಅದನ್ನು ಬದಲಾಯಿಸಿ ಎಲ್ಲರೂ ಮನುಷ್ಯರಂತೆ ಬಾಳಲು ಪರಿಶ್ರಮಿಸಬೇಕು. ದಿನ–ದಿನವೂ ಶಾರೀರಿಕವಾಗಿ, ಮಾನಸಿಕವಾಗಿ, ಬೌದ್ಧಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ–ಹೀಗೆ ಸರ್ವವಿಧದಿಂದಲೂ ಪ್ರಗತಿ ಸಾಧಿಸುವದು, ಉನ್ನತಿ ಹೊಂದುವದು ಮನುಷ್ಯನ ಕರ್ತವ್ಯ. ಅಂಥವನೇ ನಿಜವಾದ ಮನುಷ್ಯ. ಪು–ರು–ಷ.

ಮತ್ತು ಉನ್ನತಿ. ಪ್ರಗತಿ, ಅಭಿವೃದ್ಧಿ ಮೊದಲಾದವುಗಳೆಲ್ಲ ಧರ್ಮದಿಂದಲೇ ಸಾಧ್ಯ. ಆದುದರಿಂದಲೆ ರಾಮಾಯಣವು ಸಾರಿ ಹೇಳಿದ್ದು : ಧರ್ಮಾದ್ ವೈ ಲಭತೇ ಸರ್ವಂ, ಧರ್ಮಂ, ಧರ್ಮಸಾರಮಿದಂ ಜಗತ್॥.

ಇಷ್ಟು ಹೇಳಿದ ಮೇಲೆಯೂ ಮೂಲಪ್ರಶ್ನೆ ಉಳಿದೇಬಿಟ್ಟಿತು–ಧರ್ಮವೆಂದರೇನು ? ಯಾವುದು ಧರ್ಮ, ಯಾವುದು ಅಧರ್ಮ ? ಈ ಪ್ರಶ್ನೆಗೆ ಉತ್ತರ ತಿಳಿಯಬೇಕಾದರೆ ನಮ್ಮ ಉನ್ನತಿ ಅವನತಿಗಳಿಗೆ ಕಾರಣವು ಯಾವದು ? ಎಂಬುದಾಗಿ ನಾವು ವಿವೇಚಿಸಬೇಕಾಗುತ್ತದೆ. ನಮ್ಮ ಸುಖ–ದುಃಖಗಳಿಗೆ ಕಾರಣರು ಯಾರು ? ನಮ್ಮ ಉನ್ನತಿ–ಅವನತಿಗಳಿಗೆ, ಪ್ರಗತಿ-ಪರಾಗತಿಗಳಿಗೆ ಕಾರಣರು ಯಾರು ? ಈ ಪ್ರಶ್ನೆಗಳಿಗೆ 'ಮಹಾಭಾರತ'ದಲ್ಲಿ ವ್ಯಾಸಮಹರ್ಷಿಗಳು ಹೀಗೆ ಉತ್ತರ ನೀಡಿದ್ದಾರೆ.

> ಶುಭೇನ ಕರ್ಮಣಾ ಸೌಖ್ಯಂ ದುಃಖಂ ಪಾಪೇನ ಕರ್ಮಣಾ ।
> ಕೃತಂ ಭವತಿ ಸರ್ವತ್ರ ನಾಕೃತಂ ವಿದ್ಯತೇ ಕ್ವಚಿತ್ ॥

ಸುಖಕ್ಕೆ ಕಾರಣವು ಯಾವುದು ? ನಮ್ಮ ಒಳ್ಳೆಯ ಕೆಲಸ. ದುಃಖಕ್ಕೆ ಕಾರಣವೇನು ? ನಮ್ಮ ಕೆಟ್ಟ ಕೆಲಸ. ಎಲ್ಲ ಕಡೆಗೆ 'ಕೃತಂ ಭವತಿ' ತಾನು ಗೈದ ಕೃತಿಯಂತೆಯೇ ಮನುಷ್ಯನು ಫಲ ಪಡೆಯುತ್ತಾನೆಯೇ ಹೊರತು. 'ಅಕೃತಂ ನ ವಿದ್ಯತೇ' ತಾನು ಮಾಡದುದನ್ನು ಪಡೆಯುವದಿಲ್ಲ. ಸುಖ–ದುಃಖಗಳಿಗೆ ಇತರರು ಕಾರಣರಲ್ಲವೆಂಬುವನ್ನೂ ನಮ್ಮ ಹಿರಿಯರು ಸ್ಪಷ್ಟವಾಗಿ ಹೇಳಿದ್ದುಂಟು :—

> ಸುಖಸ್ಯ ದುಃಖಸ್ಯ ನ ಕೋಽಪಿ ದಾತಾ
> ಪರೋ ದದಾತೀತಿ ಕುಬುದ್ಧಿರೇಷಾ ॥

ನಮಗೆ ಸುಖ ಕೊಡುವವರಾಗಲಿ ದುಃಖ ನೀಡುವವರಾಗಲಿ ಯಾರೂ ಇಲ್ಲ. ಬೇರೆ ಯಾವರು ಸುಖ–ದುಃಖಗಳನ್ನು ಕೊಡುತ್ತಾರೆಂದು ಯಾರಾದರೂ ತಿಳಿದರೆ ಅದು ಮೂರ್ಖತನವೇ ಸರಿ. 'ಭಗವದ್ಗೀತೆ'ಯು ತನ್ನ ಉನ್ನತಿಯನ್ನು ತಾನೇ ಮಾಡಿಕೊಳ್ಳ ತಕ್ಕದ್ದೆಂದು ಸಾರಿ ಹೇಳಿದೆ—

ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ ।
ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ ॥

ಇತರ ಅನೇಕ ವಿಚಾರ ಪ್ರಚೋದಕ ವಚನಗಳು ಕೂಡ ಸುಖ-ದುಃಖಗಳಿಗೆ ಸ್ವಕೃತ ಸತ್ಕರ್ಮ-ದುಷ್ಕರ್ಮಗಳೇ ಕಾರಣವೆಂದು ಎತ್ತಿ ತೋರಿಸಿವೆ—

೧) ಯಥಾ ಕರ್ಮ ತಥಾ ಲಾಭ ಇತಿ ಶಾಸ್ತ್ರ ನಿದರ್ಶನಮ್ ॥

ನಾವು ಎಂತಹ ಕೃತಿಯನ್ನು ಮಾಡುತ್ತೇವೆಯೋ ಅಂತಹ ಲಾಭ ಪಡೆಯುತ್ತೇವೆ. ಒಳ್ಳೆಯ ಕೃತಿಯಿಂದ ಒಳ್ಳೆಯ ಲಾಭ ಅರ್ಥಾತ್ ಸುಖ; ಕೆಟ್ಟ ಕೃತಿಯಿಂದ ಕೆಟ್ಟ ಲಾಭ ಅರ್ಥಾತ್ ದುಃಖ.

೨) ಲೋಕೇ ಗುರುತ್ವಂ ವಿಪರೀತತಾಂ ವಾ
ಸ್ವಚೇಷ್ಟಿತಾನ್ಯೇವ ನರಂ ನಯಂತಿ ॥

ಜಗತ್ತಿನಲ್ಲಿ ಮನುಷ್ಯನನ್ನು ಉನ್ನತಿಗಾಗಲಿ ಅವನತಿಗಾಗಲಿ ಅವನ ಕೃತಿಗಳೇ ಒಯ್ಯುತ್ತವೆ; ಹೊರತು ಬೇರೆ ಯಾವುದೂ ಅಲ್ಲ. ಅಂದರೆ ಒಳ್ಳೆಯ ಕೃತಿಯಿಂದ ಉನ್ನತಿ; ಕೆಟ್ಟ ಕೃತಿಯಿಂದ ಅವನತಿ.

೩) ಯಾತ್ಯಧೋಽಧಃ ವ್ರಜತ್ಯುಚ್ಚೈರ್ನರಃ ಸ್ವೈರೇವ ಕರ್ಮಭಿಃ ।
ಕೂಪಸ್ಯ ಖನಿತಾ ಯದ್ವತ್ ಪ್ರಾಕಾರಸ್ಯೇವ ಕಾರಕಃ ॥

ಮನುಷ್ಯನು ಉನ್ನತಿಯನ್ನು ಸಾಧಿಸುತ್ತ ಮೇಲೇರುವುದಾಗಲೀ ಅವನತಿಯನ್ನು ಹೊಂದುತ್ತ ಕೆಳಗೆ ಜಾರುತ್ತ ಹೋಗುವುದಾಗಲೀ ತನ್ನ ಸ್ವತಃದ ಕೃತಿಗಳಿಂದಲೇ ಹೊರತು ಬೇರೆ ಯಾವುದರ ಮೂಲಕವೂ ಅಲ್ಲ. ಉದಾಹರಣೆಯೆಂದರೆ, ಗೋಡೆಯನ್ನು ಕಟ್ಟುವವನು ತಾನು ಕಟ್ಟುತ್ತ ಹೋದಂತೆ ಮೇಲಕ್ಕೇರುತ್ತ ಹೋಗುತ್ತಾನೆ. ತದ್ವಿರುದ್ಧವಾಗಿ, ಬಾವಿಯನ್ನು ತೋಡುವವನು ತೋಡುತ್ತ ಹೋದಂತೆ ಕೆಳಕ್ಕೆ ಇಳಿಯುತ್ತ ಹೋಗುತ್ತಾನೆ. ಅಂದರೆ ಮನುಷ್ಯನ ಸುಖಕ್ಕೆ ದುಃಖಕ್ಕೆ ಅವನ ಕೃತಿಯೇ ಕಾರಣ.

೪) ಪುಣ್ಯೋ ವೈ ಪುಣ್ಯೇನ ಕರ್ಮಣಾ ಭವತಿ, ಪಾಪೋ ವೈ
ಪಾಪೇನ ॥

ಮನುಷ್ಯನು ತಾನು ಗೈದ ಒಳ್ಳೆಯ ಕೃತಿಯಿಂದ ಪುಣ್ಯವಂತನಾಗಿ ಸುಖ ಪಡೆಯುತ್ತಾನೆ; ಕೆಟ್ಟ ಕೆಲಸದಿಂದ ಪಾಪಿಯಾಗಿ ದುಃಖ-ಕಷ್ಟಗಳಿಗೆ ಗುರಿಯಾಗುತ್ತಾನೆ.

೫) ಯಥಾ ಛಾಯಾತಪೌ ನಿತ್ಯಂ ಸುಸಂಬದ್ಧೌ ಪರಸ್ಪರಮ್ ।
ಏವಂ ಕರ್ಮ ಚ ಕರ್ತಾ ಚ ಸಂಕ್ಲಿಷ್ಟಾವಿತರೇತರಮ್ ॥

ಬೆಳಕು ಮತ್ತು ನೆರಳುಗಳು ಎಂದೆಂದಿಗೂ ಕೂಡಿಯೇ ಇರುತ್ತವಷ್ಟೆ. ಅದೇ ರೀತಿ ಕರ್ಮವು ಅದನ್ನು ಮಾಡಿದವನನ್ನು ಎಂದೆಂದಿಗೂ ಬಿಟ್ಟಿರುವದಿಲ್ಲ. ಅಂದರೆ ಆ ಕರ್ಮದ ಫಲವನ್ನು ಅವನು ಪಡೆದೇ ತೀರುತ್ತಾನೆ.

೬) ಆತ್ಮನಾಂ ವಿಹಿತಂ ದುಃಖಮಾತ್ಮನಾ ವಿಹಿತಂ ಸುಖಮ್ ॥

ದುಃಖವೇ ಆಗಲಿ ಸುಖವೇ ಆಗಲಿ ಅದನ್ನು ಉಂಟು ಮಾಡಿಕೊಂಡವನು ತಾನೇ ಹೊರತು ಬೇರೆಯವರಲ್ಲ.

೭) ಯತ್ಕರೋತಿ ಶುಭಂ ಕರ್ಮ ತಥಾ ಕರ್ಮ ಸುದಾರುಣಮ್ ।
ತತ್ಕರ್ತೈವ ಸಮಶ್ನಾತಿ ॥

ಒಳ್ಳೆಯ ಕೆಲಸವೇ ಇರಲಿ, ಕೆಟ್ಟ ಕೆಲಸವೇ ಇರಲಿ, ಮಾಡಿದವನೇ ಅದರ ಫಲ ಉಣ್ಣಬೇಕು. ಬೇರೆಯವರಿಗೆ ಅದರಲ್ಲಿ ಪಾಲು ಕೊಡಬರುವದಿಲ್ಲ. ಬೇರೆಯವರ ಕೃತಿಗಳ ಫಲದಲ್ಲಿ ನಾವು ಪಾಲು ಪಡೆಯಬರುವದಿಲ್ಲ. "ಮಾಡಿದ್ದುಣ್ಣೋ ಮಹಾರಾಯಾ."

ಇದೆಲ್ಲದರ ಸಾರಾಂಶವಿಷ್ಟೇ– ನಮ್ಮ ಸುಖ-ದುಃಖಗಳಿಗೆ ನಾವೇ ಕಾರಣರು. ಅಂದರೆ ನಮ್ಮ ಸುಖ-ಉನ್ನತಿ-ಪ್ರಗತಿ-ಅಭಿವೃದ್ಧಿ-ಅಭ್ಯುದಯ ಮೊದಲಾದವುಗಳಿಗೆಲ್ಲ ನಮ್ಮ ಸತ್ಕರ್ಮ, ಒಳ್ಳೆಯ ಕೃತಿ, ಪುಣ್ಯದ ಕೆಲಸ ಕಾರಣವಾದರೆ, ನಮ್ಮ ದುಃಖ-ಕಷ್ಟ-ಅವನತಿ-ಪರಾಗತಿ ಮುಂತಾದವುಗಳಿಗೆ ನಮ್ಮ ದುಷ್ಕರ್ಮ, ಕೆಟ್ಟ ಕೃತಿ, ಪಾಪದ ಕೆಲಸ ಕಾರಣ.

ಈಗ ನಮಗೆ ಧರ್ಮ ಮತ್ತು ಅಧರ್ಮಗಳನ್ನು ತಿಳಿಯುವದು ಸುಲಭಸಾಧ್ಯ. ಧರ್ಮದಿಂದ ಉನ್ನತಿ; ಉನ್ನತಿಗೆ ಕಾರಣ ಸತ್ಕರ್ಮ, ಆದ್ದರಿಂದ ಧರ್ಮವೆಂದರೆ ಸತ್ಕರ್ಮ. ಅಧರ್ಮದಿಂದ ಅವನತಿ; ಅವನತಿಗೆ ಕಾರಣ ದುಷ್ಕರ್ಮ. ಆದ್ದರಿಂದ ಅಧರ್ಮವೆಂದರೆ ದುಷ್ಕರ್ಮ.

ಅದಕ್ಕಾಗಿಯೇ ಅನೇಕ ಕಡೆಗಳಲ್ಲಿ 'ಧರ್ಮ' ಮತ್ತು 'ಕರ್ಮ' (ಅಥವಾ ಸತ್ ಕೃತಿ) ಶಬ್ದಗಳನ್ನು ಪರ್ಯಾಯವಾಚಕಗಳಾಗಿ ಉಪಯೋಗಿಸಿರುವುದನ್ನು ನಾವು ಕಾಣ

ತ್ತೇವೆ. ಮನುಷ್ಯನ ಜೀವನದ ಬಗೆಗೆ ವಿಚಾರ ಮಾಡಿದವರು ಕಂಡುಕೊಂಡ ಒಂದು ಸತ್ಯವೆಂದರೆ.

ಏಕಃ ಪ್ರಜಾಯತೇ ಜಂತುಃ ಏಕ ಏವ ಪ್ರಲೀಯತೇ।
ಏಕೋಽನುಭುಂಕ್ತೇ ಸುಕೃತಮ್ ಏಕ ಏವ ಚ ದುಷ್ಕೃತಮ್॥

ಮನುಷ್ಯನು ಒಬ್ಬಂಟಿಗನಾಗಿ ಜನ್ಮ ತಾಳುತ್ತಾನೆ ಮತ್ತು ಒಬ್ಬಂಟಿಗನಾಗಿ ಸಾಯು ತ್ತಾನೆ. ಮತ್ತು ಅವನು ಗೈದ ಸುಕೃತ ದುಷ್ಕೃತಗಳ ಫಲಗಳನ್ನು ಅವನು ಒಬ್ಬಂಟಿಗ ನಾಗಿಯೇ ಅನುಭವಿಸುತ್ತಾನೆ. ಆದರೆ ಹುಟ್ಟುವಾಗ ಮತ್ತು ಸಾಯುವಾಗ ಮನು ಷ್ಯನು ಒಬ್ಬಂಟಿಗನೆಂಬುದು ಪೂರ್ಣ ಸತ್ಯವಲ್ಲ. ಏಕೆಂದರೆ, ಅವನು ಹುಟ್ಟುವಾಗ ತಾನು ಹಿಂದಿನ ಜನ್ಮದಲ್ಲಿ ಗೈದ ಸುಕೃತ-ದುಷ್ಕೃತಗಳ ಗಂಟನ್ನು ಕಟ್ಟಿಕೊಂಡೇ ಬರು ತ್ತಾನೆ ಮತ್ತು ಸಾಯುವಾಗ ಈ ಜನ್ಮದಲ್ಲಿ ಗೈದ ಸುಕೃತ–ದುಷ್ಕೃತಗಳ ಬುತ್ತಿ ಯನ್ನು ಕಟ್ಟಿಕೊಂಡೇ ಹೋಗುತ್ತಾನೆ. ಇದನ್ನು ನಿರೂಪಿಸುವಾಗ ಧರ್ಮ 'ಮತ್ತು' 'ಕರ್ಮ' ಈ ಶಬ್ದಗಳನ್ನು ಪರ್ಯಾಯವಾಚಕಗಳಾಗಿ ಉಪಯೋಗಿಸಿರುವದನ್ನು ನಾವು ಕಾಣುತ್ತೇವೆ :.

೧) ಅಗ್ನೌ ಪ್ರಾಸ್ತಂ ತು ಪುರುಷಂ ಕರ್ಮಾನ್ವೇತಿ ಸ್ವಯಂ ಕೃತಮ್।
ತಸ್ಮಾತ್ತು ಪುರುಷೋ ಯತ್ನಾದ್ ಧರ್ಮಂ ಸಂಚಿನುಯಾಚ್ಛನೈಃ॥

ಮನುಷ್ಯನು ಸತ್ತ ಬಳಿಕ ಅವನ ದೇಹವನ್ನು ಸುಡಲು ಚಿತೆಯ ಮೇಲಿಡುತ್ತಾರೆ. ಆಗ ಜೀವಾತ್ಮನು ಅದನ್ನು ಬಿಟ್ಟು ಹೋಗುವಾಗ ಅವನೊಡನೆ ಅವನ ಕರ್ಮ– ಒಳ್ಳೆಯದೇ ಆಗಲಿ ಕೆಟ್ಟದ್ದೇ ಆಗಲಿ–ಜೊತೆಗೆ ಬಂದು ಬಿಡುತ್ತದೆ. ಆದುದರಿಂದ ಸುಖವನ್ನು ಬಯಸುವ ಪ್ರತಿಯೊಬ್ಬನು ಸಹ ಪ್ರಯತ್ನಪೂರ್ವಕವಾಗಿ ಧರ್ಮ ಅರ್ಥಾತ್ ಸತ್ಕರ್ಮಗಳನ್ನೇ ಮಾಡಿ ಸಂಗ್ರಹಿಸಿಟ್ಟುಕೊಳ್ಳಬೇಕು. ಏಕೆಂದರೆ ಧರ್ಮ ದಿಂದಲೇ ಸುಖ; ಅಧರ್ಮದಿಂದಲೇ ದುಃಖ.

೨) ಧನಾನಿ ಭೂಮೌ ಪಶವಶ್ಚ ಗೋಷ್ಠೇ
ಭಾರ್ಯಾ ಗೃಹದ್ವಾರಿ ಬಂಧವಃ ಶ್ಮಶಾನೇ।
ದೇಹಶ್ಚಿತಾಯಾಂ ಪರಲೋಕಗಮನೇ
ಕರ್ಮಾನುಗೋ ಗಚ್ಛತಿ ಜೀವ ಏಕಃ॥

ಈ ಶ್ಲೋಕ ಪ್ರಸಿದ್ಧವಾದುದು. ಇಡಿಯ ಜೀವನವನ್ನು ಮನುಷ್ಯನು ಯಾವುದರ ಸಲುವಾಗಿ ಕಳೆಯಬೇಕು ? ಜೀವನದಲ್ಲಿ ಏನನ್ನು ಗಳಿಸಬೇಕು ? ಅವನ ನಿಜವಾದ ಗಳಿಕೆ ಯಾವದು ? ಎಂದು ಮುಂತಾಗಿ ತಿಳಿಸಿ ಹೇಳಲು ಈ ಶ್ಲೋಕವನ್ನು ಉದಾ

ಹರಿಸುತ್ತಾರೆ. ಮನುಷ್ಯನು ಜೀವನದಲ್ಲಿ ಇಹಲೋಕದ ಸುಖ-ಸಂಪತ್ತು, ಹೆಂಡಿರು -ಮಕ್ಕಳು, ಬಂಧು-ಬಾಂಧವರು ಮುಂತಾದವುಗಳನ್ನು ಗಳಿಸಲು ಬಹಳಷ್ಟು ಪ್ರಯತ್ನಿಸುತ್ತಾನೆ. ಆದರೆ ಅವು ಯಾವವೂ ಅವನೊಡನೆ ಸಾಯುವಾಗ ಬರುವದಿಲ್ಲ ವೆಂಬುದನ್ನು ಈ ಶ್ಲೋಕ ತಿಳಿಸಿ ಹೇಳುತ್ತದೆ. ಅವನು ಸತ್ತ ಬಳಿಕ ಅವನೊಡನೆ ಅವನು ಗಳಿಸಿದ ಸಂಪತ್ತು ಬರುತ್ತದೆಯೇ ? ಇಲ್ಲಿ ಅವನು ನೆಲದಲ್ಲಿ ಹುಗಿದಿಟ್ಟಿದ್ದಿ ದ್ದರೆ ಅಲ್ಲಿಯೇ ಉಳಿಯುತ್ತದೆ. ಅಥವಾ ಈಗಿನ ಕಾಲದಲ್ಲಿ ಬೇಂಕಿನಲ್ಲಿ ಠೇವಾಗಿ ಉಳಿದುಬಿಡುತ್ತದೆ. ಅವನು ಕೊಂಡು ತಂದ ದನ-ಕರುಗಳು ಕೊಟ್ಟಿಗೆಯಲ್ಲಿರುತ್ತವೆ. ಈಗಿನ ಕಾಲದಲ್ಲಿ ಅವನು ಕೊಂಡು ತಂದ ಕಾರು, ಸ್ಕೂಟರ ಮುಂತಾದ ವಾಹನಗಳು ಗೆರೇಜಿನಲ್ಲಿಯೇ ಇದ್ದುಬಿಡುತ್ತವೆ. ಅವನು ತನ್ನ ಸಹಧರ್ಮಚಾರಿಣಿ, ಗೃಹಲಕ್ಷ್ಮಿ, ಅರ್ಧಾಂಗಿನಿ ಮುಂತಾಗಿ ಜೊತೆಯಾಗಿ ಜೀವನ ಸವೆಸಿದ ಹೆಂಡತಿಯಾದರೂ ಅವನ ಸಂಗಡ ಬರುತ್ತಾಳೆಯೇ ? ಇಲ್ಲ, ಅವಳು ಮನೆಯ ಬಾಗಿಲ ತನಕ ಬರುತ್ತಾಳೆ. ಬಂಧು-ಬಾಂಧವರು ? ಸ್ಮಶಾನದ ತನಕ ಮಾತ್ರ ಬರುತ್ತಾರೆ. ಜನ್ಮದಾರಭ್ಯ ಜೊತೆ ಗಿದ್ದ ಶರೀರವಾದರೂ ಸತ್ತ ಬಳಿಕ ಜೊತೆಗೆ ಬರುತ್ತದೆಯೇ ? ಅದೂ ಇಲ್ಲ, ಅದು ಚಿತೆಯ ಮೇಲೆ ಉರಿದು ಬೂದಿಯಾಗಿ, ಬಿಡುತ್ತದೆ. ಹಾಗಾದರೆ ಪರಲೋಕಕ್ಕೆ ಹೋಗುವಂತಹ ಜೀವಾತ್ಮನ, ಸಂಗಡ ಹೋಗುವದಾದರೂ ಏನು ? ಅವನು ಮಾಡಿದ ಕರ್ಮ. ಅವನು ಗೈದ ಒಳ್ಳೆಯ ಅಥವಾ ಕೆಟ್ಟ ಕೆಲಸ.

ಹೀಗೆ ಪರಲೋಕಕ್ಕೆ ಹೋಗುವ ಜೀವಾತ್ಮನ ಸಂಗಡ 'ಕರ್ಮ'ವು ಹೋಗುತ್ತ ದೆಂದು ಮೇಲಿನ ಶ್ಲೋಕದಲ್ಲಿ ಹೇಳಿರುವುದಾದರೆ, ಕೆಳಗಿನ ಶ್ಲೋಕದಲ್ಲಿ ಅವನ್ನೇ 'ಧರ್ಮ'ವೆಂಬುದಾಗಿ ಹೇಳಿದ್ದಾರೆ—

೩) ದಾರಾ ಹ್ಯಪತ್ಯಂ ಭೃತ್ಯಶ್ಚ ಬಾಂಧವಾಃ ಪ್ರಿಯವಾದಿನಃ ।
ಗಚ್ಛಂತಂ ನಾನುಗಚ್ಛಂತಿ ಧರ್ಮ ಏವಾನುಗಚ್ಛತಿ ॥

ಇಹಲೋಕ ತ್ಯಜಿಸಿ ಪರಲೋಕಕ್ಕೆ ಹೋಗುವಾಗ ಮಾನವನ ಜೊತೆಗೆ ಅವನ ಹೆಂಡತಿಯೂ ಬರುವದಿಲ್ಲ, ಮಕ್ಕಳಾಗಲಿ ಸೇವಕರಾಗಲಿ ಬಾಂಧವರಾಗಲಿ ಬರುವ ದಿಲ್ಲ, ಪ್ರೀತಿಯ ಮಾತನ್ನಾಡುವ ಸ್ನೇಹಿತರೂ ಬರುವದಿಲ್ಲ. ಕೇವಲ 'ಧರ್ಮ' ಅಂದರೆ ಅವನು ಮಾಡಿರುವ ಕೃತಿ ಮಾತ್ರ ಬರುತ್ತದೆ.

ಹೀಗಿರುವದರಿಂದ ಮತ್ತು ಮನುಷ್ಯನಿಗೆ ಸಾವು ಯಾವಾಗಲೂ ಬರಬಹು ದಾದುದರಿಂದ ಮನುಷ್ಯನಾಗಿ ಹುಟ್ಟಿದವನು ಆದಷ್ಟು ಶೀಘ್ರ ಧರ್ಮಕಾರ್ಯ ಅಥವಾ ಸತ್ಕರ್ಮಗಳನ್ನು ಮಾಡಬೇಕೆಂದು ಮಹಾಭಾರತಕಾರರು ಉಪದೇಶಿಸಿದ್ದಾರೆ:

೧) ಕೋ ಹಿ ಜಾನಾತಿ ಕಸ್ಯಾದ್ಯ ಮೃತ್ಯುಕಾಲೋ ಭವಿಷ್ಯತಿ।
ಯುವೈವ ಧರ್ಮಶೀಲಃ ಸ್ಯಾದನಿತ್ಯಂ ಖಲು ಜೀವಿತಮ್॥

೨) ಆಯುರ್ನ ಸುಲಭಂ ಲಬ್ಧ್ವಾ ನಾವಕರ್ಷೇದ್ ವಿಶಾಂಪತೇ।
ಉತ್ಕರ್ಷಾರ್ಥಂ ಪ್ರಯತೇತ ನರಃ ಪುಣ್ಯೇನ ಕರ್ಮಣಾ॥

ಇವೇ ಮೊದಲಾದ ಶ್ಲೋಕಗಳ ಸಾರಾಂಶವೊಂದೇ. ಸಾವು ಅನಿಶ್ಚಿತವಾಗಿರುವದರಿಂದ ಮನುಷ್ಯನು ಅತಿಶೀಘ್ರ ಧರ್ಮಕಾರ್ಯ ಅರ್ಥಾತ್ ಪುಣ್ಯಕರ್ಮಗಳನ್ನು ಆಚರಿಸುವ ಕಡೆ ತನ್ನ ಶಕ್ತಿ-ಸಮಯಗಳನ್ನು ವಿನಿಯೋಗಿಸಬೇಕು.

ಭಗವದ್ಗೀತೆಯಲ್ಲಿಯೂ ಇದೇ ರೀತಿ 'ಧರ್ಮ' ಮತ್ತು 'ಕರ್ಮ'ಗಳನ್ನು ಸಮಾನಾರ್ಥದಲ್ಲಿ ಉಪಯೋಗಿಸಿರುವುದನ್ನು ನಾವು ನೋಡುತ್ತೇವೆ. ಉದಾ: ೧) ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ॥ ೨) ಸ್ವಧರ್ಮೇನಿಧನಂಶ್ರೇಯಃ॥ ಇವೇ ಮೊದಲಾದವು.

ಇನ್ನೊಂದು ಸಂಗತಿಯನ್ನೂ ಗಮನಿಸಬೇಕು. ಕೃತಯುಗದಲ್ಲಿ ಜನರು ಯಾವ ರೀತಿ ಸುಖ-ಶಾಂತಿಗಳಿಂದ ಜೀವಿಸುತ್ತಿದ್ದರೆಂಬುದನ್ನು ಬಣ್ಣಿಸುವ ಶ್ಲೋಕವೊಂದನ್ನು ಹಿಂದೆ ಉದಾಹರಿಲಾಗಿದೆ. ಆಗ ಧರ್ಮಾಚರಣೆಯಿಂದಲೇ ಜನರು ಪರಸ್ಪರರನ್ನು ರಕ್ಷಿಸುತ್ತಿದ್ದರು. ಅಂದರೆ, ಪರಸ್ಪರರನ್ನು ಪೀಡಿಸುತ್ತಿರಲಿಲ್ಲ; ಶೋಷಿಸುತ್ತಿರಲಿಲ್ಲ. ಅಂದರೆ ತಮ್ಮ ತಮ್ಮ ಕರ್ತವ್ಯಕರ್ಮಗಳನ್ನು ಚಾಚೂ ತಪ್ಪದೇ ಮಾಡುತ್ತಿದ್ದರು. ಮತ್ತು ಎಲ್ಲಿಯೇ ಆಗಲಿ-ಮನೆ, ಸಂಸ್ಥೆ, ಕಾರಖಾನೆ, ಆಡಳಿತ ಕಚೇರಿ, ಸಾಮಾಜಿಕ ವ್ಯವಸ್ಥೆ. ಮುಂತಾದೆಡೆಗಳಲ್ಲಿ ಪ್ರತಿಯೊಬ್ಬರೂ ಕೂಡ ತಮ-ತಮಗೆ ವಹಿಸಿಕೊಟ್ಟ ಅಥವಾ ತಾವು ವಹಿಸಿಕೊಂಡಿರುವ ಕೆಲಸಗಳನ್ನು ಸಮರ್ಪಕವಾಗಿ ಮಾಡಿಬಿಟ್ಟರೆ ಅಲ್ಲಿ ಯಾವುದೇ ಗೊಂದಲವುಂಟಾಗುವದಿಲ್ಲ. ಯಾವ ರೀತಿಯಿಂದ ಒಂದು ಯಂತ್ರದ ದೊಡ್ಡ ಮತ್ತು ಚಿಕ್ಕ-ಪುಟ್ಟ ಭಾಗಗಳೆಲ್ಲ ತಮ್ಮ-ತಮ್ಮ ಕೆಲಸವನ್ನು ಚಾಚೂತಪ್ಪದೇ ಮಾಡಿದರೇನೇ ಆ ಯಂತ್ರವು ಉತ್ತಮರೀತಿಯಿಂದ ನಡೆಯಬಲ್ಲುದೋ ಅದೇ ರೀತಿ ಮನುಷ್ಯನು ತಾನು ಅಂಗವಾಗಿರುವ ಮನೆ, ಸಂಸ್ಥೆ, ಸಮಾಜ ಮುಂತಾದವುಗಳಲ್ಲಿ ತನ್ನ ಸ್ಥಾನಕ್ಕೆ ತಕ್ಕಂತಹ ಕೆಲಸವನ್ನು ಪೂರ್ಣವಾಗಿ ಮಾಡುತ್ತ ಜೀವಿಸಿದರೆ ಆಗ ಆ ಮನೆ, ಆ ಸಂಸ್ಥೆ, ಆ ಸಮಾಜ ಮುಂತಾದವುಗಳೊಳಗಿನ ಜೀವನ ಸುಸೂತ್ರವಾಗಿ ನಡೆಯತೊಡಗಿ ಯಾವುದೇ ಗೊಂದಲವುಂಟಾಗುವದಿಲ್ಲ. ಅದೇ ರೀತಿ ಯಾವ ರಾಜ್ಯದಲ್ಲಿ ಪ್ರತಿಯೊಬ್ಬ ಪ್ರಜೆಯೂ ಧರ್ಮಿಷ್ಠನಾಗಿರುತ್ತಾನೋ ಅಂದರೆ ತನ್ನ ತನ್ನ ಧರ್ಮವನ್ನು ಚಾಚೂ ತಪ್ಪದೇ ಪಾಲಿಸುತ್ತಾನೋ ಅಂದರೆ ತಾನು ಮಾಡಬೇಕಾದ ಕೆಲಸ

ವನ್ನು ಮಾಡುತ್ತಿದ್ದು ಮಾಡಬಾರದ ಕೆಲಸವನ್ನು ಮಾಡುವದಿಲ್ಲವೋ ಅಂತಹ ರಾಜ್ಯದಲ್ಲಿ ಅಪರಾಧ, ಅರಾಜಕತೆ, ಶೋಷಣೆ, ಪರಪೀಡೆ ಮುಂತಾದ ಅನಿಷ್ಟಗಳಿಗೆ ಆಸ್ಪದವೇ ದೊರೆಯುವದಿಲ್ಲ ಮತ್ತು ಅದರಿಂದ ಅಂತಹ ರಾಜ್ಯದಲ್ಲಿ ರಾಜನ ಅಂದರೆ ಪ್ರಜೆಗಳನ್ನು ಸ್ವಕರ್ತವ್ಯಕರ್ಮಗಳಲ್ಲಿ ತೊಡಗಿಸುವ ಅಧಿಕಾರಿಯ ಅಗತ್ಯವೇ ಬೀಳುವದಿಲ್ಲ. ಅದಕ್ಕಾಗಿಯೇ ಕೃತಯುಗದಲ್ಲಿ—"ನ ರಾಜ್ಯಂ ನ ಚ ರಾಜಾ ಆಸೀತ್" ಎಂಬುದಾಗಿ ಬಣ್ಣಿಸಿದ್ದು. ಇದು ಧರ್ಮಾಚರಣೆಯ ಪ್ರಭಾವ; ಸ್ವಕರ್ತವ್ಯ ಪರಿಪಾಲನೆಯ ಪ್ರಭಾವ.

ಮಹಾಭಾರತದಲ್ಲಿ ಬರುವ ಪರೀಕ್ಷಿತರಾಜನ ರಾಜ್ಯದ ವರ್ಣನೆಯಲ್ಲಿಯೂ ಇದೇ ಮಾತು ಬರುತ್ತದೆ. ಅವನು ನಾಲ್ಕು ವರ್ಣದ ಜನರನ್ನು ಅವರವರ ಧರ್ಮಾಚರಣೆಯಲ್ಲಿ ತೊಡಗಿಸಿದ್ದನಂತೆ, ಅದರಿಂದ ಅವರೆಲ್ಲ ತಮ್ಮ ತಮ್ಮ ಕರ್ತವ್ಯ ಕರ್ಮಗಳನ್ನು ಸಮರ್ಪಕವಾಗಿ ಪರಿಪಾಲಿಸುತ್ತಿದ್ದರಂತೆ—

> ಚಾತುರ್ವರ್ಣ್ಯಂ ಸಧರ್ಮಸ್ಥಂ ಸ ಕೃತ್ವಾ ಪರ್ಯರಕ್ಷತ ॥
> ಬ್ರಾಹ್ಮಣಾಃ ಕ್ಷತ್ರಿಯಾಃ ವೈಶ್ಯಾಃ ಶೂದ್ರಾಶ್ಚೈವ ಸ್ವಕರ್ಮಸು ।
> ಸ್ಥಿತಾಃ ಸುಮನಸೋ ರಾಜಂಸ್ತೇನ ರಾಜ್ಞಾ ಸ್ವಧಿಷ್ಠಿತಾಃ ॥

ಧರ್ಮಾಧಿಷ್ಠಿತ ರಾಜ್ಯಗಳಲ್ಲೆಲ್ಲ ಇದೇ ಸಂಗತಿ ಕಂಡುಬರುತ್ತದೆ. ಅಲ್ಲೆಲ್ಲ ಜನರು 'ಸ್ವಕರ್ಮನಿರತ'ರು. ತಮ್ಮ ತಮ್ಮ ಕರ್ತವ್ಯ ಕರ್ಮಗಳಲ್ಲಿ ತೊಡಗಿದವರು. ತಾವು ಮಾಡಬೇಕಾದುದನ್ನೇ ಮಾಡುವವರು; ಮಾಡಬಾರದುದನ್ನು ಮಾಡದವರು. ಅದರಿಂದ ಎಲ್ಲಿಯೂ ಗೊಂದಲವಿಲ್ಲದೇ ಎಲ್ಲರಿಗೂ ಸುಖ-ಸಮಾಧಾನ-ಶಾಂತಿ-ಸಮೃದ್ಧಿ.

ಇನ್ನೊಂದು ಮಾತನ್ನು ಗಮನಿಸಬಹುದು. ಇಂದಿಗೂ 'ರಾಮರಾಜ್ಯ'ವೇ ಆದರ್ಶ ರಾಜ್ಯ; ಶ್ರೀರಾಮಚಂದ್ರನೇ ಆದರ್ಶ ರಾಜ. ಹಾಗಾದರೆ ಶ್ರೀರಾಮಚಂದ್ರನ ಜೀವನ ಸರ್ವಸ್ವವೇನು ? ಅವನ ಬದುಕಿನ ಸಾರವೇನು ? ಅವನ ಬಾಳಿನ ಗುರಿಯೇನು ? ಅರ್ಥಾತ್ ಶ್ರೀರಾಮಚಂದ್ರನ ಇಡೀ ಜೀವನವನ್ನು ಒಂದೇ ಮಾತಿನಲ್ಲಿ ಸಾರ್ಥಕವಾಗಿ ಬಣ್ಣಿಸುವುದಾದರೆ ಆ ಮಾತು ಯಾವುದು ? ಎಂದು ಮುಂತಾಗಿ ವಾಲ್ಮೀಕಿಗಳಿಗೆ ಕೇಳಿದರೆ ಅವರ ಉತ್ತರ ಸಿದ್ಧವಿದೆ—"ರಾಮೋ ವಿಗ್ರಹವಾನ್ ಧರ್ಮಃ" ರಾಮನು ಧರ್ಮದ ಸಾಕಾರಮೂರ್ತಿಯಾಗಿದ್ದನು. ಶ್ರೀರಾಮಚಂದ್ರನ ಜೀವನವನ್ನು ಇನ್ನೊಂದು ಮಾತಿನಲ್ಲಿ ಬಣ್ಣಿಸಬಹುದಾದರೆ ಅವನು 'ಕರ್ತವ್ಯ ಕಠೋರ' ಎಂಬುದಾಗಿ ಹೇಳಬಹುದು. ತನ್ನ ಧರ್ಮ ಅಥವಾ ಕರ್ತವ್ಯಕ್ಕಾಗಿ ಅವನ ಜೀವನವಾಗಿತ್ತು. ಶ್ರೀರಾಮನ ಇಡೀ ಜೀವನವು ಕರ್ತವ್ಯದ ಪರಿಪಾಲನೆಗಾಗಿಯೇ

ಇತ್ತು. ಅವನು ಪುತ್ರನಾಗಿ ಸ್ವಕರ್ತವ್ಯ ಪರಿಪಾಲಿಸಿ ಆದರ್ಶ ಪುತ್ರನೆನಿಸಿದ. ರಾಜನಾಗಿ ಕರ್ತವ್ಯಪಾಲಿಸಿ ಆದರ್ಶ ರಾಜನೆನಿಸಿದ. ಅದರಂತೆಯೇ ಆತನು ಆದರ್ಶಮಿತ್ರ, ಆದರ್ಶಶತ್ರು, ಆದರ್ಶ ಸಹೋದರ, ಆದರ್ಶಪತಿ; ಆದುದರಿಂದ ಶ್ರೀರಾಮಚಂದ್ರ ಆದರ್ಶಪುರುಷ. ಆದರ್ಶ ಬಾಳನ್ನು ಹೇಗೆ ಬದುಕಬೇಕೆಂಬುದನ್ನು ಮನುಷ್ಯರಿಗೆ ಕಲಿಸಲೆಂದೇ ಪರಮಾತ್ಮನು ರಾಮನಾಗಿ ಅವತರಿಸಿದನೆಂದು ಭಾಗವತದಲ್ಲಿ ಸ್ಪಷ್ಟವಾಗಿ ಹೇಳಿದೆ— "ಮರ್ತ್ಯಾವತಾರಸ್ತ್ವಿಹ ಮರ್ತ್ಯಶಿಕ್ಷಣಮ್".

ಈ ಮೇಲಿನ ಸಂಗತಿಗಳಿಂದ ತಿಳಿಯಬೇಕಾದ ಮಹತ್ವದ ಸಂಗತಿಯೆಂದರೆ ಧರ್ಮ ಎಂದರೆ ಕರ್ತವ್ಯಕರ್ಮ ಮತ್ತು ಧರ್ಮಾಚರಣೆಯೆಂದರೆ ಕರ್ತವ್ಯಕರ್ಮದ ಪರಿಪಾಲನೆ. ಇಹದಲ್ಲಿಯೂ ಪರದಲ್ಲಿಯೂ ನಮ್ಮ ಸುಖಕ್ಕೆ ಸಾಧನವಾಗುವದು ಈ ಧರ್ಮಾಚರಣೆ ಅಥವಾ ಕರ್ತವ್ಯ ಪರಿಪಾಲನೆಯೇ.

ಲೌಕಿಕವಾಗಿಯೂ ನಮ್ಮ ಕೃತಿಗಳು ಬಹಳ ಮಹತ್ವ ಪಡೆದಿವೆ. ಕೇವಲ ಲೌಕಿಕ ದೃಷ್ಟಿಯಿಂದ ನಾವು ವಿಚಾರ ಮಾಡಿದರೂ ಸಮಾಜದಲ್ಲಿ ನಮಗೆ ಗೌರವವನ್ನು ಕೀರ್ತಿಯನ್ನು ತಂದುಕೊಡುವ ಸಾಧನವು ಯಾವದು ? ನಾವು ಹುಟ್ಟಿದ ಮನೆತನವೇ ? ನಾವು ಗಳಿಸಿದ ಧನ-ಕನಕಗಳೇ ? ನಾವು ಪಡೆದಿರುವ ವಿದ್ವತ್ತೆಯೇ ? ನಮ್ಮ ಬಳಿಯಿರುವ ಅಧಿಕಾರವೇ ? ನಮ್ಮ ಶಾರೀರಿಕ ಶಕ್ತಿಯೇ ? ಬೌದ್ಧಿಕ ಪಾಂಡಿತ್ಯವೇ ? ನಮ್ಮ ಬಂಧು–ಬಳಗದವರೇ ? ಯಾವುದು ನಮಗೆ ಗೌರವ ತಂದು ಕೊಡುತ್ತದೆ ? ಯಾವುದರಿಂದ ನಾವು ಕೀರ್ತಿ ಪಡೆಯುತ್ತೇವೆ ? ಅಥವಾ ಯಾವುದರಿಂದ ನಾವು ತಿರಸ್ಕಾರ-ಅನಾದರ-ಅಪಕೀರ್ತಿಗಳಿಗೆ ಗುರಿಯಾಗುತ್ತೇವೆ ? ಹೀಗೆ ವಿಚಾರ ಮಾಡಿದರೆ ನಮಗೆ ಕಂಡು ಬರುವ ಸತ್ಯ ಸಂಗತಿಯೆಂದರೆ ನಮಗೆ ಪ್ರಾಪ್ತವಾಗುವ ಕೀರ್ತಿ–ಅಪಕೀರ್ತಿ, ಆದರ–ಅನಾದರ ಮುಂತಾದವುಗಳಿಗೆ ಕಾರಣ ನಮ್ಮ ಕೃತಿ. ನಾವು ಮಾಡುವ ಒಳ್ಳೆಯ ಅಥವಾ ಕೆಟ್ಟ ಕೆಲಸ. ಒಳ್ಳೆಯ ಕೆಲಸದಿಂದ ಕೀರ್ತಿ, ಆದರ, ಸತ್ಕಾರ, ಗೌರವ ಎಲ್ಲ ದೊರೆಯುತ್ತವೆ. ಕೆಟ್ಟ ಕೆಲಸದಿಂದ ಅಪಕೀರ್ತಿ ಅನಾದರ, ತಿರಸ್ಕಾರ, ಅಪಮಾನಗಳಿಗೆ ಗುರಿಯಾಗುತ್ತೇವೆ. ಇತರ ಸಂಗತಿಗಳ ಮೂಲಕ ಎದುರಿಗೆ ಅಥವಾ ತಾತ್ಕಾಲಿಕವಾಗಿ ಜನರು ನಮ್ಮನ್ನು ಗೌರವಿಸಬಹುದು; ಹೊಗಳಬಹುದು. ಆದರೆ ನಮ್ಮ ಕೃತಿಗಳ ಮೂಲಕ ದೊರಕುವ ಹೊಗಳಿಕೆ ತೆಗಳಿಕೆಗಳು ಮಾತ್ರ ಸದಾಕಾಲವೂ ಇರುತ್ತವೆ. "ಯಥಾಕರ್ಮ ತಥಾ ಲಾಭಃ" ಎಂಬುವದನ್ನು ಎಂದೆಂದಿಗೂ ನೆನಪಿಡಬೇಕು. ನಮ್ಮ ಉಚ್ಚತೆ–ನೀಚತೆಗಳಿಗೆ ನಮ್ಮ ಕೃತಿಗಳೇ ಕಾರಣ.

ಇಲ್ಲಿ ಪ್ರಶ್ನೆ ಏಳಬಹುದು–ನಮ್ಮ ಉಚ್ಚತೆ–ನೀಚತೆಗಳಿಗೆ ನಮ್ಮ ಜನ್ಮವೇ ಕಾರಣವೆಂದು ಹೇಳುತ್ತಾರಲ್ಲ ? ಇದರ ಬಗ್ಗೆ ಸಂಸ್ಕೃತಸಾಹಿತ್ಯದಲ್ಲಿ ಚಿಂತನೆ ನಡೆ

ದಿದೆಯೇ ? ಎಂದು ಕೇಳಿದರೆ ನಮ್ಮ ಪ್ರಾಚೀನರು ಇದನ್ನು ಕುರಿತು ವಿಚಾರ ಮಂಥನ ಮಾಡಿ ನಮ್ಮ ಸ್ಥಾನ–ಮಾನಗಳಿಗೆ ನಮ್ಮ ಕೃತಿಯೇ ಕಾರಣವೆಂದು ನಿರ್ಣಾಯಕವಾಗಿ ಸಾರಿಹೇಳಿದ್ದಾರೆ. ಅಥರ್ವವೇದದಲ್ಲಿ ಆರ್ಯನು ಯಾರು ? ದಾಸನು ಯಾರು ? ಎಂಬ ಚರ್ಚೆ ಬಂದಾಗ ಹೀಗೆ ಹೇಳಿದೆ–"ನ ದಾಸೋ ನಾರ್ಯೋ ಮಹಿತ್ವಾ ವ್ರತಂ ಮೀಮಾಯ"॥ ಅಂದರೆ, ನಾನು ಯಾರನ್ನೂ ಜನ್ಮದಿಂದ ಆರ್ಯ ಅಥವಾ ಉಚ್ಚನೆಂದಾಗಲೀ ದಾಸ ಅಥವಾ ನೀಚನೆಂದಾಗಲಿ ಪರಿಗಣಿಸುವದಿಲ್ಲ. ಅವರವರ ಕೃತಿಯಿಂದ ಹಾಗೆ ನಿರ್ಧರಿಸುತ್ತೇನೆ. ಅಂದರೆ ಉಚ್ಚತೆ–ನೀಚತೆಗಳಿಗೆ ಜನ್ಮವಿಲ್ಲ, ಕೃತಿಯೇ ನಿರ್ಣಾಯಕವೆಂದಂತಾಯಿತು.

ಈ ವಿಷಯದ ಕುರಿತು ವಿವರವಾದ ವಿವೇಚನೆ ಮಹಾಭಾರತದಲ್ಲಿ ಅನೇಕ ಕಡೆ ಬಂದಿದೆ. ನಿಜವಾಗಿಯೂ ಭಾರತೀಯ ಸಂಸ್ಕೃತಿಯ ಎಲ್ಲ ಅಂಗಗಳ ಸೂಕ್ಷ್ಮಾತಿ ಸೂಕ್ಷ್ಮ ವಿವರಗಳು ಮಹಾಭಾರತದಲ್ಲಿ ದೊರೆಯುತ್ತವೆ. ನಮ್ಮ ಉಚ್ಚತೆ-ನೀಚತೆ, ಆದರ–ಕೀರ್ತಿ–ಅಪಕೀರ್ತಿಗಳಿಗೆ ನಮ್ಮ ಕೃತಿಗಳೇ ಕಾರಣವೆಂಬುದಾಗಿ ಅಲ್ಲಿ ವಾದವಿವಾದದ ಅಂತ್ಯದಲ್ಲಿ ನಿರ್ಣಯಿಸಲಾಗಿದೆ. ಮಹಾಭಾರತದ ವನಪರ್ವದಲ್ಲಿ 'ಅಜಗರ–ಯುಧಿಷ್ಠಿರ ಸಂವಾದ'ವೆಂಬ ಭಾಗವಿದೆ. ಅಲ್ಲಿ ಹೆಬ್ಬಾವಿನ ರೂಪದಲ್ಲಿದ್ದ ನಹುಷ ಮಹಾ ರಾಜನು ಕೇಳುವ ಪ್ರಶ್ನೆಗಳಿಗೆ ಯುಧಿಷ್ಠಿರನು ಸಮರ್ಪಕ ಉತ್ತರಗಳನ್ನು ಕೊಡುತ್ತಾನೆ. ಬ್ರಾಹ್ಮಣ ಯಾರೆಂಬ ಕುರಿತು ನಡೆದ ಪ್ರಶ್ನೋತ್ತರ ಹೀಗಿದೆ.

ನಹುಷ–ಬ್ರಾಹ್ಮಣಃ ಕೋ ಭವೇದ್ ರಾಜನ್॥

ಯುಧಿಷ್ಠಿರ– ಸತ್ಯಂ ದಾನಂ ಕ್ಷಮಾ ಶೀಲಮಾನುಶಂಸ್ಯಂ ತಪೋ ಘೃಣಾ ।
ದೃಶ್ಯಂತೇ ಯತ್ರ ನಾಗೇಂದ್ರ ಸ ಬ್ರಾಹ್ಮಣ ಇತಿ ಸ್ಮೃತಃ ॥

ನಹುಷ– ಶೂದ್ರೇಷ್ವಪಿ ಚ ಸತ್ಯಂ ಚ ದಾನಮಕ್ರೋಧ ಏವ ಚ ।
ಆನೃಶಂಸ್ಯಮಹಿಂಸಾ ಚ ಘೃಣಾ ಚೈವ ಯುಧಿಷ್ಠಿರ ॥

ಯುಧಿಷ್ಠಿರ– ಶೂದ್ರೇ ತು ಯದ್ ಭವೇಲ್ಲಕ್ಷ್ಮ ದ್ವಿಜೇ ತಚ್ಚ ನ ವಿದ್ಯತೇ ।
ನ ವೈ ಶೂದ್ರೋ ಭವೇತ್ ಶೂದ್ರೋ ಬ್ರಾಹ್ಮಣೋ ನ ಚ ಬ್ರಾಹ್ಮಣಃ॥
ಯತ್ರೈತಲ್ಲಕ್ಷ್ಯತೇ ಸರ್ಪ ವೃತ್ತಂ ಸ ಬ್ರಾಹ್ಮಣಃ ಸ್ಮೃತಃ ।
ಯತ್ರೈ ತನ್ನ ಭವೇತ್ ಸರ್ಪ ತಂ ಶೂದ್ರಮಿತಿ ನಿರ್ದಿಶೇತ್ ॥

ಇಲ್ಲಿ ಬ್ರಾಹ್ಮಣನ ಲಕ್ಷಣಗಳೇನು ? ಆ ಲಕ್ಷಣಗಳು ಶೂದ್ರಜಾತಿಯಲ್ಲಿ ಹುಟ್ಟಿದವನಲ್ಲಿ ಕಂಡುಬಂದರೆ ಅವನನ್ನು ಬ್ರಾಹ್ಮಣನೆನ್ನಬಹುದೇ ? ಎಂಬ ಪ್ರಶ್ನೆಗಳನ್ನು ನಹುಷನು ಕೇಳಿದಾಗ ಸತ್ಯ, ದಾನ, ಕ್ಷಮಾ, ಶೀಲ, ದಯೆ, ತಪಸ್ಸು, ಮುಂತಾದವುಗಳು ಯಾರಲ್ಲಿ ಕಂಡುಬರುತ್ತವೆಯೋ ಅಂದರೆ ಯಾರ ಕೃತಿಗಳಲ್ಲಿ ಈ ಸದ್ಗುಣಗಳು

ಪ್ರಕಟವಾಗುತ್ತವೆಯೋ ಅವನೇ ಬ್ರಾಹ್ಮಣನು. ಗೌರವಕ್ಕೆ ತಕ್ಕವನು. ಯಾರಲ್ಲಿ ಇಲ್ಲವೋ ಅವನೇ ಶೂದ್ರನು, ಗೌರವಕ್ಕೆ ಅಯೋಗ್ಯನು" ಎಂದು ಯುಧಿಷ್ಠಿರನು ಸ್ಪಷ್ಟಪಡಿಸುತ್ತಾನೆ.

ಇದೇ ರೀತಿಯಾಗಿ ವನಪರ್ವದಲ್ಲಿ "ಯಕ್ಷ-ಯುಧಿಷ್ಠಿರ ಸಂವಾದ"ವಿದೆ. ಅಲ್ಲಿಯೂ ಕೂಡ ಯುಧಿಷ್ಠಿರನು "ಕಾರಣಂ ಹಿ ದ್ವಿಜತ್ವೇ ಚ ವೃತ್ತಮೇವ ನ ಸಂಶಯಃ" ಅಂದರೆ ಬ್ರಾಹ್ಮಣನಾಗಲು ಮನುಷ್ಯನ ನಡತೆ, ಅವನಕೃತಿಯೇ ಕಾರಣ ವೆಂಬುದಾಗಿ ಸ್ಪಷ್ಟಪಡಿಸುತ್ತಾನೆ.

ಮಹಾಭಾರತದ ಅನುಶಾಸನ ಪರ್ವದಲ್ಲಿ ಬರುವ ಮಹೇಶ್ವರನ ಈ ಮಾತು ಗಳೂ ಗಮನಾರ್ಹ.

ಕರ್ಮಭಿಃ ಶುಚಿಭಿರ್ದೇವಿ. ಶುದ್ಧಾತ್ಮಾ ವಿಜಿತೇಂದ್ರಿಯಃ।
ಶೂದ್ರೋಽಪಿ ದ್ವಿಜವತ್ ಸೇವ್ಯ ಇತಿ ಬ್ರಹ್ಮಾಬ್ರವೀತ್ ಸ್ವಯಮ್॥
ಸ್ವಭಾವಃ ಕರ್ಮ ಚ ಶುಭಂ ಯತ್ರ ಶೂದ್ರೇಽಪಿ ತಿಷ್ಠತಿ।
ವಿಶಿಷ್ಟಃ ಸ ದ್ವಿಜಾತೇರ್ವೈ ವಿಜ್ಞೇಯ ಇತಿಮೇ ಮತಿಃ॥

ನ ಯೋನಿಃ ನಾಪಿ ಸಂಸ್ಕಾರೋ ನ ಶ್ರುತಂ ನ ಚ ಸಂತತಿಃ।
ಕಾರಣಾನಿ ದ್ವಿಜತ್ವಸ್ಯ ವೃತ್ತಮೇವ ತು ಕಾರಣಮ್॥

ಸರ್ವೋಽಯಂ ಬ್ರಾಹ್ಮಣೋ ಲೋಕೇ ವೃತ್ತೇನ ತು ವಿಧೀಯತೇ॥
ವೃತ್ತೇ ಸ್ಥಿತಸ್ತು ಶುದ್ರೋಽಪಿ ಬ್ರಾಹಣತ್ವಂ ನಿಯಚ್ಛತಿ॥

ಇದು ಮಹೇಶ್ವರನು ಪಾರ್ವತಿಗೆ ತಿಳಿಸಿ ಹೇಳಿದ ವಿಷಯ. ಬ್ರಾಹ್ಮಣತ್ವ-ಶೂದ್ರತ್ವ ಗಳಿಗೆ ಕಾರಣವ್ಯಾವುದೆಂಬುದು ಚರ್ಚೆಯ ವಿಷಯ. ಮಹೇಶ್ವರನು ಸ್ಪಷ್ಟಪಡಿಸು ತ್ತಾನೆ– "ಪಾರ್ವತಿಯೆ ಮೊಟ್ಟಮೊದಲು ಬ್ರಹ್ಮನೇ ಸ್ವತಃ ಹೇಳಿದ್ದನ್ನು ಕೇಳು: "ಪರಿಶುದ್ಧವಾದ ಕೃತಿಗಳನ್ನು ಗೈದ, ಆಂತರಿಕ ಶುದ್ಧತೆಯನ್ನು ಪಡೆದ ಮತ್ತು ಜಿತೇಂದ್ರಿಯನಾಗಿರುವಂಥ ಶೂದ್ರನ ಸೇವೆಯನ್ನು ಬ್ರಾಹ್ಮಣನ ಸೇವೆ ಮಾಡು ವಂತೆಯೇ ಮಾಡಬೇಕು."– ಇದನ್ನು ಬ್ರಹ್ಮ ಹೇಳಿಟ್ಟಿದ್ದಾನೆ. ಈಗ ನನ್ನ ಅಭಿ ಪ್ರಾಯ ಕೇಳು: ಶೂದ್ರಜಾತಿಯಲ್ಲಿ ಹುಟ್ಟಿದ ಯಾವನಲ್ಲಿ ಒಳ್ಳೆಯದನ್ನುಂಟು ಮಾಡುವ ಸ್ವಭಾವ ಮತ್ತು ಕೃತಿಗಳು ಇರುವೆಯೋ ಅವನು ಬ್ರಾಹ್ಮಣ-ಕ್ಷತ್ರಿಯ- ವೈಶ್ಯರಿಗಿಂತ ಮಿಗಿಲಾದವನೆಂಬುದು ನನ್ನ ಅಭಿಪ್ರಾಯ. ಯಾವನೊಬ್ಬನು ಬ್ರಾಹ್ಮಣ ನಾಗಲು ಕಾರಣವೆಂದರೆ ಅವನು ಜನ್ಮ ಪಡೆದ ಜಾತಿಯಲ್ಲ. ಅವನು ಪಡೆದ ಸಂಸ್ಕಾರ ಗಳಲ್ಲ, ಅವನು ಗಳಿಸಿದ ವಿದ್ವತ್ತೆಯಲ್ಲ, ಅವನಲ್ಲಿ ಹುಟ್ಟಿದ ಮಕ್ಕಳಲ್ಲ. ಆದರೆ ಅವನ

ನಡತೆ, ಅವನ ಕೃತಿಗಳೇ ಅದಕ್ಕೆ ಕಾರಣ. ಎಲ್ಲರನ್ನು ಕೂಡ ಒಳ್ಳೆಯ ನಡತೆಯಿಂದ ಸತ್ಕರ್ಮಗಳಿಂದ ಬ್ರಾಹ್ಮಣರನ್ನಾಗಿ ಮಾಡ ಬರುತ್ತದೆ. ಸತ್ಕರ್ಮ ನಿರತನಾದ ಶೂದ್ರನು ಸಹ ಬ್ರಾಹ್ಮಣನಾಗುತ್ತಾನೆ."

ಸಂಸ್ಕೃತ ಸಾಹಿತ್ಯದ ಇತರ ಗ್ರಂಥಗಳಲ್ಲಿ ಕೂಡ ಜನ್ಮಕ್ಕಿಂತ ಕೃತಿಯ ನಡತೆಯ ಆಚಾರದ ಪ್ರಾಧಾನ್ಯ ಕುರಿತು ಒತ್ತಿ ಹೇಳಲಾಗಿದೆ—

೧) ಕುಲೀನಮಕುಲೀನಂ ವಾ ವೀರಂ ಪುರುಷಮಾನಿನಮ್ ।
ಚಾರಿತ್ರ್ಯಮೇವ ವ್ಯಾಖ್ಯಾತಿ ಶುಚಿಂ ವಾ ಯದಿ ವಾಽಶುಚಿಮ್ ॥
(ರಾಮಾಯಣ)

ಮನುಷ್ಯನ ನಡತೆಯೇ ಅವನು ಒಳ್ಳೆಯ ಕುಲದವನೋ ಕೆಟ್ಟ ಕುಲದವನೋ, ಪರಿಶುದ್ಧನೋ ಅಶುದ್ಧನೋ ಅಂದರೆ ಒಳ್ಳೆಯವನೋ ಕೆಟ್ಟವನೋ ಎಂಬುದನ್ನು ನಿರ್ಧರಿಸುತ್ತದೆ.

೨) ಆಚಾರಾದ್ವಿಚ್ಯುತೋ ವಿಪ್ರೋ ನ ವೇದಫಲಮಶ್ನುತೇ ।
ಆಚಾರೇಣ ತು ಸಂಯುಕ್ತಃ ಸಂಪೂರ್ಣ ಫಲಭಾಗ್ ಭವೇತ್ ॥
(ಮನುಸ್ಮೃತಿ)

ಸದಾಚಾರವನ್ನು ಬಿಟ್ಟಂಥ ಬ್ರಾಹ್ಮಣನು ವೇದಾಧ್ಯಯನದ ಅಥವಾ ವೇದವಿಹಿತ ಕರ್ಮಾನುಷ್ಠಾನದ ಫಲವನ್ನು ಪಡೆಯುವದಿಲ್ಲ. ಅದೇ ಆತನು ಸದಾಚಾರ ಸಂಪನ್ನನಾಗಿದ್ದರೆ ಪೂರ್ಣ ಫಲವನ್ನು ಪಡೆಯುತ್ತಾನೆ.

೩) ಆಚಾರಹೀನಂ ನ ಪುನಂತಿ ವೇದಾ
ಯಧ್ಯಪ್ಯಧೀತಾಃ ಸಹ ಷಡ್ಭಿರಂಗೈಃ ॥ (ವಸಿಷ್ಠಸ್ಮೃತಿ)

ಶಿಕ್ಷಾ-ಕಲ್ಪ-ವ್ಯಾಕರಣ-ಛಂದಸ್ಸು-ಜ್ಯೋತಿಷ್ಯ-ನಿರುಕ್ತಗಳೆಂಬ ಆರೂ ವೇದಾಂಗಗಳಿಂದ ಕೂಡಿರುವ ಸಕಲ ವೇದಗಳನ್ನು ಕಲಿತರೂ ಆ ಎಲ್ಲ ಜ್ಞಾನವು ಸದಾಚಾರ ವಿಹೀನನಾದವನನ್ನು ಎಂದಿಗೂ ಪವಿತ್ರ ಗೊಳಿಸುವದಿಲ್ಲ. ಮನುಷ್ಯನ ಪಾವಿತ್ರ್ಯಾಪಾವಿತ್ರ್ಯಗಳು ಅವನ ಆಚಾರ-ಕೃತಿ-ನಡತೆಯನ್ನವಲಂಬಿಸಿವೆಯೇ ಹೊರತು ಅವನ ಅಧ್ಯಯನವನ್ನಲ್ಲ.

ಹೀಗೆ ಮನುಷ್ಯನ ಸ್ಥಾನ-ಮಾನಗಳು, ಗೌರವ-ಅಗೌರವಗಳು, ಕೀರ್ತಿ-ಅಪಕೀರ್ತಿಗಳು, ಮಾನಾಪಮಾನಗಳು, ಸುಖ-ದುಃಖಗಳು-ಇವೇ ಮುಂತಾದವುಗಳಿಗೆ ಕಾರಣ ಅವನ ಕೃತಿಯೇ ಆಗಿದೆ. ಅವನಿಗೆ ಸತ್ಕೃತಿ ಅಥವಾ ಧರ್ಮದಿಂದ ಸುಖ; ದುಷ್ಕೃತಿ ಅಥವಾ ಅಧರ್ಮದಿಂದ ದುಃಖ, ಇದು ಸಿದ್ಧಿತ.

ಇನ್ನೊಂದು ದೃಷ್ಟಿಯಿಂದ ಕೂಡ ಮನುಷ್ಯನ ಜೀವನದಲ್ಲಿ ಧರ್ಮಾಚರಣೆಗೆ ಅಥವಾ ಕರ್ತವ್ಯಪಾಲನೆಗೆ ಮಹತ್ವವಿದೆ. ಮನುಷ್ಯನನ್ನು ಇತರ ಪ್ರಾಣಿಗಳಿಂದ ಬೇರ್ಪಡಿಸುವ ಸಂಗತಿಯೆಂದರೆ 'ಧರ್ಮ' ಎಂಬುದಾಗಿ ನಮ್ಮ ಪ್ರಾಚೀನರು ಹೇಳಿಟ್ಟಿದ್ದಾರೆ.

ಆಹಾರನಿದ್ರಾಭಯಮೈಥುನಂ ಚ
ಸಮಾನಮೇತತ್ ಪಶುಭಿರ್ನರಾಣಾಮ್।

ಧರ್ಮೋ ಹ್ಯೇಕೋಽಧಿಕೋ ವಿಶೇಷೋ
ಧರ್ಮೇಣ ಹೀನಾಃ ಪಶುಭಿಃ ಸಮಾನಾಃ॥

ಮನುಷ್ಯನೂ ಒಬ್ಬ ಪ್ರಾಣಿಯೇ. ಇತರ ಪ್ರಾಣಿಗಳಂತೆ ಅವನಲ್ಲಿ ಆಹಾರ-ನಿದ್ರಾ-ಭಯ-ಮೈಥುನಗಳಿವೆ, ಆದರೆ ಅವನು ಪ್ರಾಣಿಗಳಿಗೂ ಮಿಗಿಲಾದವನು. ಆಹಾರ-ನಿದ್ರಾ-ಭಯ-ಮೈಥುನಗಳಿಗೆ ಒಳಗಾಗಿ ಸಾಯುವತನಕ ಬದುಕುವದು ಪ್ರಾಣಿಗಳ ಜೀವನಸರ್ವಸ್ವ ಆದರೆ ಮನುಷ್ಯಜನ್ಮದ ಸದುಪಯೋಗ ಮಾಡಿಕೊಂಡು ಈ ಸಂಸಾರ ಬಂಧನದಿಂದ ಪಾರಾಗಿ ಹೋಗುವದು ಅಥವಾ ಹೋಗಲು ಪ್ರಯತ್ನಿಸುವದು ಮನುಷ್ಯನ ಜೀವನದ ಸಾರಸರ್ವಸ್ವ, ಬದುಕಿನಗುರಿ, ಬಾಳಿನ ಸಾರ್ಥಕತೆ. ಮತ್ತು ಮನುಷ್ಯನನ್ನು ಇತರ ಪ್ರಾಣಿಗಳಿಂದ ಬೇರ್ಪಡಿಸಿ ಮಿಗಿಲಾಗಿಸುವ ಸಂಗತಿಯೆಂದರೆ 'ಧರ್ಮ' ಅಥವಾ ತನ್ನ ಕೃತಿ-ಕರ್ತವ್ಯಪಾಲನೆ ಪಶು-ಪಕ್ಷಿ ಮುಂತಾದ ಪ್ರಾಣಿಗಳು ನಿಸರ್ಗದತ್ತವಾದ ಶಕ್ತಿ-ಸಾಮರ್ಥ್ಯಗಳಿಂದ ತಮ್ಮ ಸ್ವಾಭಾವಿಕ ಆಹಾರ-ನಿದ್ರಾದಿ ಇಚ್ಛೆಗಳನ್ನು ಪೂರೈಸಿಕೊಳ್ಳುತ್ತ ಸಾಯುವ ತನಕ ಬದುಕುತ್ತವೆ. ಆದರೆ ಮನುಷ್ಯನು ಹಾಗಲ್ಲ. ಹಸಿವೆಯಾಗಿ ಅವನಿಗೆ ಆಹಾರದ ಇಚ್ಛೆಯಾದರೂ ಎಲ್ಲಿ ಬೇಕಾದಲ್ಲಿ ಏನು ಬೇಕಾದ್ದನ್ನು ಯಾವುದೇ ಸ್ಥಿತಿಯಲ್ಲಿ ತಿನ್ನಲಾರನು. ಉಪವಾಸದ ವ್ರತಧಾರಿಯಾಗಿದ್ದರೆ ಹಸಿವೆಯನ್ನು ಸಾಹಿಸಿಕೊಂಡು ವ್ರತಮುಗಿದ ಬಳಿಕವೇ ಆಹಾರ ಸ್ವೀಕರಿಸುವನು. ನಿದ್ರಾ-ಭಯ-ಮೈಥುನಗಳ ವಿಷಯದಲ್ಲಿಯೂ ಅಷ್ಟೇ. ಇತರ ಪ್ರಾಣಿಗಳು ಮನಸ್ಸಿಗೋ ದೇಹಕ್ಕೋ ಬೇಕೆನಿಸಿದ ಕೂಡಲೇ ಇಚ್ಛಾಪೂರ್ತಿಗಾಗಿ ಪ್ರಯತ್ನಿಸುವವು. ಮನುಷ್ಯನು ಹಾಗಲ್ಲ. ಪ್ರತಿಯೊಂದಕ್ಕೂ ಅವನು ಹಾಕಿಕೊಂಡಿರುವ ಕೆಲವು ನಿಯಮ-ನಿಬಂಧನೆಗಳಿವೆ. ಅವುಗಳನ್ನು ಮೀರದಂತೆ ಅವನು ತನ್ನ ಇಚ್ಛೆಗಳನ್ನು ಪೂರೈಸಿಕೊಳ್ಳುವನು. ಅದಕ್ಕಾಗಿ ಮನುಷ್ಯ ಮತ್ತು ಇತರ ಪ್ರಾಣಿಗಳ ನಡುವಿನ ಭೇದವನ್ನು ಇನ್ನೊಂದು ವಿಧವಾಗಿ ಬಣ್ಣಿಸಿದ್ದಾರೆ.

ಮತಯೋ ಯತ್ರ ಗಚ್ಛಂತಿ ತತ್ರ ಗಚ್ಛಂತಿ ವಾನರಾಃ।
ಶಾಸ್ತ್ರಾಣಿ ಯತ್ರ ಗಚ್ಛಂತಿ ತತ್ರ ಗಚ್ಛಂತಿ ವೈ ನರಾಃ॥

ಅಂದರೆ, ಮನಸ್ಸು ಹೇಗೆ ಹೇಳುತ್ತದೆಯೋ ಹಾಗೆ ಮಾಡುವದು ಮೃಗಗಳ ಅಂದರೆ ಇತರ ಪ್ರಾಣಿಗಳ ಸ್ವಭಾವ. ಆದರೆ ಶಾಸ್ತ್ರಗಳು ವಿಧಿಸಿರುವಂತೆ ಮಾಡುವದು ಮನುಷ್ಯರ ಸ್ವಭಾವ.

ಮನುಷ್ಯರಿಗೆ ತಾವು ಮಾಡಬೇಕಾದುದರ ಬಗ್ಗೆ ಸಂಶಯ ಬಂದಾಗ ಅವರು ಶಾಸ್ತ್ರವು ಹೇಳಿದಂತೆ ಮಾಡಬೇಕೆಂದು ಭಗವದ್ಗೀತೆಯೂ ಹೇಳಿದೆ.

ತಸ್ಮಾತ್ ಶಾಸ್ತ್ರಾಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ॥

ಮತ್ತು ಮನುಷ್ಯರು ಮಾಡಬೇಕಾದುವನ್ನು ಹೇಳಿಕೊಡುವದೇ 'ಶಾಸ್ತ್ರ'ವೆಂದು ಕರೆಯಲ್ಪಡುತ್ತದೆಯೆಂದೂ ವಿವರಿಸಲಾಗಿದೆ.

ಪ್ರವೃತ್ತಿರ್ವಾ ನಿವೃತಿರ್ವಾ ನಿತ್ಯೇನ ಕೃತಕೇನ ವಾ।
ಪುಂಸಾಂ ಯೇನೋಪದಿಶ್ಯೇತ ತಚ್ಛಾಸ್ತ್ರಮಿತಿ ಕಥ್ಯತೇ॥

ಅಂದರೆ ಮನುಷ್ಯರು ಯಾವಾಗಲೂ ಅಂದರೆ ಸಾಮಾನ್ಯ ಸ್ಥಿತಿಯಲ್ಲಿ ಏನನ್ನು ಮಾಡಬೇಕು ? ಏನನ್ನು ಮಾಡಬಾರದು ? ಅದೇ ರೀತಿಯಿಂದ, ವಿಶಿಷ್ಟ ಪ್ರಸಂಗಗಳಲ್ಲಿ ಮಾಡಬೇಕಾದ ಕರ್ಮವೇನು ? ಮಾಡಬಾರದ ಕೆಲಸವೇನು ? -ಇದೆಲ್ಲವನ್ನು ಶಾಸ್ತ್ರವು ಉಪದೇಶಿಸುತ್ತದೆ. ಅಂದರೆ ಮನುಷ್ಯರಿಗೆ ತಮ್ಮ ಕರ್ತವ್ಯಾಕರ್ತವ್ಯಗಳನ್ನು ಶಾಸ್ತ್ರವು ತಿಳಿಸಿಕೊಡುತ್ತದೆ. ಆದುದರಿಂದ ಆತನು ತನಗೆ ತಿಳಿಯದ ಸಂಗತಿಗಳನ್ನು ತಿಳಿದುಕೊಳ್ಳಲು ಶಾಸ್ತ್ರವನ್ನು ಅವಲಂಬಿಸಬೇಕು.

ಈ ಎಲ್ಲ ವಿವೇಚನೆಯಿಂದ ತಿಳಿದು ಬರುವುದೇನೆಂದರೆ 'ಧರ್ಮ' ಎಂದರೆ 'ಕೃತಿ' ಆದರೆ ಯಾವುದೋ ಕೃತಿಯಲ್ಲ. ಯಾವ ಕೃತಿಯಿಂದ ನಮಗೆ ಇಹದಲ್ಲಿಯೂ ಪರದಲ್ಲಿಯೂ ಸುಖ ಸಿಗುವದೋ ಅಂತಹ ಕೃತಿ. ಯಾವ ಕೃತಿಯಿಂದ ನಮಗೂ ಇತರರಿಗೂ ನಾವಿರುವ ಸಮಾಜಕ್ಕೂ ಹಿತವಾಗುವದೋ ಅಂತಹ ಕೃತಿ. ಯಾವ ಕೃತಿಯನ್ನು ನಾವು ಮಾಡಬೇಕೆಂದು ಶಾಸ್ತ್ರ ವಿಧಿಸಿದೆಯೋ ಅಂತಹ ಕೃತಿ. ಅಂದರೆ ಸಕಲರಿಗೂ ಸುಖದಾಯಕವಾದ ಕೃತಿ. ಈ ಅರ್ಥದಲ್ಲಿಯೇ "ಧರ್ಮೋ ರಕ್ಷತಿ ರಕ್ಷಿತಃ" ಅಂದರೆ ಧರ್ಮವನ್ನು ರಕ್ಷಿಸಿದವನನ್ನು ಧರ್ಮವು ರಕ್ಷಿಸುತ್ತದೆ" ಎಂದು ನಮ್ಮ ಪ್ರಾಚೀನರು ಹೇಳಿದ್ದು. ಅನೇಕರಿಗೆ ಇದು ಸೋಜಿಗವೆನಿಸಬಹುದು: ನಾವು ರಕ್ಷಿಸಿದ ಧರ್ಮವು ನಮ್ಮನ್ನು ಹೇಗೆ ರಕ್ಷಿಸಬಹುದು ? ಎಂಬುದಾಗಿ. ಆದರೆ, ಧರ್ಮವೆಂದರೆ ಸ್ವಪರಹಿತಕಾರಕ ಕೃತಿಯಾದ್ದರಿಂದ ಅಂಥವನ್ನು ನಾವು ಮಾಡಿದರೆ ಎಲ್ಲರಿಗೂ ಹಿತವಾಗುವುದರಲ್ಲಿ ಸೋಜಿಗವಿಲ್ಲ. ಇದು ಸಂಚಾರ ನಿಯಮಗಳನ್ನು ಪಾಲಿಸಿದಂತೆ. ಎಲ್ಲರೂ ಆ ನಿಯಮಗಳನ್ನು ಪಾಲಿಸಿದರೆ ಎಲ್ಲರಿಗೂ ಹಿತ; ಎಲ್ಲರಿಗೂ ಸಂರಕ್ಷಣೆ. ನಿಯಮ ಪಾಲನೆಯಿಂದಲೇ ಎಲ್ಲರ ಹಿತಪಾಲನೆ; ನಿಯಮಭಂಗ

ದಿಂದಲೇ ಎಲ್ಲರ ಹಿತಭಂಗ. ಹಾಗೆಯೇ 'ಧರ್ಮ'. ಅದನ್ನು ನಾವು ಪಾಲಿಸಿದರೆ ಅದು ನಮ್ಮನ್ನು ಪಾಲಿಸುವದು. ಆದುದರಿಂದಲೇ ಕೃತಯುಗದಲ್ಲಿ "ಧರ್ಮೇಣೈವ ಪ್ರಜಾಃ ಸರ್ವಾ ರಕ್ಷಂತಿ ಸ್ಮಪರಸ್ಪರಮ್ ॥" ಎಂಬುದಾಗಿ ಹೇಳಿದ್ದು. ಆದುದರಿಂದ "ಧರ್ಮೋ ರಕ್ಷತಿ ರಕ್ಷಿತಃ" ಎಂಬ ಸುಭಾಷಿತದಲ್ಲಿ ಸೋಜಿಗದ ಸಂಗತಿಯಿಲ್ಲವೇ ಇಲ್ಲ. ಹೀಗೆ ಸಕಲರಿಗೂ ಹಿತವನ್ನುಂಟು ಮಾಡುವ ದೃಷ್ಟಿಯಿದ್ದುದರಿಂದಲೇ "ಲೋಕ ಯಾತ್ರಾರ್ಥಮೇವೇಹ ಧರ್ಮಸ್ಯ ನಿಯಮಃ ಕೃತಃ" ಎಂಬುದಾಗಿ ಭೀಷ್ಮಪಿತಾ ಮಹನು ಯುಧಿಷ್ಠಿರನಿಗೆ ಸ್ಪಷ್ಟವಾಗಿ ಹೇಳಿದ್ದು. ಧರ್ಮದ ಉದ್ದೇಶವೇ ಲೋಕಹಿತ ಧರ್ಮದ ನಿಯಮಗಳ ಉದ್ದೇಶವೇ ಸಕಲ ಮಾನವ ಜನಾಂಗದ ಸುಖ–ಶಾಂತಿ. ಅದಕ್ಕಾಗಿಯೇ ಧರ್ಮಪಾಲನೆಯಿಂದ ಸಕಲ ಮಾನವ ಜನಾಂಗದ ಹಿತಸಾಧನೆ. ಆದುದರಿಂದಲೇ ಧರ್ಮವೆಂದರೆ ಸುಖಜೀವನದ ವಿಧಾನ.

ಹಾಗಾದರೆ ಎಂತಹ ಕೃತಿಯು 'ಧರ್ಮ'ವೆಂದು ಕರೆಯಿಸಿಕೊಳ್ಳುತ್ತದೆ ? ಎಂದು ಕೇಳಿದರೆ ಸಕಲರಿಗೂ ಹಿತಕಾರಕವಾಗುವಂತಹ ಕೃತಿಯೇ 'ಧರ್ಮ'ವು. ಅದನ್ನು ತಿಳಿದವನೇ ಧರ್ಮಜ್ಞನು. ಅದನ್ನು ಪಾಲಿಸುವವನೇ ಧರ್ಮಿಷ್ಠನು. ಹಾಗಾ ದರೆ ಅಂತಹ ಕೃತಿಯ ವಿವರಗಳೇನು ? ಅದರಲ್ಲಿ ಯಾವ ಯಾವ ಸಂಗತಿಗಳು ಅಡಕ ವಾಗುತ್ತವೆ ? ಅಂದರೆ ಯಾವ ಯಾವ ಸಂಗತಿಗಳಿಂದ ಸಕಲರಿಗೂ ಹಿತವಾಗುವದು ಸಾಧ್ಯವೆಂಬುದನ್ನು ಪರಿಶೀಲಿಸಬೇಕು. ಹಾಗೆ ಪರಿಶೀಲಿಸುವಾಗ ಮಾನವ ಜೀವನ ವೆಂದರೆ ಒಂದೇ ವಿಧದಲ್ಲಿ ಜರುಗುವ ಘಟನೆಗಳ ಪ್ರವಾಹವಲ್ಲವೆಂಬುದನ್ನು ನೆನಪಿಡ ಬೇಕು. ಮಾನವಜೀವನವೆಂದರೆ ಒಂದು ನದಿಯ ಪ್ರವಾಹವಿದ್ದಂತೆ. ಸಾಮಾನ್ಯವಾಗಿ ಅದು ಶಾಂತವಾಗಿ ಹರಿಯುತ್ತಿದ್ದರೂ ಕೆಲವೊಮ್ಮೆ ಅದರಲ್ಲಿ ಸುಳಿಗಳು ನಿರ್ಮಾಣ ವಾಗುತ್ತವೆ; ಆಳವಾದ ಗುಂಡಿಗಳು ಇರುತ್ತವೆ. ಕೆಲವೆಡೆ ಅದರ ವೇಗ ಅತಿರಭಸ ದಿಂದ ಕೂಡಿರುತ್ತದೆ. ಕೆಲವೆಡೆ ಬಂಡೆಗಲ್ಲುಗಳ ಕೊರಕಲುಗಳು ತುಂಬಿರುತ್ತವೆ. ನದಿಯಲ್ಲಿ ಓಡಾಡುವಾಗ ಎಲ್ಲೆಲ್ಲಿ ಯಾವ ಯಾವ ರೀತಿಯಿಂದ ನೌಕೆಯನ್ನು ನಡೆಸ ಬೇಕೆಂಬ ಪರಿಜ್ಞಾನವಿದ್ದವನೇ ಅದನ್ನು ಸಮರ್ಥವಾಗಿ ನಡೆಸಬಲ್ಲನು ಮತ್ತು ಇಚ್ಛಿ ಸಿದ ಸ್ಥಾನವನ್ನು ತಲುಪಬಲ್ಲನು. ಹಾಗೆಯೇ ಮನುಷ್ಯ ಸಮಾಜದ ಜೀವನ. ಸಾಮಾನ್ಯವಾಗಿ ಜನರೆಲ್ಲರೂ ಶಾಂತರಾಗಿಯೇ ತಮ್ಮ–ತಮ್ಮ ಕರ್ತವ್ಯ ಕರ್ಮಗಳನ್ನು ಮಾಡುತ್ತಲೇ ಬದುಕುತ್ತಾರೆ. ಆದರೆ ಕೆಲವೊಮ್ಮೆ ವಿಶೇಷ ಪ್ರಸಂಗಗಳು ಉದ್ಭವಿಸು ವದುಂಟು. ಅದಕ್ಕಾಗಿ ನಮ್ಮ ಪ್ರಾಚೀನರು ಸಾಮಾನ್ಯ ಕಾಲದ ಧರ್ಮ ಅಥವಾ 'ಸಾಮಾನ್ಯಧರ್ಮ'ವೆಂದರೇನೆಂಬುವನ್ನೂ ಆಯಾ ವಿಶಿಷ್ಟ ಪ್ರಸಂಗಗಳಲ್ಲಿ ಯಾವ ಧರ್ಮವನ್ನು ಅನುಸರಿಸ ಬೇಕೆಂಬುದನ್ನೂ ಸ್ಪಷ್ಟಪಡಿಸಿದ್ದಾರೆ. ಮೊದಲು ಸಾಮಾನ್ಯ ಧರ್ಮವನ್ನು ಅರಿಯೋಣ.

'ಸಾಮಾನ್ಯ ಧರ್ಮ'ವೆಂದರೆ ಯಾವ ಬಗೆಯಿಂದ ಮನುಷ್ಯನು ಜೀವನ ನಡೆಸಿದರೆ ಅವನಿಗೂ ಸಕಲ ಸಮಾಜಕ್ಕೂ ಹಿತವಾಗುವದೋ ಅಂತಹ ಬಗೆಯ ಜೀವನವು ಅಥವಾ ಅಂತಹ ಕೃತಿಗಳು. ಅವುಗಳಿಂದ ಸಕಲರಿಗೂ ಸುಖ ಲಭ್ಯ. ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ಅವುಗಳನ್ನು ಹೀಗೆ ಬಣ್ಣಿಸಿದೆ—

ಅಹಿಂಸಾ ಸತ್ಯಮಸ್ತೇಯಂ ಶೌಚಮಿಂದ್ರಿಯ ನಿಗ್ರಹಃ ।
ದಾನಂ ದಯಾ ದಮಃ ಶಾಂತಿಃ ಸರ್ವೇಷಾಂ ಧರ್ಮಸಾಧನಮ್ ॥

ಇವುಗಳನ್ನೇ ಮನುಸ್ಮೃತಿ ಮೊದಲಾದ ಶಾಸ್ತ್ರಗ್ರಂಥಗಳಲ್ಲಿ ಹೇಳಿದೆ. ಅಹಿಂಸೆ ಅಂದರೆ ಬೇರೆಯವರಿಗೆ ನೋಯಿಸದೇ ಇರುವದು, ಸತ್ಯ ಅಥವಾ ಇದ್ದಕ್ಕಿದ್ದಂತೆ ಹೇಳುವದು ಅಸ್ತೇಯ ಅಥವಾ ಬೇರೆಯವರ ವಸ್ತುವನ್ನು ಅಪಹರಿಸದಿರುವದು, ಶೌಚ ಅಥವಾ ಶಾರೀರಿಕವಾಗಿಯೂ ಮಾನಸಿಕವಾಗಿಯೂ ಶುದ್ಧನಾಗಿರುವದು. ಇಂದ್ರಿಯ ನಿಗ್ರಹ ಅಥವಾ ಇಂದ್ರಿಯುಗಳ ಮೇಲೆ ನಿಯಂತ್ರಣ ಪಡೆದಿರುವದು, ದಾನ ಅಥವಾ ಅಗತ್ಯ ವಿದ್ದವರಿಗೆ ಧನಸಹಾಯ ಮಾಡುವದು, ದಯೆ ಅಥವಾ ಇತರರ ಮೇಲೆ ಕರುಣೆ ತೋರಿಸುವದು, ದಮ ಅಥವಾ ಮನಸ್ಸಿನ ನಿಗ್ರಹ, ಶಾಂತಿ ಅಥವಾ ಶಾಂತತೆಯಿಂದ ವರ್ತಿಸುವದು—ಇವೇ ಮೊದಲಾದವು ಸಕಲರಿಗೂ ಹಿತಕಾರಕ.

ತನಗೂ ಪರರಿಗೂ ಹಿತವನ್ನುಂಟು ಮಾಡತ್ತ ಬದುಕುವವಿಧಾನದ ಬಗೆಗೆ ಇನ್ನೊಂದು ಪ್ರಸಿದ್ಧ ಶ್ಲೋಕವಿದೆ.

ಅಷ್ಟಾದಶಪುರಾಣಾನಾಂ ವ್ಯಾಸಸ್ಯ ವಚನದ್ವಯಮ್।
ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಮ್॥

ಹದಿನೆಂಟೂ ಪುರಾಣಗಳಲ್ಲಿ ವ್ಯಾಸಮಹರ್ಷಿಗಳು ಮಾನವಜನಾಂಗಕ್ಕೆ ಮಾಡಿರುವ ಉಪದೇಶವನ್ನು ಎರಡೇ ಮಾತುಗಳಲ್ಲಿ ಸಂಗ್ರಹರೂಪವಾಗಿ ಹೇಳಬಹುದು: ಇತರರಿಗೆ ಉಪಕಾರ ಮಾಡುವದೇ ಸತ್ಕರ್ಮ; ಸುಖಕಾರಕ. ಮತ್ತು ಇತರರಿಗೆ ಪೀಡಿಸಿದರೆ ಅದೇ ದುಷ್ಕರ್ಮ, ದುಃಖಕಾರಕ. ಪರೋಪಕಾರದಿಂದ ಸಕಲರಿಗೂ ಹಿತ; ಪರಪೀಡನೆಯಿಂದ ಸಕಲರಿಗೂ ಅಹಿತ. ಆದುದರಿಂದ ಪರೋಪಕಾರವೇ ಸಕಲರ ಧರ್ಮ, ಸಾಮಾನ್ಯಧರ್ಮ, ಕರ್ತವ್ಯಕರ್ಮ.

ಹಾಗಾದರೆ, ಅಹಿಂಸಾ-ಸತ್ಯ-ಅಸ್ತೇಯ ಮುಂತಾದವು ಸಕಲಹಿತಕಾರಕ ಸಂಗತಿಗಳಾದುದರಿಂದ ಅವುಗಳನ್ನು ಎಲ್ಲ ಪ್ರಸಂಗಗಳಲ್ಲಿಯೂ ಆಚರಿಸಬೇಕೇ ? ಅಥವಾ ಇದಕ್ಕೆ ಅಪವಾದಗಳಿವೆಯೋ ? ಎಂಬ ಪ್ರಶ್ನೆ ಏಳಬಹುದು. ಏಕೆಂದರೆ, ವೈದ್ಯನಾದವನು ರೋಗಿಗೆ ಕಹಿ ಮದ್ದನ್ನು ಕೊಟ್ಟು ನೋಯಿಸಿದರೆ ಅದು ಹಿಂಸೆ

ಯಾಗುತ್ತದೆ. ಮಕ್ಕಳನ್ನು ತಿದ್ದಿ ಸುಧಾರಿಸಲು ತಾಯಿ–ತಂದೆ ಹೊಡೆದರೆ ಅದು ಹಿಂಸೆಯಾಗುತ್ತದೆ. ದುಷ್ಟನೊಬ್ಬನು ತರುಣಿಯನ್ನು ಓಡಿಸಿಕೊಂಡು ಬಂದಾಗ ಅವಳು ಅಡಗಿರುವ ಸ್ಥಳವನ್ನು ತೋರಿಸಿದರೆ ಅವಳಮೇಲೆ ಅತ್ಯಾಚಾರವಾದ ಪಾಪ ದಲ್ಲಿ ಪಾಲುಗಾರರಾಗುತ್ತೇವೆ. ತೋರಿಸಲಿಲ್ಲವಾದರೆ ಸುಳ್ಳಾಡಿದಂತಾಗುತ್ತದೆ. ಇಂತಹ ಪ್ರಸಂಗಗಳಲ್ಲಿ ಹೇಗೆ ವರ್ತಿಸುಬೇಕು. ಸಾಮಾನ್ಯಧರ್ಮಗಳನ್ನು ಬಿಡ ಬೇಕೋ ? ಪಾಲಿಸಬೇಕೋ ? ಎಂಬ ಪ್ರಶ್ನೆ ಏಳುತ್ತದೆ. ಮತ್ತು ನಮ್ಮ ಹಿರಿ ಯರು ಈ ಪ್ರಶ್ನೆಗೆ ಸಮರ್ಪಕ ಉತ್ತರ ಕೊಡುತ್ತ ಧರ್ಮದ ರಹಸ್ಯವನ್ನು ನಿರೂಪಿ ಸಿದ್ದಾರೆ.

'ಧರ್ಮ'ವು ಅತ್ಯಂತ ಸೂಕ್ಷ್ಮವಾದದ್ದು. ಅದನ್ನು ತಿಳಿದುಕೊಳ್ಳುವದು ಸುಲಭವಲ್ಲ. "ಸೂಕ್ಷ್ಮೋ ಭಗವಾನ್ ಧರ್ಮಃ" "ಧರ್ಮಜ್ಞಾನಂ ತು ದುಷ್ಕರಮ್" "ಅಹೇರಿವ ಹಿ ಧರ್ಮಸ್ಯ ಪದಂ ದುಃಖಂ ಗವೇಷಿತುಮ್"–ಎಂದು ಮುಂತಾಗಿ ವ್ಯಾಸಮಹರ್ಷಿಗಳು ಹೇಳಿದ್ದಿದ್ದರೆ, "ಸುಕ್ಷ್ಮಃ ಪರಮದುಜ್ಞೇಯಃ ಸತಾಂಧರ್ಮಃ" ಎಂದು ವಾಲ್ಮೀಕಿಗಳು ಹೇಳಿದ್ದಾರೆ.

ಹಾಗಾದರೆ ಧರ್ಮಾಧರ್ಮಗಳನ್ನು ತಿಳಿಯುವದು ಹೇಗೆ ? ಯಾವುದು ಧರ್ಮ, ಯಾವುದು ಅಧರ್ಮವೆಂದು ಹೇಗೆ ತಿಳಿಯಬೇಕು. ಅದಕ್ಕೆ ಎರಡು ಮಾರ್ಗ ಗಳಿವೆ. ಮೊದಲನೆಯ ಮಾರ್ಗವೆಂದರೆ, ಧರ್ಮವು ಸಾಧನ ಮಾತ್ರ; ಸಾಧ್ಯವು ಸರ್ವರ ಹಿತ. ಆದುದರಿಂದ ಆಯಾಪ್ರಸಂಗಗಳಲ್ಲಿ ಸಕಲರ ಹಿತವನ್ನುಂಟು ಮಾಡ ವ ಕೃತಿಯೇ ಧರ್ಮ. ಸಾಯಣಾಚಾರ್ಯರ 'ಸುಭಾಷಿತಸುಧಾನಿಧಿ' ಯೊಳಗಿನ ಈ ಶ್ಲೋಕ ಗಮನಾರ್ಹ.

ನ ತಥ್ಯವಚನಂ ಸತ್ಯಂ ನಾತಥ್ಯವಚನಂ ಮೃಷಾ।
ಯದ್ಭೂತಹಿತಮತ್ಯಂತಂ ತತ್ಸತ್ಯಮಿತರನ್ಮೃಷಾ॥

ಇದ್ದಕ್ಕಿದ್ದಂತೆ ಹೇಳಿದ ಮಾತು ಸತ್ಯವಾಗಲಾರದು; ವಿರುದ್ಧವಾಗಿ ನಡೆದದ್ದು ಅಸತ್ಯವಾಗಲಾರದು. ಯಾವ ಮಾತು ಸಕಲರಿಗೂ ಹೆಚ್ಚಿನ ಹಿತವನ್ನುಂಟು ಮಾಡು ತ್ತದೆಯೋ ಅದೇ ಸತ್ಯ; ಉಳಿದೆಲ್ಲ ಅಸತ್ಯ. ಅಂದರೆ ಹಿಂಸೆ–ಅಹಿಂಸೆ, ಸತ್ಯ–ಅಸತ್ಯ ಮುಂತಾದವುಗಳನ್ನು ನಿರ್ಣಯಿಸುವ ಸಂಗತಿಯೆಂದರೆ ಅದರಿಂದುಂಟಾಗುವ ಸುಖ ಅಥವಾ ಹಿತ. ಆದುದರಿಂದ ದೇಶ–ಕಾಲ–ಪರಿಸ್ಥಿತಿಗಳನ್ನು ಗಮನಿಸಿ ಧರ್ಮಾಧರ್ಮ ಗಳನ್ನು ಅರಿತುಕೊಳ್ಳಬೇಕು. ಶ್ರೀಮತ್ ಶಂಕರಾಚಾರ್ಯರು ಬ್ರಹ್ಮಸೂತ್ರ ಭಾಷ್ಯದಲ್ಲಿ ಇದೇ ಮಾತನ್ನು ಹೇಳಿದ್ದುಂಟು:— ಯಸ್ಮಿನ್ ದೇಶೇ ಕಾಲೇ ನಿಮಿತ್ತೇ ಚ ಯೋ ಧರ್ಮೋ ಅನುಷ್ಠೀಯತೇ, ಸ ಏವ ದೇಶ–ಕಾಲ–ನಿಮಿತ್ತಾಂತರೇಷು ಅಧರ್ಮಃ ಭವತಿ"॥ ಒಂದು ವಿಶಿಷ್ಟ ಸ್ಥಾನದಲ್ಲಿ ವಿಶಿಷ್ಟ ಸಮಯ ಸಂದರ್ಭಗಳಲ್ಲಿ ಧರ್ಮ ವಾದದ್ದು ಬೇರೊಂದು ಸ್ಥಾನ-ಸಮಯ–ಸಂದರ್ಭಗಳಲ್ಲಿ ಅಧರ್ಮವಾಗುವದು.

ಒಂದು ದುಷ್ಟಾಂತದಿಂದ ಇದು ಸ್ಪಷ್ಟವಾಗುವದು. ರೋಗಿಯೊಬ್ಬನ ಕಾಲಿಗೆ ಹುಣ್ಣಾಗಿ ಅದು ಕೊಳೆತು ಇಡೀ ಶರೀರಕ್ಕೆ ಅಪಾಯುವುಂಟಾಗುವ ಭೀತಿಯಿದ್ದಾಗ, ವೈದ್ಯನು ಆ ಕಾಲನ್ನು ಕೊಯ್ದು ರೋಗಿಯ ಶರೀರ-ಪ್ರಾಣಗಳನ್ನು ಬದುಕಿಸುತ್ತಾನೆ. ಇದು ಹಿಂಸೆಯಾದುದರಿಂದ ಅಧರ್ಮವೆಂದು ಯಾರಾದರೂ ಹೇಳುತ್ತಾರೆಯೋ ? ಇಲ್ಲ. ಇದು ವೈದ್ಯನ ಧರ್ಮ ಮತ್ತು ಅವನು ಆ ರೀತಿ ಕಾಲನ್ನು ಕತ್ತರಿಸಲೇ ಬೇಕು. ಅದೇ ಒಬ್ಬ ಕೊಲೆಗಡುಕನು ತನ್ನ ಸಿಟ್ಟಿಗೆ ಬಲಿಯಾದವನ ಕಾಲನ್ನು ಕತ್ತರಿಸಿ ದರೆ ಅದು ಅಧರ್ಮ. ಏಕೆಂದರೆ, ಅದರಿಂದ ಕಾಲು ಕತ್ತರಿಸಿ ಹೋದವನ ಹಿತವಾಗು ವದಿಲ್ಲ. ಆದುದರಿಂದ ಇಂತಹ ಕೃತಿಗಳಲ್ಲಿ ಬಾಹ್ಯರೂಪವನ್ನೇ ನೋಡದೇ ಆಂತರಿಕ ಉದ್ದೇಶವನ್ನು ಗಮನಿಸಬೇಕು. ದುಷ್ಟನು ಓಡಿಸಿಕೊಂಡು ಬಂದಾಗ ಅಡಗಿಕೊಂಡ ತರುಣಿಯನ್ನು ತೋರಿಸಿದರೆ ಅದು 'ಸತ್ಯವಚನವಾಗಿ 'ಧರ್ಮ'ವಾಗುವದಿಲ್ಲ. ಏಕೆಂದರೆ, ಅದರಿಂದ ಆವಳಿಗೆ ಹಿತವಾಗುವದಿಲ್ಲ. ಅಲ್ಲಿ ಅಸತ್ಯ ವಚನವೇ ಹಿತಕಾರಕ ವಾಗುವದರಿಂದ 'ಧರ್ಮ'ವಾಗುತ್ತದೆ. ಅದಕ್ಕಾಗಿಯೇ ಆಂತರಿಕ ಉದ್ದೇಶವೇ ಧರ್ಮಾಧರ್ಮಗಳ ನಿರ್ಣಾಯಕ ಅಂಶವೆಂಬುದಾಗಿ ವ್ಯಾಸಮಹರ್ಷಿಗಳು ಸಾರಿ ದ್ದಾರೆ:—

ಭಾವಶೌಚಂ ಪರಂ ಶೌಚಂ ಪ್ರಮಾಣಂ ಸರ್ವವಸ್ತುಷು ।
ಅನ್ಯಥಾಽಲಿಂಗ್ಯತೇ ಭಾರ್ಯಾ ಭಾವೇನ ದುಹಿತಾಽನ್ಯಥಾ ॥

ಭಾವಶುದ್ಧಿಯೇ ಅತಿಶ್ರೇಷ್ಠ ಶುದ್ಧಿಯು. ಅದೇ ನಿರ್ಣಾಯಕ. ಮನುಷ್ಯನು ಹೆಂಡತಿ ಯನ್ನೂ ಆಲಿಂಗಿಸುತ್ತಾನೆ, ಮಗಳನ್ನೂ ಆಲಿಂಗಿಸುತ್ತಾನೆ. ಆದರೆ ಎರಡರಲ್ಲಿಯು ಭಾವನೆ ಬೇರೆ-ಬೇರೆಯೆಂಬುದು ಸ್ಪಷ್ಟ. ಮತ್ತು "ವಿಶುದ್ಧೇನ ಅಭಿಪ್ರಾಯೇಣ ಕೃತಾನಾಂ ಕರ್ಮಣಾಂ ಧರ್ಮಸಾಧನತ್ವಾತ್ ॥" ಅಥವಾ ಸದುದ್ದೇಶದಿಂದ ಅಂದರೆ ಸಕಲರಿಗೂ ಹಿತವಾಗಲೆಂಬ ಸದುದ್ದೇಶದಿಂದ ಮಾಡಿದ ಕೃತಿಗಳೆಲ್ಲ 'ಧರ್ಮ'. ಮತ್ತು ಇತರರಿಗೆ ಕೆಡಕಾಗಲೆಂದು ಮಾಡುವ ಕೆಲಸಗಳೆಲ್ಲ—ತೋರಿಕೆಗೆ ಒಳ್ಳೆಯದೆನಿ ಸಿದರೂ–'ಅಧರ್ಮ'. ಆದುದರಿಂದ ವ್ಯಾಸಮಹರ್ಷಿಗಳು ಮಾನವ ಜನಾಂಗಕ್ಕೆ ಹೀಗೆ ಉಪದೇಶಿಸಿದ್ದಾರೆ:—

ಮಾನಸಂ ಸರ್ವಭೂತಾನಾಂ. ಧರ್ಮಮಾಹುರ್ಮನೀಷಿಣಃ।
ತಸ್ಮಾತ್ ಸರ್ವೇಷು ಭೂತೇಷು ಮನಸಾ ಶಿವಮಾಚರೇತ್॥

ಅಂದರೆ, ಬಲ್ಲವರ ಅಭಿಪ್ರಾಯವೆಂದರೆ ಮನಸ್ಸಿನ ವಿಚಾರ, ಉದ್ದೇಶ, ಭಾವನೆ ಮುಂತಾದವುಗಳೇ 'ಧರ್ಮ'. ಅದರಿಂದಲೇ ಎಲ್ಲರ ಸುಖ-ಸಂತೋಷ-ಹಿತ ಸಾಧ್ಯ. ಆದುದರಿಂದ ಎಲ್ಲ ಪ್ರಾಣಿಗಳನ್ನು ಕುರಿತು ಮನಸ್ಸಿನಲ್ಲಿ ಒಳಿತನ್ನೇ ಹಾರೈಸಬೇಕು.

ಆಯಾಕಾಲಗಳಲ್ಲಿ, ಸ್ಥಾನಗಳಲ್ಲಿ ಮಾಡಬೇಕಾದ 'ಧರ್ಮ'ಗಳನ್ನು ಯುಗ ಧರ್ಮ, ಸ್ಥಾನಧರ್ಮ, ಕಾಲಧರ್ಮ ಮುಂತಾಗಿ ವಿಂಗಡಿಸಿ ನಮ್ಮ ಪ್ರಾಚೀನರು ವಿವರಿಸಿದ್ದಾರೆ.

**ಯುಗಧರ್ಮ:** ಕೃತ, ತ್ರೇತಾ, ದ್ವಾಪರ ಮತ್ತು ಕಲಿ–ಹೀಗೆ ನಾಲ್ಕು ಯುಗ–ಗಳನ್ನು ನಮ್ಮ ಪ್ರಾಚೀನರು ನಂಬಿಕೊಂಡು ಬಂದಿದ್ದಾರೆ. ಆಯಾ ಯುಗಗಳಲ್ಲಿ ಯಾವುದನ್ನು ಪ್ರಧಾನವಾಗಿ ಮಾಡಿ ಸಂಸಾರಬಂಧನದಿಂದ ಬಿಡುಗಡೆ ಹೊಂದಿ ಮೋಕ್ಷ ಸಂಪಾದಿಸಬಹುದೆಂದು ಹೇಳಿದ್ದಾರೆ.

ತಪಃ ಪರಂ ಕೃತಯುಗೇ ತ್ರೇತಾಯಾಂ ಜ್ಞಾನಮುಚ್ಯತೇ।
ದ್ವಾಪರೇ ಯಜ್ಞಮೇವಾಹುರ್ದಾನಮೇಕಂ ಕಲೌಯುಗೇ॥

ಕೃತಯುಗದಲ್ಲಿ ತಪಸ್ಸು ಪರಮಧರ್ಮ ಅಥವಾ ಕರ್ತವ್ಯಕರ್ಮ; ತ್ರೇತಾಯುಗದಲ್ಲಿ ಜ್ಞಾನಸಂಪಾದನೆಯೇ ಪರಮಧರ್ಮ, ಅದೇ ಮೋಕ್ಷಸಾಧನ. ದ್ವಾಪರಯುಗದಲ್ಲಿ ಯಜ್ಞಾಚರಣೆ ಮೋಕ್ಷಕಾರಣವಾದರೆ ಕಲಿಯುಗದಲ್ಲಿ ದಾನವೊಂದೇ ಮೋಕ್ಷಕ್ಕೆ ಕಾರಣ.

ಧ್ಯಾಯನ್‌ಕೃತೇ ಯಜನ್‌ಯಜ್ಞೈಃ ತ್ರೇತಾಯಾಂ ದ್ವಾಪರೇಽರ್ಚಯನ್।
ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯ ಕೇಶವಮ್॥

ಕೃತಯುಗದಲ್ಲಿ ಪರಮಾತ್ಮನ ಧ್ಯಾನದಿಂದ, ತ್ರೇತಾಯುಗದಲ್ಲಿ ಯಜ್ಞಗಳಿಂದ, ದ್ವಾಪರಯುಗದಲ್ಲಿ ಪರಮಾತ್ಮಪೂಜೆಯಿಂದ ಯಾವಫಲ ದೊರೆಯುತ್ತದೆಯೋ ಅದೇ ಫಲವು ಕಲಿಯುಗದಲ್ಲಿ ಪರಮಾತ್ಮನ ನಾಮಜಪದಿಂದ ದೊರೆಯುತ್ತದೆ.

**ಸ್ಥಾನಧರ್ಮ:** ಇದನ್ನೇ ವರ್ಣಾಶ್ರಮಧರ್ಮವೆನ್ನುತ್ತಾರೆ. ಇಡಿಯ ಮಾನವ ಸಮಾಜವನ್ನು ಗುಣ-ಕರ್ಮಗಳ ಆಧಾರದಿಂದ ನಾಲ್ಕು ಭಾಗಗಳಲ್ಲಿ ವಿಂಗಡಿಸ ಲಾಗಿದೆ: ಬ್ರಾಹ್ಮಣ,ಕ್ಷತ್ರಿಯ, ವೈಶ್ಯ ಮತ್ತು ಶೂದ್ರ. ಇವು ನಾಲ್ಕು ವರ್ಣಗಳು. ಇವುಗಳಲ್ಲಿಯ ಮೊದಲಿನ ಮೂರು ವರ್ಣದವರಿಗೆ ಜೀವನದಲ್ಲಿ ನಾಲ್ಕು ಹಂತ ಅಥವಾ 'ಆಶ್ರಮ'ಗಳಿವೆ: ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಮತ್ತು ಸಂನ್ಯಾಸ. ಇವು ನಾಲ್ಕು ಆಶ್ರಮಗಳು. ಆಯಾ ವರ್ಣದವರಿಗೆ ಬೇರೆ-ಬೇರೆ ಕರ್ತವ್ಯಕರ್ಮ ಗಳಿವೆ.

ಬ್ರಾಹ್ಮಣಸ್ಯ ತಪೋ ಜ್ಞಾನಂ ತಪಃ ಕ್ಷತ್ರಸ್ಯ ರಕ್ಷಣಮ್।
ವೈಶ್ಯಸ್ಯ ತು ತಪೋ ವಾರ್ತಾ ತಪಃ ಶೂದ್ರಸ್ಯ ಸೇವನಮ್॥

ಬ್ರಾಹ್ಮಣನ ಕರ್ತವ್ಯ ಜ್ಞಾನಾರ್ಜನೆ; ಕ್ಷತ್ರಿಯನ ಕರ್ತವ್ಯ ಪ್ರಜಾರಕ್ಷಣೆ; ವೈಶ್ಯನ ಕರ್ತವ್ಯ ಹಣಸಂಪಾದನೆ ಮತ್ತು ಶೂದ್ರನ ಕರ್ತವ್ಯ ಸೇವೆ, ಇಲ್ಲಿ ಒಬ್ಬರಿಗೆ ಕರ್ತವ್ಯ

ವಾದದ್ದು ಇನ್ನೊಬ್ಬರಿಗೆ ಅಕರ್ತವ್ಯವಾಗಬಹುದು. ಈ ಸಂದರ್ಭದಲ್ಲಿ ಈ ಕೆಳಗಿನ ಶ್ಲೋಕ ಗಮನಿಸಬೇಕು.

> ಕ್ಷಮಾ ಶತ್ರೌ ಚ ಮಿತ್ರೇ ಚ ಯತೀನಾಮೇವ ಭೂಷಣಮ್।
> ಅಪರಾಧಿಷು ಸತ್ತ್ವೇಷು ನೃಪಾಣಾಂ ಸೈವ ದೂಷಣಮ್॥

ಅಂದರೆ, ಶತ್ರುವಾಗಲಿ ಮಿತ್ರನಾಗಲಿ, ತನ್ನನ್ನು ಪೀಡಿಸಿದವನಾಗಲಿ, ತನ್ನನ್ನು ಪ್ರೀತಿಸಿದವನಾಗಲಿ–ಎಲ್ಲರೂ ಗೈದ ಅಪರಾಧವನ್ನು ಮನ್ನಿಸಿ ಎಲ್ಲರನ್ನೂ ಕ್ಷಮಿಸಿ ಬಿಡುವದು ಋಷಿ-ಮುನಿ–ಸಂನ್ಯಾಸಿಗಳಿಗೆ ಮಾತ್ರ ಭೂಷಣಪ್ರಾಯವಾದದ್ದು. ಅರ್ಥಾತ್ ಹಾಗೆ ಕ್ಷಮಿಸುವದು ಅವರ ಕರ್ತವ್ಯ. ಆದರೆ ಅದು ಅರಸನಾದವನಿಗೆ ಭೂಷಣಪ್ರಾಯವಲ್ಲ. ಅರಸನ ಕರ್ತವ್ಯವೆಂದರೆ ಅಪರಾಧಿಗೆ ತಕ್ಕ ಶಿಕ್ಷೆ ನೀಡುವುದೇ ಹೊರತು ಕ್ಷಮಿಸುವುದಲ್ಲ.

ಅಂದರೆ, ಸ್ಥಾನಭೇದದಿಂದ ಕರ್ತವ್ಯದಲ್ಲಿ, ಧರ್ಮದಲ್ಲಿ ಬದಲಾವಣೆಯಾಗುತ್ತದೆ. ಉದಾಹರಣೆಗೆ ಬ್ರಹ್ಮಚಾರಿಯ ಕರ್ತವ್ಯ ಬೇರೆ, ಗೃಹಸ್ಥನ ಕರ್ತವ್ಯ; ಬೇರೆ ಸ್ತ್ರೀಸಂಗ ಬ್ರಹ್ಮಚಾರಿಗೆ ನಿಷಿದ್ಧವಾದರೆ ಸ್ವಸ್ತ್ರೀಸಂಗ ಗೃಹಸ್ಥನಿಗೆ ವಿಹಿತ ಏಕೆಂದರೆ, ಸ್ತ್ರೀಸಂಗ ಬ್ರಹ್ಮಚಾರಿಗೆ ಮಾರಕ ಅಹಿತಕರ; ಸ್ವಸ್ತ್ರೀಸಂಗ ಗೃಹಸ್ಥನಿಗೆ ಹಿತಕರ, ವಂಶಾಭಿವೃದ್ಧಿಗಾಗಿ ಅವಶ್ಯಕರ್ತವ್ಯ. ಇದೇ ರೀತಿ ವಾನಪ್ರಸ್ಥನ ಕರ್ತವ್ಯಗಳು ಬೇರೆ, ಸಂನ್ಯಾಸಿಯು ಕರ್ತವ್ಯಗಳು ಬೇರೆ.

**ಕಾಲಧರ್ಮ** : ಎಲ್ಲ ಕಾಲಗಳಲ್ಲೂ ಒಂದೇ ಬಗೆಯ ನೀತಿಯ ಅನುಸರಣೆ ಕಾರ್ಯ–ಸಾಧಕವಾಗಲಾರದು. ಹಿತಕರವಾದ ನೀತಿ ಯಾವುದೆಂದು ತಿಳಿದುಕೊಂಡು ಅದನ್ನು ಅನುಸರಿಸಿ ಕಾರ್ಯವನ್ನು ಸಾಧಿಸಿಕೊಳ್ಳಬೇಕು. ಉದಾಹರಣೆಗೆ, ಅರಸನಾದವನು ತನ್ನ ರಾಜ್ಯದ ತನ್ನ ಪ್ರಜೆಗಳ ಹಿತಕ್ಕಾಗಿ ಅನುಕೂಲಕರವಾದ ಮಾರ್ಗವನ್ನು ಅನುಸರಿಸಿ ಯಶಸ್ಸನ್ನು ಗಳಿಸುವುದಕ್ಕಾಗಿ ರಾಜನೀತಿಜ್ಞರು ನಾಲ್ಕು ಉಪಾಯಗಳನ್ನು ವಿಧಿಸಿದ್ದಾರೆ: ಸಾಮ, ದಾನ, ಭೇದ ಮತ್ತು ದಂಡ. ಪರರಾಜರನ್ನು ವಶಪಡಿಸಿಕೊಳ್ಳಲು ಅರಸರು ಈ ನಾಲ್ಕು ಉಪಾಯಗಳಲ್ಲಿ ಸಮಯ–ಸಂದರ್ಭಗಳನ್ನು ನೋಡಿಕೊಂಡು ಯೋಗ್ಯ ಉಪಾಯವನ್ನು ಅವಲಂಬಿಸಿ ಯಶಸ್ಸು ಪಡೆಯಬೇಕು.

ಇದೆಲ್ಲ ವಿಷಯ ವಿವೇಚನೆಯಿಂದ ತಿಳಿದು ಬರುವುದೇನೆಂದರೆ, ಧರ್ಮವೆಂದರೆ, ಹಿತಕಾರಕವಾದ ಕೃತಿ. ನಮ್ಮ ನಮ್ಮ ಕರ್ತವ್ಯಕರ್ಮ. ಅದನ್ನು ನಾವು ಸಮರ್ಪಕವಾಗಿ ಪರಿಪಾಲಿಸಬೇಕು. ಇಂದು ನಮ್ಮ ನಾಡಿನಲ್ಲಿ ಕರ್ತವ್ಯ ಪ್ರಜ್ಞೆಯ ಹ್ರಾಸವೇ ಕಂಡು ಬರುತ್ತದೆ. ತಾವು ಮಾಡಬೇಕಾದುದನ್ನು ಪ್ರಾಮಾಣಿಕತೆಯಿಂದ ಮಾಡುವವರು ಕಡಿಮೆಯಾಗುತ್ತಿದ್ದಾರೆ. ತಮ್ಮ ತಮ್ಮ ಕರ್ತವ್ಯದ ಅರಿವಿಲ್ಲವಾದ್ದರಿಂದ ಕರ್ತವ್ಯ

ಪಾಲನೆಯಾಗುತ್ತಿಲ್ಲ ವೆನ್ನಬರುವದಿಲ್ಲ. ಕರ್ತವ್ಯದ ಬಗೆಗೆ ಅರಿವೂ ಇದೆ; ಅದರ ಬಗ್ಗೆ ಮಾತನಾಡಲೂ ಬಲ್ಲರು. ಆದರೆ ಅದನ್ನು ಕೃತಿಯಲ್ಲಿಳಿಸುವ ಪ್ರವೃತ್ತಿಯಿಲ್ಲ. ಎಲ್ಲರೂ ದುರ್ಯೋಧನರಾಗುತ್ತಿದ್ದಾರೆ. ಅವನು ಸ್ಪಷ್ಟವಾಗಿ ಹೇಳಿದನಂತೆ—

ಜಾನಾಮಿ ಧರ್ಮಂ ನ ಚ ಮೇ ಪ್ರವೃತ್ತಿಃ
ಜಾನಾಮಿ ಅಧರ್ಮಂ ನ ಚ ಮೇ ನಿವೃತ್ತಿಃ ॥

"ನನಗೆ ನನ್ನ ಧರ್ಮ ಅರ್ಥಾತ್ ನಾನು ಮಾಡಬೇಕಾದುದು ಗೊತ್ತು; ಆದರೆ ಮಾಡುವ ಪ್ರವೃತ್ತಿಯಿಲ್ಲ. ನನಗೆ ಮಾಡಬಾರದುದು ಗೊತ್ತು; ಆದರೆ ಅದನ್ನು ಬಿಡುವ ಮನಸ್ಸಿಲ್ಲ." ಇಂಥವನಿಗೆ ಯಾವ ದುರ್ಗತಿಯಾಯಿತೆಂಬುದು ಸುಪ್ರಸಿದ್ಧ. ಆದುದರಿಂದ ನಮ್ಮ ಗತಿಯೂ ಹಾಗೆಯೇ ಆಗಬಾರದೆಂದಿದ್ದರೆ ನಾವು ನಮ್ಮ ನಮ್ಮ ಕರ್ತವ್ಯಕರ್ಮಗಳನ್ನು ಅರಿತು ಅದನ್ನು ಚಾಚೂತಪ್ಪದೇ ಪಾಲಿಸೋಣ. ಅದರಿಂದ ನಮಗೂ ಹಿತವಿದೆ, ಸಮಾಜಕ್ಕೂ ಹಿತವಿದೆ, ದೇಶಕ್ಕೂ ಹಿತವಿದೆ, ಇಡಿಯ ಜಗತ್ತಿಗೂ ಹಿತವಿದೆ. ಆದುದರಿಂದ ಇಂದಿಗೂ ಧರ್ಮದ ಅರಿವಿನ ಅಗತ್ಯವಿದೆಯೆಂಬುದು ತಿಳಿದು ಬಂದೀತು.

ಹೀಗೆ ನಮ್ಮ ಹಿರಿಯರು 'ಧರ್ಮ'ದ ವಿವರವಾದ ವಿವೇಚನೆಯನ್ನು ಮಾಡಿ "ಮಾನವರಿಗೆ ಹಿತಕಾರಕವಾದ ಜೀವನ ವಿಧಾನವೇ ಧರ್ಮ"ವೆಂಬುದನ್ನು ತಿಳಿಸಿ ಹೇಳಿದ್ದಾರೆ. ಅದನ್ನು ಅನುಸರಿಸಿ ಹಿತಸಾಧಿಸಿ ಕೊಳ್ಳುವದು ನಮ್ಮ ಕೈಯಲ್ಲಿದೆ.

# ಅವೆತಿಕ್ ಇಸ್ಸಾಕ್ಯಾನ್ ಅವರ ಕಾವ್ಯ

● ಬುದ್ದಣ್ಣ ಹಿಂಗಮಿರೆ

(ಒಂದು ಪರಿಚಯ)

ಅವೆತಿಕ್ ಇಸ್ಸಾಕ್ಯಾನ್ (೧೮೭೫-೧೯೫೭) ಅವರ ಕಾವ್ಯ ಆರ್ಮೆನಿಯದ ಭೂತ, ವರ್ತಮಾನ ಹಾಗೂ ಭವಿಷತ್‌ಕಾಲದ ವಿಶಿಷ್ಟ ಬದುಕಿನ ಸುಂದರ ಅಭಿವ್ಯಕ್ತಿಯಾಗಿದೆ.

ಆರ್ಮೆನಿಯದ ಭೂಮಿ-ಸೀಮಿ, ಉನ್ನತೋನ್ನತ ಅಖಮಾಂಗನ್ ಅರಾರತ್ ಪರ್ವತಶ್ರೇಣಿಗಳು, ಸೀವನ್ ಸರೋವರ ಇತ್ಯಾದಿ ಕಾಲ ಕಾಲದಿಂದ ಕವಿ ಹೃದಯವನ್ನು ತನ್ನತ್ತ ಸೆಳೆಯುತ್ತ ಅವನಲ್ಲಿ ಅದಮ್ಯವಾದ ಸ್ಫೂರ್ತಿ-ಪ್ರೇರಣೆಗಳನ್ನು ತುಂಬುತ್ತ ಬಂದದ್ದುಂಟು. ನಿಸರ್ಗ ಒಡ್ಡಿರುವ ಭವ್ಯ-ಭೀಕರವಾದ ರಮಣೀಯತೆಯನ್ನು ಅನುಭವಿಸಿ, ಆಸ್ವಾದಿಸಿ, ತನ್ನ ಸುತ್ತಲಿನ ಜನರಿಗೆ ಹಾಡನ್ನು ಅರ್ಪಿಸಿದ ಕವಿ ಅವೆತಿಕ್ ಇಸ್ಸಾಕ್ಯಾನ್. ಬಾಲ್ಯಕಾಲದಿಂದಲೇ ನಿಸರ್ಗರಮಣೀಯತೆ ಹಾಗೂ ಭವ್ಯತೆಗಳು ಇಸ್ಸಾಕ್ಯಾನ್ ಅವರಿಗೆ ಸುಂದರತೆಯ ದೀಕ್ಷೆಯನ್ನು ಕೊಟ್ಟದ್ದುಂಟು. ಆರ್ಮೆನಿಯದ ಪ್ರಪ್ರಾಚೀನ, ವರ್ತಮಾನದ ಇತಿಹಾಸ, ಸಂಸ್ಕೃತಿಗಳು ಇಸ್ಸಾಕ್ಯಾನ್ ಅವರಿಗೆ ಹೊಸದೃಷ್ಟಿಯನ್ನಿತ್ತು ಪೋಷಿಸಿವೆ. ಶತಮಾನಗಳಿಂದ ಉನ್ನತೋನ್ನತ ಪರ್ವತ ಶ್ರೇಣಿಗಳು; ಆರ್ಮೆನಿಯದ ಇತಿಹಾಸ ಹಾಗೂ ಸಂಸ್ಕೃತಿಗಳ ಹಾಡು ನಿರಂತರವಾಗಿ ಪ್ರತಿಧ್ವನಿಸುತ್ತಲೇ ಬಂದದ್ದುಂಟು. ಅದನ್ನು ಆಲಿಸಿ ಮರುಳಾಗದ ಆರ್ಮೆನಿಯನ್ನರೆ ಇಲ್ಲ. ಈ ನಿತ್ಯನಿರಂತರ ಗೀತವನ್ನು ಆಸ್ವಾದಿಸಿ, ಅದರ ಆನಂದವನ್ನು ಜನಕ್ಕೆ ಮುಟ್ಟಿಸಬಲ್ಲ ಕವಿಯೊಬ್ಬನ ಆಗಮನ ಅನಿವಾರ್ಯವಾಗಿತ್ತು. ನಾಡು, ನುಡಿ, ನಿರಾಡಂಬರ ಜಾನಪದ ಬದುಕು ಹಾಗೂ ಜಾನಪದ ಕಾವ್ಯ, ಕಲೆ, ಸಗೀತಗಳಿಂದ ಇಸ್ಸಾಕ್ಯಾನ್ ಆಕರ್ಷಿತರಾಗಿ ಕಾವ್ಯ ಕಸುಬಿಗೆ ತೊಡಗಿದ್ದುಂಟು. ರೈತ ಕುಟುಂಬದಲ್ಲಿ ಜನ್ಮಿಸಿದ ಇಸ್ಸಾಕ್ಯಾನ್ ಭೂಮಿಯನ್ನು ತನ್ನ ಕಾವ್ಯದ ಮುಖ್ಯ ಕೇಂದ್ರವನ್ನಾಗಿರಿಸಿಕೊಂಡು ಭೂಮಿಯ ಹಾಗೂ ಬದುಕಿನ ಸುಖ-ದುಃಖ, ಸೋಲು ಗೆಲುವು. ಪ್ರೀತಿ, ನಿರಾಸೆ ಅಲ್ಲದೆ ಮನುಷ್ಯನನ್ನು ಕಾಡುವ ಹುಟ್ಟು-ಸಾವುಗಳಂಥ ಸಮಸ್ಯೆಗಳ ಕುರಿತು ಗಂಭೀರವಾಗಿ ಆಲೋಚಿಸುತ್ತ ಕಾವ್ಯರಚನೆಯನ್ನು ಮುಂದುವರಿಸಿದ್ದುಂಟು.

ಇಸ್ಸಾಕ್ಯಾನ್ ಕಾವ್ಯದಲ್ಲಿ ಸೃಷ್ಟಿಯ ಅಗಾಧತೆ, ರಮಣೀಯತೆ. ಚಮತ್ಕಾರಗಳ ಅಭಿವ್ಯಕ್ತಿ ಇರುವುದರ ಜೊತೆಗೆ ಮಾನವೀಯ ಸಂಬಂಧಗಳು ಹಾಗೂ ಮಾನವೀಯ ಕಾಳಜಿ–ಕಳಕಳಿಗಳ ಅಭಿವ್ಯಕ್ತಿಗೆ ಹೆಚ್ಚಿನ ಮಹತ್ವ ದೊರೆತದ್ದುಂಟು. ಇಸ್ಸಾಕ್ಯಾನ್ ಕಾವ್ಯ ಚಿಂತನಾತ್ಮಕ ದ್ರವ್ಯವನ್ನೊಳಗೊಂಡಿದ್ದು, ಸುಂದರ ಅಭಿವ್ಯಕ್ತಿಯೂ ಸಾಧ್ಯವಾಗಿದೆ. ಇಸ್ಸಾಕ್ಯಾನ್ ಕಾವ್ಯದಲ್ಲಿ ಸೂರ್ಯ, ಚಂದ್ರ, ನಕ್ಷತ್ರ, ಸಮುದ್ರ, ಭೂಮಿ, ಆಕಾಶಗಳ, ಉಪಮೆ, ರೂಪಕಗಳು ಬಳಸಲ್ಪಟ್ಟಿದ್ದು, ಅವು ಮೇಲಿನಿಂದ ಅಥವಾ ಬರೀ ಕಲ್ಪನೆಯಿಂದ ಬಂದವುಗಳಾಗಿರದೆ ಅವು ಆರ್ಮೆನಿಯನ್ ಜಾನಪದ ಸಾಹಿತ್ಯದಿಂದ ಪ್ರೇರಿತವಾಗಿರುವುದು ಗಮನಾರ್ಹ. ಸಾಮಾನ್ಯರಿಗೆ ತಿಳಿಯಬಲ್ಲ, ಅವರ ಹೃದಯ, ಮನಸ್ಸುಗಳನ್ನು ತಟ್ಟಬಲ್ಲ ಭಾಷೆ, ನುಡಿಗಟ್ಟು, ಕಾವ್ಯವಸ್ತು ಇತ್ಯಾದಿ ಜಾನಪದ ಪ್ರಪಂಚದಿಂದ ಸ್ಫೂರ್ತಿ ಪಡೆದವುಗಳಾದ್ದರಿಂದ ಇಸ್ಸಾಕ್ಯಾನ್ ಪದ್ಯಗಳು ತುಂಬ ಹೃದ್ಯವಾಗಿ ಸಾಮಾನ್ಯ ಜನರ ಮನಸ್ಸಿನಲ್ಲಿ ನಿಲ್ಲುವಂಥವುಗಳಾಗಿವೆ. ಕವಿ, ಆಗಾಗ ತನ್ನ ಕಾವ್ಯದಲ್ಲಿ ಜಾನಪದ ಗತಿ, ಗತ್ತು, ಲಯಗಳನ್ನು ವಿಶಿಷ್ಟ ರೀತಿಯಲ್ಲಿ ಬಳಸಿದ್ದುಂಟು. ಕವಿಯ ಕಾವ್ಯ ಜನ–ಮನವನ್ನು ರಂಜಿಸುತ್ತ ದುಃಖ, ಸಂಕಟ, ಹೋರಾಟಗಳ ಸಮಯದಲ್ಲಿ ಹೊಸದಿಗಂತವನ್ನು ತೋರುವ ವಿಶೇಷ ಗುಣವನ್ನು ಪಡೆದುಕೊಂಡಿದೆ.

ಇಸ್ಸಾಕ್ಯಾನ್ ಸಾಮಾನ್ಯ ಜನರ ಮಧ್ಯೆ ಬೆಳೆದು ಬಂದ ಕವಿಯಾದ್ದರಿಂದ ಸಾಮಾನ್ಯರ, ದೀನ–ದಲಿತ ಕೂಲಿ–ಕಾರ್ಮಿಕರ ಸುಖ–ದುಃಖಗಳ ಅಭಿವ್ಯಕ್ತಿ ಅವರ ಕಾವ್ಯದಲ್ಲಿ ತಾನೇ ತಾನಾಗಿ ಮೂಡಿವೆ. ಜನತೆಯ ಪ್ರೀತಿ, ವಿಶ್ವಾಸ, ನಂಬಿಕೆ, ನಿಯತ್ತು ಹೋರಾಟ, ಪರಿಶ್ರಮ ಮುಂತಾದ ವಿಷಯಗಳಲ್ಲದೆ ಮನುಷ್ಯನನ್ನು ಬೇಟೆಯಾಡುತ್ತ ಬಂದ ಸಾರ್ವಕಾಲಿಕ ಪ್ರಶ್ನೆ, ಸಮಸ್ಯೆಗಳು ಕುತೂಹಲ ಕೆರಳಿಸುತ್ತ, ಕಾವ್ಯ ಕ್ರಿಯೆಗೆ ತೊಡಗಿಸಿವೆ. ಇಸ್ಸಾಕ್ಯಾನ್ ಕಾವ್ಯ ಬರೀ ಸುಂದರ ಕಾವ್ಯ ಮಾತ್ರ ಆಗಿರದೆ ಅದರಲ್ಲಿ ಅಲ್ಲಲ್ಲಿ ಚಿಂತನೆಯ ಬೀಜಗಳು ಸೇರಿಕೊಂಡಿವೆ. ಸರಳ ಹಾಗೂ ಸಾಮಾನ್ಯ ಸಂದರ್ಭಗಳನ್ನು ಪುನಃ ಸೃಷ್ಟಿಸುವ ಅನುಭವದ ಮೂಸೆಯಲ್ಲಿ ಹಿಡಿದಿಟ್ಟು ಕಲಾತ್ಮಕವಾಗಿಸುವ ವಿಶಿಷ್ಟಗುಣವೊಂದು ಇಸ್ಸಾಕ್ಯಾನ್ ಕಾವ್ಯಕ್ಕೆ ಇದೆ. ವರ್ತಮಾನ ಸಂದರ್ಭಕ್ಕೆ ತಕ್ಕಂತೆ ಇಸ್ಸಾಕ್ಯಾನ್ ಕಾವ್ಯ ಹೊಸರೂಪ ತೊಟ್ಟುಕೊಂಡು, ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕುಣಿಯುತ್ತದೆ. ಜನತೆಯ ಹೃದಯ ಪೀಠದಲ್ಲಿ ವಿರಾಜಿಸುತ್ತದೆ. ಕವಿ ಸೃಷ್ಟಿಸುವ ಉಪಮೆ, ರೂಪಕ, ಸಂಕೇತಗಳು ನಿಸರ್ಗ ಸೌಂದರ್ಯ ಹಾಗೂ ಬದುಕಿನ ಆಳವಾದ ಅನುಭವದಿಂದ ಹುಟ್ಟಿದವುಗಳಾಗಿ, ಸಹಜವಾಗಿ ಕೇಳುಗನನ್ನು ಇಲ್ಲವೆ ಓದುಗನನ್ನು ಬೆರಗುಗೊಳಿಸುತ್ತವೆ. ಬಿಸಿಲಿನಲ್ಲಿ ಬೆವರು ಸುರಿಸುತ್ತ ಹೊಲವನ್ನೂಳುವ, ಗುಡ್ಡ–ಬೆಟ್ಟಗಳನ್ನು ಕಡಿದು ದಾರಿಮಾಡುವ ಶ್ರಮಿಕ ವರ್ಗದಿಂದ ಹಿಡಿದು ವಿಭಿನ್ನ ಕ್ಷೇತ್ರಗಳಲ್ಲಿ ಕೆಲಸ–ಕಾರ್ಯ ಮಾಡುವವರ ಬದುಕಿನ ಅನುಭವಗಳನ್ನೆಲ್ಲ ಕವಿ ಇಸ್ಸಾಕ್ಯಾನ್

ಬಾಲ್ಯಕಾಲದಿಂದಲೇ ಸೂಕ್ಷ್ಮವಾಗಿ ಗ್ರಹಿಸಿದ್ದುಂಟು. ಕವಿಯ ಕಣ್ಣು ಸೂಕ್ಷ್ಮದರ್ಶಕ ಯಂತ್ರದ ಹಾಗೆ ಎಲ್ಲವನ್ನೂ ಸೆರೆಹಿಡಿದಿಟ್ಟು, ಅನುಭವ ಪಕ್ವಗೊಂಡಾಗ ಅದು ಕಾವ್ಯವಾಗಿ ಹೊರಹೊಮ್ಮಿದ್ದುಂಟು. ನಿಸರ್ಗ ರಮಣೀಯತೆ ಹಾಗೂ ಬದುಕು ತನ್ನ ವಿರಾಟ್ ದರ್ಶನವನ್ನು ನೀಡಿದ್ದು, ಇಸ್ಸಾಕ್ಯಾನ್ ಅಂಥ ಅಪೂರ್ವ ಅನುಭವಕ್ಕೆ ಹೊಸಬಣ್ಣ ಕೊಟ್ಟದ್ದುಂಟು. ಕವಿಯ ದೃಷ್ಟಿ ಒಬ್ಬ ಪರಿಣತ ಪೇಂಟರನಂತೆ ಸೂಕ್ಷ್ಮಾತಿಸೂಕ್ಷ್ಮಗಳನ್ನು ಗ್ರಹಿಸಿ, ಚಿತ್ರಿಸಿದ್ದುಂಟು.

ಕವಿಗೆ ತನ್ನ ನಾಡು–ನುಡಿಯ ಬಗ್ಗೆ ಜ್ವಲಂತ ಅಭಿಮಾನವಿರುವುದಲ್ಲದೆ ಇಸ್ಸಾಕ್ಯಾನ್ ಕಾವ್ಯದಲ್ಲಿ ಕಾಲಕಾಲದಿಂದ ಮನುಷ್ಯ ಅನುಭವಿಸುತ್ತ ಬಂದಿರುವ ಸಾವು-ನೋವು–ನರಳಿಕೆ, ಸೋಲು-ಗೆಲುವುಗಳ ಧ್ವನಿಯಿದೆ. ಮನುಷ್ಯ ಜೀವನದ ಶಾಶ್ವತ ಮೌಲ್ಯವಾಗಿರುವ ಪ್ರೀತಿಯ ಅದಮ್ಯ ಶಕ್ತಿ ಸಾಮರ್ಥ್ಯವನ್ನು ಬಿತ್ತರಿಸುವುದು ಅತ್ಯಂತ ಗಮನಾರ್ಹವಾಗಿದೆ. 'ಚಿರಂತನ ಪ್ರೀತಿ'ಯಲ್ಲಿ ನಿರೂಪಿತವಾಗಿರುವ ಯುವರಾಜ ಯೆಲ್‌ಸಾಮನ್ ವಿಚಾರ ಆಜೇಯವಾದದ್ದು. ಮೃತ್ಯುವನ್ನೂ ಜಯಿಸಬಲ್ಲ ಶಕ್ತಿ ಪ್ರೀತಿಗಿರುವುದೆಂಬ ವಿಚಾರವನ್ನು, ತತ್ವವನ್ನು ಇಸ್ಸಾಕ್ಯಾನ್ ತುಂಬ ಆಸ್ಥೆಯಿಂದ ಬಣ್ಣಿಸಿದ್ದುಂಟು.

ಅರಾರತ್ ಪರ್ವತ ಪ್ರಾಚೀನ ಶಿಖರದ ಮೇಲೆ
ಶತಮಾನಗಳು ಸೆಕಂಡುಗಳಂತೆ ಚಲಿಸುತ್ತ,
ಸರಿದು ಮರೆಯಾಗಿವೆ ದೂರ.
ಅಸಂಖ್ಯ ಮಿಂಚಿನ ಖಡ್ಗಗಳು ಪ್ರಹರಿಸುತ್ತ
ವಜ್ರಕವಚದುತ್ತುಂಗ ನೆತ್ತಿಯಮೇಲೆ,
ಸರಿದು ಮರೆಯಾಗಿವೆ ದೂರ.

—ಅರಾರತ್ ಪರ್ವತ

ಪ್ರಪ್ರಾಚೀನ ಸಂಸ್ಕೃತಿಯ ತೊಟ್ಟಿಲನ್ನು ತೂಗಿದ ಆರ್ಮೆನಿಯದ ಕತೆ ಅತ್ಯಂತ ರೋಮಾಂಚಕಾರಿಯಾಗಿದ್ದು, ಆರ್ಮೆನಿಯದ ಅರಾರತ್ ಪರ್ವತಶಿಖರ, ಬಂಡೆಗಲ್ಲು, ಸರೋವರ, ಪಳೆಯುಳಿಕೆಗಳೆಲ್ಲವೂ ಗತವೈಭವವದ ಹಾಡನ್ನು ಹೇಳುತ್ತವೆ. ಆರ್ಮೆನಿಯದ ಹೆಮ್ಮೆಯ ಪುತ್ರ ಅವೆತಿಕ್ ಇಸ್ಸಾಕ್ಯಾನ ನೀಡಿದ ಆಹ್ವಾನವನ್ನು ಸ್ವೀಕರಿಸಿ, ಸುಂದರ ಹಾಡುಗಳನ್ನು ರಚಿಸಿದ ಜನಪ್ರಿಯ ಕವಿ.

ಕೆಲವು ವರ್ಷ ಕವಿ ಪರದೇಶದಲ್ಲಿ ನೆಲೆಸಿ ಮತ್ತೆ ತನ್ನ ನಾಡಿಗೆ ಮರಳಿ, ನಾಡವರೊಂದಿಗೆ ಒಂದಾಗಿ, ಜನ ಸಮುದಾಯದ ದನಿಯಾಗಿ, ತನ್ನ ಹಾಡುಗಳನ್ನು ರಚಿಸಿದ್ದುಂಟು. ದುಃಖ–ದುಮ್ಮಾನಗಳಲ್ಲಿ ನಾಡವರನ್ನು ಎಚ್ಚರಿಸಬಲ್ಲ ಅವರ ದೈನಂದಿನ ದುಃಖ ಮರೆಸಿ ಸ್ಫೂರ್ತಿ, ಪ್ರೇರಣೆ, ಚೈತನ್ಯಗಳನ್ನು ನೀಡಬಲ್ಲ,

ಅವರನ್ನು ಕೈಹಿಡಿದು ಮೇಲೆತ್ತಿ, ತಲೆಯೆತ್ತಿ ನಿಲ್ಲಿಸಬಲ್ಲ ಶಕ್ತಿ ಇಸ್ಸಾಕ್ಯಾನ್ ಅವರ ಹಾಡುಗಳಿಗಿದೆ. ನಾಡು, ನುಡಿ, ಸಂಸ್ಕೃತಿಯನ್ನು ಗೌರವಿಸುವಂತೆ ಆರ್ಮೇನಿಯನ್ ಜನತೆ ಇಸ್ಸಾಕ್ಯಾನ್ ಅವರ ಕಾವ್ಯವನ್ನು ಅತ್ಯಂತ ಆದರದಿಂದ ಗೌರವಿಸುತ್ತಾರೆ.

ನನ್ನದೊಂದು ಸ್ವತಂತ್ರ ಆತ್ಮ ನನ್ನ ತುಳಿಯುವ
ಯಾವ ಶಕ್ತಿಯೂ ಇಲ್ಲ ಜಗತ್ತಿನಲ್ಲಿ

—ಅಬೂ ಅಲಾ-ಅಲ್ ಮಾಹರಿ

ಯಾರೂ ಯಾರಿಗೂ ತಲೆಬಾಗಬೇಕಾಗಿಲ್ಲ. ಎಲ್ಲರೂ ತಲೆಯೆತ್ತಿ ನಡೆಯಬಲ್ಲ ಧೈರ್ಯವನ್ನು ತುಂಬುತ್ತದೆ ಕವಿಯ ಕಾವ್ಯ. ಪುಷ್ಕಿನ್, ಲೆರ್ಮಂತಫ್, ಗಯಟೆ, ಬೈರನ್, ಆರ್ಮೇನಿಯದ ಶ್ರೇಷ್ಠಕವಿಗಳು, ಮತ್ತು ಜಾನಪದ ಕವಿಗಳ ಕಾವ್ಯ ಇತ್ಯಾದಿ ಇಸ್ಸಾಕ್ಯಾನ್ ಕಾವ್ಯರಚನೆಗೆ ಪ್ರೇರಣೆಯನ್ನು ಒದಗಿಸಿದ್ದುಂಟು. ರಶಿಯಾ ಮತ್ತು ಯುರೋಪದ ಅತ್ಯುತ್ತಮ ಸಾಹಿತ್ಯ, ಇತಿಹಾಸ, ತತ್ವಜ್ಞಾನ, ಕಲೆ, ವಿಜ್ಞಾನದ ಹಲವು ಹೊಸವಿಚಾರಗಳು ಇಸ್ಸಾಕ್ಯಾನ್ ಕಾವ್ಯದ ಮೇಲೆ ಪ್ರಭಾವ ಬೀರಿವೆ. ಅವೆತಿಕ್ ಇಸ್ಸಾಕ್ಯಾನ್ ಅವರ ಕಲ್ಪನೆ, ಪ್ರತಿಭೆ ನಮ್ಮದೇಶದ ಖ್ಯಾತಕವಿ ರವೀಂದ್ರನಾಥ್ ಟಾಗೋರ್ ಅವರಂತೆ ಗರಿಗೆದರಿ ಹಾರಿದ್ದುಂಟು. ಟಾಗೋರ್ ಅವರನ್ನು ನಾವು ಗೌರವಿಸುವಂತೆ ಇಸ್ಸಾಕ್ಯಾನ್ ಅವರನ್ನು ಕಾವ್ಯರ್ಷಿ ಎಂದು ಕರೆಯಬಹುದು. ಇಬ್ಬರ ಕಾವ್ಯದಲ್ಲಿ ಕಲ್ಪನಾ ಸೌಂದರ್ಯ ಮಾತ್ರವಲ್ಲದೆ ಅಖಂಡ ಮಾನವೀಯ ಮೌಲ್ಯಗಳ ಕುರಿತ ಕಾಳಜಿಯೂ ಇದೆ. ಇಸ್ಸಾಕ್ಯಾನ್ ರಾಷ್ಟ್ರವನ್ನು ಹಾಗೂ ಬದುಕನ್ನು ಗಾಢವಾಗಿ ಪ್ರೀತಿಸಿದ ಕವಿಯಾಗಿದ್ದರು.

೧೮೯೭ರಲ್ಲಿ ಇಸ್ಸಾಕ್ಯಾನ್ ಅವರ **'ಹಾಡುಗಳು ಮತ್ತು ಗಾಯಗಳು'** ಮೊದಲ ಸಂಕಲನ ಪ್ರಕಟವಾಯಿತು. ಸಾಮಾಜಿಕ ಕ್ರೌರ್ಯ ಹಾಗೂ ಕಾರೂಪತೆಯ ವಿರುದ್ಧ ದನಿಯೆತ್ತಿದ ಕವಿ ಅವರು. ಇಸ್ಸಾಕ್ಯಾನ್ ಅವರ ಹಾಡಿನ ದನಿ ಆರ್ಮೇನಿಯದ ಹೊರಗೂ ಪ್ರತಿಧ್ವನಿಸುವಂತಾಯಿತು.

"ಇಸ್ಸಾಕ್ಯಾನ್ ಪ್ರಥಮ ದರ್ಜೆಯ ಕವಿಯಾಗಿದ್ದರು. ಅವರಂತೆ ನಿರರ್ಗಳವಾಗಿ ಉತ್ಕೃಷ್ಟ ವಿಚಾರವಂತ ಕಾವ್ಯ ಬರೆದ ಪ್ರತಿಭಾವಂತರು ಈಗ ಯುರೋಪದಲ್ಲಿ ಯಾರೂ ಇಲ್ಲ"-ಎಂದು ರಶ್ಯದ ಖ್ಯಾತಕವಿ ಅಲೆಕ್ಸಾಂದ್ರ್ ಬ್ಲಾಕ್ ಹೇಳಿದ್ದು ಅರ್ಥಪೂರ್ಣವಾಗಿದೆ. ಇಸ್ಸಾಕ್ಯಾನ್ ಉನ್ನತ ಮಾನವೀಯ ಮೌಲ್ಯಗಳನ್ನು ಕಾಪಾಡುವ ಹಾಗೂ ಪ್ರೇಮದ ಅಮರತ್ವವನ್ನು ಸಾರುವ ಕವಿಯಾಗಿದ್ದು, ಹಲವು ಸಲ ಜಾನಪದ ಕಾವ್ಯಪ್ರಪಂಚದಿಂದ ಕಾವ್ಯಕ್ಕೆ ವಸ್ತು, ವಿಷಯಗಳನ್ನು ತಿರಿದು ತರುವುದು ಈ ಕವಿಯ ವೈಶಿಷ್ಟ್ಯವಾಗಿದೆ. ಅಲಾಗೇಝ್ ಪರ್ವತಶಿಖರ ಕುರಿತು ಬರೆದ

ಹಾಡುಗಳಲ್ಲಿ ಇಡೀ ಆರ್ಮೇನಿಯದ ಜನತೆಯ ದನಿಯೇ ಇದ್ದು, ಅದು ಪರ್ವತ ಪ್ರಾಂತದಿಂದ ಹರಿದು ಬರುವ ಜಲಪ್ರವಾಹದಂತೆ ಗಮನ ಸೆಳೆಯುತ್ತದೆ. ಇಸ್ಸಾಕ್ಯಾನ್ ಕಾವ್ಯ ಮಾಲಿಕೆಯ ತರುಣ ನಾಯಕ ಝಾರೊವಿನ ಧ್ವನಿ ಹಲವು ಪದ್ಯಗಳಲ್ಲಿ ಅನುರಣನಗೊಳ್ಳುತ್ತದೆ. ಸುಖ-ದುಃಖ, ನೋವು-ನಿರಾಶೆ-ನರಳಿಕೆಗಳಲ್ಲಿ ಸಿಕ್ಕು ಬಣ್ಣಬಡುವ ಮಾನವರ ದನಿಗಳು, ಪರ್ವತ, ನದಿ-ನಿರ್ಝರಗಳು, ನೈಟಿಂಗೇಲ್, ಬುಲ್‌ಬುಲ್ ಪಕ್ಷಿಗಳ ಕೂಜನ. ಪರ್ವತದಿಂದ ಪರ್ವತಕ್ಕೆ ಸುಳಿಯುವ ಮಂದ ಮಾರುತ, ಹಾಗೂ ನಿಸರ್ಗ ಸೌಂದರ್ಯಗಳಿಂದ ಇಸ್ಸಾಕ್ಯಾನ್ ಕಾವ್ಯ ಮಳೆಯನ್ನು ತುಂಬಿಕೊಂಡ ಮೋಡಗಳಂತೆ ರಸಾರ್ದ್ರವಾಗಿ ಹೃದಯ, ಮನಸ್ಸುಗಳನ್ನು ತಟ್ಟುತ್ತದೆ.

ಕವಿಯ ವೈಯಕ್ತಿಕ ಅನುಭವಗಳು ಮಧುರ ಭಾವಗೀತಗಳಾಗಿ ಉಕ್ಕಿ, ಸಾರ್ವಕಾಲಿಕ ಮೌಲ್ಯಗಳನ್ನು ಒಳಗೊಂಡಿರುತ್ತವೆ. ಇಸ್ಸಾಕ್ಯಾನ್ ಕಾವ್ಯವನ್ನೊಳಗೊಂಡಿರುವ ಸಾಮಾಜಿಕ ದ್ರವ್ಯ ಅತ್ಯಂತ ಮಹತ್ವದ ಸ್ಥಾನ ಪಡೆಯುತ್ತದೆ. ಸಾಮಾನ್ಯ ಜನರ ನುಡಿಗಟ್ಟು, ಹಾಗೂ ಹಾಡಿನ ಧಾಟಿಯಲ್ಲಿ ಬರೆದ ಪದ್ಯಗಳಾದ್ದರಿಂದ ಜನತೆ ಇಂಥ ಕಾವ್ಯವನ್ನು ಹೃದಯದಲ್ಲಿಟ್ಟು ಗೌರವಿಸುತ್ತಾರೆ. ಇಸ್ಸಾಕ್ಯಾನ್ ಅವರ ಹಲವು ಪದ್ಯಗಳು ಸಾಮಾನ್ಯಜನರ ನಾಲಿಗೆಯ ಮೇಲೆ ನಲಿದಾಡುತ್ತವೆ. ನಾಡಿನ ಬಿಡುಗಡೆಗಾಗಿ, ಸುತ್ತಮುತ್ತ ಹೋರಾಟ, ಕ್ರಾಂತಿಗಳು ನಡೆಯುತ್ತಿದ್ದುದನ್ನು ಗಮನಿಸಿ, ವೈರಿಗಳ ಮೇಲೆ ಸೇಡನ್ನು ತೀರಿಸಿಕೊಳ್ಳದೆ ಗತಿಯಿಲ್ಲವೆಂದು ಹೇಳಲು ಇಸ್ಸಾಕ್ಯಾನ್ ಹಿಂದು ಮುಂದೆ ನೋಡಿಲ್ಲ. ಜನಸಮುದಾಯವನ್ನು ಸ್ವಾತಂತ್ರ್ಯದತ್ತ ಪ್ರೇರಿಸುವುದಕ್ಕೆ ಇಸ್ಸಾಕ್ಯಾನ್ ಪದ್ಯಗಳು ತೀವ್ರ ಪ್ರಚೋದನೆಯನ್ನು ನೀಡುತ್ತವೆ. ೧೯೧೧ರ ತರುವಾಯ ಕವಿಯ ಬದುಕು ಅಲೆದಾಟದಲ್ಲಿಯೇ ಕಳೆಯಿತು. ಅಕ್ಟೋಬರ್ ಕ್ರಾಂತಿ ಘಟಿಸಿ ಸಮಾಜ ಬದಲಾವಣೆಯು ನವೀನ ವರವಾಗಿ ಪರಿಣಮಿಸಿತು. ಅಕ್ಟೋಬರ್ ಕ್ರಾಂತಿಯ ತರುವಾಯದ ಆರ್ಮೇನಿಯ ಕವಿಯ ಕಣ್ಣಿಗೆ ಚಿರಂತನ ಸೌಂದರ್ಯದ ಸಂಕೇತವಾಗಿ ಕಂಡಿದೆ.

ಚಿರಂತನ ಹಾಗೂ ಪ್ರಾಚೀನ ಸೌಂದರ್ಯದೊಂದಿಗೆ ಸ್ವತಂತ್ರ ಆರ್ಮೇನಿಯಾ ಹೊಸ ರೂಪ ತೊಟ್ಟುಕೊಂಡು ಕುಣಿಯುವುದು ಗೋಚರಿಸಿದೆ. ನೆರೆವಾನ್ ನಗರ ಪಡೆದುಕೊಂಡ ಹೊಸ ಶೋಭೆ, ಸೌಂದರ್ಯ ಹಾಗೂ ಪ್ರಗತಿಯ ದರ್ಶನ ಕವಿಯ ಕಣ್ಣಿಗೆ ಹಬ್ಬವನ್ನುಂಟು ಮಾಡಿದೆ. ಹಲವು ವರ್ಷಗಳ ಸಂಚಾರ ಮುಗಿಸಿಕೊಂಡು ೧೯೩೬ರಲ್ಲಿ ಕವಿ ಸ್ವದೇಶಕ್ಕೆ ಮರಳಿದ್ದುಂಟು. ತನ್ನ ನಗರ ಹಾಗೂ ದೇಶದ ಹಲವೆಡೆಯಲ್ಲಿ ಮಹತ್ವದ ಐತಿಹಾಸಿಕ ಘಟನೆಗಳು ಜರುಗಿದ್ದುದು ಕವಿಗೆ ತೃಪ್ತಿ, ನೆಮ್ಮದಿಯನ್ನು ನೀಡಿದೆ. ವಿಜ್ಞಾನ ಸೃಷ್ಟಿಸಿದ ವೈಚಿತ್ರ್ಯಗಳು ಕವಿಯ ಕಣ್ಣನ್ನು ಸೂರೆ

ಗೊಂಡಿವೆ. ಭೂತದಂತೆ ವರ್ತಮಾನವೂ ಕವಿಯ ಕಲ್ಪನೆಗೆ ಬಣ್ಣ ತುಂಬಿದೆ. ಹೊಸ ಗಾಳಿ, ಹೊಸ ಬೆಳಕು, ಹೊಸ ಬದುಕನ್ನು ಕಂಡು ಕವಿ ಕೃತಾರ್ಥ ಭಾವವನ್ನು ಪ್ರಕಟಿಸಿದ್ದುಂಟು. ಗಾಢ ಚಿಂತನೆಯ ಫಲವಾಗಿ ಕವಿ ಇಸ್ಸಾಕ್ಯಾನ್ ಉನ್ನತ ದರ್ಜೆಯ ಕಾವ್ಯವನ್ನು ರಚಿಸಿ, ಜನರ ಪ್ರೀತಿ-ವಿಶ್ವಾಸಗಳನ್ನು ಗಳಿಸಿಕೊಂಡ ಏಕೈಕ ಕವಿಯಾಗಿದ್ದಾರೆ. ಎರಡನೆಯ ಮಹಾಯುದ್ಧದ ಕುರಿತು ಬರೆದ ಇಸ್ಸಾಕ್ಯಾನ್ ಪದ್ಯಗಳಿಗೆ ಸೋವಿಯತ್ ನಾಡಿನ ಅತ್ಯುಚ್ಚ ಸ್ಟೇಟ್ ಪುರಸ್ಕಾರ ಲಭ್ಯವಾಗಿದೆ. ಇಸ್ಸಾಕ್ಯಾನ್ ಜನತೆಯ ಕವಿಯೆಂದು ಖ್ಯಾತರಾಗಿದ್ದು, ಆರ್ಮೇನಿಯದ ಹಳ್ಳಿ-ನಗರಗಳಲ್ಲೆಲ್ಲ ಅವರ ಹಾಡಿನ ದನಿ ಮಾರ್ದನಿಗೊಳ್ಳುತ್ತದೆ. ಇಸ್ಸಾಕ್ಯಾನ್ ಪದ್ಯಗಳು ಸೋವಿಯತ್ ನಾಡಿನ ಹಲವು ಭಾಷೆಗಳಿಗೆ ಅನುವಾದಗೊಂಡಿವೆ. ಇಸ್ಸಾಕ್ಯಾನ್ ಕಾವ್ಯ ಆರ್ಮೇನಿಯನ್ ಬದುಕನ್ನು ಸುಂದರಗೊಳಿಸಲು ಸಹಾಯಕವಾಗುವ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಕಾವ್ಯವಾಗಿದೆ. ಮಾನವೀಯ ಕಾಳಜಿಯನ್ನು, ಪ್ರೀತಿ-ವಿಶ್ವಾಸ, ಶಾಂತಿ-ಸಮತೆ-ಸೋದರತ್ವವನ್ನು ಪ್ರತಿಪಾದಿಸುವ ಇಸ್ಸಾಕ್ಯಾನ್ ಕಾವ್ಯಕ್ಕೆ ಜಾಗತಿಕ ಮಹತ್ವವೂ ಇದೆ.

## II

ಸಾವು-ಮನುಷ್ಯನನ್ನು ಎಂದಿನಿಂದಲೂ ಕಾಡಿಸುತ್ತ, ಪೀಡಿಸುತ್ತ, ಬೇಟೆಯಾಡುತ್ತ ಬಂದದ್ದುಂಟು. ಮನುಷ್ಯ ಸಾವನ್ನು ಎದುರಿಸುವ ಅನೇಕ ಉಪಾಯಗಳನ್ನು ಕಂಡಿದ್ದಾನೆ. ಸಾವು ಅನಿವಾರ್ಯ ಸ್ಥಿತಿ ಎಂಬುದನ್ನು ಮನಗಂಡು, ಧೈರ್ಯದಿಂದ ಬದುಕು ಮಾಡಿದ್ದಾನೆ. ಮೃತ್ಯುವನ್ನು ಬೆನ್ನಟ್ಟಿ ತನ್ನ ಪತಿಯ ಪ್ರಾಣವನ್ನು ಮರಳಿ ಪಡೆದುಕೊಂಡಳೆಂಬ ಸಾವಿತ್ರಿಯ ಕಥೆ ಇಂಡಿಯಾದಲ್ಲಿ ಜನಜನಿತವಾಗಿದೆ.

ಪಂಪನ ಆದಿಪುರಾಣದಲ್ಲಿ ಕಾಣಿಸಿಕೊಳ್ಳುವ ಲಲಿತಾಂಗವಲ್ಲಭ ಮತ್ತು ಶ್ರೀಮತಿಯರ ಗಾಢವಾದ ಪ್ರೀತಿಯ ಸಂದರ್ಭವನ್ನು ಪಂಪಕವಿ ಅತ್ಯಂತ ಸೂಕ್ಷ್ಮವಾಗಿಗ್ರಹಿಸಿ ಅರಮನೆಯ ರಾಣಿವಾಸದ ಗವಾಕ್ಷವನ್ನು ತೆರೆಯಲು ಮರೆತದ್ದಕ್ಕಾಗಿ ಕಾಳಾಗರು ಧೂಪಧೂಮ ಮುಸುಕಿ ಅವರಿಬ್ಬರೂ ಸತ್ತುಹೋದ ದುರಂತ ಪ್ರಸಂಗವೊಂದನ್ನು ಚಿತ್ರಿಸಿದ್ದಾನೆ. ಹೊಗೆಮುಸುಕಿ ಅವರಿಬ್ಬರೂ ಸತ್ತಿದ್ದರೂ ಅವರು ಒಬ್ಬರನ್ನೊಬ್ಬರು ಬಿಡದೆ ಅಪ್ಪಿಕೊಂಡಿದ್ದರೆಂದು ಬಣ್ಣಿಸಿದ್ದಾನೆ.

ಬಿಡದೆ ಪೊಗೆಸುತ್ತೆತೊಳಂ। ಸಡಿಲಿಸದಾ ಪ್ರಾಣವಲ್ಲಭರ್ ಪ್ರಾಣಮನಂ
ದೊಡಗಳೆವರೋಪರೋಪರೊ। ಡ ಸಾಯಲ್ ಪಡೆವರಿನ್ನವುಂ ಸೈಪೊಳವೇ॥[೧]

—ಪಂಪನ ಆದಿಪುರಾಣ:

---

೧. ಪಂಪನ ಆದಿಪುರಾಣ ಸಂ: ಡಾ. ಎಲ್. ಬಸವರಾಜು ಪು. ೧೪೪ ಪದ್ಯ-೨೪

ಈ ಪದ್ಯ ಸಾವಿಗಿಂತಲೂ ಪ್ರೀತಿ ಅಜೇಯವಾದದ್ದು, ಗಾಢವಾದದ್ದು ಎಂಬ ಅರ್ಥವನ್ನು ಧ್ವನಿಸುತ್ತದೆ.

ಪ್ರಸ್ತುತ ಅವೆತಿಕ್ ಇಸ್ಸಾಕ್ಯಾನ್ ಅವರ 'ಚಿರಂತನ ಪ್ರೀತಿ' ಇನ್ನೊಂದು ಹೆಜ್ಜೆ ಮುಂದೆ ಹೋಗಿ, ಸಾವನ್ನು ಆಹ್ವಾನಿಸುವ, ಪ್ರೀತಿಯ ವಿಜಯವನ್ನು ಸಾರುವ ಕಾವ್ಯವಾಗಿದೆ. ಆರಂಭದ ಪದ್ಯಗಳಲ್ಲಿ ಕವಿ ಇಸ್ಸಾಕ್ಯಾನ್ ಎಂದೋ ಅಳಿದು ಹೋದ ತಾಡ್‌ಮೊರ್ ಅರಮನೆಯನ್ನು ಪುನಃ ಸೃಷ್ಟಿಸಿ, ಅದರಲ್ಲಿ ಯೆಲ್‌ಸಾಮನ್ ತನ್ನ ಪ್ರೀತಿಯ ರಾಜಕುಮಾರಿಯ ತಲೆಯನ್ನು ತನ್ನ ತೊಡೆಯ ಮೇಲಿರಿಸಿಕೊಂಡ ಚಿತ್ರವಿದೆ. ಈಗ ಇಷ್ಟರಲ್ಲಿ ರಾಜಕುಮಾರಿಯ ಪ್ರಾಣಪಕ್ಷಿ ಹಾರಿ ಹೋಗುವುದರಲ್ಲಿದೆ. ಅವಳು ಸಾಯುತ್ತಾಳೆಂಬುದು ಖಚಿತವಾಗಿದ್ದರೂ ಯುವರಾಜ ಯೆಲ್ ಸಾವನ್ ಧೃತಿಗೆಡುವುದಿಲ್ಲ. ಅವನು ಕಿವಿಯಲ್ಲಿ ಪ್ರೀತಿಯ ಅದಮ್ಯ ಶಕ್ತಿ ಹಾಗೂ ಅಜೇಯತೆಯ ಕುರಿತು ನುಡಿಯುವುದನ್ನು ಕೇಳಬೇಕು. ಪ್ರೀತಿ ಸ್ವರ್ಗಕ್ಕಿಂತಲೂ ಹೆಚ್ಚಿನದು. ಪ್ರೇಮಿಗಳನ್ನು ಅಗಲಿಸುವ ಶಕ್ತಿ ಯಾವುದೂ ಇಲ್ಲ. ರಾಜಸಿಂಹಾಸನದ ಸುತ್ತಲೂ ಬಂಗಾರ ಕೂದಲಿನ ಆಪ್ತಸಖಿಯರು ನೆರೆದಿದ್ದಾರೆ. ಸಂಗೀತ, ನೃತ್ಯ, ಗಾಯನಗಳು ನಿರಂತರವಾಗಿ ಪ್ರತಿಧ್ವನಿತವಾಗುತ್ತಿವೆ. ಮೃತ್ಯುಮುಖಿಯಾಗಿರುವ ರಾಜಕುಮಾರಿಯನ್ನುದ್ದೇಶಿಸಿ ಯುವರಾಜ ಯೆಲ್‌ಸಾಮನ್ ಆಡುವ ಮಾತುಗಳು ಪ್ರೀತಿಯ ಚಿರಂತನೆಯನ್ನು ಸಾರುತ್ತವ.

ಈ ನನ್ನ ಸುಂದರ ಅರಮನೆಯೂ ನಾಶವಾಗಬಹುದೊಮ್ಮೆ
ವೈಭವವೆಲ್ಲವೂ ನಶಿಸಿ ಹಾಳ್ಸುರಿಯಬಹುದೊಮ್ಮೆ,
ಅಪರಂಪಾರ ಸಿದಾನ್ ಸಮುದ್ರವೂ ಉಕ್ಕೇರಿ ಕೊನೆಗೊಮ್ಮೆ
ಹಾಳ್ಸುರಿವ ಈ ಮರುಭೂಮಿಯನ್ನು ವ್ಯಾಪಿಸಬಹುದು.

ವೈಭವ-ವಿಲಾಸಗಳೆಲ್ಲ ನಾಶವಾದರೂ ತಮ್ಮ ಪ್ರೀತಿ ಮಾತ್ರ ಚಿರಂತನವಾಗಿ ಉಳಿಯುವದೆಂದು ಯೆಲ್‌ಸಾಮನ್ ಬಲವಾಗಿ ನಂಬಿದ್ದಾನೆ.

........ಸಾಯಗೊಡಲಾರೆ ಪ್ರಿಯೆ, ನಿನ್ನನೀಗ
ಹೊಡೆದೋಡಿಸುವೆನಟ್ಟಿ ದೂರ. ಅನಿಷ್ಟ ಮೃತ್ಯುವನು
ಸಾಯಗೊಡಲಾರೆ ಸಾಯಗೊಡಲಾರೆ ಪ್ರಿಯೆ ನಿನ್ನನೀಗ.

ಹೀಗೆ ಯೆಲ್‌ಸಾಮನ್ ಮೃತ್ಯುಮುಖಿಯಾದವಳ ಕುರಿತು ಹಲುಬುತ್ತಾನೆ. ತನ್ನ ಕೈಯಲ್ಲಿಯ ಖಡ್ಗವನ್ನು ಬೀಸಿ ಮೃತ್ಯುವನ್ನು ಪ್ರತಿಭಟಿಸುತ್ತಾನೆ. ಅಲ್ಲದೆ ಅವಳನ್ನು ಬಿಟ್ಟುಕೊಡದೆ—

ಬಿಗಿದಪ್ಪಿದನು ಭದ್ರ ಕ್ಷೀಣಿಸುತ್ತಿದ್ದ ರಾಜಕುವರಿಯನ್ನು
ಪ್ರತಿಭಟಿಸಿ ಮೃತ್ಯುವನು ತನ್ನ ಕೈಯ ಖಡ್ಗ ಬೀಸಿ,
ಮುದ್ದಿಸುವನವಳ ಮತ್ತೆ ಮತ್ತೆ ಮತ್ತವಳ ಜೀವನ ಬಯಸಿ
ಗಡ್ಡೆಗಟ್ಟಿದ, ಜೀವವಿಲ್ಲದ ರಾಜಕುವರಿಯ ತುಟಿಗಳನ್ನು!

ಎನಿತೆನಿತೊ ಚಂದ್ರಮರು ಬಂದು ಹೋದರು ಮೂಡಿ ಮುಳುಗಿ
ಯೆಲ್‌ಸಾಮನ್ ಅಪ್ಪಿರುವನಿನ್ನೂ ಭದ್ರ, ಸತ್ತ ರಾಜಕುವರಿಯನ್ನು:
ಉಸುರುತಿಹನವಳ ಕಿವಿಯಲ್ಲೇನೊ ಮೆಲ್ಲಗಿನ ದನಿಯಲ್ಲಿ
ಬೆಳ್ದಿಂಗಳುಕ್ಕಿ ಹರಡಿರುವ ಬಂಗಾರ ಬಣ್ಣದ ಸ್ತಂಭಗಳಲ್ಲಿ.

ಯುವರಾಜ ಯೆಲ್‌ಸಾಮನ್ ಮತ್ತು ರಾಜಕುಮಾರಿ ಸತ್ತು ಶತಮಾನಗಳುರುಳಿದವು. ಆದರೆ, ಅವರ ಪ್ರೀತಿ ಮಾತ್ರ ಅಕ್ಷಯವಾಗಿ ಉಳಿದಿರುವದೆಂದು ಕವಿ ಅವೆತಿಕ್ ಇಸ್ಸಾಕ್ಯಾನ್. ಆ ಚಿರಂತನ ಪ್ರೀತಿಯನ್ನು ಇಲ್ಲಿಯ ಪದ್ಯಗಳಲ್ಲಿ ಜೀವಂತವಾಗಿ ಹಿಡಿದಿಟ್ಟಿದ್ದಾರೆ.

ಅಂದಿನ ರಾಜವೈಭವ, ವಿಲಾಸ, ನೃತ್ಯ, ಗಾಯನ–ಯಾವುದೂ ಇಲ್ಲ. ಕಾರಂಜಿಗಳು ದುಃಖವನ್ನು ಬಿಕ್ಕುತ್ತಿವೆ. ಕಂಭದಿಂದ ಕಂಭಕ್ಕೆ ಜೇಡರ ಬಲೆಗಳು ಹೆಣೆದುಕೊಂಡಿವೆ, ಸಿಂಹಾಸನವಿದ್ದ ಜಾಗದ ಸುತ್ತ ಈಗ ಬರೀ ಚಂಡಮಾರುತ ಬೀಸುತ್ತ, ಅದು ಅರಚುವ ಧ್ವನಿ ಮಾತ್ರ ಕೇಳಿಸುತ್ತದೆ. ಎಲ್ಲೆಡೆಗೂ ವಿನಾಶದ ಹಾಳು ಬೂದಿ ಸುರಿದಿದೆ. ಹೀಗಿದ್ದರೂ, ಯೆಲ್‌ಸಾಮನ್ ಮತ್ತು ರಾಜಕುಮಾರಿಯ ಪ್ರೀತಿಗೆ ಸಂಕೇತವೆಂಬಂತೆ ಈ ಪದ್ಯವೊಂದು ಅವರ ಪ್ರೀತಿಯ ಚಿರಂತನ ಸ್ಮಾರಕವಾಗಿದೆ.

ತನ್ನ ತಣ್ಣಗಿನ ಹೊಳೆವ ಮೈಪರೆಯಿಂದ ತೊಳೆಯುವದು ಸರ್ಪ
ಯೆಲ್‌ಸಾಮನ್ನನ ಎಲುಬಿಗಂಟಿದ ಮೈಲಿಗೆಯ ಮಣ್ಣನ್ನು;
ಅಸ್ಥಿಪಂಜರದ ತೋಳುಗೈ ಚಾಚಿ ಪ್ರೀತಿಯುಕ್ಕಿ ಯೆಲ್‌ಸಾಮನ್
ಅಪ್ಪುವನು ಈಗಲೂ ಅಸ್ಥಿಪಂಜರದ ರಾಜಕುಮಾರಿಯನ್ನು.

ಕವಿ ಅವೆತಿಕ್ ಇಸ್ಸಾಕ್ಯಾನ್ ಸೃಷ್ಟಿಸಿದ ಇಂಥ ದುರಂತ ಚಿತ್ರ ಜಗತ್ತಿನ ಯಾವ ಕಾವ್ಯದಲ್ಲಿಯೂ ಸಿಗಲಿಕ್ಕಿಲ್ಲ; ಗತಕಾಲದಿಂದ ಅಗೆದು ತೆಗೆದ ಸಂದರ್ಭವೊಂದನ್ನು ಇಸ್ಸಾಕ್ಯಾನ್ ಅತ್ಯಂತ ಕಲಾತ್ಮಕವಾಗಿ, ಸುಂದರವಾಗಿ, ಮನೋವೇಧಕವಾಗಿ ಕಾವ್ಯದಲ್ಲಿ ನಿರೂಪಿಸಿದ್ದುಂಟು. ಪದ್ಯದಲ್ಲಿ ಹರಡಿಕೊಂಡಿರುವ ಸಂಕೇತ ರೂಪಕಗಳು ಅತ್ಯಂತ ಚಿತ್ತಾಕರ್ಷಕವಾಗಿವೆ.

'ಚಿರಂತನಪ್ರೀತಿ'-ಇಸ್ಸಾಕ್ಯಾನ್ ಅವರ ಉನ್ನತ ಕಾವ್ಯಶಕ್ತಿಯನ್ನು ಪ್ರದರ್ಶಿಸುವ ಮಹತ್ವದ ಕಾವ್ಯವಾಗಿ ಗಮನ ಸೆಳೆಯುತ್ತದೆ.

'ಆರ್ಮೆನಿಯನ್ ಜನತೆ ಇಸ್ಸಾಕ್ಯಾನ್ ಅವರನ್ನು ಪ್ರೀತಿಸುವುದಲ್ಲದೆ ಎಲ್ಲೆಡೆಗೂ ಅವರ ಹಾಡುಗಳನ್ನು ಹಾಡುತ್ತಾರೆ;[೧]

●

---

೧. Armenia : Novasti Press Agency Pubhiihing House, Moscow 1981. P. 41

# ಚಿರಂತನ ಪ್ರೀತಿ

ಮೂಲ: ಆರ್ನೆನಿಯನ್ | ಅನುವಾದ :
ಅವೆತಿಕ್ ಇಸ್ಸಾಕ್ಯಾನ್ ● ಬುದ್ದಣ್ಣ ಹಿಂಗಮಿರೆ

I

ಶೋಭಿಸುವುದಕೊ ಮರುಭೂಮಿಯಲ್ಲಿ ಬಂಗಾರ ಸ್ವಪ್ನದಂತೆ
ಥಳಥಳಿಸುವಾ ತಾಡ್‌ಮೋರ್ ಅರಮನೆ ಹೊಳೆವ ಮಿಂಚಿನಂತೆ;
ನಿಂತಿರುವುದಲ್ಲಿ ಏಳ್ನೂರ ಸಂಗ ಮರಿ ಶಿಲಾಸ್ತಂಭ ಮೇಲೆ
ಉತ್ತುಂಗ ಮುಗಿಲ ಮುತ್ತಿಡುವ ಹಾಗೆ ಗೋಪುರವು ಅದಕೆ ಜೇರೆ.

ಅತ್ತ ಇತ್ತ ಸುಂದರತೆವೆತ್ತ ಉತ್ತತ್ತಿವೃಕ್ಷ ಸೊಕ್ಕಿ
ತರತರದ ಇಚ್ಛೆ ಅಭಿವ್ಯಕ್ತಗೊಳಿಸಿ ಹಾಡುವವು ನೂರು ಹಕ್ಕಿ;
ಕೆಂಡಗಿಡಿಗಳನು ತೂರುವಂತೆ ಕಾರಂಜಿ ನೆಗೆಯುತಾವೆ
ಶೋಭಿಸುವುದಲ್ಲಿಯೇ ಬೆಳ್ಳಿಯಿಂದ ಹೂ ಬಳ್ಳಿ ಬಳ್ಳಿಮೇಲೆ.

ವಿರಾಜಿಸಿರುವನದೊ ಗದ್ದುಗೆಯ ಮೇಲೆ ಯುವರಾಜ ಯೆಲ್‌ಸಾಮನ್
ಮೃದುವಾಗಿ ತಬ್ಬಿ ನೇವರಿಸುತಿರುವನದೊ ಚೆಲುವೆರಾಣಿಯನ್ನ
ಕಪ್ಪುಕೇಶಗಳ ರಾಶಿ ಹರಡಿಹುದು ಅವನ ತೊಡೆಯ ಮೇಲೆ
ವಸಂತ ಋತುವಿನಲಿ ತೇಲುವಂತೆ ತಿಳಿ ನೀರಹೂವ ಮಾಲೆ.

ಮುತ್ತಿನಂತೆ ಹೊಳೆಹೊಳೆವ ಕಡಲಿನಾ ಜಲತರಂಗ ತ್ವರಿತ,
ಸುರಿಯುವುದು ಸತತ ಲೆಬನಾನ್ ನಾಡಿನಲಿ ಬಂಡೆಗಲ್ಲ ಮೊರೆತ,
ಉಕ್ಕುತಿರುವ ನೊರೆ–ಬುರುಗ ಇಲ್ಲದೆಯೆ ಶಾಂತ ಹರಿಯುವಂತೆ
ಕೇಶರಾಶಿ ಹರಡಿರುವ ರಾಣಿಯಾ ತೊಡೆಯ ಹೋಲುವಂತೆ.

ಬಂಗಾರ ಕೂದಲಿಳಿಬಿಟ್ಟ ರಾಣಿಯಾ ಆಪ್ತಸಖಿಯರಲ್ಲಿ
ಸುತ್ತುವರಿದು ನಿಂತಿರುವರಲ್ಲಿ ಗದ್ದುಗೆಯ ಆಚೆ ಈಚೆ;
ಹಗಲು-ಇರುಳು ಕೇಳಿಸುವುದಲ್ಲಿ ಮೋಹಿಸುವ ನೃತ್ಯ–ಗಾನ.
ಉಕ್ಕಿ ಉಕ್ಕಿ ಹೊಮ್ಮುತ್ತ ಸತತ ಭೇದಿಸುತ ಯುಗದ ಮೌನ.

## II

ರಾಣಿವಾಸದರಮನೆಯ ದೀಪಗಳು ಬಿಕ್ಕಿ ಆರಿದಂತೆ
ಮೂಡಿ ಚಂದ್ರ ಗಗನಾಂಬರಲ್ಲಿ ನಿಜ ಬೆಳ್ಳಿ ಹಂಸದಂತೆ;
ನಲಿವನವನು ಅರೆ! ನೀರ ನೀರೆಗೆ ಮುತ್ತನೀಯುವಂತೆ
ಯುವರಾಜ ಯೆಲ್‌ಸಾಮುನ್ ನುಡಿವನಾಗ ತಂಗಾಳಿ ತೀಡಿದಂತೆ.

ಚಂದ್ರ ಬೆಳಕಿನಲಿ ರಾಜಕುವರಿಯಾ ಕಿವಿಗಳಲ್ಲಿ ಅವನು,
ಉಸುರುವನು ಮಧುರ ದನಿಯಲ್ಲಿ ಆಗ ತನ್ನಂತರಂಗವನ್ನು;
ಚಂದ್ರಕಿರಣಗಳು ಕುತನಿಯಂತೆ ಪ್ರತಿಬಿಂಬಗೊಳಲು ಅಲ್ಲಿ
ಹೊಳೆವ ಸಂಗಮರವರಿ ಶಿಲೆಯಾ ಕಂಭ ಕಂಭಗಳಲಿ.

"ಸ್ವರ್ಗಲೋಕ ಭಾವಣೆಯ ಎತ್ತರವು ಗೊತ್ತು ಗೊತ್ತು ನನಗೆ
ಅದಕಿಂತ ಹೆಚ್ಚು ಉನ್ನತವು ನನ್ನೀ ಪ್ರೀತಿ ನಿನ್ನ ಬಗೆಗೆ;
ಭೂಮಿಯೊಡಲಿನಾ ಗೂಢವನ್ನು ನಾ ಬಲ್ಲೆ ಬಲ್ಲೆ ಬಲ್ಲೆ
ನನ್ನ ಪ್ರೀತಿಯಾ ಗೂಢವನ್ನು ನಾ, ಉಸುರಲೊಲ್ಲೆ ಒಲ್ಲೆ"

ದೀಪ ನಾಲಿಗೆಗೆ ಕೆಂಪು ರಂಗು ಬಳಿಯುತ್ತ ಬರುವ ಮೋಡಿ
ಮಾಣಿಕ್ಯ ಬಣ್ಣ ಹೊಯ್ಯುವವು ಪ್ರೇಮ ದೇವತೆಯ ಕೈಗಳಾಡಿ;
ದೀಪ ನಾಲಗೆಯ ಕೆಂಪಮೀರಿಸುವ ನಿನ್ನ ತುಟಿಗಳೆರಡು
ಸ್ವರ್ಗವಾಗುವುದು ಮಧುರ ಮುತ್ತ ನೀಡಿದರೆ, ಮರಳುಗಾಡು.

ಗೊತ್ತು ನನಗೆ ಈ ಚೆಲುವಿನರಮನೆಯು ನಶಿಸಬಹುದು ಒಮ್ಮೆ
ರಾಜವೈಭವವು ನಶಿಸಿ ಮತ್ತೆ ಹಾಳ್ಸುರಿಯುಬಹುದು ಸರ್ವ;
ಅಪರಂಪಾರ ಈ ಸಿದಾನ್ ಸಮುದ್ರ ಉಕ್ಕೇರಿ ಬಂದು ಒಮ್ಮೆ
ವ್ಯಾಪಿಸಲು ಬಹುದು ಹಾಳ್ಸುರಿವ ಈ ಬಂಜರನ್ನು ಒಮ್ಮೆ.

ಭವಿತವ್ಯದಲ್ಲಿ ಎಂದಾದರೊಮ್ಮೆ ಮುಗಿದೀತು ಕಾಲನವಧಿ
ಸೂರ್ಯ ಸುಟ್ಟು ಕರಕಾಗಿ ಮತ್ತೆ ಸುರಿದೀತು ಸುಡುವ ಬೂದಿ
ಆರಲಾರದೆಂದೆಂದಿಗೂನು ಅದು ಆರುವಂತೆ ಸೊಡರ
ಪ್ರಿಯೆ, ನನ್ನ ಪ್ರೀತಿಯದು ಅಳಿಯಲಾರದೆಂದೆಂದಿಗೂನು ಅಮರ.

ಇಂಥ ವಿನಾಶದಡಿಯಲ್ಲಿ ಘಟಿಸುವವು ನೋಡು ಚಮತ್ಕಾರ
ದಂತ ಕತೆಗಳಾ ಪೇಯದಂತೆ ನಿಲ್ಲುವವು ಮುತ್ತು ಅಮರ;
ಹೊಳೆವ ತೇಜವಿದು ಅಳಿದುಹೋಗಿ ನಾ ಕರಗಬಹುದು ಒಮ್ಮೆ
ನಿಂತು ಕಾಲನಾ ಚಲನವಲನವೂ ಗೆದ್ದೀತು ಪ್ರೀತಿ ಮೇಲ್ಮೆ.

ಮಧುರ ಸ್ವಪ್ನಗಳ ನೆಯ್ಯಬಹುದು ಕಸ್ತೂರಿ ಧೂಪ-ಧೂಮ
ಮೇಲೇರಬಹುದು ಹೊಗೆ ಅರಮನೆಯ ಕಪ್ಪಿನೊಳ ದ್ವಾರದ್ವಾರದಿಂದ;
ಅಣುರಣಿಸಬಹುದು ರಾಣಿವಾಸದಲಿ ದಾಸಿಯರ ನೃತ್ಯಗಾನ
ಕುಣಿಕುಣಿದು ಹಾಡಬಹುದೊಮ್ಮೆ ಮತ್ತೆಭೇದಿಸುತ ಶಿಲೆಯ ಮೌನ.

## III

ಮೌನ ಮಣಿದೊರಗೀತು ಮೃತ್ಯುವಿನ ರೆಕ್ಕೆಯಂಡಿಗಳಲ್ಲಿ
ಹೊಯ್ದಾಡಬಹುದೀ ದೀಪಕುಡಿಗಳು ಏಕಾಂತದೊಡಲಿನಲ್ಲಿ;
ಶೋಕ ವ್ಯಾಕುಲಿತ ಯೆಲ್‌ಸಾಮನ್ನನ ತೊಡೆಯಮೇಲೆ ಬೆಡಗಿ
ಮೃತ್ಯುದವಡೆಯಲಿ ನರಳುತಿರುವಾ ಮೃದುಲ ರಾಜಕುವರಿ.

ಸಾಯುತಿರುವಳದೊ ಮೊಗ್ಗೆಯೊಳಗಿನಿಬ್ಬನಿಯ ಬಿಂದುವಂತೆ
ತಾಯ ಮೃದು ಮಧುರ ತೋಳ್ಗಗಳಲ್ಲಿಯ ಮುಗ್ಧ ಮಗುವಿನಂತೆ;
ದಿಕ್ಕುತಪ್ಪಿ ಬಡಬಡಿಸುತಿರುವನೇನನ್ನೊ ಯೆಲ್‌ಸಾಮನ್
ರಾಜಕುವರಿಯಾ ಕಿವಿಗಳಲ್ಲಿ ಪ್ರಾರ್ಥನೆಯನುಸಿರುವಂತೆ

ಬೆಂಕಿಯಿಕ್ಕುವೆನು ಸ್ವರ್ಗಲೋಕದಾ ಸಕಲ ವೈಭವಕ್ಕೆ
ಸಾಯಗೊಡಲಾರೆ, ಸಾಯಗೊಡಲಾರೆ ಪ್ರಿಯೆ; ಮೃತ್ಯುವೇ, ಜೋಕೆ;
ಓಡಿಸುವೆನಟ್ಟಿ ನಿನ್ನ ನುಂಗುವಾ ಮೃತ್ಯುವನ್ನು ದೂರ
ಸಾಯಗೊಡಲಾರೆ, ಸಾಯಗೊಡಲಾರೆ, ಎಲೆ ಮೃತ್ಯುವೇ ಜೋಕೆ.

ಇಷ್ಟು ನುಡಿದು ತಬ್ಬಿದನು ಭದ್ರ ಕ್ಷೀಣಿಸುವ ಚೆಲುವೆಯನ್ನು
ಬೀಸಿ ಬೀಸಿದನು ಕೈಯ ಖಡ್ಗ ಪ್ರತಿಭಟಿಸಿ ಮೃತ್ಯುವನ್ನು;
ಮತ್ತೆ ಮತ್ತೆ ಮುದ್ದಿಸುವನವನು ಬಾಡಿರುವ ತುಟಿಗಳನ್ನು
ಗಡ್ಡೆಗಟ್ಟಿದಾ ಜೀವವಿಲ್ಲದಾ ರಾಜಕುವರಿಯನ್ನು.

## IV

ಎನಿತೊ ಚಂದ್ರಮರು ಬಂದು ಹೋದರೊ ಮೂಡಿ ಮೂಡಿ ಮುಳುಗಿ
ಅಪ್ಪಿರುವನಿನ್ನೂ ಯೆಲ್‌ಸಾಮನ್ ಸತ್ತ ರಾಜಕುವರಿಯನ್ನು
ಉಸುರುತಿರುವನೇನನ್ನೊ ಅಂತೆಯೆ ಅವಳ ಕಿವಿಗಳಲ್ಲಿ
ಬೆಳ್ದಿಂಗಳುಕ್ಕಿ ಹರಡಿರುವ ಚಿನ್ನದಾ ಕಂಭ ಕಂಭಗಳಲಿ.

ಬಿಕೋ ಎನ್ನುವುದು ಭೀತಿ ತುಂಬಿದರಮನೆಯು ಒಳಗಂ–ಹೊರಗು
ಬಿಟ್ಟು ಹೋಗಿಹರು ಆಪ್ತಸಖಿಯರು, ಇನ್ನೆಲ್ಲಿ ಆದಕೆ ಮೆರಗು ?
ಕೇಳಿಸುವದಲ್ಲಿ ಮರ್ಮರದ ದನಿಯು ಖರ್ಜೂರ ವೃಕ್ಷಗಳಲಿ
ಕಂದಿ ಕುಂದಿ ಆರಿರುವ ಬೆಳಗಿನ ಸಾಲು ದೀಪಗಳಲಿ.

ಕಣ್ಣೀರ ಹರಿಸಿ ಬಿಕ್ಕುವವು ದುಃಖ ಕಾರಂಜಿ ಕೊಳವೆ ಖಾಲಿ
ಕಂಭದಿಂದ ಕಂಭಕ್ಕೆ ಹೆಣೆದಿರುವ ಜೇಡ ಬಲೆಯು ತೇಲಿ;
ಚಂಡಮಾರುತವು ಬೀಸಿ ಬೀಸಿ ಮರುಭೂಮಿಯಲ್ಲಿ ಚೀರಿ,
ಗದ್ದುಗೆಯ ಸುತ್ತ ಸುತ್ತಾಡಿ ಮತ್ತೆ ಅರಚುವುದು ರೋಷ ಕಾರಿ.

ತನ್ನ ತಣ್ಣಗಿನ ಹೊಳೆವ ಪರೆಯಿಂದ ಮೈಯ ತೊಳೆವ ಸರ್ಪ
ಯೆಲ್‌ಸಾಮನ್ನನ ಎಲುಬಿಗಂಟಿದ ಮೈಲಿಗೆಯ ಮಣ್ಣ ಕೊಡಹಿ;
ಅಸ್ಥಿಪಂಜರದ ತೋಳುಗೈ ಚಾಚಿ ಪ್ರೀತಿಯಾಕ್ಕಿ ಇನ್ನೂ.
ಅಪ್ಪುವನು ಈಗಲೂ ಅಸ್ಥಿಪಂಜರದಾ ರಾಜಕುವರಿಯನ್ನು.

ಸತ್ತು ಸುಣ್ಣಾದ ರಾಜಕುವರಿಯಾ ಕಿವಿಗಳಲ್ಲಿ ಸಾಮನ್
ಮೆಲ್ಲನುಸುರುವನು ನಲ್ಮೆಯಿಂದಲದೊ ಅಮರ ಪ್ರೀತಿಯನ್ನು:
ಸತ್ತು ಹಳತಾದ ಹೆಪ್ಪುಗಟ್ಟಿದಾ ತನ್ನ ತುಟಿಗಳಿಂದ,
ಅರಮನೆಯ ಮಧ್ಯೆ ಸುರಿಯುವನು ತನ್ನ ಬೆಳ್ದಿಂಗಳನ್ನು ಚಂದ್ರ.

ಎಲ್ಲಿ, ಎಲ್ಲಿ ಉತ್ತುತ್ತಿ ವೃಕ್ಷಗಳ ತೋಪು ಇಲ್ಲ ಇಲ್ಲ,
ಎಲ್ಲಿ ಎಲ್ಲಿ ಆ ರಾಜ್ಯ ವೈಭವವು ಶೂನ್ಯ ಶೂನ್ಯ—ಎಲ್ಲ
ಅತ್ತ ಇತ್ತ ಮರುಭೂಮಿಯುಸುಕ ಹರಡಿಹುದು ಗಾಳಿ ಸೊಲ್ಲ
ಎಲ್ಲಿಹುದೊ ಕಾಣೆ ತಾಡ್‌ಮೋರ್ ಅರಮನೆ ಭೀತಿಗ್ರಸ್ತ ಬಯಲ.

ಮರುಭೂಮಿಯುಸುಕಿನಾ ಹೃದಯದಲ್ಲಿ ಎದ್ದಿರುವುದೊಂದು ಗೋರಿ
ಸ್ತಂಭದಂತೆ, ಗೋಪುರದ ಹಾಗೆ ಏಕಾಂತವನ್ನು ಸೀಳಿ.
ದೂರ ಹೊಳೆವ ನಕ್ಷತ್ರ ಮಾತ್ರ ಹೇಳುವವು ಇಂಥ ಗಾಥ
ಯುಗದೊಡಲ ಸೀಳಿ ಧ್ವನಿಸುವುದು ಕೇಳು ಅಮರ ಪ್ರೇಮಗೀತ.

ದೂರದೂರದಾ ಕಾರವಾನಗಳು, ಪ್ರಯಾಣಿಕರು ಮಾತ್ರ
ದೇಶ-ದೇಶ ಸಂಚರಿಸುವವರು ಕತೆ ಹೇಳುವುದಕೆ ಪಾತ್ರ:
ಚಕಿತಗೊಂಡವರು ಸಾರಿಹೇಳುವರು ಪ್ರೇಮ ಹಿರಿಮೆಯನ್ನು
ಯೆಲ್–ಸಾಮನ್ನನ ಚಿರಂತನದ ಈ ಪ್ರೇಮವಿಜಯವನ್ನು.

ಸಂಪಾದನೆಯ ಸಿದ್ಧವೀರೇಶ್ವರದೇವರು ಸೇರಿಸಿದ

# ಶಿವಮಹಿಮಾಸ್ತೋತ್ರದ ವಚನ

ವೀರಣ್ಣ ರಾಜೂರ

## ಪ್ರಸ್ತಾವನೆ

ವಿಜಯನಗರದ ವೀರಶೈವ ಅರಸು ಪ್ರೌಢದೇವರಾಯನ ಕಾಲಕ್ಕೆ ವಚನ ಸಾಹಿತ್ಯದ ಪುನರುಜ್ಜೀವನ ಕಾರ್ಯ ತುಂಬ ತುರುಸಿನಿಂದ ಹಾಗೂ ವ್ಯವಸ್ಥಿತ ರೀತಿಯಿಂದ ನಡೆಯಿತು. ಕಲ್ಯಾಣದ ಕ್ರಾಂತಿಯಿಂದಾಗಿ ಚಲ್ಲವರಿದು ಹೋಗಿದ್ದ ಶಿವಶರಣರ ವಚನಗಳನ್ನು ಒಂದೆಡೆ ರಾಶಿಗೊಳಿಸುವುದು, ತಾತ್ವಿಕ ಹಿನ್ನೆಲೆಯಲ್ಲಿ ವಿಭಜಿಸುವುದು, ಸ್ಥಲಕಟ್ಟಿಗನುಸರಿಸಿ ಜೋಡಿಸಿ ಸಂಪಾದಿಸುವುದು, ಸೈದ್ಧಾಂತಿಕ ಟೀಕೆ–ಟಿಪ್ಪಣಿ, ವ್ಯಾಖ್ಯಾನ ಬರೆಯುವುದು ಇತ್ಯಾದಿ ಕೆಲಸ ಒಂದು ಚಳುವಳಿಯ ರೀತಿಯಲ್ಲಿ ನಡೆಯಿತು. ಶರಣರು ಪ್ರತಿಪಾದಿಸಿದ ಷಟ್‌ಸ್ಥಲ, ಮೂವತ್ತಾರುಸ್ಥಲ, ನೂರೆಂದುಸ್ಥಲ, ಇನ್ನೂರ ಹದಿನಾರುಸ್ಥಲ, ಮಿಶ್ರಸ್ಥಲಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅನೇಕ ಕೃತಿಗಳು ಸಿದ್ಧವಾದವು. ಜೊತೆಗೆ ಆಯಾ ಸಂಪಾದಕರ ದೃಷ್ಟಿ ಧೋರಣೆಗೆ ತಕ್ಕಂತೆ ಹೊಸ ಹೊಸ ಸ್ಥಲಕಟ್ಟಿನ ಕೃತಿಗಳೂ ಹುಟ್ಟಿಕೊಂಡವು. ಅಂಥ ಹೊಸ ಸ್ಥಲಯೋಜನೆಯನ್ನು ಹೊಂದಿದ ಒಂದು ವಿಶಿಷ್ಟ ಕೃತಿ, ಪ್ರಸ್ತುತ 'ಶಿವಮಹಿಮಾಸ್ತೋತ್ರದವಚನ'.

ಇದನ್ನು ಸಂಯೋಜಿಸಿದವನು (ಸೇರಿಸಿದವನು) ಸಂಪಾದನೆಯ ಸಿದ್ಧವೀರದೇವರು. ಈ ವಿಷಯ ಕೃತಿಯ ಪ್ರಾರಂಭದ "ಶ್ರೀ ವೀರಶೈವ ಷಟ್‌ಸ್ಥಲಾಚಾರ ಸಾರೋದ್ಧಾರ ಸಂಪಾದನೆಯ ಸಿದ್ಧವೀರೇಶ್ವರದೇವರು ಸೇರಿಸಿದ ಅನುಕ್ರಮದಿಂ ವೀರಸಂಗಯ್ಯನವರು* ಸಂಗ್ರಹಿಸಿದ ಶಿವಮಹಿಮಾಸ್ತೋತ್ರದವಚನ" ಎಂಬ ಗದ್ಯದಿಂದ ತಿಳಿದುಬರುತ್ತದೆ.

---

* ಇವನು ಸಿದ್ಧವೀರೇಶ್ವರದೇವರ ಶಿಷ್ಯನಾಗಿರಬೇಕು. ಇದುವರೆಗೆ ಎಲ್ಲೂ ಉಕ್ತವಾಗದ ಈ ಹೆಸರು, ಈ ಕೃತಿಯಿಂದ ಬೆಳಕಿಗೆ ಬಂದಿದೆ. ಇವನು ಕೃತಿಸಂಗ್ರಹಿಸುವ ಕಾರ್ಯವನ್ನು ಮಾತ್ರ ಮಾಡಿರುವುದರಿಂದ, ವಚನಗಳನ್ನು ಆಯ್ದು, ಸ್ಥಲಕಟ್ಟಿಗೆ ಅನ್ವಯಿಸಿ ಜೋಡಿಸಿ ನಿರೂಪಿಸಿದವ ಸಿದ್ಧವೀರೇಶ್ವರದೇವ. ಹೀಗಾಗಿ ಇದರ ಕರ್ತೃತ್ವ ಸಿದ್ಧವೀರೇಶ್ವರದೇವನಿಗೆ ಸಲ್ಲುತ್ತದೆ.

ಸಂಪಾದನೆಯ ಸಿದ್ಧವೀರೇಶ್ವರದೇವರಿಗೆ ಸಿದ್ಧವೀರೇಶ, ಸಿದ್ಧವೀರಣಾರ್ಯ, ಸಿದ್ಧವೀರಣ್ಣೊಡೆಯ, ಸಂಪಾದನೆಯ ಸಿದ್ಧವೀರಣಾಚಾರ್ಯ, ಸಂಪಾದನೆಯ ಸಿದ್ಧವೀರಣ, ಸಿದ್ಧವೀರಣದೇವ, ಸಿದ್ಧವೀರಾಖ್ಯ, ಶಿವಯೋಗೀಂದ್ರ ಎಂಬ ಪರ್ಯಾಯ ನಾಮಗಳೂ ಇವೆ. ವೀರಶೈವ ಷಟ್‌ಸ್ಥಲಾಚಾರ ಸಾರೋದ್ಧಾರ, ವೀರಮಾಹೇಶ್ವರಾಚಾರವರ್ಯ, ವೀರಶೈವ ಷಟ್‌ಸ್ಥಲಮಾರ್ಗ ಸ್ಥಾಪನಾಗ್ರಗಣ್ಯ, ಷಟ್‌ಸ್ಥಲ ಚಕ್ರವರ್ತಿ ಮುಂತಾದ ಬಿರುದುಗಳನ್ನು ಪಡೆದ ಇವನು ತೋಂಟದ ಸಿದ್ಧಲಿಂಗ ಶಿವಯೋಗಿಯ ಶಿಷ್ಯಪರಂಪರೆಗೆ ಸೇರಿದವನಾಗಿದ್ದಾನೆ. ಈ ಶಿಷ್ಯಪರಂಪರೆಯಲ್ಲಿ ಬರುವ ಸಂಪಾದನೆಯ ಪರ್ವತೇಶ ಸಿದ್ಧವೀರೇಶ್ವರದೇವರನ್ನು ಕುರಿತು "ಜರೆದು ಶೈವವ ವೀರಶೈವವಂ ಸ್ಥಾಪಿಸಿದಂ"[೧] ಎಂದೂ, ಸಂಪಾದನೆಯ ಗುರುಲಿಂಗದೇವ "ಅವರ (ಎಳಮಲೆಯ ಗುರುಶಾಂತದೇವರ) ಭಕ್ತಿಜ್ಞಾನವೈರಾಗ್ಯದ ಸಮರಸಾನಂದಭಾವಿ"[೨] ಎಂದೂ ಕೊಂಡಾಡಿದ್ದಾರೆ.

ತೋಂಟದ ಸಿದ್ಧಲಿಂಗೇಶ್ವರರ ಶಿಷ್ಯ-ಪ್ರಶಿಷ್ಯ ಪರಂಪರೆ ಕೆಳಗಿನಂತೆ ಸಾಗಿ ಬಂದಿದೆ:[೩]

ತೋಂಟದ ಸಿದ್ಧಲಿಂಗ
|
ಬೋಳಬಸವೇಶ್ವರ
|
ಹರತಾಳ ಚೆನ್ನಂಜೇದೇವ
|
ಎಳಮಲೆಯ ಗುರುಶಾಂತದೇವ
|
ಸಂಪಾದನೆಯ ಸಿದ್ಧವೀರೇಶ್ವರದೇವ

ಸಂಪಾದನೆಯ ಬೋಳಬಸವೇಶ್ವರ — ಸಂಪಾದನೆಯ ಗುರುಲಿಂಗದೇವ

ಸಂಪಾದನೆಯ ಚೆನ್ನಮಲ್ಲಿಕಾರ್ಜುನದೇವ — ಸಂಪಾದನೆಯ ಪರ್ವತೇಶ

---

೧. ಚತುರಾಚಾರ್ಯ ಪುರಾಣ (ಕಕಚ. ಸಂ. ೨ ಪು. ೪೮೬)

೨. ಶೀಲವಂತಯ್ಯನ ತ್ರಿವಿಧಿ ವ್ಯಾಖ್ಯಾನ (ಕಕಚ. ಸಂ. ೨. ಪು. ೪೨೨)

೩. ಸಂಪಾದನೆಯ ಪರ್ವತೇಶ ಮತ್ತು ಸಂಪಾದನೆಯ ಗುರುಲಿಂಗದೇವರು ಕೊಟ್ಟ ಶಿಷ್ಯ ಪರಂಪರೆಯನ್ನು ಆಧರಿಸಿ, ಇದನ್ನು ರಚಿಸಲಾಗಿದೆ.

ಸಂಪಾದನೆಯು ಸಿದ್ಧವೀರೇಶ್ವರದೇವನ ಕಾಲವನ್ನು ಕವಿಚರಿತೆಕಾರರು ಸು. ೧೬೦೦ ಎಂದು ನಿರ್ಧರಿಸಿದ್ದಾರೆ.[೪] ಇದಕ್ಕೆ ಅವರು ಇವನ ಗುರುವಾದ ಎಳಮಲೆಯ ಗುರುಶಾಂತದೇವನ ಕಾಲವನ್ನು ಆಧಾರವಾಗಿಟ್ಟುಕೊಂಡಿದ್ದಾರೆ. ಎಳಮಲೆಯ ಗುರು ಶಾಂತದೇವನ ಕಾಲಕ್ಕೆ ಆಧಾರ ತೋಂಟದ ಸಿದ್ಧಲಿಂಗೇಶ್ವರರ ಕಾಲ. ಕವಿಚರಿತೆ ಕಾರರು ತೋಂಟದ ಸಿದ್ಧಲಿಂಗೇಶ್ವರರ ಕಾಲ ಸು. ೧೪೭೦ ಎಂದು ಊಹಿಸಿದ್ದಾರೆ.[೫] ಆದರೆ ಈಗ ಅದು ಇತ್ತೀಚಿನ ಸಂಶೋಧನೆಯಿಂದ ೧೬೦೦ಕ್ಕೆ ಸರಿದುಬಂದಿದೆ.[೬] ಕಾರಣ ಇವರ ಕಾಲವನ್ನು ಆಧಾರವಾಗಿಟ್ಟುಕೊಂಡು ಊಹಿಸಿದ ಅವರ ಶಿಷ್ಯರ ಕಾಲಗಳೂ ಮುಂದೆಹೋಗಬೇಕಾಗುತ್ತದೆ. ಒಂದೊಂದು ತಲೆಮಾರಿಗೆ ೨೫ ವರ್ಷದ ಅಂತರದ ಮೇಲೆ ಲೆಕ್ಕಹಾಕಿದರೆ, ಸಿದ್ಧವೀರೇಶ್ವರದೇವರ ಕಾಲ ೧೭೦೦ ಕ್ಕೆ ಇಳಿದು ಬರುತ್ತದೆ.

ಸಿದ್ಧವೀರೇಶ್ವರದೇವರ ಹೆಸರಿನಲ್ಲಿ ಸದ್ಯ ೯ ಕೃತಿಗಳು ಲಭ್ಯವಾಗಿವೆ. ಅದರಲ್ಲಿ ಒಂದು ಸಂಸ್ಕೃತ; ಉಳಿದವು ಕನ್ನಡ. ಎಲ್ಲವೂ ಸ್ವರಚಿತ ಕೃತಿಗಳಾಗಿರದೆ, ಇತರರು ರಚಿಸಿದ ವಚನ, ಷಟ್ಪದಿ, ಸಾಂಗತ್ಯ, ತ್ರಿಪದಿಗಳನ್ನು ಆಯ್ದು ಸಂಪಾದಿಸಿದುವಾಗಿವೆ. ಅವು ಕೆಳಗಿನಂತಿವೆ:

೧. ಆಚರಣೆಯ ಸಂಬಂಧದ ವಚನಗಳು (ವ. ಸಂಖ್ಯೆ. ೨೭೫)
೨. ಲಿಂಗಸ್ತೋತ್ರದ ವಚನ (ವ. ಸಂಖ್ಯೆ ೧೦೮)
೩. ಮಿಶ್ರಸ್ತೋತ್ರ (ಸಾಂಗತ್ಯ. ೧೧೧)
೪. ಸರ್ವಜ್ಞಮೂರ್ತಿಯ ತ್ರಿವಿಧಿ (ತ್ರಿಪದಿ)
೫. ಪಾದಸ್ತೋತ್ರ (ಅಲಭ್ಯ)
೬. ಮಿಶ್ರಷಟ್ಪದಿಸ್ತೋತ್ರ (ಷಟ್ಪದಿ ೧೧೨)
೭. ಲಿಂಗಸ್ತೋತ್ರದ ಷಟ್ಪದ (ಷಟ್ಪದಿ ೧೧೧)
೮. ಅನಾದಿ ವೀರಶೈವ ಸಾರಸಂಗ್ರಹ (ಸಂಸ್ಕೃತ)
೯. ಸಿದ್ಧಲಿಂಗ ಸ್ತೋತ್ರದ ಷಟ್ಪದಿ (ಪ)

ಇವುಗಳ ಸಾಲಿಗೆ ಸೇರಿದ ಇತ್ತೀಚೆಗೆ ದೊರೆತ ಮತ್ತೊಂದು ಕೃತಿ 'ಶಿವಮಹಿಮಾ ಸ್ತೋತ್ರದ ವಚನ'. ಇದೊಂದು ಮಿಶ್ರಸ್ಥಲಕಟ್ಟಿನ ಕೃತಿ. ಶಿವನ ಮಹಿಮಾತಿಶ

---

೪. ಕರ್ನಾಟಕ ಕವಿಚರಿತೆ (ಸಂ. ೨) ಪು. ೨೭೫.
೫. ಅದೇ ಪು. ೫೭
೬. ಬಸವಣ್ಣನವರ ಟೀಕಿನ ವಚನ ಸಂಪುಟ-೨ : ಡಾ. ಎಂ. ಎಂ. ಕಲಬುರ್ಗಿ ಪ್ರಸ್ತಾವನೆ ಮತ್ತು ತೋಂಟದ ಸಿದ್ಧಲಿಂಗೇಶ್ವರರ ಕಾಲವಿಚಾರ—ಒಂದು ಮರುಪರಿಶೀಲನೆ : ಎಸ್. ಶಿವಣ್ಣ (ಶ್ರೀಕಂಠತೀರ್ಥ ಪು. ೩೦೮)

ಯುಗಳನ್ನು ವರ್ಣಿಸುವ ವಿವಿಧ ವಚನಕಾರರ ವಚನಗಳನ್ನು ಆಯ್ದು ಇಲ್ಲಿ ಬೇರೆ ಬೇರೆ ಸ್ಥಲಗಳಡಿಯಲ್ಲಿ ಜೋಡಿಸಲಾಗಿದೆ. ಕೃತಿ ಒಟ್ಟು ೨೦ ಸ್ಥಲಗಳಲ್ಲಿ ವಿಭಜನೆಗೊಂಡಿದೆ. ೨೧ ಜನ ವಚನಕಾರರ ೧೨೧ ವಚನಗಳು ಒಂದೊಂದು ಸ್ಥಲದಲ್ಲಿ ಹಂಚಿಕೊಂಡಿವೆ. ಸ್ಥಲಗಳು, ವಚನಸಂಖ್ಯೆ, ವಚನಕಾರರು, ಅವರ ಅಂಕಿತಗಳ ವಿವರ ಕೆಳಗಿನಂತಿದೆ:

| ಸ್ಥಲಗಳು | ವಚನಸಂಖ್ಯೆ |
|---|---|
| ೧. ಪರವಸ್ತುಭೇದ | ೫ |
| ೨. ಪರತತ್ವಲಕ್ಷಣ | ೭ |
| ೩. ಶಿವಮೂರ್ತಿನಿರ್ಣಯ | ೧೦ |
| ೪. ಶಿವಲೀಲಾ ಜಗದ್ವೈಭವ ಆಜ್ಞಾಕರ್ತೃತ್ವ | ೮ |
| ೫. ಸರ್ವಾತ್ಮಭೋಕ್ತೃಪ್ರೇರಕತ್ವ ಶಿವಾಧೀನ ಪರದೈವಾಧೀನ ನಿರಸನ | ೩ |
| ೬. ಪರದೈವ ತಿರಸ್ಕಾರ ಶಿವಜಗತ್ಪ್ರಭು ಪ್ರೇರಕತ್ವ | ೫ |
| ೭. ಇತರ ದೇವತಾಧಿಕಾರ ನಿರಸನ, ಶಿವಾಧಿಕಾರಪ್ರತಿಷ್ಠೆ | ೩ |
| ೮. ಶಿವಾಪರಾಧದೈವ ಶಿಕ್ಷ ಕರ್ತೃತ್ವ | ೫ |
| ೯. ಸಕಲ ದೈವತಾಬಲಾಧಿಕಶೌರ್ಯ ತೃಣೀಕೃತ ಶಿವಬಲಾಧಿಕಶೌರ್ಯಪ್ರತಿಜ್ಞೆ | ೯ |
| ೧೦. ಅಸಮಶಿವಂಗೆ ಸಮವೆಂಬ ಪರದೈವತಾ ವಿಡಂಬನ | ೯ |
| ೧೧. ಅಪ್ರತಿಮ ಶಿವಂಗೆ ಸರಿಮಿಗಿಲೆಂಬ ದೇವತಾ ತಿರಸ್ಕಾರ | ೪ |
| ೧೨. ಸಂಹಾರಲೀಲಾಭಾವ ಹರನಾಮ ಪ್ರತಿಷ್ಠೆ | ೯ |
| ೧೩. ಸಂಹಾರಲೀಲಾ ಶೃಂಗಾರಭಾವ | ೫ |
| ೧೪. ಸಂಹಾರಲೀಲಾ ನಾಟ್ಯಾಡಂಬರ | ೫ |
| ೧೫ ಸರ್ವೋತ್ಕೃಷ್ಟ ಶಿವಮಹಿಮಾತಿಶಯ ಪ್ರತಾಪ | ೭ |
| ೧೬. ಅನ್ಯದೈವ ಸೇವಾನಿರಸನ, ಶಿವಸೇವಾವಿಶೇಷ ಪ್ರತಿಷ್ಠೆ | ೨ |
| ೧೭. ಪರದೈವ ದಾತೃತ್ವಧಿಕಾರ ನಿರಸನ, ಶಿವದಾತೃತ್ವಧಿಕಾರ ಪ್ರತಿಷ್ಠೆ | ೩ |
| ೧೮. ಶಿವಭಕ್ತಿ, ಸಾರೋದ್ಧಾರ | ೫ |
| ೧೯. ಶಿವಭಕ್ತಿವಿಶೇಷ ಯಾಚನಾ ವಿಜ್ಞಾಪನ | ೪ |
| ೨೦. ನಿಜೋಪಾಸ್ಥೆ ಸಮರಸ ಸಂಬಂಧ | ೩ |

| ವಚನಕಾರರು | ಅಂಕಿತ | ವಚನಸಂಖ್ಯೆ |
|---|---|---|
| ೧. ಅಕ್ಕಮಹಾದೇವಿ | ಚೆನ್ನಮಲ್ಲಿಕಾರ್ಜುನಾ | ೧ |
| ೨. ಅಂಬಿಗರ ಚೌಡಯ್ಯ | ಅಂಬಿಗಚೌಡಯ್ಯ | ೧ |

| | | | |
|---|---|---|---|
| ೩. | ಅರಿವಿನಮಾರಿತಂದೆ | ಸದಾಶಿವಮೂರ್ತಿಲಿಂಗ | ೧ |
| ೪. | ಅಲ್ಲಮಪ್ರಭು | ಗುಹೇಶ್ವರ | ೨ |
| ೫. | ಆದಯ್ಯ | ಸೌರಾಷ್ಟ್ರ ಸೋಮೇಶ್ವರ | ೬ |
| ೬. | ಉರಿಲಿಂಗಪೆದ್ದಿ | ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ | ೭ |
| ೭. | ಗುಪ್ತಮಂಚಣ್ಣ | ನಾರಾಯಣಪ್ರಿಯ ರಾಮನಾಥಾ | ೨ |
| ೮. | ಚೆನ್ನಬಸವಣ್ಣ | ಕೂಡಲಚೆನ್ನಸಂಗಮದೇವ | ೫ |
| ೯. | ಜೇಡರದಾಸಿಮಯ್ಯ | ರಾಮನಾಥ | ೪ |
| ೧೦. | ತೆಲುಗೇಶ ಮಸಣಯ್ಯ | ತೆಲುಗೇಶ್ವರಾ | ೨ |
| ೧೧. | ತೋಂಟದ ಸಿದ್ಧಲಿಂಗ | ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ | ೩ |
| ೧೨. | ನಗೆಯಮಾರಿತಂದೆ | ಆತುರವೈರಿ ಮಾರೇಶ್ವರಾ | ೧ |
| ೧೩. | ಬಸವಣ್ಣ | ಕೂಡಲಸಂಗಮದೇವ | ೨೯ |
| ೧೪. | ಬಳ್ಳೇಶಮಲ್ಲಯ್ಯ | ಬಳ್ಳೇಶ್ವರಲಿಂಗ | ೧ |
| ೧೫. | ಬಿಬ್ಬಬಾಚಯ್ಯ | ಏಣಾಂಕಧರ ಸೋಮೇಶ್ವರಾ | ೧ |
| ೧೬. | ಸಕಳೇಶಮಾದರಸ | ಸಕಳೇಶ್ವರಾ | ೧ |
| ೧೭. | ಸ್ವತಂತ್ರಸಿದ್ಧಲಿಂಗೇಶ್ವರ | ನಿಜಗುರುಸ್ವತಂತ್ರ ಸಿದ್ಧಲಿಂಗೇಶ್ವರಾ | ೧೦ |
| ೧೮. | ಸಿದ್ಧರಾಮ | ಕಪಿಲಸಿದ್ಧ ಮಲ್ಲಿಕಾರ್ಜುನಾ | ೭ |
| ೧೯. | ಸೊಡ್ಡಳ ಬಾಚರಸ | ಸೊಡ್ಡಳಾ | ೧೮ |
| ೨೦. | ಸಂಗಮೇಶ ಅಪ್ಪಣ್ಣ | ಬಸವಪ್ರಿಯ ಕೂಡಲಚೆನ್ನಸಂಗಮದೇವಾ | ೮ |
| ೨೧. | ಹುಲಿಗೆರೆಯ ಸೋಮಣ್ಣ | ಹುಲಿಗೆರೆಯ ಸೋಮೇಶ | ೧ |
| | | | ೧೧೧ |

ಈ ಕೃತಿಯನ್ನು ಒಂದೇ ಹಸ್ತಪ್ರತಿಯಿಂದ ಸಂಪಾದಿಸಲಾಗಿದೆ. ಮೂಲದಲ್ಲಿ ವಚನ ಶುದ್ಧವಾಗಿದ್ದರೆ ಹಾಗೇ ಇಡಲಾಗಿದೆ. ಪಾಠ ಕೆಟ್ಟಿದ್ದರೆ ಅಂಥಲ್ಲಿ ಈಗಾಗಲೇ ಮುದ್ರಿತವಾದ ಕೃತಿಗಳಿಂದ ಅದನ್ನು ಸರಿಪಡಿಸಿ, ಅಶುದ್ಧಪಾಠವನ್ನು ಅಡಿಯಲ್ಲಿ ಕೊಡಲಾಗಿದೆ. ಹೆಚ್ಚಿನ ವಚನಗಳು ಬೇರೆ ಬೇರೆ ಸ್ಥಲಕಟ್ಟಿನ ಕೃತಿಗಳಲ್ಲಿ ಸೇರಿಕೊಂಡಿದ್ದರೆ, ಕೆಲವು ಪ್ರಥಮಬಾರಿಗೆ ಈ ಕೃತಿಯ ಮುಖಾಂತರ ಬೆಳಕಿಗೆ ಬರುತ್ತಲಿವೆ. ಇದರ ಪರಿಷ್ಕರಣಕ್ಕೆ ಆಕರವಾಗಿ ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಭಾಂಡಾರದ ೩೮೪ನೆಯ ಕ್ರಮಾಂಕದ ತಾಳೆಗರಿ ಪ್ರತಿಯನ್ನು ಬಳಸಿಕೊಳ್ಳಲಾಗಿದೆ.

# ಶಿವಮಹಿಮಾಸ್ತೋತ್ರದ ವಚನ

## ೧. ಪರವಸ್ತುಭೇದ :

೧

ನಿರವಯ ನಿರಾಮಯಂ ನಿರಾಕುಳಂ ನಿರ್ದ್ವಂದ್ವಂ ನಿರ್ಮಳ ನಿಜಸ್ವರೂಪಂ ನಿರ್ಭಾವ ನಿಷ್ಪುರುಷ ನಿರಂಜನ ನಿರಾಕಾರಂ ನಿರಾವರಣ ನಿರುಪಮ ನಿರ್ಗುಣ ನಿರಾಧಾರ ನಿರಾಲಂಬಂ ಸರ್ವಾಧಾರ ಸದಾಶಿವಂ. ಅತ್ಯತಿಷ್ಠದ್ದಶಾಂಗುಲಂ ನಿತ್ಯನಿಶ್ಚಿಂತಂ, ನಿರ್ಮಲ ನಿರ್ಮಾಯ ನಿರಾಳಕಂ. ಹರಹರಾ ಶಿವಶಿವಾ ಜಯ ಜಯತು ಶರಣ ಕರುಣಾಕರ ತ್ರಾಹಿಮಾಂ ಭಕ್ತವತ್ಸಲ ಮತ್ಪ್ರಾಣನಾಥ ಮಹಾಲಿಂಗಗುರು ಶಿವ ಸಿದ್ಧೇಶ್ವರಪ್ರಭುವೆ.

೨

ಶೂನ್ಯ ಮಹಾಶೂನ್ಯವಿಲ್ಲದಲ್ಲಿಂದತ್ತತ್ತ; ನಾದ ಬಿಂದು ಕಳೆಗಳಿಲ್ಲದಲ್ಲಿಂದತ್ತತ್ತ; ಸದಾಶಿವ ಈಶ್ವರ ವಿದ್ಯೇಶ್ವರರೆಂಬ ಗಣೇಶ್ವರರಿಲ್ಲದಲ್ಲಿಂದತ್ತತ್ತ; ಗಂಗೆವಾಳುಕ ಸಮಾರುದ್ರರುಗಳಿಲ್ಲದಲ್ಲಿಂದತ್ತತ್ತ; ಬ್ರಹ್ಮ ವಿಷ್ಣು ಇಂದ್ರಾದಿ ದಿಕ್ಪಾಲರಿಲ್ಲದಲ್ಲಿಂದತ್ತತ್ತ; ಕಾಲ ಕರ್ಮ ಪ್ರಳಯಂಗಳಿಲ್ಲದಲ್ಲಿಂದತ್ತತ್ತ; ಅತ್ತತ್ತ ಮುನ್ನ ನಿಮ್ಮ ನಿಜದಲ್ಲಿ ನೀವೇ ಇದ್ದಿರಯ್ಯಾ ನಿಜಗುರುಸ್ವತಂತ್ರ ಸಿದ್ಧಲಿಂಗೇಶ್ವರಾ.

೩

ಅಯ್ಯಾ ಏನೂ ಏನೂ ಇಲ್ಲದಂದು, ಆದಿ ಕುಳದುತ್ಪತ್ತಿಯಾಗದಂದು, ಚಂದ್ರಧರ ವೃಷಭವಾಹನರಿಲ್ಲದಂದು, ಕಾಲಸಂಹರ ತ್ರಿಪುರ ಸಂಹಾರವಿಲ್ಲದಂದು, ಕಾಮನ ಭಸ್ಮವ ಹೂಸದಂದು, ದೇವಿಯರಿಬ್ಬರು ಇಲ್ಲದಂದು, ಹರಿಯು ಹತ್ತಾವತಾರದಲ್ಲಿ ತಾರದಂದು, ಬ್ರಹ್ಮನ ಶಿರವನರಿಯದಂದು, ಇವಾವ ಲೀಲೆದೋರದಂದು, ನಿಮಗೆ ಅನಂತ ನಾಮಗಳಿಲ್ಲದಂದು, ಅಂದು ನಿಮ್ಮ ಹೆಸರೇನೆಂದು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ?

೪

ಕಾಮಿತವಿಲ್ಲ ಕಲ್ಪಿತವಿಲ್ಲ, ನಾಮ ಸೀಮೆ ಎಂಬುದಿಲ್ಲ; ಭಾವಿಸಲಿಲ್ಲ ಲಕ್ಷಿಸಲಿಲ್ಲ ರೂಹಿಸಲಿಲ್ಲ; ವಾಙ್ಮನಾತೀತವೆಂದಲ್ಲಿ ನೆನೆಯಲಿಲ್ಲ; ಅತ್ಯತಿಷ್ಠದ್ದಶಾಂಗುಲವೆಂದಲ್ಲಿ ಲಕ್ಷಿಸಲಿಲ್ಲ; ಸರ್ವಗೋಪ್ಯ ಮಹಾದೇವಾ ಎಂದಲ್ಲಿ ರೂಹಿಸಲಿಲ್ಲ; ಇಲ್ಲ ಇಲ್ಲ ಎನಲಿಲ್ಲದಲ್ಲಿ ಅಲ್ಲಿಯೇ ನಿರ್ಲೇಪವಾದ ಸೌರಾಷ್ಟ್ರ ಸೋಮೇಶ್ವರಲಿಂಗವ ಕಂಡು.

೫

ವೇದಾತೀತ, ಷಡುವರ್ಣರಹಿತ, ಅಷ್ಟತ್ರಿಂಶತ್ಕಳಾತೀತ, ವ್ಯೋಮಾತೀತ ಕೂಡಲಸಂಗಮದೇವ.

## ೨. ಪರತತ್ವ ಲಕ್ಷಣ :

೧

ಪರಶಿವನು ಸುಖಮಯನು ಸುಖಾತ್ಮನು ಸುಖಸ್ವರೂಪನು, ನಿಷ್ಕಳನು ನಿರುಪಮನು ಅಪ್ರಮೇಯನು ಅನಾಮಯನು ಪರಾತ್ಪರನು ಅತಿಸೂಕ್ಷ್ಮನು ಮಹಾಸ್ಥೂಲನು. ಅದೆಂತೆಂದಡೆ: "ಶಿವಂ ಪರಾತ್ಪರಂ ಸೂಕ್ಷ್ಮಂ ಸ್ಥೂಲಂ ಸರ್ವಗತಾವ್ಯಯಂ। ಅನಿಂದಿತನೌಪಮ್ಯಮಪ್ರಮೇಯಮನಾಮಯಂ। ಶುದ್ಧತ್ವಂ ಶಿವಮುದ್ದಿಷ್ಟಂ ಪರಮಾರ್ಥಹುರಾದರಾತ್॥" ಎಂದುದಾಗಿ, 'ಅಣೋರಣೀಯಾನ್ ಮಹತೋ ಮಹೀಯಾನ್'. [೧]ಇಂತಹ ಶಿವನ ಘನವನೇನೆಂಬೆನಯ್ಯಾ[೧] ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

೨

ವಿಶ್ವಜಿತನು ಧನುಜಿತನು ಸ್ವಜಿತನು; [೨]ಸರ್ವಜಿತನು[೨] ನೃಜಿತನು ಉರ್ವರಾಜಿತನು; ಅಶ್ವಜಿತನು ಗೋಜಿತನು ಅಜ್ಜಿತನು; ಸುಸಂವೇದ್ಯನು, ವೇದ ನಾದಾತೀತನು; ತುರೀಯ ಪರಮಾನಂದ ನಿರವಯ; ಸೂರ್ಯಕೋಟಿಪ್ರಭೆಯ ಬೆಳಗಿನ ಸಹಸ್ರಕಿರಣದಗ್ರ ಪಟಲದ ಬೆಳಗು ಕೂಡಲಸಂಗಯ್ಯ.

---

೧-೧ ಎಂದುದಾಗಿ, ಇಂತಹ ಶಿವನು ಭಕ್ತಕಾಯನಾಗಿ ಭಕ್ತವತ್ಸಲನಾಗಿಪ್ಪ ಕಾಣಿರೋ. 'ಅಕಾಯೋ ಭಕ್ತಕಾಯಂ ಸ್ತು ಮಮಕಾಯಸ್ತು ಭಕ್ತಿಮಾನ್। ಭಕ್ತಿಸಂಗ ವಿಶೇಷೇಣ ಅವಿಕಾರಂ ಶಿವಾತ್ಮನೋ:।' ಎಂದುದಾಗಿ, ಸದ್ಭಕ್ತಿಯುಳ್ಳ ಮಹಾಲಿಂಗವಂತಂಗೆ ಪ್ರಾಣವಾಗಿಪ್ಪ ಕಾಣಿರೋ. 'ಲಿಂಗಾಲಿಂಗೀ ಮಮಪ್ರಾಣೋ ಲಿಂಗಾಲಿಂಗೀ ಮಮಾತ್ಮಭೂಃ। ಲಿಂಗಾಲಿಂಗೀ ಮಮೋಜ್ಜೀವೀ ಲಿಂಗಾಲಿಂಗೀ ಚ ರಕ್ಷಕಃ॥' ಎಂದುದಾಗಿ, ಇಂತಹ ಭಕ್ತನ ಜಿಹ್ವೆಯಲ್ಲಿ ಆರೋಗಣೆಯ ಮಾಡಿ ಸುಖಿಸುವನು. 'ನೈವೇದ್ಯಂ ಪುರತೋನ್ಯಸ್ತಂ ದರ್ಶನಾತ್ ಸ್ವೀಕೃತಂ ಮಯಾ। ರಸಂ ಭಕ್ತಸ್ಯ ಜಿಹ್ವಾಯಾ ಅಶ್ನಾಮಿ ಕಮಲೋದ್ಭವ।' ಇಂತೆಂದುದಾಗಿ, ಈ ಪರಿ ಶಿವಂಗೆ ಸದ್ಭಕ್ತನೇ ದೇಹ, ಸದ್ಭಕ್ತನೇ ಪ್ರಾಣ, ಭಕ್ತನ ಜಿಹ್ವೆಯಲ್ಲಿ ಆರೋಗಿಸುವನು. ಇದು ಕಾರಣ, ಸದ್ಭಕ್ತಂಗೆ ಮಾಡಿದುದೆಲ್ಲವು ಶಿವಂಗೆ ಮಾಡಿದುದು, ಶಿವಂಗೆ ಪ್ರೀತಿ. ಇದು ಕಾರಣ ಸದ್ಭಕ್ತಂಗೆ ಶರಣೆಂದು ಅರ್ಚಿಸಿ ಪೂಜಿಸಿ ಆರೋಗಿಸಲಿತ್ತು ಪ್ರಸನ್ನತೆಯ ಪಡೆದು ಆ ಪ್ರಸಾದವಂ ಕೊಂಡು ಪರಿಣಾಮಿಯಪ್ಪುದು ಸುಖಿಯಪ್ಪುದು ಭಕ್ತನಪ್ಪುದಯ್ಯಾ (ಉಪವ. ಮಲ್ಲೇದೇವರು. ೩೩)

೨-೨ ಸೂತ್ರಾರ್ಜಿತನು (ಮೂ)

೮

ನಿಮ್ಮ ತೇಜವ ನೋಡಲೆಂದು, ಹೆಜ್ಜೆಸಾರಿ ನೋಡುತ್ತಿರಲು ಶತಕೋಟಿ ಸೂರ್ಯರು ಮೂಡಿದಂತೆ ಇಹುದಯ್ಯ. ಮಿಂಚಿನ ಬಳ್ಳಿಯ ಸಂಚವ ಕಂಡಡೆ ಎನಗಿದು ಸೋಜಿಗವಾಯಿತ್ತು. ಗುಹೇಶ್ವರಾ, ನೀನು ಜ್ಯೋತಿರ್ಲಿಂಗವಾದಡೆ ಉಪಮಿಸಿ ನೋಡಬಲ್ಲವರಿಲ್ಲಯ್ಯಾ.

೯

ಅನಂತಕೋಟಿ ಪ್ರಕಾಶವೆಂದು ಗಣಿಸಬಾರದ ಬ್ರಹ್ಮದ ಬೆಳಗು. ನೋಡಬಾರದ ಘನವು, ತೆರಹಿಲ್ಲದ ಬೆಳಗು. ತನ್ನಿಂದ ತಾನಾದ ಸ್ವಯಂಸುಖದ ನಿಜ ನಿತ್ಯ ನಿಜರೂಪು ನಿರಂಜನ ನಿಗಮಕ್ಕತೀತ ಹರಿಯಜರಿಗೆಟ್ಟದ ಜ್ಯೋತಿರ್ಮಯ ತಾನೇ ಲೀಲೆಗೆ ಮೂಲವಾದ. ಗುಹೇಶ್ವರಲಿಂಗ[1] ಘನಕ್ಕೆ ಘನವಾದುದು.

೧೦

ಚಿದ್ಬ್ರಹ್ಮಾಂಡವೆಂಬ ಭಾಂಡದಲ್ಲಿ ಅನಂತ ವಿಚಿತ್ರ ಭುವನಂಗಳಡಗಿಪ್ಪವು. 'ಆಲಯಂ ಸರ್ವಭೂತಾನಾಂ ಲಯಾನಾಂ ಲಿಂಗಮುಚ್ಯತೇ' ಎಂದುದಾಗಿ, ಅನಂತ ಕೋಟಿ ಬ್ರಹ್ಮಾಂಡಂಗಳು ನಿಮ್ಮ ರೋಮಕೂಪದೊಳಡಗಿಪ್ಪವೆಂದಡೆ ಬ್ರಹ್ಮ ವಿಷ್ಣು ರುದ್ರರಿವರೆಲ್ಲ ಒಂದು ಬ್ರಹ್ಮಾಂಡದೊಳಗಣ ಬಾಲಕರು. ಇವರೆತ್ತ ಬಲ್ಲರೊ ಲಿಂಗದ ನಿಜವ? ಅಪ್ರಮಾಣ ಅಗೋಚರ ಮಹಂತ ನಿಮ್ಮ ನಿಜದೊಳಗನಾರು ಬಲ್ಲರು ಸೌರಾಷ್ಟ್ರಸೋಮೇಶ್ವರಾ. ?

೧೧

ನಾದಬ್ರಹ್ಮ, ನಾದಾತೀತಬ್ರಹ್ಮ ; ಶಬ್ದಬ್ರಹ್ಮ, ನಿಶ್ಶಬ್ದಬ್ರಹ್ಮ ; ವಿಶ್ವಬ್ರಹ್ಮ, ಏಕಬ್ರಹ್ಮ, ಸರ್ವಂ ಖಲ್ವಿದಂ ಬ್ರಹ್ಮ. ಇದಕ್ಕೆ ಶ್ರುತಿ: "ನಾದಬ್ರಹ್ಮಮಯಂ ದೇವೋ ನಾದಾತೀತಂತು ತತ್ಪದಂ। ಶಬ್ದಬ್ರಹ್ಮಮಯಂ ಶರ್ವೋ ನಿಶ್ಶಬ್ದಬ್ರಹ್ಮಮೀರಿತಂ। ವಿಶ್ವಬ್ರಹ್ಮಮಿತಿ ಸ್ಮೃತಃ ಏಕ ಬ್ರಹ್ಮೇತಿ ಚ ಧ್ರುವಂ। ಸರ್ವಂತು ಖಲ್ವಿದಂ ಬ್ರಹ್ಮ ಸರ್ವಾತೀತೋ ಮಹಾಪ್ರಭುಃ॥" [2]ನಮ್ಮ ಸೌರಾಷ್ಟ್ರಸೋಮೇಶ್ವರಲಿಂಗವು.[2]

---

೧ + ದ (ಮೂ)

೨–೨ ಇಂತೆಂದುದಾಗಿ, ಒಂದಹುದು ಒಂದನಲ್ಲವೆಂದಡೆ, ಶಿರ ತನ್ನದು ದೇಹ ಮತ್ತೊಬ್ಬರದೆಂದಡೆ ಮೆಚ್ಚುವರೆ ಶಿವಜ್ಞಾನಿಗಳು ? ಸೌರಾಷ್ಟ್ರ ಸೋಮೇಶ್ವರಲಿಂಗವನಹುದಲ್ಲವೆಂಬರೆ ಬಲ್ಲವರು ? (ಸಪುವ-೨, ವ, ೨೩೫)

೧೨

ತಂದೆ–ತಾಯಿ ಸಂಯೋಗಸಂಭೂತನಲ್ಲದವನು. ಶ್ವೇತ, ಪೀತ, ಕಪೋತ, ಹರಿತ,ಕೃಷ್ಣ. ಮಾಂಜಿಷ್ಟವೆಂಬ ಷಡುವರ್ಣರಹಿತನು. ಆದಿ ಮಧ್ಯಾವಸಾನಂಗಳಿಲ್ಲದ ಸ್ವತಂತ್ರ ಮಹಿಮನು. .ವೇದವಿಂತುಟೆಂದು ರೂಹಿಸಬಾರದವನು. ನಾ ಬಲ್ಲೆನೆಂಬ ಹಿರಿಯರ ಒಗ್ಗೆಗೂ ಮಿಕ್ಕಿಪ್ಪ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

**೩. ಶಿವಮೂರ್ತಿನಿರ್ಣಯ :**

೧೩

ಮಾತಾಪಿತರುಗಳಿಲ್ಲದ, ಸಹೋದರ ಬಂಧುಗಳಿಲ್ಲದ, ಕುಲಗೋತ್ರಗಳಿಲ್ಲದ, ಜಾತ ನಲ್ಲದ ಅಜಾತನು ನೀವು ಕಂಡಯ್ಯಾ. ಉಪಮಿಸಬಾರದ ಉಪಮಾತೀತನು, ನಿಮ್ಮ ಹೆಸರುಗೊಂಬವರಾರು ಇಲ್ಲ ಕಂಡಯ್ಯಾ. ಅಸಮಾಕ್ಷ ಅಪ್ರತಿಮ ಶಿವನೆ, ನೀವು ನೆನೆಯಲಾಗಿ ನಾದಬಿಂದುಕಳೆಗಳಂಕುರಿತವಾದವು ಕಂಡಯ್ಯಾ. ಆಗ ನೀವು ಶಕ್ತಿ ವಾಸವಾದ ಕಾರಣ ನಾನಾಲೀಲೆಗೆ ಮೂಲಿಗನಾದೆ ಕಂಡಯ್ಯಾ. ನಿಮ್ಮ ಚರಿತ್ರ ನಿಮಗೆ ಸಹಜವಾಗಿದೆ. ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ.

೧೪

ಹುಟ್ಟು ಹೊಂದೆಂಬುದಿಲ್ಲದ ದೇವಾ ನಿಮ್ಮಿಂದ ನೀವೇ ಶೂನ್ಯದಲ್ಲಿ ನಿಂದು ಸ್ವಯಂಭುವಾದಿರಲ್ಲಾ! ಬೀಜವೃಕ್ಷದಂತೆ ಸಾಕಾರ ನಿರಾಕಾರವು ನೀವೆಯಹಾದಿರಲ್ಲಾ! ಸಕಲವೆಲ್ಲಕ್ಕೆ ಮೂಲಿಗರಾದಿರಲ್ಲಾ! ನಿಮ್ಮ ನಿಜವ ನೀವೇ ಅಱಿವುತ್ತಿದ್ದಿರಲ್ಲಾ! ನಿಮ್ಮ ಮಹಿಮೆಯ ನೀವೇ ಬಲ್ಲಿರಿ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ.

೧೫

ಎಲೆ ಅಯ್ಯಾ, ನೀವು ನಿರಾಕಾರವಾಗಿದ್ದಿರಿಯಾಗಿ ಆ ನಿರಾಕಾರವೆ ಪಂಚಮದಲ್ಲಿ ನಿಂದರೆ ನಾದ ತೋಱಿತ್ತು. ಆ ನಾದದಲ್ಲಿ ಬಿಂದು ತೋಱಿತ್ತು. ಆ ನಾದ ಬಿಂದುಗ ಳನೊಡದು ಮೂಡಿ ನಿರುಪಾಧಿಕಜ್ಯೋತಿಯಂತೆ ಸಕಲ ನಿಃಕಲ ನಿರೂಪಾದಿರಯ್ಯಾ. ರವಿಕೋಟಿತೇಜ ಪರಿಪೂರ್ಣ ಮೂಲಚೈತನ್ಯರೂಪು ನೀವು ಕಂಡಯ್ಯಾ. ಭೇದಿಸ ಬಾರದಭೇದ್ಯ ಸಾಧಿಸಬಾರದಸಾಧ್ಯವು ನೀವು ಕಂಡಯ್ಯಾ. ನಿಮ್ಮ ಸಹಜದ ನಿಲವ ನಾರು ಬಲ್ಲರು? ನಿಮ್ಮಿಂದ ನೀವೇ ರೂಪಾದಿರಯ್ಯಾ. ನಿಮ್ಮ ಪರಿಣಾಮಪದದಲ್ಲಿ ಒಂದನಂತಕಾಲವಿದ್ದಿರಯ್ಯಾ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ.

೧೬

ಸಗುಣನಾಗಬಲ್ಲ, ನಿರ್ಗುಣನಾಗಬಲ್ಲ, ಸಗುಣನಿರ್ಗುಣವೆರಡೊಂದಾಗಬಲ್ಲ. ಅಣುವಾಗಬಲ್ಲ,ಮಹತ್ತಾಗಬಲ್ಲ,ಅಣುಮಹತ್ತುಗಳೆರಡೊಂದಾಗಬಲ್ಲ. ಶಿವನಾಗಬಲ್ಲ,

ಜೀವನಾಗಬಲ್ಲ, ಶಿವಜೀವಂಗಳೆರಡೊಂದಾಗಬಲ್ಲ. ಸಕಲನಾಗಬಲ್ಲ, ನಿಃಕಲನಾಗಬಲ್ಲ, ಸಕಲನಿಃಕಲಗಳೆರಡೊಂದಾಗಬಲ್ಲ. ಶೂನ್ಯನಾಗಬಲ್ಲ ನಿಃಶೂನ್ಯನಾಗಬಲ್ಲ, ಶೂನ್ಯ ನಿಶ್ಶೂನ್ಯವೆರಡೊಂದಾಗಬಲ್ಲ, ಸೌರಾಷ್ಟ್ರ ಸೋಮೇಶ್ವರಲಿಂಗ ಸರ್ವನಾಗಬಲ್ಲ, ಓರ್ವನಾಗಬಲ್ಲ, ಸರ್ವನೋರ್ವವೆರಡೊಂದಾಗಬಲ್ಲ.

೧೭

ಸಕಲ ನಿಃಕಲವ ಕೂಡಿಕೊಂಡಿಪ್ಪೆಯಾಗಿ,ಸಕಲ ನೀನೆ ನಿಃಕಲ ನೀನೆ ಕಂಡಯ್ಯಾ. ವಿಶ್ವತೋಚಕ್ಷು ನೀನೇ ದೇವಾ, ವಿಶ್ವತೋ ಮುಖ ನೀನೇ ದೇವಾ, ವಿಶ್ವತೋ ಬಾಹು ನೀನೇ ದೇವಾ, ವಿಶ್ವತೋ ಪಾದ ನೀನೇ ದೇವಾ, ಕೂಡಲಸಂಗಮದೇವಾ.

೧೮

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ ವಾಙ್ಮನಸಾಗೋಚರವೆಂದು ಹೊಗಳುತ್ತೈದಾವೆ ಶ್ರುತಿವಾಕ್ಯಂಗಳು. "ಅತ್ಯತಿಷ್ಟದ್ದಶಾಂಗುಲಂ ಏಕಯೇವ ಪುರುಷಂ" ಎಂಬ ಶ್ರುತಿಯು. ಇಹಪರಕ್ಕೆ ಒಬ್ಬನೆ ಕರ್ತನಾಗಿ,ಅಧ್ಯಕ್ಷತನಕ್ಕೆ ಕಾರಣಿಕನಾಗಿ, ಸತ್ಯಜ್ಞಾನಾನಂದ ಮಹಾಮಹಿಮ ಶಿವಂಗೆ ನಮೋ ನಮೋ ಎಂಬೆನು ಕಾಣಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.*

೧೯

ಶಿವನು ಸರ್ವಗತನು, ಸಕಲಬ್ರಹ್ಮಾಂಡಗಳಿಗೆಲ್ಲ ಸಕಲನೆಂದು ಹೇಳಿತ್ತು ಶ್ರುತಿ. "ವಿಶ್ವತಶ್ಚಕ್ಷುರುತ ವಿಶ್ವತೋ ಮುಖೋ ವಿಶ್ವಾಧಿಕೋ ರುದ್ರೋ। ಮಹಾಋಷಿಸ್ಸರ್ವೋಹ್ಯೇಷ ರುದ್ರಸ್ತಸ್ಮೈ ರುದ್ರಾಯ ನಮೋ ಅಸ್ತು" ಎಂಬ ಶ್ರುತಿ,ಸಕಲ ಜೀವದ ಚೈತನ್ಯ ಶಿವನೆಂದು ಹೇಳಿತ್ತು. ಇಂತಪ್ಪ ಶಿವಂಗಿನ್ನು ಸರಿಯುಂಟೆ ? "ವಾಚಾತೀತಂ ಭಾವಾತೀತಂ ಪರಂ ಶಿವಂ। ಸರ್ವಶೂನ್ಯಂ ನಿರಾಕಾರಂ ನಿತ್ಯತ್ವಂ ಪರಮಂ ಪದಂ" ಇಂತಪ್ಪ ಪರಶಿವನ ಕಾಣವು ವೇದಂಗಳು. ವೇದಕ್ಕತೀತವಹಂಥಾ ಶಿವನ ಮಹಾತ್ಮೆಯ ಹೊಗಳಲಿಕೆ ಹರಿಬ್ರಹ್ಮಾದಿಗಳಿಗಳವಲ್ಲ. ಇಂತಪ್ಪ ಶಿವನ ಮಹಾಮಹಿಮೆಗೆ ನಮೋ ನಮೋ ಎಂಬೆನು ಕಾಣಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.*

೨೦

ಋಗ್ವೇದ ಕಾಣದಯ್ಯ ಸದ್ಯೋಜಾತನನು; ಯಜುರ್ವೇದ ಕಾಣದಯ್ಯ ವಾಮದೇವನನು; ಸಾಮವೇದ ಕಾಣದಯ್ಯ ತತ್ಪುರುಷನನು; ಅಥರ್ವಣವೇದ

---

* ಮುದ್ರಿತ ವಚನ ದೀರ್ಘವಾಗಿದೆ. (ನೋಡಿ, ಉಪೆವ. ೨೦೬)

* ಮುದ್ರಿತ ವಚನ ಇದರಿಂದ ಹಲವಾರು ಪಾಠಾಂತರಗಳನ್ನು ಒಳಗೊಂಡಿದೆ. (ನೋಡಿ ಉಪೆವ-೧)

ಕಾಣದಯ್ಯ ಅಘೋರನನು. ಅದೇಂತೆಂದೊಡೆ: "ಅತೀತಃ ಪಂಥಾನಂ ತವ ಚ ಮಹಿಮಾ ವಾಙ್ಮನಸಯೋಃ। ರತದ್ವ್ಯಾವೃತ್ತ್ಯೇಯಂ ಚಕಿತಮಭಿದತ್ತೇ ಶೃತಿರಪಿ। ಸಕಲಸ್ಯಸ್ತೋತವ್ಯಃ ಕತಿವಿಧಗುಣಃ ಕಸ್ಯ ವಿಷಯಃ। ಪದೇತ್ವರ್ವಾಚೀನೇ ಪತಿತ ನಮನಃ ಕಸ್ಯ ನ ವಚಃ॥" ಎಂದುದಾಗಿ, ಚತುರ್ಮುಖಬ್ರಹ್ಮಂಗೆ ಅಗಮ್ಯದೇವನಾದೆ ನೆಂದು ಅನಂತವೇದ ಕಾಣಲಱಿಯವು ಈಶಾನ್ಯ ಸಕಳೇಶ್ವರದೇವನ.

೨೧

ಜೀವಂಗೆ ಜೀವವಾದಾತನೆ, ಪರಮಾತ್ಮನು ಪರಬ್ರಹ್ಮವು. ಉಪಮೆಗೆ ಉಪಮಾತೀತ, ಭಾವಕ್ಕೆ ಭಾವಾತೀತ, ಅಱಿವಿಂಗೆ ಅಗೋಚರ ಅತರ್ಕ್ಯನಗಣಿತನ ಪ್ರಮೇಯು ನಿತ್ಯ ನಿರಂಜನ ನೀನೇ ಸೌರಾಷ್ಟ್ರ ಸೋಮೇಶ್ವರಾ.

೨೨

ಚಿತ್ತೆಂಬ ಬಿತ್ತು ಬಲಿದು, ಕಲೆಯಂಕುರಿಸಿದಲ್ಲಿ ನಿಮಗೆ ತ್ರಿವಿಧ ನಾಮ ಸೂಚನೆಯಾಯಿತ್ತು. ನಿಮ್ಮ ನಾಮದ ಬೆಂಬಳಿಯಲ್ಲಿ ನಿಮ್ಮ ಶಕ್ತಿ, ಇಚ್ಛಾ ಜ್ಞಾನ ಕ್ರಿಯಾಶಕ್ತಿರೂಪಾದ ನಾನಾ ಶಕ್ತಿಭೇದವಾಗಿ ನಿಂದು, ನಿಮಗೆ ಚಂದ್ರಧರಾದಿ ಸ್ಥಾಣು ಕಡೆಯಾದ ನಾನಾ ಲೀಲೆಗಳಾದವು. ಆ ನಿಮ್ಮಿಬ್ಬರಿಂದ ರುದ್ರಾವತಾರಗಳಾದವು. ನಿಮ್ಮ ಬೆಡಗಿನ ಲೀಲೆಯ ಬಲ್ಲವರಾರಯ್ಯ ನಿಜಗುರು ಸ್ವತಂತ್ರಸಿದ್ಧ ಲಿಂಗೇಶ್ವರಾ ?

### ೪. ಶಿವಲೀಲಾ ಜಗದ್ವೈಭವ ಆಜ್ಞಾ ಕರ್ತೃತ್ವ :

೨೩

ಓಂ ಪ್ರಥಮದಲ್ಲಿ ದಿವ್ಯ ನಿರಾಲಂಬಮೂರ್ತಿ ಜಗಹಿತಾರ್ಥವಾಗಿ ತತ್ತ್ವಾದಲ್ಲಿ, ಪಂಚಬ್ರಹ್ಮಸಾಕಾರಮೂರ್ತಿ ಲೀಲಾಸಂಭವವಾದಲ್ಲಿ, ಅಣುವಿಂಗೆ ಅಣು, ಮಹತ್ತಿಂಗೆ ಮಹತ್ತಾದಲ್ಲಿ, ಅಂಗಕರಂಡ ಆತ್ಮ ಸುಂಗಧ ನೀನಾದೆಯಲ್ಲಾ ಏಣಾಂಕಧರ ಸೋಮೇಶ್ವರಲಿಂಗಾ.

೨೪

ಸಚ್ಚಿದಾನಂದ ನಿತ್ಯಪರಿಪೂರ್ಣ ನಿಃಕಲ ಶಿವತತ್ವವು ತನ್ನಿಂದ ತಾನೆ ಅಖಂಡ ಪರಿಪೂರ್ಣ ಗೋಳಕಾಕಾರ ಪರಂಜ್ಯೋತಿಸ್ವರೂಪವಪ್ಪ ಮಹಾಲಿಂಗವಾಯಿತ್ತು ನೋಡಾ. ಆ ಲಿಂಗದ ಮಧ್ಯದಲ್ಲಿ ಬೀಜದಿಂದ ವೃಕ್ಷವು ಉದಯವಾಗುವ ಹಾಂಗೆ, ಆ ಲಿಂಗವು ತನ್ನ ಇಚ್ಛಾಶಕ್ತಿಯ ಕೂಡಿಕೊಂಡು ಜಗದುತ್ಪತ್ತಿ ಸ್ಥಿತಿ ಲಯಂಗಳಿಗೆ ಕರ್ತೃವಾಗಿ, ಸಕಲ ನಿಃಕಲವಾಗಿ, ಪಂಚಮುಖ ದಶಭುಜ ದಶಪಂಚನೇತ್ರ ದ್ವಿಪಾದ ತನುವೇಕ ಶುದ್ಧಸ್ಫಟಿಕವರ್ಣದ ಧಾತುವಿನಿಂದೊಪ್ಪುತ್ತಿರ್ಪುದು ಸದಾಶಿವಮೂರ್ತಿ.

ಆ ಸದಾಶಿವನ ಈಶಾನ್ಯಮುಖದಲ್ಲಿ ಆಕಾಶ ಪುಟ್ಟಿತ್ತು; ತತ್ಪುರುಷಮುಖದಲ್ಲಿ ವಾಯುಪುಟ್ಟಿತ್ತು; ಅಘೋರಮುಖದಲ್ಲಿ ಅಗ್ನಿ ಪುಟ್ಟಿತ್ತು; ವಾಮದೇವಮುಖದಲ್ಲಿ ಅಪ್ಪುಪುಟ್ಟಿತ್ತು; ಸದ್ಯೋಜಾತಮುಖದಲ್ಲಿ ಪೃಥ್ವಿಪುಟ್ಟಿತ್ತು; ಮನಸ್ಸಿನಲ್ಲಿ ಚಂದ್ರ, ಚಕ್ಷುವಿನಲ್ಲಿ ಸೂರ್ಯ, ಪರಮಾತ್ಮಸ್ವರೂಪವಪ್ಪ ಗೋಪ್ಯಮುಖದಲ್ಲಿ ಆತ್ಮ ಪುಟ್ಟಿದನು. ಇಂತು ಪೃಥ್ವಿ ಅಪ್ಪು ತೇಜ ವಾಯು ಆಕಾಶ ಚಂದ್ರ ಸೂರ್ಯ ಆತ್ಮನೆಂಬ ಶಿವನ ಅಷ್ಟತನುಮೂರ್ತಿಯೆ ಸಮಸ್ತ ಜಗತ್ತಾಯಿತ್ತು. ಆ ಜಗತ್ತಾವಾವವೆಂದಡೆ: ಚತುರ್ದಶಭುವನಂಗಳು, ಸಪ್ತಸಮುದ್ರಂಗಳು, ಸಪ್ತದ್ವೀಪಂಗಳು, ಸಪ್ತಕುಲಪರ್ವತಂಗಳು, ಸಮಸ್ತ ಗ್ರಹರಾಶಿ ತಾರಾಪಥಂಗಳಂ ಗರ್ಭೀಕರಿಸಿಕೊಂಡು ಬ್ರಹ್ಮಾಂಡವೆನಿಸಿತ್ತು. ಇದು ಜಗದುತ್ಪತ್ತ್ಯ ಕಾಣಾ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ.

೨೫

ರುದ್ರ ಮುಖದಲ್ಲಿ, ವಿಷ್ಣು ಭುಜದಲ್ಲಿ, ಜಂಘೆಯಲ್ಲಿ ಆ ಅಜ ಜನನವು, ಇಂದ್ರ ಪಾದದಲ್ಲಿ, ಚಂದ್ರ ಮನದಲ್ಲಿ, ಚಕ್ಷುವಿನಲ್ಲಿ ಸೂರ್ಯ ಜನನವು. ಮುಖದಲ್ಲಿ ಅಗ್ನಿಯು. ಘ್ರಾಣದಲ್ಲಿ ವಾಯು, ನಾಭಿಯಲ್ಲಿ ಅಂತರಿಕ್ಷವು. ಶಿರದಲುದಯವು ತೆತ್ತೀಸಕೋಟಿ ದೇವತೆಯರು, ಪಾದತಳದಲ್ಲಿ ಭೂಮಿ ಜನನವು. ಶ್ರೋತ್ರದಲ್ಲಿ ದಶದಿಕ್ಕುವು. ಜಗವ ನಿಕ್ಷೇಪಿಸಿದ ಕುಕ್ಷಿಯಲ್ಲಿ ಅಕ್ಷಯನಗಣಿತನು. ಸಾಸಿರ ತಲೆ, ಸಾಸಿರ ಕಣ್ಣು, ಸಾಸಿರ ಕೈ, ಸಾಸಿರ ಪಾದ. ಸಾಸಿರ ಸನ್ನಹಿತ ಕೂಡಲಸಂಗಯ್ಯ.

೨೬

ಜಲ ಕೂರ್ಮ ನಾಗ ಮೇದಿನಿ ಸಪ್ತಸಾಗರ ಅಜಾಂಡಭಾಂಡ ಹರಿವಿರಿಂಚಿಗಳು ನಿಮ್ಮ ಉದರದ ಕೊನೆಯ ಮೊನೆಯ ಪ್ರಾಣಿಗಳಯ್ಯ ಕೂಡಲಸಂಗಯ್ಯನ ಮಹಾಮನೆಯಲ್ಲಿ ಅಸ್ತಿಗ್ರಾಹಕನೆಂಬ ಗಣೇಶ್ವರನ ಇಚ್ಛಾಮಾತ್ರದಿಂದ ಜಗಜುಗವಯ್ಯಾ!

೨೭

ಧರಣಿಯ ಪಸರಿಸಿ, ಉರಗನಡಿಯಿಟ್ಟು, ಶರಧಿ[1]ಯೊಳಗಿಕ್ಕಿ ಎರದನೊಕ್ಕುಡಿತೆ ಉದಕವನು. ಹರಿಯಜಸುರರಿಗೆ ಪರಿಪರಿಯ ಲೋಕವ ಕೊಟ್ಟು ಅಜ[2]ಯದಂತಿರ್ದ ಕಾಣಾ ರಾಮನಾಥಾ.

೨೮

ಶರಧಿಯ ಮೇಲೆ ಧರೆಯ ಕರಗದಂತಿರಿಸಿದೆ. ಅಂಬರಕೆ ಅಡಿಗೆ ಬೋದಿಗೆಯಿಲ್ಲದಂತಿರಿಸಿದೆ. ಎಲೆ ಮೃಡನೆ ನೀನಿಲ್ಲದೆ, ಉಳಿದ ದೈವಂಗಳಿಗೆ ಅಹುದೆ ರಾಮನಾಥಾ ?

---

೧-೧ ಯಾ (ಮೂ) ೨. ಗ (ಮೂ).

೨೯

ಬಿಸುವ ಬಿರುಗಾಳಿ ಬೀಸಬಾರದು, ಬೀಸದಿರಬಾರದು. ಸುರಿವ ಮಳೆ ಸುರಿಯ ಬಾರದು, ಸುರಿಯದಿರಬಾರದು: ಉರಿವ ಕಿಚ್ಚು ಉರಿಯಬಾರದು, ಉರಿಯದಿರ ಬಾರದು. ಚಂದ್ರಸೂರ್ಯರು ನಿಂದ ಕಾಲದಲ್ಲಿಯೆ ಸಂದಿತ್ತು ಸೊಡ್ಡಳಾ ನಿಮ್ಮ ರಾಜತೇಜದ ಮಹಿಮೆ.

೩೦

ಅಯ್ಯಾ, ನಿಮ್ಮಾಜ್ಞೆಯಲ್ಲಿಪ್ಪವು ಕಂಡಾ ಸಕಲಲೋಕಂಗಳು. ಅಯ್ಯಾ, ನಿಮ್ಮಿಚ್ಛಾಮಾತ್ರದಲ್ಲಿಪ್ಪರು ಕಂಡಾ ಕೋಟಿ ಹರಿವಿರಿಂಚ್ಯಾದಿಗಳು. ಅಯ್ಯಾ, ನಿಮ್ಮ ಮೀಱಿದಾಧಿಕ್ಯವೊಂದೂ ಇಲ್ಲ. ಎಲೆ ಅಯ್ಯಾ, ಸಮಸ್ತ ಬ್ರಹ್ಮಾಂಡಂಗಳು ನಿಮ್ಮ ರೋಮಕೂಪದಲ್ಲಿಪ್ಪವು. ಉರುತರ ಶಿವನೆ, ನಿಮ್ಮನಱಿಯದೆ [೧]ಏಕೆ[೧] ಕೆಡುವರಯ್ಯ ನರರು, ಕಪಿಲಸಿದ್ಧಮಲ್ಲಿಕಾರ್ಜುನಾ ?

## ೫. ಸರ್ವಾತ್ಮಭೋಕ್ತೃಪ್ರೇರಕತ್ವಶಿವಾಧೀನ, ಪರದೈವಾಧೀನ ನಿರಸನ :

೩೧

ಧರೆಗಿರಿಯಂಬರವ, ಕರಕಿರಣಪ್ರಭೆಯು, ಸುರಿವ ಮಳೆ ಉರಿವಗ್ನಿ ಮಾರುತನಂ ಹರಿವಿರಿಂಚಿಗಳ, ಕುಬೇರ ಇಂದ್ರ ಚಂದ್ರಾಮರರನು ಹರನು ಪಡೆದಲ್ಲಿ ನೆರವಾದವರೊಳರೆ ? ಕರಕಷ್ಟ ಮಾನವರು ಪರಪುಟ್ಟದ ಮಱಿಯಂತೆ ಹರನ ದಾನ ವನುಂಡು ಬೇರೆ ಪರದೈವವುಂಟೆಂದು ಬೆಸಗೆಯ್ವರು. ಎರಡೇಳುಲೋಕಕ್ಕೆ ಪರ ದೈವವುಂಟೆಂದು ಬೆಸಗೆಯ್ವರು. ಎರಡೇಳುಲೋಕಕ್ಕೆ ಪರಮಪ್ರಭು ತೆಲುಗೇಶ್ವರ ನೊಬ್ಬನೆ ಎಂದೆನ್ನದವನ ಬಾಯಿ ಪಾಕುಳ.

೩೨

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುಳಿದು ಬೀಸುವ ವಾಯು ನಿಮ್ಮ ದಾನ. ಎತ್ತು ನಿಮ್ಮ ದಾನ, ಬಿತ್ತು ನಿಮ್ಮ ದಾನ, ಸುತ್ತಿ ಹರಿವ ಸಾಗರವೆಲ್ಲ ನಿಮ್ಮ ದಾನ. ಕಾಯ ನಿಮ್ಮ ದಾನ, ಜೀವ ನಿಮ್ಮ ದಾನ, ನಿಮ್ಮ ದಾನವನುಂಡು ಅನ್ಯರ ಪೊಗಳುವ ಕುನ್ನಿಗಳನೇನೆಂಬೆ ಹೇಳಾ ರಾಮನಾಥಾ ?

೩೩

ಆವಾವ ಘಟವ ಧರಿಸಿ ಜೀವಿಸುವ ಜೀವರಿಗೆ ಬೇಱೆ ಬೇಱೆ ಅವಕವಕೆ ತಕ್ಕ ವಿಷಯಜ್ಞಾನವ ಕೊಟ್ಟು ಸಲಹುವ ದೇವನ ಮಱೆದು, ಹುಲುದೈವವ ಹಿಡಿದು

೧-೧ ಯೆ (ಮೂ)

ಹುಲ್ಲಿಂದ ಕಡೆಯಾದರು ಅಕಟಕಟಾ! ಹೆತ್ತು ಮೊಲೆಯೂಡಿ ಸಲಹುವ ತಾಯ ಮಱದು ತೊತ್ತಿನ ಕಾಲಿಗೆ ಬೀಳುವ ವ್ಯರ್ಥಜೀವರ ನೋಡಾ. ನಿತ್ಯ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನೆಂಬ ಕರ್ತನನಱಯದೆ ಆ ಅನ್ಯದೈವವ ಭಜಿಸುವ ಕುನ್ನಿಗಳನೇನೆಂಬೆನು.

**೬. ಪರದೈವ ತಿರಸ್ಕಾರ; ಶಿವಜಗತ್ಪ್ರಭು ಪ್ರೇರಕತ್ವ :**

೩೪

ಹೊಱಗೆಂಟು ತನು ಒಳಗೆ ನಿರಂಜನ ಜ್ಯೋತಿ. ತೆಱಹಿಲ್ಲದಿಪ್ಪವನನೆಲ್ಲರು ಬಲ್ಲವರಲ್ಲ ಕೇಳಿರೆ! ಶಿವನಲ್ಲದೆ ಬೇಱೆ ದೈವವಿಲ್ಲ. ಹುಲಿಗೆಱೆಯ ವರದಸೋಮನಾಥನು ಏಕೋರುದ್ರನೆಂದುದು ಶ್ರುತಿ.

೩೫

ಅಷ್ಟತನುಮೂರ್ತಿ ಲಿಂಗವೆಂಬ ಕಷ್ಟದ ಮಾತ ಕೇಳಲಾಗದು. [ಅದೆಂತೆಂದೊಡೆ]: ಪೃಥ್ವಿಯಂತೆ ಕಠಿಣವುಳ್ಳಾತನೆ ? ಅಪ್ಪುವಿನಂತೆ ಓಟವುಳ್ಳಾತನೆ ? ತೇಜದಂತೆ ತೃಣಕಾಷ್ಠವಿಲ್ಲದಿದ್ದರೆ ನಂದುವಾತನೆ ? ವಾಯುವಿನಂತೆ ಚಲನೆಯುಳ್ಳಾತನೆ ? ಆಕಾಶದಂತೆ ಬಚ್ಚಬಱಯ ಬಯಲಾದಾತನೆ ? ಸೋಮಸೂರ್ಯರಂತೆ ದಿವಾರಾತ್ರಿಯ ನಡೆಸುವಾತನೆ ? ಆತ್ಮನಂತೆ ಜನನಮರಣವುಳ್ಳಾತನೆ ? ಇದು ಕಾರಣ ಕೂಡಲ ಚೆನ್ನಸಂಗಾ ನೀನು ನಿನ್ನಂತೆ, ಇವರೆಲ್ಲರೂ ನೀನಿರಿಸಿದಂತೆ.

೩೬

ವೇದಂಗಳು ದೈವವಾದಡೆ ಕುಕ್ಕುರ ಕುದುರೆಗಳಾಗಲೇಕೆ ? ಶಾಸ್ತ್ರಗಳು ದೈವವಾದಡೆ ಹೊರಜು ಕಣ್ಣಿಗಳಾಗಲೇಕೆ ? ಆಗಮಂಗಳು ದೈವವಾದಡೆ ಕೀಲು ಗುಣಿತೆಗಳಾಗಲೇಕೆ ? ಪುರಾಣಂಗಳು ದೈವವಾದಡೆ ಅಚ್ಚು ಪಹರಿಗಳಾಗಲೇಕೆ ? ಚಂದ್ರ ಸೂರ್ಯರು ದೈವವಾದಡೆ ಗಾಲಿಗಳಾಗಲೇಕೆ ? ಇವ ಹಿಡಿದಾಡಿ ಭಜಿಸಿದವರು ದೈವವಾದಡೆ ಪುಣ್ಯಪಾಪಕ್ಕೀಡಾಗಲೇಕೆ ? ಇದು ಕಾರಣ ವೇದಂಗಳು ದೈವವಲ್ಲ. ಶಾಸ್ತ್ರಂಗಳು ದೈವವಲ್ಲ, ಆಗಮಂಗಳು ದೈವವಲ್ಲ, ಪುರಾಣಂಗಳು ದೈವವಲ್ಲ, ಚಂದ್ರ ಸೂರ್ಯರು ದೈವವಲ್ಲ; ಕಪಿಲಸಿದ್ಧಮಲ್ಲಿಕಾರ್ಜುನಾ ನೀನೊಬ್ಬನೆ ದೈವ.

೩೭

ವೇದ ಸ್ವಯಂಭುವೆಂಬ ವಾದಿ ನೀ ಕೇಳೆಲವೋ. 'ಏಕೋದೇವ ರುದ್ರನ ದ್ವಿತೀಯ'ನೆಂದು ನಂಬೂದು ಕಾಣಿರಣ್ಣಾ. 'ಓಂ ದ್ಯಾವಾಭೂಮೀಜನಯನ್ ದೇವ[1] ಏಕೋದೇವ ಏಕೋಹಿ ರುದ್ರೋನದ್ವಿತೀಯಾಯ ತಸ್ಥುಃ'[1] ಎಂದ ನಂಬುವುದು ಕಾಣಿರಣ್ಣಾ. 'ಚಕಿತಮಭಿದತ್ತೇ' ಎಂದು ಶ್ರುತಿ ಸಾರುತ್ತೈದಾವೆ. ಜಗದ ಕರ್ತ ಕೂಡಲಸಂಗಮದೇವನೊಬ್ಬನೆ ಕಾಣಿರಣ್ಣಾ.

---

೧-೧ ಏಕಏವಂಎುದ್ರೋನದ್ವಿತೀಯ (ಮೂ)

೩೮

ಹಲವು ದೇವರುಗಳ ಭಜಿಸಿ ಹೊಲಬುದಪ್ಪಿ ಹೋದರೆಲ್ಲ. ದೇವರು ದೇವರೆಂದೇನು ? ಒವ್ಮೊಬಿ ದೇವರೆ ? ವಿಶ್ವಾಧಿಪತಿ ಶಿವನೊಬ್ಬನೆ ದೇವನಲ್ಲದೆ ಉಳಿದ ದೇವರೆಲ್ಲ ದೇವರೆ ? ಬ್ರಹ್ಮದೇವರೆಂಬಿರೆ, ಬ್ರಹ್ಮನ ಶಿರವ ಹರ ಚಿವುಟಿದ. ವಿಷ್ಣು ದೇವರೆಂಬಿರೆ, ವಿಷ್ಣು ಹತ್ತಾವತಾರದಲ್ಲಿ ಹರನಿಂದ ಹತಿಸಿಕೊಂಡ. ಇಂದ್ರ ದೇವರೆಂಬಿರೆ, ಇಂದ್ರನ ಮೈಯೆಲ್ಲ ಭಗವಾಗಿ ನಿಂದೆಗೊಳಗಾದ. ಚಂದ್ರ ದೇವ ರೇಬಿರೆ, ಚಂದ್ರ ಕುಂದ ಹೆಚ್ಚತಾಳಿ ಕ್ಷಣಿಕನಾದ. ಸೂರ್ಯ ದೇವರೆಂಬಿರೆ, ಸೂರ್ಯ ಕುಷ್ಠ ವ್ಯಾಧಿಯಿಂದ ಭ್ರಷ್ಟನಾದ. ಇನ್ನುಳಿದ ದೇವತೆಗಳು ಭಂಗಬಟ್ಟುದಕ್ಕೆ ಕಡೆಯಿಲ್ಲ. ಸರ್ವದೇವ "ಪಿತಾ ಶಂಭುಃ ಭರ್ಗೋದೇವಸ್ಯ ಧೀಮಹಿ" ಎಂದುದಾಗಿ, ಸರ್ವ ದೇವರುಗಳ ಉತ್ಪತ್ತಿ ಸ್ಥಿತಿ ಲಯಂಗಳ ಮಾಡುವ ಕರ್ತ ಶಿವನೊಬ್ಬನೆ ದೇವನೆಂದು ನುಡಿದೆನು ನಡೆದೆನು, ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲದೆ ಇಲ್ಲವೆಂದು.

**೭. ಇತರ ದೇವತಾಧಿಕಾರ ನಿರಸನ; ಶಿವಾಧಿಕಾರ ಪ್ರತಿಷ್ಠೆ :**

೩೯

ಇಬ್ಬರು ಮೂವರು ದೇವರೆಂದು ತಬ್ಬಿಬ್ಬುಗೊಂಡು ನುಡಿಯಬೇಡ, ಒಬ್ಬನೇ ದೇವ ಕಾಣಿರಣ್ಣಾ. ಅದೆಂತೆಂದಡೆ : "ಸರ್ವಸ್ಮಾದಧಿಕೋ ರುದ್ರಃ ಪರಮಾತ್ಮಾ ಸದಾಶಿವಃ। ಇತಿ ಯಸ್ಯ ನಿಶ್ಚಿತಾ ಧೀಃ ಸ ವೈ ಮಾಹೇಶ್ವರ ಸ್ಮೃತಃ॥" ಎಂದವಾಗ ಮಂಗಳು. ಶಿವನೇಕೋದೇವನೆಂದು ಸಾಱುತ್ತಿವೆ ಶ್ರುತಿ ಪುರಾಣಂಗಳು. ಇದು ಕಾರಣ ಶಿವನಲ್ಲದೆ ದೈವವಿಲ್ಲೆಂದಱಿದ ಮಾಹೇಶ್ವರನ ಹೃದಯವೆ ವಾಸವಾಗಿರ್ಪ ನಮ್ಮ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು.

೪೦

ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ; ಒಬ್ಬನೆ ಕಾಣಿರೋ; ಇಬ್ಬರೆಂಬುದು ಹುಸಿ ನೋಡಾ! ಕೂಡಲಸಂಗಮದೇವನಲ್ಲದಿಲ್ಲೆಂದಿತ್ತು ವೇದ.

೪೧

ಹುಟ್ಟಿಸುವಾತ ಬ್ರಹ್ಮನೆಂಬರು, ರಕ್ಷಿಸುವಾತ ವಿಷ್ಣುವೆಂಬರು ನೋಡಾ. ಬ್ರಹ್ಮ ತನ್ನ ಸಿರವನ್ನೇಕೆ ಹುಟ್ಟಿಸಲಾಱ ? ವಿಷ್ಣು ತನ್ನ ಮಗನನ್ನೇಕೆ ರಕ್ಷಿಸಲಾಱ ? ದುಷ್ಟ ನಿಗ್ರಹ ಶಿಷ್ಟ[೧]ಪರಿ[೧]ಪಾಲಕ ನಮ್ಮ ಕೂಡಲಸಂಗಮದೇವ.

---

೧-೧ ಪ್ರತಿ (ಮಾ)

## ೮. ಶಿವಾಪರಂಆಥದೈವ ಶಿಕ್ಷ ಕರ್ತೃತ್ವ :

೪೨

ಎರಡ ನುಡಿದ ವಿಷ್ಣುವೇನಾದ ? ಎರಡ ನುಡಿದ ಬ್ರಹ್ಮನೇನಾದ ? ಎರಡ ನುಡಿದ ಇಂದ್ರನೇನಾದ ? ಎರಡ ನುಡಿದ ದಕ್ಷನೇನಾದ ? ಎರಡ ನುಡಿದ ವ್ಯಾಸನೇನಾದನೆಂದು, ಇವರುಗಳು ನುಡಿದ ಪರಿಯನು. ಅವರ ಪರಿಯನು ವಿಚಾರಿಸಿ ನೋಡಿಡಡೆ—ಶಿವನೇ ಕರ್ತನೆಂದು ನುಡಿದು, ಮರಳಿ 'ಅಹಂ ಕರ್ತಾ' ಎಂದು ನುಡಿದು ಶಾಸ್ತಿಗೊಳಗಾದರು; ಮಾನಹಾನಿಯಾದರು ನೋಡಿರೆ! ವಿಶ್ವವೆಲ್ಲ ಪಶುವು, ಶಿವನೊಬ್ಬನೆ ಪತಿ; ಸರ್ವ[ವೆಲ್ಲವೂ] ಶಕ್ತಿ ರೂಪು, ಶಿವನೊಬ್ಬನೆ ಪುರುಷನು. ಸರ್ವರೂ ಭೃತ್ಯರು [೧]ಶಿವನೊಬ್ಬನೆ[೧] ಸೃಷ್ಟಿಕರ್ತನೆಂದಱಿದು, ಮನ ವಚನ ಒಂದಾಗಿ ನೆನವುತ್ತಿಪ್ಪವರು ಶಿವನೊಂದಾದರಯ್ಯ. ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರದೇವನೊಬ್ಬನೆ ಎರಡಿಲ್ಲ.*

೪೩

ಸೃಷ್ಟಿಪ್ರತಿಪಾಲಕ ಪ್ರತಿಕೂಲವಾದೊಡೆ ಸಿಟ್ಟುಗುಟ್ಟಿ ಚಿವುಟನೆ ಬ್ರಹ್ಮನ ಶಿರವನು ? ಅವನಿಗೊಡೆಯ ನಾನೆಂದೊಡೆ ಬಂಧನದಲ್ಲಿರಿಸನೆ ಬಂಟನಿಂದ ಬಲಿಯನು ? ಜಗವಂದ್ಯವಿರಹಿತನಾಗಿ ಭೂಮಿಯನಳದುಕೊಂಡಡೆ ಕಾಲಬಿದ್ದು ಕಾಲಲ್ಲಿರಿಸನೆ ಹರಿಯನು ? ಹುಟ್ಟಿಸುವನಯ್ಯಾ ಕುಸಾಕುಳಿಯೊಳಗೆ ದುರ್ಜೀವಿಗಳ ಮಾಡಿ ಕತ್ತಿ ಕೌಚಿಯಲ್ಲಿ ಕುಸುಱಿದಱಿಸಿಕೊಂಡು ನೆಟ್ಟನೆ ಶಿವನ ದೃಷ್ಟವನಱಿಯದೆ ಹುಟ್ಟುಗೆಟ್ಟು ಬಟ್ಟಬಯಲಲ್ಲಿ ಹೋದರು, ಸೃಷ್ಟಿಗೀಶ್ವರ ಕರ್ತ ಸೊಡ್ಡಳನನಱಿಯದನ್ಯಾಯಿಗಳು.

೪೪

ಶಿವಂಗೆ ತಪ್ಪಿದ ಕಾಲ ಭಸ್ಮವಾದುದನಱಿಯಾ ? ಶಿವಂಗೆ ತಪ್ಪಿದ ಕಾಮನುರಿದುದನಱಿಯಾ ? ಶಿವಂಗೆ ತಪ್ಪಿದ ಬ್ರಹ್ಮನ ಶಿರ ಹೋದುದನಱಿಯಾ ? ಚೆನ್ನಮಲ್ಲಿಕಾರ್ಜುನನ ಪಾದಕ್ಕೆ ತಪ್ಪಿದಡೆ, ಭವಘೋರನರಕವೆಂದಱಿಯಾ, ಮರುಳೆ ?

೪೫

ಸಿಮ್ಮ ತಾಯಿತನವನೊಲ್ಲದವರು ನಾಯಿಬಾರದ ಭವವ ಬಂದರು. ಒಬ್ಬ ಹೆಬ್ಬಕ್ಕಿಯಾದ, ಒಬ್ಬ ಸೂಕರನಾದ, ಒಬ್ಬ ಬೆರಳನೆತ್ತಿ ಕಟ್ಟುವಡೆದ. ಒಬ್ಬರೊಬ್ಬರ ವಿಧಿಯನೊಮ್ಮಿಂಗೆ ಕೈಕೊಳ್ಳ ಉರ್ವೀಶ ಸೊಡ್ಡಳ ಭಾಪು ಭಾಪುರೆ.

---

೧_೧ ಶಿವನೆ (ಮೂ)

* ಪ್ರಕಟಿತ ವಚನ ದೀರ್ಘವಾಗಿದೆ (ನೋಡಿ ಉಪವ. ೭೬)

೪೬

ಅಮೃತಮತಿ ಸೋಮಶಂಭುವಿಂಗೆ ಹುಟ್ಟಿದಾತ ಇಂದ್ರ; ಸತ್ಯಋಷಿ ಜೇಷ್ಠಾದೇವಿಗೆ ಹುಟ್ಟಿದಾತ ಬ್ರಹ್ಮ; ವಸುದೇವ ದೇವಕಿಗೆ ಹುಟ್ಟಿದಾತ ವಿಷ್ಣು; ನಾಭಿರಾಜ ಮರುತಾದೇವಿಗೆ ಹುಟ್ಟಿದಾತನರುಹ ಇವರೆಲ್ಲರೂ ಯೋನಿಜರೆಂಬುದ ತ್ರೈಜಗ ಬಲ್ಲುದು. ಉತ್ಪತ್ತಿ ಸ್ಥಿತಿ ಪ್ರಳಯಕ್ಕೆ ಹೊರಗಾದ ಕೂಡಲಸಂಗಮದೇವಂಗೆ ಮಾತಾಪಿತರುಳ್ಳರೆ ಹೇಳಿರೋ!

## ೯. ಸಕಲದೈವತಾ ಬಲಾಧಿಕ ಶೌರ್ಯತೃಣೀಕೃತ; ಶಿವಬಲಾಧಿಕ ಶೌರ್ಯ ಪ್ರತಿಜ್ಞೆ :

೪೭

ವಿಷ್ಣು ಬಲ್ಲಿದನೆಂಬೆನೆ ? ದಶಾವತಾರದಲ್ಲಿ ಭಂಗಬಟ್ಟುದಕ್ಕೆ ಕಡೆಯಿಲ್ಲ. ಬ್ರಹ್ಮ ಬಲ್ಲಿದನೆಂಬೆನೆ ? ಶಿರ ಹೋಗಿ ನಾನಾ ವಿಧಿಯಾದ. ವೇದ ಬಲ್ಲಿತ್ತೆಂಬೆನೆ ? ನಾನಾ ಮುಖದಲ್ಲಿ ಸ್ತುತಿಯಿಸಿತ್ತಲ್ಲದೆ ಲಿಂಗದ ನಿಲುಕಡೆಯ ಕಾಣದು. ಶಾಸ್ತ್ರ ಬಲ್ಲಿತ್ತೆಂಬೆನೆ? ಶಬ್ದಕ್ರೀ. ಪುರಾಣ ಬಲ್ಲಿತ್ತೆಂಬೆನೆ ? ಪೂರ್ವಕ್ರೀ. ಆಗಮ ಬಲ್ಲಿತ್ತೆಂಬೆನೆ ? ವಾಯ ಹೊಂದಿತ್ತು. ಇದು ಕಾರಣ ಕೂಡಲಸಂಗಯ್ಯನೇ ನಿತ್ಯ: ಉಳಿದ ದೈವವೆಲ್ಲ ಅನಿತ್ಯ ಕಾಣಿಭೋ.

೪೮

ಬಲ್ಲಿದ ಬಲ್ಲಿದರೆಂಬವರು ತಮ್ಮಿಂದ ತಾವಾದ ಸ್ವತಂತ್ರಶೀಲರೆ ? ಅಲ್ಲ. ಬ್ರಹ್ಮ ಬಲ್ಲಿದನೆಂದರೆ ಶಿರ ಹೋಗಲದೇನು ? ಹರಿ ಬಲ್ಲಿದನೆಂದರೆ ಹಲವು ಭವಕ್ಕೆ ಬರಲದೇನು ? ಅಂಧಕಾಸುರ ಬಲ್ಲಿದನೆಂದರೆ ಹರನ ಅಂಗಾಲಕೆಳಗೆ ಇರಲಬೇನು ? ದಕ್ಷ ಬಲ್ಲಿದನೆಂದರೆ ಹೋಮಕ್ಕೆ ಗುರಿಯಾಗಲದೇನು ? ಕೋಪಾಗ್ನಿ ರುದ್ರನೆಂಬ ಜಮದಗ್ನಿ ಬಲ್ಲಿದನೆಂದರೆ ಆತನ ತಲೆಯುನರಿಯುಲದೇನು ? ಪರಶುರಾಮ ಬಲ್ಲಿದನೆಂದರೆ ತನ್ನ ಬಿಲ್ಲ ಬಿಟ್ಟು ಹೋಗಲದೇನು ? ಸಹಸ್ರಾರ್ಜುನ ಬಲ್ಲಿದನೆಂದರೆ ತೋಳುತುಂಡಿಸಲದೇನು ? ಅಂಬುಧಿ ಬಲ್ಲಿತ್ತೆಂದರೆ ಆಪೋಶನಕ್ಕೊಳಗಾಗಲದೇನು ? ಅಗಸ್ತ್ಯ ಬಲ್ಲಿದನೆಂದರೆ ಅರಣ್ಯದೊಳಗೆ ತಪಸ್ಯಮಾಡಲದೇನು ? ನಳರಾಜ ಬಲ್ಲಿದನೆಂದರೆ ತನ್ನ ಸತಿಯನಿಕ್ಕಿಟ್ಟು ಹೋಗಲದೇನು ? ಕೃಷ್ಣ ಬಲ್ಲಿದನೆಂದರೆ, ಬೇಡನ ಅಂಬು ಅಂಗಾಲತಾಗಲದೇನು ? ರವಿಶಶಿಗಳು ಬಲ್ಲಿದರೆಂದರೆ ಸ್ಮಶಾನವ ಕಾಯಲದೇನು ? ಹರನೆ ನೀ ಮಾಡಲಿಕೆ ಬಲ್ಲಿದರು, ನೀ ಮಾಡಲಿಕೆ ವೀರರು, ನೀ ಮಾಡಲಿಕೆ ಧೀರರು, ನೀ ಮಾಡಲಿಕೆ ರುದ್ರರು; ನೀ ಮಾಡಲಿಕೆ ದೇವರ್ಕಳು. ಅಮೂರ್ತಿ, ಮೂರ್ತಿ, ನಿರಾಕಾರ ನಿರ್ಮಾಯ. ಇಂತು ಬಲ್ಲಿದರೆಂಬವರ ಇನ್ನಾರುವ ಕಾಣೆ, ನಿಮ್ಮ ತಪ್ಪಿಸಿ ಕೂಡಲಚೆನ್ನಸಂಗಮದೇವಾ.

೪೯

ಸೃಷ್ಟಿಯ ಕಲ್ಪಿಸುವ ಕರ್ತ ಬ್ರಹ್ಮಂಗೆ ಶತಾಯುಃವೆಂಬ ಗಣಿತವಿದೇನು ? ಸಕಲ ಜೀವಿಗಳ ರಕ್ಷಿಸುವ ವಿಷ್ಣುವಿಂಗೆ ದಶಾವತಾರವೆಂಬ ಗಣಿತವಿದೇನು ? ಕೋಪಾಗ್ನಿ ರುದ್ರನೆಂಬ ಜಮದಗ್ನಿಯ ತಲೆಯನರಿದವರಾರು ? ಮೂವತ್ತುಮೂರುಕೋಟಿ ದೇವರ್ಕಳನಾಳಿದ ರಾವಣಂಗೆ ಅಳಿವೆಂಬುದೇನು ? ಹರಸಿ ಲಕ್ಷವಿಪ್ರರು ನಿಚ್ಚ ಮಂತ್ರಾಕ್ಷತೆಯನಿಡುತ್ತಿರಲು ದುರ್ಯೋಧನಂಗೆ ಸಾವೇಂಬುದೇನು ? ಹರನೆ ನೀ ಹರಸಿ ಪಟ್ಟವ ಕಟ್ಟಿಕೊಟ್ಟಂತಲ್ಲದೆ ಇಲ್ಲ. ಎಲ್ಲರಿಗೆಯೂ ಮೂಱು ಲೋಕದೊಳಗೆ ನೀನೊಬ್ಬನೆ ಒಡೆಯನೆಂದನಂಬಿಗ ಚೌಡಯ್ಯ.

೫೦

ವಿಶ್ವವೆಲ್ಲ ಪಶುವು ಶಿವನೊಬ್ಬನೆ ಪತಿ. ಬೇರೊಬ್ಬ ಪತಿಯಿಲ್ಲ, ಇದು ಸತ್ಯವಿದು ಸತ್ಯ. ನಮ್ಮ ಹುಲಿಗೆಱೆಯ ವರದಸೋಮನಾಥನಲ್ಲದೆ ಬೇಱೊಬ್ಬರುಂಟಾದರೆ ತೋಱಿಕೊಡಿ ಭೋ ನೀವು ಬಲ್ಲರೆ.

೫೧

ಯುಗಜುಗಪ್ರಳಯವಹಂದೂ ಕಾಣೆನಿಂದೂ ಕಾಣೆ! ಧಿಗಿಲುಭುಗಿಲೆಂದುರಿವಂದೂಕಾಣೆನಿಂದೂ ಕಾಣೆ! ಕೂಡಲಸಂಗಮದೇವನಲ್ಲದೆ ತಲೆದೋಱುವ ದೈವಂಗಳ ನಂದೂ ಕಾಣೆನಿಂದೂ ಕಾಣೆ!

೫೨

ನಾರಾಯಣನೆಂಬವನ ಕಾಣೆ, ಗೀರಾಯಣನೆಂಬವನ ಕಾಣೆ ! ಬೊಮ್ಮನೆಂಬವನ ಕಾಣೆ, ಗಿಮ್ಮನೆಂಬವನ ಕಾಣೆ ! ವಿಷ[೧]ವಟ್ಟಿ[೧]ಸುಡುವಲ್ಲಿ, ವೀರಭದ್ರ [೨]ಕೊಲು[೨]ವಲ್ಲಿ ಕೂಡಲಸಂಗಯ್ಯಂಗೆ ಶರಣೆಂದು ಮೊಱೆಯಿಟ್ಟರೆಲ್ಲರೂ.

೫೩

ಕಲಿವೀರ ಕಡಿವಲ್ಲಿ, ಬಲುವಿಷವು ಸುಡುವಲ್ಲಿ, ನೆಲೆಗೆಟ್ಟು ಮೊಱೆಯೊ ಎಂಬಲ್ಲಿ, ತಲೆಗಾದು ರಕ್ಷಿಸಿದ ಸುಲಭನನಱಿಯಿರೇ. ಹೊಲೆಯರಿರಾ, ಸಲೆ ನಂಬಿ ಬದುಕಿರೊ ರಾಮನಾಥನ.

೫೪

ಅಮೃತವ ಕಡೆವಲ್ಲಿ, ವಿಷವಟ್ಟಿ ಸು[ಡು]ವಲ್ಲಿ, ದೇವರೆತ್ತ ಹೋದರೇ ನಿಂಭೋ ? ಅಂದೊಮ್ಮೆ ಓಡಿ ಹೋಗಿ ಆ ಶಿವನ ಮಱೆಯಲ್ಲಿ ಹೋಗುವಂದು

---

೧-೧ ವಗ್ನಿ (ಮೂ) ೨-೨ ಬಡಿ (ಮೂ)

ದೇವರೆಂಬವರೆತ್ತ ಹೋದರೇನಿಂಭೋ ? ಕೂಡಲಸಂಗಯ್ಯ ದೇವರಿಗೆ ದೇವನು; ನೀವೆಲ್ಲಾ ಆಳೆಂಬುದನಱಿಯಿರಿಂಭೋ.

೫೫

ಮಱಿಯಲಾಗದೆ ಹರಿಯು ? ಮಱಿಯಲಾಗದೆ ಬ್ರಹ್ಮನ ? ಮಱಿಯಲಾಗದೆ ತೆತ್ತೀಸಕೋಟಿ ದೇವರ್ಕಳ ? ನಮ್ಮ ಕೂಡಲಸಂಗಮದೇವನ ಮಱಿಯಲಾಗದು.

## ೧೦. ಅಸಮ ಶಿವಂಗೆ ಸಮನೆಂಬ ಪರದೈವತಾ ವಿಡಂಬನೆ :

೫೬

'ಏಕಮೇವರುದ್ರೋನದ್ವಿತೀಯ'ನೆಂದು ಶ್ರುತಿ ಸಾರುತ್ತಿರೆ, ಮರಳಿ ವಿಷ್ಣುವಲ್ಲದೆ ದೈವವಿಲ್ಲವೆಂಬಿರಿ. ಅಚ್ಯುತಂಗೆ ಭವವುಂಟೆಂಬುದಕ್ಕೆ ಮತ್ಸ್ಯ ಕೂರ್ಮ ವರಾಹ ನಾರಸಿಂಹಾವತಾರವೆ ಸಾಕ್ಷಿ. ಹರಿ ಹರನ ಭೃತ್ಯನೆಂಬುದಕ್ಕೆ ರಾಮೇಶ್ವರಾದಿಯಾದ ಪ್ರತಿಷ್ಠೆಯೇ ಸಾಕ್ಷಿ. ಇಂತಪ್ಪ ಹರಿಯನು ಹರಂಗೆ ಸರಿಯೆಂದು ನುಡಿವುತ್ತಿಹ ವಿಪ್ರರ ಬಾಯಲ್ಲಿ ಸುರಿಯವೆ ಬಾಲಹುಳುಗಳು. ಹರಿಗೆ ಹತ್ತು ಪ್ರಳಯ, ಬ್ರಹ್ಮಂಗೆ ಅನಂತಪ್ರಳಯ. ನಮ್ಮ ಹರಂಗೆ ಪ್ರಳಯ ಉಂಟಾದರೆ, ಬಲ್ಲರೆ ನೀವು ಹೇಳಿರೆ! ನಿಮ್ಮ ವೇದದಲ್ಲಿ ಹೇಳಿಸಿರೆ! ಅರಿಯದಿರ್ದಡೆ ಸತ್ತ ಹಾಂಗೆ ಸುಮ್ಮನಿರಿರೆ. ಇದು ಕಾರಣ ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರದೇವನೊಬ್ಬನೆ, ಎರಡಿಲ್ಲ.

೫೭

ಶೈವವಾದ, ತತ್ವವಾದ, ಮಾಯಾವಾದ–ಇಂತೀ ವಾದಂಗಳ ಹೋರುವಾಗ ವೇದ ಹೇಳುತ್ತದೆ. ಓಂ ಎಂದಲ್ಲಿ ಎರಡಳಿದು ಒಂದೆ ಉಳಿಯಿತ್ತು. ಕೆಲವಸ್ತು ದೇವಂಗೆ ಸರಿಯೆಂದರೆ, ಅದು ನಿಮ್ಮ ಒಲುಮೆಯ ಒಲವರವೈಸಲ್ಲದೆ ಬಲುಹಿನ ಮಾತುಬೇಡ. ಕಾಲಾಂತಕನ ಕರದಲ್ಲಿ ಕಪಾಲವದೆ, ಪಾದಯುಗಳದಲ್ಲಿ ಅಕ್ಷಿಯದೆ. ಮಿಕ್ಕಾದ ಅರಿಕುಲದೈವಂಗಳು ಶಿರಮಾಲೆಯಲ್ಲಿ ಸಿಕ್ಕಿಯದೆ. ಮತ್ತಿನ್ನು ಒಱಲಲೇಕೆ? ಸದಾಶಿವಮೂರ್ತಿಲಿಂಗವಲ್ಲದಿಲ್ಲಾ ಎಂದೆ.

೫೮

ಐದೂದೆ ಬ್ರಹ್ಮನ ಕಪಾಲ ಕರದಲ್ಲಿ. ಐದೂದೆ ವಿಷ್ಣುವಿನ ನಯನ ಶ್ರೀಪಾದದಲ್ಲಿ. ಐದೂದೆ ಕಾಮನ ಸುಟ್ಟ ಭಸ್ಮ ಮೈಯಮೇಲೆ. ಐದೂದೆ ಕಾಲನ ಸುಟ್ಟ ಕಿಡಿಗಣ್ಣು ನೊಸಲಲ್ಲಿ. ಇದಕ್ಕೆ ಮುಖಮೂದಲೆ ಏಕಯ್ಯ ಕೂಡಲಸಂಗಮದೇವಾ?

೫೯

"ಶಿವಾಯ ವಿಷ್ಣುರೂಪಾಯ ಶಿವರೂಪಾಯ ವಿಷ್ಣುವೆ । ಶಿವಸ್ಯ ಹೃದಯಂ ವಿಷ್ಣು ವಿಷ್ಣೋಶ್ಚಹೃದಯಂ ಶಿವಃ ।ಯಥಾ ಶಿವಮಯಂ ವಿಷ್ಣುಮಯಂ ಶಿವಃ"

ಇಂತೆಂಬ ಪಾತಕರು ನೀವು ಕೇಳಿ ಭೋ. "ಓಂ ಭೂಃ ಓಂ ಭುವಃ ಓಂ ಸ್ವಃ. ಓಂ ಮಹಃ ಓಂ ಜನಃ ಓಂ ತಪಃ ಓಂ ಸತ್ಯಂ। ಓಂ ತತ್ವತ್ಸತುರ್ವರ್ತಿಂಗ್ಯೋಂ ಭರ್ಗೋ ದೇವಸ್ಯ ಧೀ ಮಹೀ ಧೀಯೋ ಯೋನಃ ಪ್ರಚೋದಯಾತ್" ಇಂತೆಂಬ ಶ್ರುತಿ ಯೊಳಗೆ ಆ ಶಬ್ದವುಳ್ಳರೆ ತೋಱಿರೆ. ಹಿಂದನಱಿಯರು ಮುಂದ ವಿಚಾರಿಸರು. ಇಂತಪ್ಪ ಅಂತ್ಯಜರನೇನೆಂಬೆ ಕೂಡಲಚೆನ್ನಸಂಗಮದೇವಾ.

೬೦

ಹರಿ-ಹರನೊಂದೆ ಎಂದರೆ ಸುರಿ[ಯು]ವೆ [ಬಾಯುಲ್ಲಿ] ಬಾಲಹುಳುಗಳು ? ಹರಿಗೆ ಹತ್ತು ಪ್ರಳಯು! ಬ್ರಹ್ಮಂಗನಂತಪ್ರಳಯು! ಹರಂಗೆ ಪ್ರಳಯು ಉಂಟೆಂಬುದ ಬಲ್ಲರೆ ನೀವು ಹೇಳಿರೆ! ಪ್ರಳಯು, ಪ್ರಳಯು ಅಂದಂದಿಂಗೆ! ಹಳೆಯು ಕೂಡಲಸಂಗಮ ದೇವ.

೬೧

ವದನದ್ವಾರಕ್ಕೆ ಗುದದ್ವಾರ ಸರಿಯೆಂದು, ಗುದದ್ವಾರದಲ್ಲಿ ಬಂದುದ ವದನ ದ್ವಾರದಲ್ಲಿ ಕೊಂಬವಂಗೆ-ಹೋ!ಹೋ ಹರಂಗೆ ಹರಿಯು ಸರಿ ಎನಬಹುದೆ ?ಅದೆಂತೆಂ ದಡೆ: "ಯುಥಾಸ್ಯ ಪಾನಯೋಸ್ಸಾಮ್ಯಂ ಧಿವ್ರುತೆ ಪೀನವಿದ್ಯತೆ! ತಥಾ ವಿಷ್ಣು ವಿಬುದ್ಧಸ್ತು ರುದ್ರಸ್ಯಾಮ್ಯಃ ನವಿದ್ಯತೇ॥" ಎಂದುದಾಗಿ, ಇದು ಕಾರಣ ಹರಿ ವಿರಿಂಚಾದಿ ದೇವತೆಗಳನ್ನು ಶಿವಂಗೆ ಸರಿಯೆಂದು ಗಳಹುವ ನರಕಿಗಳ ಬಾಯುಲ್ಲಿ ಹುಳುಸುರಿಯುದಿಹವೆ, ಬಸವಪ್ರಿಯು ಕೂಡಲಚೆನ್ನಸಂಗಮದೇವಾ ?

೬೨

ಶಿವಂಗೆ ಬ್ರಹ್ಮ ವಿಷ್ಣುಗಳು ಸರಿಮಿಗಿಲೆನಲಾಗಿ ಸುರಿಯುವೆ ಬಾಯುಲಿ ಬಾಲ ಹುಳುಗಳು. ಧರೆ ಚಂದ್ರ ರವಿಯುಳ್ಳನ್ನಕ್ಕ ಇರದೆ ಉರಿವುತ್ತಿಪ್ಪರವರು ನರಕದ ಕಿಚ್ಚಿನಲ್ಲಿ. ಅದೆಂತೆಂದಡೆ: "ರುದ್ರಸ್ಯ ಬ್ರಹ್ಮ ವಿಷ್ಣುಭ್ಯಂ ಸಾಧಿಕ್ಯಮಂ ವಾಂಡಂತಿಯೆ ಜನಾಃ । ತೇಷಾಂ ವಂಶಸ್ಯ ಸಾಂಕರ್ಯಮಸ್ತಿತಿ ಮಮನಿಶ್ಚಯಃ ರುದ್ರಸ್ಯ ಬ್ರಹ್ಮ ವಿಷ್ಣುಭ್ಯಃ ನಾಧಿಕ್ಯಂ ಪ್ರವದಂತಿಯೆ । ಹನ್ಯತ್ರಾನ ವಿಚಾರೇಣಹಾತುರ್ದೋಷೇನ ನಕಚ್ಚಗ । ರುದ್ರಸ್ಯ ಬ್ರಹ್ಮ ವಿಷ್ಣುಭ್ಯಃ ಮಾಧಿಕ್ಯಃ ಪ್ರವವಂತಿಯೆ । ಶೇಷಾನ್ನಂ ಸಸ್ಯ ವೈಶಿಷ್ಟ್ಯಮಸಿತಿ ಮಮ ನಿಶ್ಚಯಃ" ಇಂತೆಂದುದಾಗಿ, ಇದು ಕಾರಣ, ಹರಿಬ್ರಹ್ಮಾದಿ ಸುರರೆಲ್ಲರೂ ನಿಮ್ಮ ಡಿಂಗರಿಗರೆಂದಱಿದಂಗೆ ಪರಮಪದವಯ್ಯ ಬಸವಪ್ರಿಯು ಕೂಡಲಚೆನ್ನಸಂಗಮದೇವಾ.

೬೩

ಮಿಂಚುಬುಳು ಒಮ್ಮೆ ಪ್ರಚಂಡ ತೇಜೋಮಯು ಸೂರ್ಯಂಗೆ ಸರಿಯಾದಂದು, ಹರಿಹರಂಗೆ ಸರಿಯಾತನು. ಕಹಿಬೇವಿನ ಕೊರಡು ಹರಿಚಂದನಕ್ಕೆ ಸರಿಯಾದಂದು,

ವಿರಂಚಿ ಗಿರೀಶಂಗೆ ಸರಿಯಾಹನು. ಅಜ್ಞಾನ ಸುಜ್ಞಾಕ್ಕೆ ಸರಿಯಾದಂದು ವಜ್ರಪಾಣಿ ಮೊದಲಾದ ದೇವರ್ಕಳು ಶೂಲಪಾಣಿಗೆ ಸರಿಯಾಹರು. ಏನ ಹೇಳುವೆ ಅಜ್ಞಾನ ಜನರ ಅಜ್ಞಾನ ಪ್ರಬಲ ಚೇಷ್ಟೆಯನು ? ಅದೆಂತೆಂದಡೆ : "ಖದ್ಯೋತೋ ಯದಿ ಚಂಡಭಾನು ಸದೃಶಸ್ತುತ್ಯೋ ಹರಿಃ ಶಂಭುನಾ । ಕಿಂ ಕಾಷ್ಠಂ ಹರಿಚಂದನೇನ ಸದೃಶಂತು ತೋಹವಿಃಶೇನ ಚ । ಅಜ್ಞಾನಂ ಯದಿ ವೇದನೇನ ಸದೃಶಂ ದೇವೈಶ್ಯ ತಲ್ಯೋ ಶಿವಃ । ಕಿಂ ವಕ್ಷೇ ಸುರಪುಂಗವಾ ಅಹಮಹಾ ಮೋಹಸ್ಯ ಬುಶ್ಚೇಷ್ಟಿತಂ ॥" ಇಂತೆಂದು ಬ್ರಹ್ಮನೀತಿಯಲ್ಲಿ ಬ್ರಹ್ಮ ನುಡಿಯಲು ನಿಮಗೆ ಸರಿಯೆಂಬವರಿಗೆ ನರಕವೆ ಗತಿಯಯ್ಯ ಬಸವಪ್ರಿಯ ಕೂಡಲಚೆನ್ನಸಂಗಮದೇವಾ.

೬೪

ಅಗ್ಗದ ಹರಿ ಬ್ರಹ್ಮರ ಮಱಿದೊಮ್ಮೆ ಹರಂಗೆ ಸಮವೆಂದರೆ ಅವನು ಚಂಡಾಲನು. ಅವನ ಮುಖವ ನೋಡಲಾಗದೆಂದುದು, ಸೌರಪುರಾಣದಲ್ಲಿ. ಅದೆಂತೆಂದಡೆ: "ಯೋ ಮಹಾದೇವಮನ್ಯೇನ ಹೀನದೇವೇನ ದುಮಣಿಃ । ಸಕೃತ್ಸ ಧಾರಣಂ ಭ್ರೂತೇ ಸಾಂತ್ಯ ಜೋನಾಂತ್ಯಜಃ ॥" ಇಂತೆಂದುದಾಗಿ, ನಿಮಗೆ ಕಿಱುಕುಳ ದೈವಂಗಳ ಸಮವೆಂದು ಬಗಳುವನ ಬಾಯಿ ಪಾಕುಳವ ತಪ್ಪದು ಬಸವಪ್ರಿಯ ಕೂಡಲಚೆನ್ನ ಸಂಗಮದೇವಾ.

## ೧೧. ಅಪ್ರತಿಮ ಶಿವಂಗೆ ಸರಿಯಿಲ್ಲೆಂಬ ದೇವತಾ ತಿರಸ್ಕಾರ :

೬೫

ಎಲ್ಲಾ ದೈವಕ್ಕೆ ಶಿವನೊಡೆಯನೆಂಬುದನಱಿಯದೆ, ವಿಷ್ಣುವೆ ದೈವವೆಂಬ ಭೇದವಾದಿ ನೀನು ಕೇಳಾ. ಎಲ್ಲಾ ದೈವಕ್ಕೆ ಶಿವನೆ ಘನವೆಂಬುವನಱಿಯದೆ ವಿಷ್ಣುವೆ ಘನವೆಂಬ ಮಾಯಾವಾದಿ ನೀನು ಕೇಳಾ. ಅದೆಂತೆಂದಡೆ: 'ಓಂ ಗಾಯತ್ರಿಚ್ಛಂದ ವಿಶ್ವಾಮಿತ್ರಋಷಿ ಸವಿತೃದೇವ ಅಗ್ನಿಮುಖಂ ಬ್ರಹ್ಮಶಿರ ವಿಷ್ಣುಹೃದಯ ರುದ್ರ ಲಲಾಟ' ಹೀಗೆಂದು ಶ್ರುತಿ ಹೇಳುತ್ತದೆ. ಮತ್ತೆ ಗಾಯತ್ರಿಕಲ್ಪದಲ್ಲಿ : "ಓಂ ತಪಃ ಓಂ ಸತ್ಯ ಓಂ ತತ್ಸವಿತುರ್ವರೇಣ್ಯಂ। ಭರ್ಗೋದೇವಸ್ಯ ಧೀಮಹೀ ಧಿಯೋನಃ ಪ್ರಚೋದಯೇತ್॥" ಇಂತೆಂಬ ಗಾಯತ್ರಿಯ ನೋಡಿಯೂ ಕೇಳಿಯೂ ಶಿವಂಗೆ ಸಮವಾದ ದೈವ ಉಂಟೆಂಬ ಅಜ್ಞಾನಿ ಹೊಲೆಯರ ಕೂಡೆ ತರ್ಕಿಸಲುಂಟೆ ? ಸರ್ವದೇವ ಶಿಖಾಮಣಿಯಯ್ಯ ನಮ್ಮ ದೇವರಾಯ ಸೊಡ್ಡಳನು.*

---

* ಪ್ರಕಟಿತ ವಚನ ಪಾಠಾಂತರಗಳಿಂದ ಕೂಡಿದೆ (ನೋಡಿ ಸಪುವ-೨ ವ. ೯೬೪)

೬೬

ಕೇಶವನಲ್ಲದೆ ಅತಃಪರದೈವವಿಲ್ಲೆಂದು ವೇದವ್ಯಾಸಮುನಿ ಭಂಗವಾದುದನರಿಯಿರೆ ? "[1]ಅಹಮೇವ[1] ಸರ್ವ ಜಗತ್‌ಕರ್ತಾ। ಮಮಕರ್ತಾ ಮಹೇಶ್ವರಃ" ಎಂದು ವಿಷ್ಣು ಹೇಳಿದ ವಚನವ ಮಱೆದಿರಲ್ಲಾ! ಕೂಡಲಸಂಗಮದೇವನು ದಕ್ಷಯಜ್ಞವ ಕೆಡಿಸಿದುದ ಮಱೆದಿರಲ್ಲಾ!!

೬೭

ಹರನ ಡಿಂಗರಿಗ ದಧೀಚಿಯ ಶಾಪದಿಂದ ಕರ ಬೇವಂತೆ ಬೆಂದರಾಗಳೆ ಹುರುಡಿಸುವರು. ಇದು ಕಾರಣ ದಿಟ ದಿಟ ಗರುಡಧ್ವಜ ದೇವನೆಂದೆಂಬೆ. ಗರುಡವಾಹನನಲ್ಲದೆ ಬೇಱೆರಡನೆಯ ದೇವರಿಲ್ಲೆಂದಡೆ ಹರಿದು ಕಳೆಬರು ವ್ಯಾಸನ ತೋಳೆರಡ, ನಂದಿಮಹಾಕಾಳರು. ಬರಡುಮನಸಿನ ಹೊರಸುಗಳು, ನಿಃಕರಡರಱಿವರೆ ಶಿವನ ನಿಲವನು ? ಹರನ ಹೋಲುವ ದೇವರೊಳರೆ, ನಮ್ಮ ಪಂಚವದನ ಸೊಡ್ಡಳಂಗೆ ?

೬೮

ಶಿವನಲ್ಲದೆ ಮತ್ತೆ ದೈವವಿಲ್ಲೆಂಬುದನು ದಕ್ಷನ ಜನ್ಮವು ತಾನೆ ಹೇಳದೆ ? ಉಳ್ಳಡೆ ಕ್ರತುಗಳ ಕಾಯಲಾಗದೆ ? ಉಳ್ಳಡೆ ತಮ್ಮ ಶಿರಂಗಳ ಹೋಗಾಡಲೇಕೆ ? ಈ ಕ್ರತುಗಳಿಗೆ ಶಿವನೆ ಒಡೆಯನೆಂದುದು ಋಗ್ವೇದ. "ಅವೋ ರಾಜನ್ ಮದ್ಧ್ವರುಸರುದ್ರನ್ ಹೋತಾರನ್ ಸತ್ಯನ್ । ಯಜನರೋದಸ್ಯಃ ಅಗ್ನಿಂ ಪುರಾತನಂ ಇತ್ಯೋರ ಚಿತ್ತಾದ್ವಿರಣ್ಯ ರೂಪಮವಸೇಯಜದ್ವಂ ॥" ಎಂಬ ಶ್ರುತಿ ಇದೆ. ಇದು ಕಾರಣ, ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲದಿಲ್ಲ.

## ೧೨. ಸಂಹಾರಲೀಲಾಭಾವ ಹರನಾಮ ಪ್ರತಿಷ್ಠೆ :

೬೯

ವಿಶ್ವಾಧಿಕೋ ರುದ್ರನ ಹೊಗಳುವ ಶ್ರುತಿಗಳು : "ವಿಶ್ವರೂಪಾಯವೈನಮಃ, ಪರಮ ರೂಪನೇ ನಮೋ, ಪರತತ್ವನೇ ನಮೋ, ಆದಿಯಾರೂಢ ಭಯಂಕರನೇ ನಮೋ, ಹರಿಯನು ಹರಿಸಿದನೇ" ಎಂದು ಶ್ರುತಿಯು ಸಾರುತ್ತಿರಲು, ಸಂಹಾರ ಕಾರಣನೇ ನಮೋ, ನಮ್ಮ ಕೂಡಲಸಂಗಮ ಮಹನ್ಮಹದ್ಭ್ಯೋ ನಮಃ.

೭೦

ಶಿವನ ಮಹಿಮೆಯ ಘನವನೇನೆಂಬೆನಯ್ಯ! ಉನ್ನತವಾದ ಮಹಾಗಂಗೆಯ ಜಟಾಗ್ರದಲ್ಲಿ ಧರಿಸಿದನು. ಚರಣಕಮಲದ ಹೆಬ್ಬೆರಳಿಂದೌಂಕಲು ರಾವಣಾಸುರನು

---

೧-೧ ಅಹಂ (ಮೂ)

ಮೂರ್ಛಿತನಾಗಿ ಬಿದ್ದನು. ಒಂದು ಬಾಣದಿಂದ ತ್ರಿಪುರವನು ಉರುಹಿದನು. ನೊಸಲ ಕಣ್ಣ ಅಗ್ನಿಯಿಂದ ಮನ್ಮಥನ ದಹಿಸಿದನು. ತ್ರಿಶೂಲದಿಂದ ಅಂಧಕಾಸುರನ ಇರಿದು ಕೊಂದನು. ಅದೆಂತೆಂದಡೆ: "ಜಲೌಘ ಕಲ್ಲೋಲ ತರಂಗತುಂಗಗಂಗಾವೃತಾ ಯೇನ ಜಟಾಗ್ರ ಭಾಗೇ । ಪಾದಾಂಬುಜಾಂಗುಷ್ಠ ನಿಪೀಡನೇನ ಪಾತ ಲಂಕಾಧಿಪತಿರ್ವಿ ಸಂಜ್ಞಾಃ । ಏಕೇನ ದಗ್ಧಂ ತ್ರಿಪುರಂ ರೇಣಕಾಯೋ ಲಲಾಟಾಗ್ನಿ ಹುತಾಸನೇನ । ಭಿನ್ನೋದಕಃ ಶೂಲವರೇಣ ಏನಕಸ್ತೋ ನ ಸಾರ್ಥಂ ಕುರುತೇ ವಿರೋಧಂ" ಇಂತೆಂದುದಾಗಿ, ಶಿವನೊಡನೆ ವೈರವ ಮಾಡುವರಾರುಂಟು ? ಭಾಪು, ಭಾಪು ನಿನಗೆ ಸರಿಯುಂಟೆ ದೇವರಾಯ ಸೊಡ್ಡಳಾ ?

೭೧

ಕಿಚ್ಚಿಲ್ಲದುರಿವಾತ ಮತ್ತೊಬ್ಬರಿಗಂಜುವನಲ್ಲ. ಕೌತುಕದ ದೇವ ಕಾಣೆ ಭೋ ನಮ್ಮ ಶಿವನು. ಕೌತುಕದ ದೇವ ಕಾಣೆ ಭೋ ನಮ್ಮ ಹರನು. ಬಿರುದರ ಬಿಂಕದ ಬಿಂಕವ ಮುಱಿದು, ಉಬ್ಬಿದವರ ಗರ್ಭವ ಕಲಂಕುವ. ಬಲ್ಲಿದನ ತಲೆ ಕೈಯಲ್ಲಿ, ಮೆಲ್ಲಿದನ ನಯನ ಚರಣದಲ್ಲಿ, ಅಯ್ಯಯ್ಯ ಮಝು ಭಾಪು ದೇವರಾಯ ಸೊಡ್ಡಳಾ.

೭೨

ಕಾಮದಹನವ ಮಾಡಿದನು, ದಕ್ಷನ ಯಜ್ಞವ ಕೆಡಿಸಿದನು, ಒಳ್ಳಿಹ ತ್ರಿಪುರ ವನುರುಹಿದನು. ಹಾಳಾಹಳವನೊಮ್ಮೆ ಧರಿಸಿದನು, ನಮ್ಮ ಕೂಡಲಸಂಗಮದೇವನು.

೭೩

ಕಣ್ಣಿಂ ತ್ರಿಜಗಮಂ ಸುಟ್ಟು ಮುಚ್ಚಿ ಬಚ್ಚಿಡುವನು. ಪಾಪಕಂಜನು, ಕೋಪಕಂ ಜನು, ನೆರೆಗಂಜನು, ಹೊರೆಗಂಜನು. ಕೋಟಿ ಕೋಟಿ ಬ್ರಹ್ಮಹತ್ಯಮಂ ಮಾಡಿಪ್ಪನು. ಮಾರಿ ತೊತ್ತು ಮುರಾರಿ ಬಂಟನು; ತನಗಾರು ಇದಿರಿಲ್ಲ ನೋಡಾ. ಎಲುಗಳ ತಲೆ ಗಳ ಮಾಲೆಯು ಕೊರಳಲೆ ಒಳವನು ಮಾಡಿಕ್ಕಿದ. ಒಲಿದವರ ಕಾವ, ಒಲ್ಲದವರ ಕೊಂದೀಡಾಡುವ ಸೊಡ್ಡಳದೇವನು.

೭೪

ಕೆಮ್ಮ ಕೆಮ್ಮ ಕೆಮ್ಮನೆ ಕೇಳಯ್ಯ. ಬ್ರಹ್ಮಾಂಡವ ಬೆರಣಿಯ ಮಾಡಿ, ಅಯ್ಯಾ ಕಾಲಕರ್ಮವೆಂಬ ಯುಗಜುಗಂಗಳನೆಲ್ಲವ ಬಣ್ಣಿಗದೆನೆಯಂ ಮಾಡಿ, ಅವ ಹುರಿವನು, ಒರಸುವನು, ಮುಕ್ಕುವನು. ಅದೆಂತೆಂದಡೆ: "ಈಶಃ ಸರ್ವಸ್ಯ ಜಗತಃ ಪ್ರೇರಕೋ ವಿಶ್ವಭುತ್ ಪ್ರಭುಃ" ಇಂತೆಂದುದು ಶ್ರುತಿ. ಸರ್ವ ಜಗಂಗಳ ಪುಟ್ಟಿಸುವ, ರಕ್ಷಿಸುವ, ಭಕ್ಷಿಸುವ ತಸ್ನಿಚ್ಚೈಗಾಱ ಸೊಡ್ಡಳದೇವನು.

೭೫

ಕಾಲಕಾಲ ಮಹಾಕಾಲ ಪ್ರಳಯಕಾಲ ಕಾಲನ ಕೊಂದು ಹರನು ಲೀಲೆಯ ನಾಡುವಂದು, ಬ್ರಹ್ಮ ವಿಷ್ಣು ಜನಪಾಲರೆಂಬವರೆಲ್ಲಿದ್ದರೂ ಸರಿಯೆಂಬ ನಾರಸಿಂಹನ ಶಿರವರಿದು, ಹರನ ಶಿವಾಲಯಕ್ಕೆ ಕೀರ್ತಿಮುಖವಾಗಿದೆ. ಹರಿಯ ಚರ್ಮವ ಸೀಳಿ ಹರನ ಖಟ್ವಾಂಗವಾಗಿದೆ. ಮತ್ಸ್ಯಾವತಾರನ ಕರುಳಂ ತೆಗೆದು ಹರನ ಜಡೆಯಲ್ಲಿ ಉತ್ತರಿಯಾಗಿದೆ. ಸರಿಯೆಂಬ ಹೆಸರಿನ್ನಾರಿಗೊ ಮುಕ್ಕಣ್ಣ ಸೊಡ್ಡಳಂಗಲ್ಲದೆ.

೭೬

ಕಾಲಾಂತ್ಯಕಾಲದಲ್ಲಿ, ಪ್ರಳಯಾಂತ್ಯಪ್ರಳಯದಲ್ಲಿ. ಕಾಲ ಮಹಾಕಾಲನಂ ಕೊಂದು ಹರನು ಲೀಲೆಯನಾಡುವಲ್ಲಿ, ತ್ರಿವಿಕ್ರಮನ ನಿಟ್ಟೆಲವು ಕಟ್ಟಿಗೆ ವಾಸುಗಿ ತೆಗೆ ನೇಣು, ನರಸಿಂಹನು ಗುರುಕೊಂಕಿ, ಆದಿವರಾಹನ ಎಲೆಯ ಮಾಡಿ, ಅದೆಂತೆಂದಡೆ: "ಕಲ್ಪಾಂತೇಶಮಿತ ತ್ರಿವಿಕ್ರಮ ಮಹಾಕಂಕಾಳ ಬದ್ಧಸ್ಫುರ । ಚ್ಛೇಷಃ ಸೂತ್ರಮಥೋ ನೃಸಿಂಹ ನಖ ಪ್ರೋತಾದಿ ಕೋಲಾಮಿಷಂ । ವಿಶ್ವೈಕಾರ್ಣವ ಸಂವಿಹಾರಮುದಿತೌ ಯೌಮತ್ಸ್ಯ ಕೂರ್ಮೌವೃಚೌಕರ್ಷನಿವರತಾಂಗತಃ । ಶ್ಯಾತು ಸತಾಂ ಮೋಹಂ ಮಹಾ ಭೈರವಃ" ಎಂದುದಾಗಿ, ಇಂತಪ್ಪ ಮತ್ಸ್ಯ ಕೂರ್ಮಂಗಳಂ ತೆಗೆದಾಡುವಂದು ಹರಿಹರನೆಂಬ ಹೆಸರಾಯಿತ್ತಯ್ಯ ಸೊಡ್ಡಳಾ.

೭೭

ಪಡೆದ ಕಾಣಿಭೋ ಕಾಲನಂ ಸಂಹರಿಸಿ ಕಾಲಹರನೆಂಬ ನಾಮವ. ಪಡೆದ ಕಾಣಿಭೋ ಕಾಮನಂ ಸಂಹರಿಸಿ ತ್ರಿಪುರಹರನೆಂಬ ನಾಮವ. ಪಡೆದ ಕಾಣಿಭೋ ಮತ್ಸ್ಯ ಕಚ್ಛಪ ನರಸಿಂಹಾದಿಗಳ ಸಂಹರಿಸಿ ವೀರಭದ್ರನೆಂಬ ಪೆಸರ. 'ಸರ್ವಂ ವಿಷ್ಣು ಮಯಂ ಜಗತ್' ಎಂಬ ಶ್ರುತಿಯ ಮತದಿಂ ತೋರ್ಪ ಸಮಸ್ತ ಜಗತ್ತನು ಉರಿ ಗಣ್ಣ ಬಿಟ್ಟು ಸುಟ್ಟು ಹರಿಹರನೆಂಬ ಪೆಸರ ಪಡೆದ ಕಾಣಿಭೋ. ಹರನು ಹರಿಯನು ಕೊಂದನೆಂದು ಸಲೆ ಸಾರುತ್ತಿದೆ ಯಜುರ್ವೇದ: "ಓಂ ಹರಿಹರಂತಂ ಮನುವಾತಿಂ ದೇವಾಃ । ವಿಶ್ವಸ್ಯಶಾನಂ ವೃಷಭಂ ಮತಿನಾಂ" ಇಂತೆಂದುದಾಗಿ, ಕಾಲಹರ ಕರ್ಮ ಹರ ತ್ರಿಪುರಹರ ದುರಿತಹರ ಮಖಹರ ಹರಿಹರ ಸಕಲಹರ ಶರಣು ಸೊಡ್ಡಳಾ.

## ೧೩. ಸಂಹಾರಲೀಲಾ ಶೃಂಗಾರಭಾವ :

೭೮

ಉಡಲು ತೊಡಲು ಹೊದೆಯಲೆಂದು ಮೃಡ ಮೂವರ ತಂದು ತೊಗಲನಾಗಿ ದನಮಮ! ಕರಿದಾನವ, ಕೇಸರಿದಾನವ, ಚಮೂರದಾನವರ ದೇವರಾಯ ಸೊಡ್ಡಳ ನಂದು.

೭೯

ಮತ್ಸ್ಯ ತಲೆಸುತ್ತಾಗಿ ಶಿವನ ಅಚ್ಚರಿಯ ಮುಡಿಯುಲದೆ ಕೋ. ಕೂರ್ಮನ ಕಪಾಲ ಹರನ ಹಾರ ಮಧ್ಯದೊಳದೆ ಕೋ. ನಿಮ್ಮ ಆದಿವರಾಹನ ದಾಡೆ ನಮ್ಮ ಹರನ ಉರದೊಳದೆ ಕೋ. ನಿಮ್ಮ ನರಹರಿಯ ಶಿರಸ್ಸು ನಮ್ಮ ಮಹಾದೇವನ ಉಡಿಯೊಳದೆ ಕೋ. ನಿಮ್ಮ ತ್ರಿವಿಕ್ರಮನ ನಿಟ್ಟೆಲು ಖಟ್ವಾಂಗವಾಗಿ ನಮ್ಮೀಶ್ವರನ ಕೈಯೊಳದೆ ಕೋ. ನೀವು ಸರಿಯೆಂಬ ಕೇಶವನ ಕಣ್ಣು ನಮ್ಮ ಸೋಮೇಶ್ವರನ ಶ್ರೀಚರಣದೊಳದೆ ಕೋ. ನಿಮ್ಮಗ್ಗದ ನಾರಾಯಣನ ಹೆಣ ನಮ್ಮ ರುದ್ರನ ಶೂಲದ ಕೊನೆಯೊಳದೆ ಕೋ. ಸಮಸ್ತದೇವಾಸುರರ ಶಿರಂಗಳು ಈ ಇತ್ತರದ ಸರವಾಲೆಗಳಾದವೆ ಕೋ. ಬಲ್ಲಿದ ನರಹರಿಯ ತೊವಲ ಕಂಚುಕಿಯಾಗಿ ತೊಟ್ಟ; ಕಲಿಗಜಾಸುರನ ಚರ್ಮವ ಹೊದ್ದ; ಕಾಮನ ಸುಟ್ಟು ಬೂದಿಯನಿಟ್ಟ; ದುಷ್ಟರಿಗೆ ದುಷ್ಟ, ಮಹಾದಿಟ್ಟ, ಅಘಜಿಟ್ಟ, ಕಟ್ಟುಗ್ರದೇವ ಭಾಪು ಭಾಪು ಸೊಡ್ಡಳ.

೮೦

ಎಚುವೊಡೆ ಮೊಲನಾಗನ ಗದ್ದುಗೆ ಕಪಾಲ ಕೈಯಲ್ಲಿ. ಹೇಳುವೊಡೆ ಹರಿಯ ಹೆಣ ಹೆಗಲಮೇಲೆ ನೋಡಾ. ಬಿಚ್ಚಿ ಹೊದೆವೊಡೆ ನಾರಸಿಂಹನ ಹಸಿಯ ತೊಗಲು; ಉಬ್ಬಿ ಹಿಡಿವೊಡೆ ನಿನಗಾದಿ ವರಾಹನ ದಾಡೆ. ನಲಿದು ಪಿಡಿವೊಡೆ ನಿನಗೆ ತ್ರಿವಿಕ್ರಮನ ನಿಟ್ಟೆಲು. ಕಲಿಗಳ ತಲೆಗಳ ಮಾಲೆಗಳಾರಾದಡೇನು ಯೋಗ್ಯವೆ ? ಸುಡು ಸುಡು ಎಲುಗಳ ಮುಟ್ಟಬಹುದೆ ದೇವರಾಯ ಸೊಡ್ಡಳ ?

೮೧

ತಲೆಯ ಮೇಲೆ ತಲೆಯುಂಟೆ ? ಗಳದಲ್ಲಿ ವಿಷವುಂಟೆ ? ಹಣೆಯಲ್ಲಿ ಕಣ್ಣುಂಟೆ ? ದೇವರೆಂಬವರಿಗೆಂಟೊಡಲುಂಟೆ ? ತಂದೆಯಿಲ್ಲದವರುಂಟೆ ? ತಾಯಿಲ್ಲದವರುಂಟೆ ? ಎಲೋ, ನಿನ್ನ ನೊಸಲಲ್ಲಿ ನೇಸರು ಮೂಡದೆ ? ಶಂಭು ತೆಲುಗೇಶ್ವರಾ, ನಿನಗಲ್ಲದುಳಿದ ದೈವಂಗಳಿಗುಂಟೆ ಕಾಲೊಳು ಕಣ್ಣು ?*

೮೨

ಹಣೆಗಣ್ಣು, ಕೊರಳ ಕಪ್ಪು, ಫಣಿಕುಂಡಲ, ದಶಭುಜ, ಉಡುಪತಿ, ಜಡೆಯ ನಡುವಿಹ ಗಂಗೆ, ಉಡಿಯ ಪುಲಿಚರ್ಮ, ತೊಡಿಗೆಯ ಕರೋಟಿಮಾಲೆ, ಪಿಡಿದ ಕಂಕಾಳದಂಡದಿಂ ನಮ್ಮ ಮೃಡ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು ರಾಜಿಸಿದ ತನಗೆ ಪ್ರತಿಯಿಲ್ಲವೆಂಬೊಲು.

---

* ಬಸವಪಥ ೭-೧೨ (೧೯೮೬ ಮಾರ್ಚ) ಪು೧೭ (ಶಂಭುತೆಲುಗೇಶ್ವರಾಂಕಿತದ ಅಪ್ರಕಟಿತ ವಚನಗಳು-ಎಸ್ ಶಿವಣ್ಣ)

## ೧೪. ಸಂಹಾರಲೀಲಾ ನಾಟ್ಯಾಡಂಬರ :

೮೩

ಅಶ್ವಂಬಳ ಕಂಬಳರ ಕರ್ಣದಲ್ಲಿ ಧರಿಸಿದೆಯಯ್ಯಾ. ಪಂಚಮುಖದಿಂ ಪಂಚ ಮಹಾಭೇದಂಗಳನುಸುರಿ, ವೇದಸ್ವರೂಪನಾದೆಯಯ್ಯಾ. ಶಕ್ತಿಯಂ ನೆತ್ತಿಯಲ್ಲಿ ಅರ್ಧಾಂಗನಾಲಿಂಗನಾದೆಯಯ್ಯಾ. ಅಂಧಕಾಸುರನ ಎದೆಯ ಮೆಟ್ಟಿ ನಾಟ್ಯವನಾಡಿದೆಯಯ್ಯಾ. ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಮಹಿಮೆಯ ಪರಿ ಇನ್ನೆಂತುಟೊ ?

೮೪

ಅದುರಿತು ಪಾದಾಘಾತದಿಂದ ಧರೆ; ಬಿದಿರಿದುವು ಮಕುಟ ತಾಗಿ ತಾರಕೆಗಳು; ಉದುರಿದವು ಕೈ ತಾಗಿ ಲೋಕಂಗಳೆಲ್ಲಾ. ಶ್ರುತಿ: "ಮಹೀಪಾದಾಘಾತಾದ್ ವ್ರಜತಿ ಸಹಸಾ ಸಂಶಯಪದಂ। ಪದಂ ವಿಷ್ಣೋರ್ ಭ್ರಾಮ್ಯದ್ ಭುಜಪರಿಘರುಗ್ಣ ಗ್ರಹಗಣಂ। ಮುಹುರ್‌ದ್ಯೌರ್ದೌಸ್ಥ್ಯಂ ಯಾತ್ಯ ನಿಭೃತಾ ಜಟಾತಾಡಿತ ತಟಾ। ಜಗದ್‌ರಕ್ಷಾಯೈ ತ್ವಂ ನಟಸಿನನುವಾಮ್ಯೈವ ವಿಭುತಾ॥" ನಮ್ಮ ಕೂಡಲ ಸಂಗಮ ದೇವ ನಿಂದು ನಾಂಟ್ಯವನಾಡೆ.

೮೫

ಅಸುರರ ಸುರರ ಶಿ[೧]ರೋ[೧]ಮಾಲೆಯ ಕೊರಳಲ್ಲಿಕ್ಕಿ, ಶಿವಕಳೆಯೆದ್ದಾಡುವಾಗಲ್ಲಿ ಅವಕಳೆಯಾಗದೆ ? ಅಸುರ ದೇವಾದಿಗಳೆಲ್ಲಿಯಯ್ಯಾ! ನೀ ಮಾಡಿದ ಧಾರುಣಿ ರಸಾತಳಕ್ಕಿಳಿದು, ಕೂರ್ಮಕುಸಿದು, ದಿಗ್ದಂತಿಗಳು ಘೀಳಿಟ್ಟು, ಫಣಿಯಹೆಡೆ ಮುರಿದು, ನಿನ್ನ ಪಾದದ ಗುಡುಗಾಟದಿಂದ ಕೆಂಧೂಳಿ ನೆಗೆದು, ನರಲೋಕ, ಸುರಲೋಕ, ಬ್ರಹ್ಮಲೋಕ, ವಿಷ್ಣುಲೋಕ, ಇಂದ್ರಲೋಕ, ಸೂರ್ಯಲೋಕ, ಚಂದ್ರಲೋಕ, ತಾರಾಲೋಕ, ಅಸುರಲೋಕಂಗಳು ಬೂದಿಯಲ್ಲಿ ಮುಸುಕಿವವಯ್ಯಾ! ಪ್ರಭುವೆದ್ದು ಹಗರಣವಾಡುತ್ತಿರಲು, ಈರೇಳುಭುವನದೊಳಗುಳ್ಳ ಆತ್ಮಾದಿಗಳೆಲ್ಲ ದೆಸೆದೆಸೆಗೆಡಲು, ಶಶಿಧರ ನಾಂಟ್ಯಕ್ಕೆ ನಿಂದಲ್ಲಿ ಇನ್ನಾರಯ್ಯಾ ಸಂತೈಸುವರು ಕೂಡಲ ಚೆನ್ನಸಂಗ[೨]ಯ್ಯಾ[೨] ?

೮೬

ನೊಸಲಕಣ್ಣ ಬಿಸಿಗೆಂಪಿಗೆ ಶಶಿಯಮೃತ ಒಸರಲು ಸು[೩]ರಿವಹವೆ. ಕಪಾಲ ಮಣಿಮಾಲೆಯಮೇಲೆ ಉಲಿದಹವೆ, ನಲಿದಹವೆ, ಮಲವಹವೆ ಕೆಲದಹವೆ ಎಲು ಎದ್ದಾಡುವುವ ನೋಡಿ ನಗುತ್ತಿಹೆ ಸೋಡ್ಡಳಾ ನಿಮ್ಮ ಅರ್ತಿಯಿಂದ.

---

೧-೧ ರ(ಮೂ) ೨-೨ ಯ್ಯನ (ಮೂ) ೩ ಸ (ಮೂ)

೮೭

ಹರನ ಕೊರಳಲ್ಲಿಪ್ಪ ಕರೋಟಿಮಾಲೆಯ ಶಿರದ ಲಿಖಿತವ ಕಂಡು ಮರುಳು ತಂಡಗಳು ಓದಿನೋಡಿ, ಇವನಜ, ಇವ ಹರಿ, ಇವ ಸುರಪತಿ, ಇವ ಧರಣೀಂದ್ರ, ಇವನಂಧಕನೆಂದು ಹರುಷದಿಂದ ಸರಸವಾಡಿತ್ತ ಕಂಡು, ಹರ ಮುಕುಳಿತನಾಗಿ ನಸುನಕ್ಕ ನಮ್ಮ ಕೂಡಲಸಂಗಮದೇವ.

## ೧೫. ಸರ್ವೋತ್ಕೃಷ್ಟ ಶಿವಮಹಿಮಾತಿಶಯ ಪ್ರತಾಪ :

೮೮

ಅನಂತದೇವರೆಲ್ಲರು ನೆರದು, ತಂಡತಂಡದಲ್ಲಿ ಬಂದು ದಂಡಪ್ರಣಾಮಂಗೆಯ್ಯಲು, ಅವರ ಮಕುಟಕಟಕಸಂಘಟ್ಟರಜ [1]ಉದುರಲೆ,[1] ಆಹಾ, ಅಯ್ಯಾ, ಅಲ್ಲಿ ಮೇರು ಮಹಾರಜತಗಿರಿಗಳಾದವು, ಎನ್ನ ಕಪಿಲಸಿದ್ಧ ಮಲ್ಲಿಕಾರ್ಜುನದೇವರ ದೇವಾ ನಿಮ್ಮ ಮುಂದೆ.

೮೯

ಶಿವಲೋಕಕ್ಕೆ ಸರಿ ಬೇಱೆ ಲೋಕವಿಲ್ಲ; ಶಿವಮಂತ್ರಕ್ಕೆ ಸರಿ ಬೇಱೆ ಮಂತ್ರವಿಲ್ಲ. ಜಗಕ್ಕೆ ಇಕ್ಕಿದೆ ಮುಂಡಿಗೆಯನೆತ್ತಿಕೊಳ್ಳಿ: ಕೂಡಲಸಂಗಮದೇವನೊಬ್ಬನೆ ದೇವನೆಂದು.

೯೦

ಶಿವನೊಬ್ಬನೆ ಜಗವೆಲ್ಲಕ್ಕೊಡೆಯನೆಂದು ಹೊಡೆವ ಭೇರಿ ನಿಸ್ಸಾಳವಯ್ಯಾ. ಶಿವನಲ್ಲದೆ ಅತಃಪರವಿಲ್ಲವೆಂದು ಒದಱುವ ವೇದಪುರಾಣಾಗಮಂಗಳಯ್ಯಾ. ಶಿವನಿಲ್ಲವೆಂಬವನ ಬಾಯ ತ್ರಿಶೂಲದಲ್ಲಿಱಿವುದು. ಬಳ್ಳೇಶ್ವರನ ಡಂಗುರ ಜಗದೊಳಗಯ್ಯಾ.

೯೧

ಶ್ರುತಿಗಗಮ್ಯ, ದ್ವಾದಶಾಂತ್ಯನಪ್ರತಿಮ ಮಹಿಮಂಗೆ ಪ್ರತಿಯುಂಟೆ ? 'ಸೋಮಃಪವತೇ' ಎಂಬ ಶ್ರುತಿಯನಱಿತು, ಶಿವ'ನೇಕೋದೇವ, ರುದ್ರನದ್ವಿತೀಯನೆಂ'ದು ನಂಬುವುದು ಕಾಣಿರಣ್ಣಾ. ಕೂಡಲಸಂಗಮದೇವನಲ್ಲದೆ ಇಲ್ಲವೆಂದೆತ್ತಿದೆ ಬಿರಿದ ಜಗವೆಲ್ಲಱಿಯಲು.

೯೨

ಸ್ವಾಮಿ ನೀನು, ಶಾಶ್ವತ ನೀನು :ಎತ್ತಿದೆ ಬಿರುದ ಜಗವೆಲ್ಲಱಿಯಲು. ಮಹಾದೇವ, ಮಹಾದೇವ ಮಹಾದೇವ: ಇಲ್ಲಿಂದ ಮೇಲೆ ಶಬ್ದವಿಲ್ಲ; ಪಶುಪತಿ ಜಗಕ್ಕೆ

---

೧-೧ ಉರುಳಲ್ಕೆ (ಯೂ)

ಏಕೋದೇವ: ಸ್ವರ್ಗ ಮರ್ತ್ಯ ಪಾತಾಳದೊಳಗೆ, ಒಬ್ಬನೇದೇವ ಕೂಡಲಸಂಗಮ ದೇವ.

೯೩

ಉಪ್ಪರಗುಡಿ, ನಂದಿವಾಹನ ಸದ್ಯೋಜಾತನ ಬಾಗಿಲ ಮುಂದೆ ಸಾರುತ್ತೈದಾವೆ ನೋಡಾ, ಶ್ರುತಿಗಳು. ನಾಲ್ಕು ವೇದವೂ ಹುಸಿಯದೆ "ಭರ್ಗೋದೇವಸ್ಯ ಧೀಮಹಿ" ಎಂದುದಾಗಿ, ಕೂಡಲಸಂಗನಲ್ಲದಿಲ್ಲೆಂದುದು ವೇದ.

೯೪

ಲಿಂಗ ಶಿವಾಲಯದ ಮುಂದೆ ಸಿಂಹ ಶೂದ್ರಿಕನಲ್ಲದಿಲ್ಲ: ನಂದಿಕೇಶ್ವರ ಭೃಂಗಿ ನಾಂಟ್ಯ ನಮ್ಮ ಲಿಂಗನ ಮುಂದೆ. ಇದಕ್ಕೆ ದಿಪ್ಪದೀವಿಗೆ ನಮ್ಮ ಲಿಂಗನ ಮುಂದೆ! ಅನ್ಯದೈವವೆಂಬುದ ತೋಱಿಯೂ ಕಾಣಬಾರದು. ನೊಸಲಕಣ್ಣ ಅಭವನೊಬ್ಬನೆ ಕೂಡಲಸಂಗಮದೇವ.

## ೧೬. ಅನ್ಯದೈವಸೇವಾ ನಿರಸನ; ಶಿವಸೇವಾ ವಿಶೇಷ ಪ್ರತಿಷ್ಠೆ :

೯೫

ಪಕ್ಷಿ ಜನಿಸಿ ಅಮೃತವನಱಿಯದಂತೆ. ಶಿವನಲ್ಲದೆ ಅನ್ಯದೈವಭಜನೆಯುಳ್ಳವ ರೇತಕ್ಕೆ ಬಾತೆ? ಅನ್ಯಾಯಿತ ವಧೆಯ ಮಾಡುವ, ಅರ್ತಿಕಾಱ ದೋಷವನಱಿಯ. ಪಾಪಿಯ ಕೈಯ ದಾರ,ಗಾಳದಕೊನೆಗೆ ಬಂದುಂಡ ಮತ್ಸ್ಯದ ಲಕ್ಷಣದಂತೆ. ಮನುಷ್ಯ ಜನ್ಮದಲ್ಲಿ ಹುಟ್ಟಿ, ಶಿವಾಚಾರವನಱಿಯದೆ ದುರಾಚಾರಕ್ಕೆಱಗುವರು; ಪಿಱಿದೈವವ ನಱಿಯದೆ ಕಿಱುಕುಳದೈವವಂ ಪಿಡಿವರು. ಕೇಶವಂಗೆ ದಾಸತ್ವಮಂ ಮಾಡಿದಡೆ ಪ್ರತ್ಯಕ್ಷ ಮುಡುಹನುಡಿಸನೆ? ಮೈಲಾರ ದೇವರೆಂಬವರ ನಾಯಾಗಿ ಬಗುಳಿಸನೆ? ಜಿನ ದೈವವೆಂಬವರ ತಲೆಯ ತಱಿಸನೆ? ಹುಲುದೈವವ ಪೂಜಿಸಿದವರು ಕೈಲಾಸದ ಬಟ್ಟೆಯ ಹೊಲಬುದಪ್ಪಿದರು. ಮುನ್ನ ಮಾಡಿದವರಿಗಿದಿಯಾಯಿತ್ತು. ಇನ್ನು ಮಾಡುವರಿಗೆ ವಿಧಿಯಹುದೊ. ನಮ್ಮ ದೇವರಾಯ ಸೊಡ್ಡಳಂಗೆ ಒಂದರಳನೇರಿಸಿದವ ಕೈಲಾಸಕ್ಕೆ ಹೋದನು.

೯೬

ಬ್ರಹ್ಮನನಾರಾಧಿಸಿ ನಿರ್ಮೂಲವಾದರು: ವಿಷ್ಣುವನಾರಾಧಿಸಿ ಭವಭವಕ್ಕೆ ಬಂದರು. ಭೈರವನನಾರಾಧಿಸಿ ಬಾಹಿರರಾದರಯ್ಯಾ. ಮೈಲಾರನನಾರಾಧಿಸಿ ಕುಱುಳು ಬೆರಳ ಕಡಿಸಿಕೊಂಡು ನಾಯಾಗಿ ಬಗಳುತ್ತಿಪ್ಪರು. ಜಿನನನಾರಾಧಿಸಿ ಲಜ್ಜೆ ನಾಚಿಕೆಯೋದರು. ನಮ್ಮ ಕೂಡಲಚೆನ್ನಸಂಗಯ್ಯನನಾರಾಧಿಸಿ ದೇವಾ, ಭಕ್ತರೆನಿಸಿಕೊಂಡರು ನೋಡಯ್ಯಾ.

## ೧೭. ಪರದೈವ ದಾಕ್ಷಿಣ್ಯಾಧಿಕಾರ ನಿರಸನ; ಶಿವದಾಕ್ಷಿಣ್ಯಾಧಿಕಾರ ಪ್ರತಿಷ್ಠೆ :

೯೭

ಧೃತಿಗೆಟ್ಟು ದೈವವೇತಕುಟಯ್ಯಾ; [೧]ಪ್ರತಿ[೧]ಗೆಟ್ಟು ದೈವವ ಪೂಜಿಸುವಿರಲ್ಲಯ್ಯಾ ? ಧೃತಿಗೆಟ್ಟು ದೈವಂಗಳ ಬೇಡುವಿರಲ್ಲಯ್ಯಾ ? ಗತಿಯಿಲ್ಲದ ದುರ್ಗತಿ ಮಾನವರಿರಾ, ದಿಟ ದಿಟ ಅಲ್ಲಿ ಬೇಡದಿರೆ; ಶ್ರುತಿಸ್ಮೃತಿಗಳ ಕೇಳಿ ಅವು ಕೊಡಲಱಿಯವೆಂಬುದ; ನೆರೆ ನಂಬಿರೆ, ನಮ್ಮ ಶ್ರೀ ಮಲ್ಲಿಕಾರ್ಜುನ ಕೊಡುವನು.

೯೮

ಹರಿಯು ಬೇಡುವಡೆ, ಅವಗೆ ಬಲೀಂದ್ರ ದಾನವನಿಕ್ಕಿದನು; ಬ್ರಹ್ಮನ ಬೇಡುವಡೆ, ಅವಗೆ ಶಿರವಿಲ್ಲ; ಬೌದ್ಧನ ಬೇಡುವಡೆ, ಅವಗೆ ಬುದ್ಧಿ ಸಮನಿಸದು; ಜಿನನ ಬೇಡುವಡೆ, ಅವಗೆ ಉಡಲಿಲ್ಲ; ಬೆನಕನ ಬೇಡುವಡೆ, ಅವಗೆ ಕೋಡು ಮುಱಿಯಿತ್ತು. ಭೈರವನ ಬೇಡುವಡೆ, ಅವರುಟ್ಟುದನಿಕ್ಕಿ ಆಡುತಿರ್ದನು. ಅಭಯಕರ ಜಗಕ್ಕೆಲ್ಲ. ಜಗದಾನಿಯು ಬೇಡುವೆನು ಕೂಡಲಸಂಗಯ್ಯನ.

೯೯

ರಿಣ ತಪ್ಪಿದ ಹೇಡಿರಲ್ಲಿ, ಗುಣತಪ್ಪಿದ ನಂಟರಲ್ಲಿ, ಜೀವವಿಲ್ಲದ ದೇಹದಲ್ಲಿ ಫಲವೇನೊ ? ಅಳ್ಳನೊಲ್ಲದಾಳಿನಲ್ಲಿ, ಸಿರಿತೊಲಗಿದ ಅರಸಿನಲ್ಲಿ, ವರವಿಲ್ಲದ ದೈವದಲ್ಲಿ ಫಲವೇನೊ ? ಕಳಿದ ಹೂವಿನಲ್ಲಿ ಕಂಪ, ನುಳಿದ ಸೂಳೆಯಲ್ಲಿ ಹೆಂಪ, ಕೊಳಚೆಯ ನೀರಿನಲ್ಲಿ ಗುಂಪನರಸುವಿರಿ, ಮರುಳೇ—ವರಗುರು ವಿಶ್ವಕ್ಕೆಲ್ಲ ಗಿರಿಜಾಮನೋವಲ್ಲಭ ಪರಮ ಕಾರುಣಿಕ ನಮ್ಮ ಕೂಡಲಸಂಗಮದೇವ.

## ೧೮. ಶಿವಭಕ್ತಿಸಾರೋದ್ಧಾರ :

೧೦೦

ದೈವವೆನಿಸಿಕೊಂಬ ಎಲ್ಲಾ ದೈವಂಗಳ ಬಿಟ್ಟು, ಶಿವನನೊಬ್ಬನನೆ ಹಿಡಿಯೆಂದುದಥರ್ವಣವೇದ. ಶಿವನಪೂಜಿಸಿ, ಶಿವನ ನೆನೆದು, ಶಿವನ ಸ್ತುತಿಸೂದೆಂದುವಥರ್ವಣವೇದ. "ಈಶಾನಂ ಶಿವಯೇಕೋಧ್ಯಾಯಃ ಶಿವಂ ಕರಃ ಸರ್ವಮನ್ಯತ್ಪರಿತ್ಯಜೇತ್" ಎಂದುದು ಶ್ರುತಿ. ಬಸವಪ್ರಿಯ ಕೂಡಲಚೆನ್ನಸಂಗಮದೇವಯ್ಯಾ.

೧೦೧

ಅಜನಂದು ಸಾಱಿ ಹೇಳಿದ ಸಕಲ ಸಂರಮುನಿಗಳೆಲ್ಲರಿಗೂ: ಶಿವನನೆ ಧ್ಯಾನಿಸಿ, ಶಿವನನೆ ಪೂಜಿಸಿ, ಶಿವಭಕ್ತಿಯೆ ನಿಮಗೆ ಪರಮಸಾಧನವೆಂದು ಬೊಬ್ಬಿಟ್ಟು ಬೆರಳ

---

೧–೧ ವೃತಿ (ಮಾ) ೨+ ಗತಿಗೆ (ಮಾ)

ನೆತ್ತಿ ಸಾಱಿದನು. ವಿಷ್ಣು ಭಕ್ತಿಯಿಂದಲು, ತನ್ನ ಭಕ್ತಿಯಿಂದಲು ನಿಮಗೆ [1]ಸದ್ಗತಿ[1] ಸಾಧನವಿಲ್ಲವಿಲ್ಲವೆಂದು. ಅದೆಂತೆಂದಡೆ : "ವಿಷ್ಣು ಭಕ್ತ್ಯ ಚ ಮದ್ಭಕ್ತ ನಾಸ್ತಿ ನಾಸ್ತಿ ಪರಾಗತಿಃ। ಶಂಭು ಭಕ್ತ್ಯೈವ ಸರ್ವೇಷಾಂ ಸತ್ಯಮೇವಮಯೋದಿತಂ" ಎಂದುದಾಗಿ, ಸರ್ವರಿಗಿದೆ ಉಪದೇಶ[2] ಬೇಱಿನ್ನು ಮಾತಿಲ್ಲ. ಬಸವಪ್ರಿಯ ಕೂಡಲಚೆನ್ನಸಂಗಮ ದೇವಯ್ಯನೊಬ್ಬನೆ ಮುಕ್ತಿಗೆ ಸಾಧನವು.

೧೦೨

[3]ಹರಿಭಕ್ತಿಯಿಂದ ಸಾವಿರ ಕಮಲಕುಸುಮವಂ ತಂದು, ಪಶುಪತಿಯ ಚರಣಕ್ಕೆ ಒಸೆದು ಮಾಡುತ್ತಿರಲಾಗಿ, ಶಶಿಧರ ಒಂದು ಕುಸುಮವ ಕಡಿಮೆ ಮಾಡ ಲಾಗಿ, ಹುಸಿಯ ಹೊಱಲಾಱದೆ ತೆಗೆದಿಕ್ಕಿದ ಕಣ್ಣು ಕಾಲಸಂಹಾರನ ಕಾಲಲಿದೆ. ಇದು ಕಾರಣ, ನಾರಾಯಣಪ್ರಿಯ ರಾಮನಾಥನಾದ.

೧೦೩

ಹರಿ ಮಾಡಿದ ಭಕ್ತಿಗೆ ಕಡೆ ನಡು ಮೊದಲಿಲ್ಲ. ಜಗದ ಕಂಟಕ ಬಂದಲ್ಲಿ, ದಶಾ ವತಾರನಾಗಿ ಪಶುಪತಿಯ ಸೇವೆಯ ಮಾಡಿದ. ಶಶಿಶೇಖರನ ಆಲಯದಲ್ಲಿ ಪತಿಭಕ್ತಿ ಯಾಗಿಪ್ಪ ನಾರಾಯಣನ ಜಗವೇಷವಂ ತಾಳಿ, ಇಂತಿವರೆಲ್ಲರೂ ಎನ್ನ ರಾಮನಾಥ ಗೋವಿಂದ [ಗೋವಿಂದ] ಎನುತಿರ್ದರು.

೧೦೪

ಭೃಗುಮುನೀಶ್ವರನ ಶಾಪದಿಂ ವಿಷ್ಣು ದಶಾವತಾರವಾಗಿ ಬಂದಲ್ಲಿ, ಶಿವ ಭಕ್ತಿಯನೆ ಮಾಡಿದನೆಂಬುದಕ್ಕೆ ಶಿವಧರ್ಮಪುರಾಣ ಪ್ರಸಿದ್ಧ ನೋಡಿರೆ. ಅದೆಂತೆಂ– ದಡೆ: "ಮತ್ಸ್ಯ ಕೂರ್ಮೋ ವರಾಹಶ್ಚ ನಾರಸಿಂಹಶ್ಚ ವಾಮನಃ। ರಾಮೋ ರಾಮಶ್ಚ ರಾಮಶ್ಚ ಬೌದ್ಧಶ್ಚ ಕಲಿಕಾಹ್ವಯಃ ॥" ಎಂದುದಾಗಿ, ಶಿವಲಿಂಗವ ಹರಿ ಪ್ರತಿಷ್ಠೆಯ ಮಾಡಿದ ಮತ್ಸ್ಯಾವತಾರದಲ್ಲಿ ಮತ್ಸ್ಯಕೇಶ್ವರದೇವರ ಲಂಕಾಪುರಿಯಲ್ಲಿ, ಶಿವಲಿಂಗವ ಹರಿ ಪ್ರತಿಷ್ಠೆಯ ಮಾಡಿದ ಕೂರ್ಮಾವತಾರದಲ್ಲಿ ಕೂರ್ಮೇಶ್ವರದೇವರ ದ್ವಾರಾವತಿಯಲ್ಲಿ, ಶಿವಲಿಂಗವ ಹರಿ ಪ್ರತಿಷ್ಠೆಯ ಮಾಡಿದ ವರಾಹಾವತಾರದಲ್ಲಿ ವರಾಹೇಶ್ವರದೇವರ ವೃಂದಗಿರಿಯಲ್ಲಿ, ಶಿವಲಿಂಗವ ಹರಿ ಪ್ರತಿಷ್ಠೆಯ ಮಾಡಿದ ನಾರ ಸಿಂಹಾವತಾರದಲ್ಲಿ [ನರ]ಸಿಂಹೇಶ್ವರದೇವರ ಪೌಬಳದಲ್ಲಿ, ಶಿವಲಿಂಗವ ಹರಿ ಪ್ರತಿಷ್ಠೆಯ ಮಾಡಿದ ವಾಮನಾವತಾರದಲ್ಲಿ ವಾಮೇಶ್ವರದೇವರ ಕುರುಕ್ಷೇತ್ರದಲ್ಲಿ, ಶಿವಲಿಂಗವ ಹರಿ ಪ್ರತಿಷ್ಠೆಯ ಮಾಡಿದ ಪರಶುರಾಮಾವತಾರದಲ್ಲಿ ಪರಶುರಾಮೇಶ್ವರ ದೇವರ ಕಪಿಲೆಯ ತೀರದಲ್ಲಿ, ಶಿವಲಿಂಗವ ಹರಿ ಪ್ರತಿಷ್ಠೆಯ ಮಾಡಿದ ರಾಮಾವತಾರ

---

೧-೧ ಗತಿಗೆ (ಮೂ) ೨ + ಪದ(ಮೂ) ೩ + ಎನ್ನ (ಸಪ್ರವ-೨, ವ. ೫೮೩)

ದಲ್ಲಿ ರಾಮೇಶ್ವರದೇವರ ಸೇತುವಿನಲ್ಲಿ, ಶಿವಲಿಂಗವ ಹರಿ ಪ್ರತಿಷ್ಠೆಯ ಮಾಡಿದ ಕೃಷ್ಣಾವತಾರದಲ್ಲಿ ಕೃಷ್ಣೇಶ್ವರದೇವರ ಹಿಮವತ್ಪರ್ವತದಲ್ಲಿ, ಶಿವಲಿಂಗವ ಹರಿ ಪ್ರತಿಷ್ಠೆಯ ಮಾಡಿದ ಬೌದ್ಧಾವತಾರದಲ್ಲಿ ಬೌದ್ಧೇಶ್ವರದೇವರ ಕಾಶಿಯಲ್ಲಿ, ಶಿವ ಲಿಂಗವ ಹರಿ ಪ್ರತಿಷ್ಠೆಯ ಮಾಡಿದ ಕಲಿಕಾವತಾರದಲ್ಲಿ ಕಲಿಕೇಶ್ವರದೇವರ ವಾರಣಾಸಿ ಯಲ್ಲಿ. ಇಂತೀ ದಶಾವತಾರದಲ್ಲಿಯೂ ಹರಿಯೆ ಭಕ್ತ. ಹರಿಯ ಬಿಟ್ಟು ಭಕ್ತರಿಲ್ಲ, ಸೊಡ್ಡಳದೇವರಿಂದ ಬಿಟ್ಟು ಕರ್ತರಿಲ್ಲ ಕೇಳಿರಣ್ಣಾ ।

## ೧೯. ಶಿವಭಕ್ತಿವಿಶೇಷ ಯಾಚನಾ ವಿಜ್ಞಾಪನ :

೧೦೫

ಅಯ್ಯಾ, ವೈಷ್ಣವರಾದವರು ತಮ್ಮ ವಿಷ್ಣುವನೆ ಬಿಟ್ಟು ಕಳೆದು ಲಿಂಗಭಕ್ತ ರಾವರನೇಕರು. ಅಯ್ಯಾ, ಜೈನರಾದವರು ತಮ್ಮ ಜಿನನನೆ ಬಿಟ್ಟು ಕಳೆದು ಲಿಂಗಭಕ್ತ ರಾದರನೇಕರು. ಅಯ್ಯಾ, ದ್ವಿಜರುಗಳಾದವರು ತಮ್ಮ ಕರ್ಮಂಗಳೆಲ್ಲವನೆ ಬಿಟ್ಟು ಕಳೆದು ಲಿಂಗಭಕ್ತರಾವರನೇಕರು. ಲಿಂಗವ ಬಿಟ್ಟು ಇವ ಹಿಡಿದವರೊಳರೆ ಹೇಳಿ ರಯ್ಯಾ ? ಉಳ್ಳಡೆ ಅವರು ವ್ರತಗೇಡಿ ನರಕಿಗಳೆನಿಸುವರಲ್ಲದೆ ಅಪವರ್ಗಹೇತುಗಳ ಹರೆ ? ಇದು ಕಾರಣ, ಋಷಿಕೃತಕದಿಂದಲಾದ ಕುಟಿಲದೈವಂಗಳೆ ದಿಟವೆಂದು ಬಗೆ ವರೆ ಬುದ್ಧಿವಂತರು ? ಸಟೆಯ ಬಿಡಲಾರದೆ ದಿಟವ ನಂಬಲರಿಯದೆ ನಷ್ಟವಾಗಿ ಹೋಯಿತ್ತೀ ಜಗವು ನೋಡಾ. ಸಕಲದೈವಂಗಳಿಗೆ ಸಕಲಸವಯಂಗಳಿಗೆ ನೀವೇ ಘನವಾಗಿ ನಿಮಗೆ ಶರಣುವೊಕ್ಕೆನಯ್ಯಾ ಬಸವಪ್ರಿಯ ಕೂಡಲಚೆನ್ನಸಂಗಮದೇವಾ.

೧೦೬

ಭವರೋಗವೈದ್ಯನೆಂದು ನಾ ನಿಮ್ಮ ಮಱೆಹೊಕ್ಕೆ, ಭಕ್ತಿದಾಯ[ಕ] ನೀನು ಕರುಣಿಸು, ಲಿಂಗತಂದೆ! 'ಜಯಜಯ ಶ್ರೀ ಮಹಾದೇವ, ಜಯಜಯ ಶ್ರೀ ಮಹಾ ದೇವ, ಜಯಜಯ ಶ್ರೀ ಮಹಾದೇವ' ಎನ್ನುತ್ತಿದ್ದಿತ್ತು ಎನ್ನ ಮನವು. ಕೂಡಲ ಸಂಗಮದೇವಂಗೆ ಶರಣೆಂದಿತ್ತೆನ್ನ ಮನವು.

೧೦೭

ಶಿವನೆ ನಿಮ್ಮನಲ್ಲದೆ ಮತ್ತೊಂದ ನಾನಱಿಯೆನಯ್ಯಾ. ಶಿವನೆ ನಿಮ್ಮ ಸೇವೆ ಯಲ್ಲದೆ ಮತ್ತೊಂದಕ್ಕೆ ಮನ ಹಾರೈಸವಂತೆ ಮಾಡಯ್ಯಾ ಕಪಿಲಸಿದ್ಧಮಲ್ಲಿ ನಾಥಯ್ಯಾ.

೧೦೮

ಆವಾವ ಭಾವದಲ್ಲಿ ನಿಮ್ಮನಲ್ಲದೆ ನಾನಱಿಯದಿದ್ದೆನಯ್ಯಾ. ದೇವ ದೇವಾ ಕಾಯಯ್ಯಾ, ಕಾಯಯ್ಯಾ. ಕರುಣಿ ಕರುಣಿ, ಕೃಪಾವಲ್ಲಭ ಗುರುವೆ ಕಪಿಲಸಿದ್ಧ ಮಲ್ಲಿನಾಥಯ್ಯಾ.

## ೨೦. ನಿಜೋಪಾಸ್ಥೆ ಸಮರಸಸಂಬಂಧ :

೧೦೯

ಸಂಸಾರವೆಂಬ ಘೋರ ಕಾಂತಾರದೊಳಗೆನ್ನನಾಸುರದಿ ಬಿಡದಿರಾ ಬೊಪ್ಪಾ. ಎನ್ನ ಬೆಂಬಳಿಯೊಳಿರ್ದು ಸಾಕಾ ಬೊಪ್ಪಾ. ಎನ್ನ ಹೊರೆಯೊಳಿರ್ದು ಸಾಕಾ ಬೊಪ್ಪಾ. ಐವಾಯ ನಾಯಿ ತೋಡಿ ತಿನ್ನುತ್ತಿದೆ. ಕಾಮನೆಂಬ ವೈರಿಗೊಪ್ಪಿಸದಿರೆನ್ನಬೊಪ್ಪಾ. ಅವ್ವೆಯ ಮನೋನಾಥಾ, ನಿರಂಜನ ನಿರ್ವಾಯ ನಿರವಯ ನಿಶ್ಶೂನ್ಯ ನಿರಾಲಂಬ ನಿರಾಭಾರಿ ನಿರ್ವ್ಯಸನಿ, ಮುಕ್ತಿ ಸಾಮ್ರಾಜ್ಯಕ್ಕೆ. ಒಡೆಯ ನೀನೆಯಯ್ಯಾ. ನಿನ್ನನಗಲ ದಂತೆ ನಿನ್ನ ಶ್ರೀಪಾದದೊಳಿಂಬಿಡಯ್ಯಾ ಕಪಿಲಸಿದ್ಧ ಮಲ್ಲಿನಾಥಯ್ಯಾ.

೧೧೦

ಎಲೆ ದೇವಾ, ಮುಕುರ ಪ್ರತಿಬಿಂಬಿಸುವಂತೆ ಎನ್ನಿರವು ನಿನ್ನಲ್ಲಿ ತೋಱುತ್ತದೆ. ಅದೇಕೆ ? ನೀ ನಿರ್ಯಾಯನಾದ ಕಾರಣ. ನಿನ್ನಿಂದವು ಎನ್ನಲ್ಲಿ ಕೂರ್ತು ದರ್ಪಣದ ಆಕಾರ ಬೆಳಗಿನಲ್ಲಿ ತೋಱುವ ನಿರಾಕಾರವೆರಡಕ್ಕೂ ರೂಪು ನಿರೂಪು ಉಭಯಭಿನ್ನ ವಿಲ್ಲದಂತೆ, ಎನ್ನಂಗವಂತಿರಲಿ ಮನವನೊಡಗೂಡಿಕೊ ಎಂದ ಮಾತಿಂಗೆ ಮಾರನ ಕೊಂದ ಮಲತ್ರಯದೂರ, ಅನಾಗತಸಂಸಿದ್ಧ ಭೋಗಮಯ, ನಯಚರಣವಿರಾ ಜಿತ ಜೀಮೂತ ಮೃತದಗ್ಧ ಸರ್ವವ್ಯಾಪಕನಾಶನ, ಸರ್ವ ಅಂತರ್ಗತ ವಿಮಲತ ರಂಗ ಕರುಣಾಬ್ಧಿ ಪೂರ್ಣಚಂದ್ರವಿಲಾಸಿತ ಒಡಗೂಡಿದ ಭಕ್ತನ ಚಿತ್ತದ ಸಾಕಾರದ ಪುಂಜವ ಸರ್ವ ಆತುರಂಗಳ ವಿರೋಧಿ ಅಜಾತ ಶಂಭುಮಾರೇಶ್ವರನು.

೧೧೧

ಕತ್ತಲೆಯನೊಳಕೊಂಡ ಬೆಳಗಿನಂತೆ, ಪಕ್ಷಿಯನೊಳಕೊಂಡ ತತ್ತಿಯಂತೆ, ಮುತ್ತನೊಳಕೊಂಡ ಚಿಪ್ಪಿನಂತೆ, ಸಾಗರವನೊಳಕೊಂಡ ಶಶಿಯಂತೆ, ಜಗವನೊಳ ಕೊಂಡ ಆಕಾಶದಂತೆ, ಎನ್ನ ನೀವು ಒಳಕೊಂಡಿರಿಯಾಗಿ ನಾನೋ ನೀನೋ ಏನೆಂದ ಱಿಯೆನಯ್ಯಾ, ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ.

ಶಿವಮಹಿಮಾಸ್ತೋತ್ರ ಸಮಾಪ್ತ ಮಂಗಳಮಹಾ

ಶ್ರೀ ಶ್ರೀ ಶ್ರೀ

# ಗುಂಡಬಸವನನ್ನು ಕುರಿತ ಸ್ವರವಚನಗಳು

● ಡಾ. ಬಿ. ಆರ್. ಹಿರೇಮಠ

ಸ್ವರವಚನಗಳು ವೀರಶೈವ ಸಾಹಿತ್ಯಪ್ರಕಾರಗಳಲ್ಲಿ ಅತ್ಯಂತ ಪ್ರಮುಖವಾಗಿರುತ್ತವೆ. ಹನ್ನೆರಡನೆಯ ಶತಮಾನದ ಶಿವಶರಣರು 'ವಚನ' ರಚನೆಯ ಜೊತೆಯಲ್ಲಿ 'ಸ್ವರವಚನ'ಗಳನ್ನೂ ಬರೆದಿರುವುದು ಖಚಿತವಾಗಿದೆ. ಸಕಳೇಶ ಮಾದರಸ, ಬಸವಣ್ಣ, ಪ್ರಭುದೇವ, ಚೆನ್ನಬಸವ, ಸಿದ್ಧರಾಮ, ಅಕ್ಕಮಹಾದೇವಿ, ನೀಲಮ್ಮ, ಅಮುಗಿದೇವ, ಬಹುರೂಪಿ ಚೌಡಯ್ಯ, ನಿಜಲಿಂಗ ಚಿಕ್ಕಯ್ಯ ಮೊದಲಾದ ೧೨ನೆಯ ಶತಮಾನದ ಶಿವಶರಣರು ರಚಿಸಿದ ಸ್ವರವಚನಗಳು ಲಭಿಸಿ, ಪ್ರಕಟವಾಗಿವೆ. ಇದಲ್ಲದೆ ೧೪-೧೫-೧೬ನೆಯ ಶತಮಾನದಲ್ಲಿ ಗುರುಬಸವ, ಗುರುಪುರದ ಮಲ್ಲ, ಬತ್ತಲೇಶ್ವರ, ಕರಸ್ಥಲದ ನಾಗಿದೇವ, ನಿರ್ವಾಣಿ ಬೋಳೇಶ, ಶಂಕರದೇವ, ಕೆಸ್ತೂರದೇವ ಮೊದಲಾದವರೂ ಸ್ವರವಚನ ರಚಿಸಿದರು. ಹೀಗೆ ಹನ್ನೆರಡನೆಯ ಶತಮಾನದ ಶಿವಶರಣರಿಂದ ಆರಂಭವಾದ ಈ ಸಾಹಿತ್ಯಪ್ರಕಾರ ೧೪-೧೫-೧೬ ಹಾಗೂ ಮುಂದಿನ ಶತಮಾನಗಳಲ್ಲಿ ಪ್ರವಾಹವಾಗಿ ಪ್ರವಹಿಸಿತು. ಇತ್ತೀಚೆ ವಿದ್ವಾಂಸರು ನಡೆಸಿದ ನಿರಂತರ ಪ್ರಯತ್ನದ ಫಲವಾಗಿ ಹೊಸ ಹೊಸ ಸ್ವರವಚನಗಳು ಲಭಿಸಿ, ವಿಪುಲ ಸಂಖ್ಯೆಯಲ್ಲಿ ಹೊರಬರುತ್ತಲಿವೆ.

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಾಂಡಾರದ ೨೦೮ನೆಯ ನಂಬರಿನ ಕಾಗದ ಪ್ರತಿಯಲ್ಲಿ "ಗುಂಡಬಸವಾಂಕಿತ"ದ ೬೬ ಸ್ವರವಚನಗಳಿರುತ್ತವೆ*. ೧೫-೧೬ನೆಯ ಶತಮಾನದಲ್ಲಿ ರಚಿತವಾದ ಈ ಸ್ವರವಚನಗಳ ಕರ್ತೃ ಅನಾಮಧೇಯ. ಈ ಸ್ವರವಚನಗಳಲ್ಲಿ ಬರುವ 'ಗುರು', 'ಗುರುರಾಯ', 'ತಂದೆ', 'ಸ್ವಾಮಿ' ಮುಂತಾದ ಪದಗಳು ಗುಂಡಬಸವನ ಪರಮಶಿಷ್ಯನೊಬ್ಬನು ಈತನ ಜೀವಿತಕಾಲದಲ್ಲಿ ಇಲ್ಲವೆ ನಂತರ ಇವುಗಳನ್ನು ಬರೆದಿರುವ ಸಾಧ್ಯತೆಯಿದೆ. ಈ ಎಲ್ಲ ಸ್ವರವಚನಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದಾಗ ಈ ಮಾತು ನಿಜವೆನಿಸುತ್ತದೆ. ಈ ಸ್ವರವಚನಗಳಲ್ಲಿ ಕೊಡೇಕಲ್ಲ ಬಸವಣ್ಣನಿಗಿಂತ ಪೂರ್ವದಲ್ಲಿದ್ದ "ಗುಂಡಬಸವ"ನೆಂಬ ಶಿವಶರಣನನ್ನು ಕುರಿತಾಗಿರುವ ೬ ಸ್ವರವಚನಗಳನ್ನು ಮಾತ್ರ ಇಲ್ಲಿ ಸಂಗ್ರಹಿಸಿಕೊಡಲಾಗಿದೆ.

---

* ಪ್ರಕಟನೆಗೆ ಅನುಮತಿ ನೀಡಿದ ಕನ್ನಡ ಅಧ್ಯಯನಪೀಠದ ಮುಖ್ಯಸ್ಥರಾದ ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ ಅವರಿಗೆ ಕೃತಜ್ಞತೆಗಳು.

ಹನ್ನೆರಡನೆಯ ಶತಮಾನದ ಬಸವಣ್ಣನೇ ೧೫-೧೬ನೆಯ ಶತಮಾನದಲ್ಲಿ "ಗುಂಡಬಸವ"ನಾಗಿ ಕಲಬುರ್ಗಿ ಜಿಲ್ಲೆಯ 'ನಾಗಾವಿ' ಗ್ರಾಮದಲ್ಲಿ ಜನಿಸಿದ ವಿಷಯ "ಗುಂಡಬಸವಾಂಕಿತ" ಸ್ವರವಚನಗಳಿಂದ ಸ್ಪಷ್ಟವಾಗುತ್ತದೆ. ಇವನೊಂದಿಗೆ ಅಲ್ಲಮ, ಚೆನ್ನಬಸವರೂ 'ನಾಗಾವಿ'ಯಲ್ಲಿ ಮತ್ತೆ ಜನಸಿ ಬಂದುದನ್ನು ಇವೇ ಸ್ವರ ವಚನಗಳು ತಿಳಿಸುತ್ತವೆ. ಹೀಗೆ ೧೫_೧೬ನೆಯ ಶತಮಾನದಲ್ಲಿ ಶಿವಶರಣರ ಮರು ಆಗಮನದ ಮೂಲಕ 'ನಾಗಾವಿ' ಗ್ರಾಮ "ಧರ್ಮಕಲ್ಯಾಣ", "ಭೂಕೈಲಾಸಪುರ" ವೆನಿಸಿತು, ಶಿವಭಕ್ತಿಯ ಸದನವಾಯಿತು. ಗುಂಡಬಸವನ ಈ ಸ್ಥಾನ ಕಾಶಿ, ವಾರಣಾಸಿ, ಶ್ರೀಶೈಲ, ಸೇತುಬಂಧ ಮೊದಲಾದ ಪುಣ್ಯಕ್ಷೇತ್ರಗಳಿಗಿಂತಲೂ ಮಿಗಿಲಾಗಿದ್ದಿತು.

ಗುಂಡಬಸವನನ್ನು 'ಸಿದ್ಧ'. 'ಶಿವಯೋಗಿ', 'ಗದ್ದಿಗೆಯರಾಯ', 'ಧರ್ಮಪುರಾಧೀಶ' ನೆಂದೂ ಸ್ವರವಚನಗಳಲ್ಲಿ ಕರೆಯಲಾಗಿದೆ. ಈತನು ಆ ಕಾಲದ ಅತ್ಯಂತ ಪ್ರಭಾವಿ, ಮಹಿಮಾಶಾಲಿ ಶಿವಶರಣನಾಗಿ, ವೀರಶೈವಧರ್ಮದ ಪ್ರಸಾರ-ಪ್ರಚಾರ ಕಾರ್ಯ ನೆರವೇರಿಸಿದ. "ಧರ್ಮದ ಹಾದಿಯ ತೋರಲಿ ಬಂದೆ" ಎಂಬ ಸಾಲು ಈ ಅಭಿಪ್ರಾಯನ್ನು ಅನುಮೋದಿಸುತ್ತದೆ. ಆ ಕಾಲದ ಜನ ಈತನನ್ನು 'ಪವಾಡ ಪುರುಷ'ನೆಂದು ತಿಳಿದಿದ್ದರು. ಅಂದಿನ ಸಮಾಜದ ಜನರಲ್ಲಿ ನೈತಿಕ ಸ್ಥೈರ್ಯ ನೆಲೆಯೂರಿ ನಿಲ್ಲುವಂತೆ ಮಾಡಿದನಲ್ಲದೆ, ಭಕ್ತಿ-ಮುಕ್ತಿಗಳ ದಾರಿಯನ್ನು ಸುಲಭವಾಗಿ ತೆರೆದು ತೋರಿಸಿದ. ಈ ರೀತಿಯಾಗಿ ಪರಂಜ್ಯೋತಿಸ್ವರೂಪನಾದ ಗುಂಡಬಸವನು ೧೫-೧೬ನೆಯ ಶತಮಾನದಲ್ಲಿ ಸಮಾಜಸೂರ್ಯನಾಗಿ ಬಾಳಿದ, ಬೆಳಗಿದ ಚಾರಿತ್ರಿಕ ಪುರುಷನಾಗಿದ್ದಾನೆ. ಗುಂಡಬಸವನ 'ಗದ್ದಿಗೆ'(ಸಮಾಧಿ)ಯೂ ಈತನ ವಂಶಜರೂ ನಾಗಾವಿಯಲ್ಲಿ ಈಗಲೂ ಇದ್ದಾರೆ. ನಾಗಾವಿ ಹಾಗೂ ಕೊಡೇಕಲ್ಲ ಗ್ರಾಮಗಳು ಒಂದಕ್ಕೊಂದು ತೀರ ಹತ್ತಿರವಾದವುಗಳು. 'ನಾಗಾವಿ'ಯ ಗುಂಡಬಸವನ ವಂಶಜರು ಕೊಡೇಕಲ್ಲ ಬಸವಣ್ಣನ ಕ್ಷೇತ್ರಕ್ಕೂ ಸಂಬಂಧಿಸಿದವರಾಗಿದ್ದಾರೆ.* ಹೀಗಾಗಿ ಗುಂಡಬಸವನಿಗೂ ಕೊಡೇಕಲ್ಲ ಬಸವಣ್ಣನಿಗೂ ಸಂಬಂಧವಿದ್ದಿತೇ ? ಹಾಗಿದ್ದರೆ ಅದು ಗುರು-ಶಿಷ್ಯ ಸಂಬಂಧವೋ ? ಅಥವಾ ಬೇರೆಯದೋ ? ಗುಂಡಬಸವ ರಚಿಸಿದ ಸಾಹಿತ್ಯ ಇದೆಯೇ ?-ಇವು ವಿದ್ವಾಂಸರನ್ನು ಕಾಡುತ್ತಲಿರುವ ಪ್ರಶ್ನೆಗಳು. ನಾಗಾವಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೈಕೊಳ್ಳುವ ಕ್ಷೇತ್ರಕಾರ್ಯ ಈ ಪ್ರಶ್ನೆಗಳಿಗೆ ಪರಿಹಾರ ನೀಡುವ ಸಾಧ್ಯತೆಯಿದೆ.

ಪ್ರಸ್ತುತ ಸ್ವರವಚನಗಳು ಸಾಹಿತ್ಯಿಕವಾಗಿ ಉತ್ಕೃಷ್ಟವಾಗಿರದಿದ್ದರೂ ಚಾರಿತ್ರಿಕವಾಗಿ ಬಹಳಷ್ಟು ಬೆಲೆಯುಳ್ಳವಾಗಿರುತ್ತವೆ. ಹೀಗೆ ಚಾರಿತ್ರಿಕ ಮಹತ್ವ ಪಡೆದುದರಿಂದಲೇ ಈ ಸ್ವರವಚನಗಳನ್ನು ಇಲ್ಲಿ ಸಂಗ್ರಹಿಸಿಕೊಡಲಾಗಿದೆ.

* ಈ ವಿಷಯವನ್ನು ತಿಳಿಸಿದ ಪ್ರೊ. ಬಸವಲಿಂಗ ಸೊಪ್ಪಿಮಠ ಅವರಿಗೆ ಕೃತಜ್ಞತೆಗಳು.

೧

ರಾಗ : ಶಂಕರಾಭರಣ

ಕಂಡೆನಯ್ಯ ನಾನು ಮಂಡಲದೊಳಗೆ ಪ್ರ
ಚಂಡ ಗುರು ಗುಂಡಬಸವನ ॥ ಪಲ್ಲ ॥

ಸತ್ಯವ ಸಾರಿದ ಬಂದು
ಯುಕ್ತಿಯು ತೋರಿದ ನಿಂದು
ಮುಕ್ತಿಯು ಬೀರಿದ ತಂದು
ಭಕ್ತಿಯು ಭಾರದ ಸಿಂಧು ॥ ೧ ॥

ಸಾರಿದ ಬಂದು ಸತ್ಯವ
ತೋರಿದ ನಿಂದು ಯುಕ್ತಿಯು
ಬೀರಿದ ತಂದು ಮುಕ್ತಿಯು
ಭಾರದ ಸಿಂಧು ಭಕ್ತಿಯು ॥ ೨ ॥

ಬಂದು ಸತ್ಯವ ಸಾರಿದ
ನಿಂದು ಯುಕ್ತಿಯು ತೋರಿದ
ತಂದು ಮುಕ್ತಿಯು ಬೀರಿದ
ಸಿಂಧು ಭಕ್ತಿಯು ಭಾರದ ॥ ೩ ॥

ಸಾರಿದ ಸತ್ಯವ ಬಂದು
ತೋರಿದ ಯುಕ್ತಿಯು ನಿಂದು
ಬೀರಿದ ಮುಕ್ತಿಯು ತಂದು
ಭಾರದ ಭಕ್ತಿಯು ಸಿಂಧು ॥ ೪ ॥

ಬಂದು ಸಾರಿದ ಸತ್ಯವ
ನಿಂದು ತೋರಿದ ಯುಕ್ತಿಯು
ತಂದು ಬೀರಿದ ಮುಕ್ತಿಯು
ಸಿಂಧು ಭಾರದ ಭಕ್ತಿಯು ॥ ೫ ॥

ಸತ್ಯವ ಬಂದು ಸಾರಿದ
ಯುಕ್ತಿಯು ನಿಂದು ತೋರಿದ
ಮುಕ್ತಿಯು ತಂದು ಬೀರಿದ
ಭಕ್ತಿಯು ಸಿಂಧು ಭಾರದ ॥ ೬ ॥

ಸಯು ಸತ್ಯಧಾರಿ ಬಂದು
ದೆಯು ಯುಕ್ತಿ ತೋರಿ ನಿಂದು
ಬೀಯು ಮುಕ್ತಿ ತಂದರಿದು
ರಾಯು ಭಕ್ತಿ ಸಿದ್ಧ ಬಂದು ॥ ೭ ॥

ಬಂದದು ಸಾರಿ ಸತ್ಯವ
ನಿಂದದು ತೋರಿ ಯುಕ್ತಿಯು
ತಂದದು ಬೀರಿ ಮುಕ್ತಿಯು
ಸಿಂಧದು ಭಾರ ಭಕ್ತಿಯು ॥ ೮ ॥

ಬಂದರಿದು ಸತ್ಯ ಸಯು
ನಿಂದರಿದು ಯುಕ್ತಿ ತೋಯು
ತಂದರಿದು ಮುಕ್ತಿ ಬೀಯು
ಬಂದರಿದು ಸಿದ್ಧ ಭಕ್ತಿ ರಾಯು ॥ ೯ ॥

೨

ರಾಗ–ಮಲಹರಿ

ಶರಣು ಶರಣು ಗುಂಡಬಸವಯ್ಯ
ಧರ್ಮದ ಹಾದಿಯು ತೋರಲಿ ಬಂದೆ
ಧರ್ಮಕಲ್ಯಾಣಕೆ ॥ ಪಲ್ಲ ॥

ಹೆಜ್ಜೆ ಹೆಜ್ಜೆಗೆ ಪವಾಡವ ತೋರಿದೆ
ಮರ್ಷು ಭಾಪುರೆ ಗುಂಡಬಸವಯ್ಯ
ಬೆಜ್ಜರವಾಯಿತಾಳಿಕಳಗೆ (?) ನನ್ನ
ಸಜ್ಜನ ಗುರು ತಂದೆ ॥ ೧ ॥

ಕಲಿಯುಗದ ಪಾಪವನೆಲ್ಲವ
ಸಲೆ ತುಳಿದೊಟ್ಟಿ ಮೆಟ್ಟಲಿಬಂದೆಯಯ್ಯ
ಮಲಹರ ನಾಯಕಮುಖಿಯೆಂದು ಅರಿಯೆನು
ಒಲಿದು ಕಾವುದು ತಂದೆ ಗುರುಗುಂಡಯ್ಯ ॥ ೨ ॥

ಆದಿಯಲಿ ಹುಟ್ಟಿದ ತೀರ್ಥಂಗಳನೆ ನೀಡಿ ಮಹಾ
ದೇವ ನೀನು ಸಲಹಲಿ ಬಂದೆಯಯ್ಯ
ಹಾದಿಯು ತೋರಿದೆ ಒಳ್ಳೆಯ ಪ್ರಸಾದ ನೀಡಿ
ನಾದಪ್ರಿಯನೆ ಗುರುತಂದೆ ಕಾಯಯ್ಯ ॥೩॥

ಅಂದು ಹಸ್ತವನಿತ್ತೆ ನಿಂದು ಗೊಲ್ಲತಿಗೆ
ತಂದೆ ಬಸವಾ ಎಂದು ನೆನೆಯುಲು
ಬಂದು ಬಿಜ್ಜಳ ನೋಡಿ ನಿಂದ ಪವಾಡವ
ಚಂದ್ರಶೇಖರ ಗುಂಡ ನೀನೆ ಕಾಯಯ್ಯ ॥೪॥

ಏಳುನೂರು ಎಪ್ಪತ್ತಕೆ ಬಹೆನೆಂದು
ಹೇಳಿಹೋದೆಯಯ್ಯ ಕಪ್ಪಡಿಸಂಗನೊಳು
ಭಾಳಲೋಚನ ಕರ್ತ ಹೇಳಬಂದನು ಬೋಧೆ
ಮೂಳನು ಹಾದಿಯು ಕಾಣಲಿಲ್ಲ ॥೫॥

ತೊತ್ತು ಸೂಳಿಯು ಮಗ ಹೆತ್ತ ತಂದೆಯುನರಿಯು
ಮತ್ತೆ ಮಾಳ ಮಾಡಿದರೊಳಿತೆ
ಸತ್ತೆನು ಗುರು ತಂದೆ ಬಂದ ಕಾರಣವ ಕಾಣೆ
ಕತ್ತೆ ಮೂಕೊರೆ ಮೂಳನನು ನಚ್ಚೆ ॥೬॥

ಕಲ್ಯಾಣಪುರದೊಳಗೆಲ್ಲ ಭಕ್ತರು ಕೂಡಿ
ಅಲ್ಲಮ ಅಜಗಣ್ಣಗಳು ದೇವ
ಸೊಲ್ಲನಾಡಿದ ಬಿಜ್ಜಳರಾಯನ ಕೂಡೆ
ಅಲ್ಲಿ ತೊಗರಿಕಾಳ ಮಾಣಿಕ್ಯವ ಮಾಡಿ ॥೭॥

ಆರು ದರುಶನಕೆ ಮೀರಿದ ತಂದೆ
ಬೇರೊಂದು ಸ್ಥಲವನೆ ಮೆರೆಸಿ
ಧಾರುಣಿಯುರಿಯುಲಿ ಧರ್ಮಬೋಧೆಯು ತಂದೆ
ಕಾರಣ ಕಾಣದೇಕಮಿದು ಶಕ್ಯ ॥೮॥

ಶೂನ್ಯಪೀಠವ ರಚಿಸಿ ಪೂಜೆ ಮಾಡುತಲಿದ್ದ
ಆನಂದ ಅಲ್ಲಮಪ್ರಭುವಿಗೆಂದು
ಶ್ವಾನಜನ್ಮದ ಪಾಪಿ ಹೀನವೆಂದು ಅತಿಗಳೆದೆ
ನಿಗಮಮೂರುತಿ ಗುರುಗುಂಡರಾಯನ ॥೯॥

ಕಾಶಿ ವಾರಣಾಸಿಕಿಂದಲಧಿಕ ಗುಂಡನ ಸ್ಥಾನ
ಸೇತುಬಂಧಕಿಂದಲಧಿಕ ಗುಂಡನ ಸ್ಥಾನ
ಶ್ರೀಶೈಲಕಿಂದಲಧಿಕ ಗುಂಡನ ಸ್ಥಾನ
ದೂಷಕ ಪಾಪಿ ನಿಂದಕ ಕಾಣೆ ನೀ ॥೧೦॥

ಭೂಮಿಗೆ ಅಧಿಕ ಭೂಕೈಲಾಸಪುರವೆಂದು
ಭೂಮಿಗೆ ಸ್ವಾಮಿಯು ದೇವರೆಂದು ನಂಬಿ
ಈ ಮಹಿಮನು ಮೆಚ್ಚಿ ಧರ್ಮಕಲ್ಯಾಣದ
ಸ್ವಾಮಿ ಗುರು ಗುಂಡಬಸವಯ್ಯ ಕಾವನು ॥೧೧॥

೩

ರಾಗ : ಸೋಲಿ

ಬನ್ನಿ ನೋಡುವ ಧರ್ಮಪುರಾಧೀಶನ ಸಂ
ಪನ್ನ ಮೂರುತಿ ಗುರು ಗುಂಡರಾಯನ ॥ ಪಲ್ಲ ॥

ಮನವ ಮೀಸಲ ಮಾಡಿ ತಮತಮಗೆ ಬಂದು
ಘನ ಗುರುವಿನ ಕೈಯು ಘನ ಪಾಪವ ಬೇಡಿರೊ
ಅನುವಾಗಿನಿತು ಸ್ತುತಿಸಿ ಓಲಗ ಮಾಡಿರೊ
ಚಿನುಮಯ ಗುರು ಗುಂಡನ ಕೊಂಡಾಡಿರೊ ॥ ೧ ॥

ಬಂದ ಭವಗಳ ಪರಿಹರಿಸುವಾತನೆ ಆ
ನಂದ ಮೂರುತಿ ಗುರು ಗುಂಡದಾತನೆ
ಚಂದ್ರಶೇಖರ ಸರ್ವಜೀವ ದಯಾಪರನೆ
ವಂದಿಸಿ ನೆನೆವ ಜನಕೆ ಸಾಲೋಕ್ಯಪದವನೀವನೆ ॥ ೨ ॥

ಈರೇಳು ಭುವನಕೆ ಏಕಮುಖದ ಕರ್ತನೆ
ಸಾರಿ ಡಂಗುರ ಬೋಧಿಸಿ ಜಗಕೆ ತೋರಿದಾತನೆ
ಮಾರಿ ವಿಘ್ನ ಕೇಡು ಪರಿಹರಿಸು ದಾಯನೆ
ಧೀರ ಪರಂಜ್ಯೋತಿ ಗುರು ಗುಂಡರಾಯನೆ ॥ ೩ ॥

೪

ರಾಗ : ಸೋಲಿ

ಇಮ್ಮಡಿ ಗುಂಡನಲ್ಲದೆ ದೈವವಿಲ್ಲ
ಉಮ್ಮಹ ಜನರು ಕೇಳಿರೆ ನೀವೀ ಸೊಲ್ಲ
ಇಮ್ಮಡಿ ಗುಂಡನಲ್ಲದೆ ದೈವವಿಲ್ಲ ॥ ಪಲ್ಲ ॥

ನಾಲ್ಕು ವೇದ ಶಾಸ್ತ್ರ ಆಗಮಕೆ ನಿಲುಕ
ಶ್ರುತಿ ಸಾರುತಲಿದೆ ಏಕಮುಖಿ

ವಾಕ್ಯಪರುಷಮೂರ್ತಿ ವಿವೇಕ
ಗುಂಡ ನೋಡಬಂದನು ತ್ರಿಲೋಕ ॥ ೧ ॥

ಕೋಟಿದೈವಗಳಂತಲ್ಲ ಈತನು
ಮಾಟ ನೋಡಲು ಒಂದಿನಿತಿಲ್ಲ
ಸಟೆಯುಲ್ಲವು ಜನರೆಲ್ಲ
ಮತ್ತೆ ಗುಂಡನಲ್ಲದೆ ದೈವವಿಲ್ಲ ॥ ೨ ॥

ಛಪ್ಪನ್ನದೇಶದೊಳಧಿಕನಿವ
ತಪ್ಪದೆ ಬನ್ನಿ ತ್ರಿಲೋಕ
ನಪ್ಪ ಗುಂಡೇಶನವಧಿಕ
ನಂಬಿದ ಭಕ್ತರಿಗಿತ್ತ ಭೂಲೋಕ ॥ ೩ ॥

೫

ರಾಗ : ಶ್ರೀರಾಗ
ಬಂದ ಗುರುರಾಯು ಗುಂಡ ಬಸವಲಿಂಗ
ಬಂದ ನೆನೆವರ ದೇವರದೇವ ತಾ
ಬಂದ ಕ್ಷೀರಾಬ್ಧಿಯೇ ತಾ ಬಸವೇಶ ಬಂದ ಆನಂದದಿಂದ ॥ಪಲ್ಲ॥

ತನ್ನ ನೆನೆದಂಥ ಪ್ರಾಣಿ ಮನುಜರ
ಭಿನ್ನವಿಲ್ಲದೆ ಪಾಲಿಪನು ತಾನು
ಮನ್ನಣೆ ಮಾಡಿ ಸಲಹಲಿ ಬಂದೆ ಮಹಾಘನ ಮೂರ್ತಿ
ಮುನ್ನ ಚೋಳಂಗೆ ಹೊನ್ನಮಳೆಯನಿತ್ತೆ
ಚೆನ್ನನ ಭಕ್ತಿಗೆ ಒಲಿದು ಪ್ರಾಣವನಿತ್ತೆ
ಸನ್ಮಾನಿ §[ನೀ*]§ ಸಲಹಲಿ ಬಂದೆ ಮೂರ್ತಿ ॥ ೧ ॥

ಕಾಲಸಂಹರ ಕರ್ಮವಿರಹಿತನು
ಲೋಲ ಭಕ್ತರ ಕಾಮಧೇನು ತಾ
ಬಾಲನಾಗಿರ್ದೆ ಸಿಂಧುಬಲ್ಲಾಳಗೆ ಭಾವಭರಿತನೀತ
ಮೂಲ ಮೂರಕೆ ಮುಕ್ತಿದಾಯಕನೀತ
ಮೇಲೆ ಇಂದ್ರಿಯಕೆ ನಿಲುಕನು
ಸಾಲು ಚಕ್ರಕೆ ಸ್ವಯಂಜ್ಯೋತಿದೇವನು ಧರ್ಮಪುರಾಧೀಶನು ॥ ೨ ॥

ಧರೆಗೆ ಧರ್ಮಬೋಧೆಯು ಸಾರಿದ್ಯೆ ನೀನು
ಪರಂಜ್ಯೋತಿ ಪರಮ ಪುರುಷನು ನೀನು

§-§ + (ಮೂ)

ಹರಿಯಜ ಮುನಿ ವಂದಿತ ದೇವನು ಸಾಲೋಕ್ಯಪದವನೀವೆ
ನಿಮ್ಮ ಕರುಣದಿಂದಲಿ ಗುರು ರಜತಗದ್ದಿಗಿ
ಅಲ್ಲಮಸ್ವಾಮಿ ಈತನು
ಹರಸಿದನವರಿಗೆ ಚಿಂತಾಮಣಿ ದೇವ ಬಸವ ದಂಡಾಧೀಶ ॥ ೩ ॥

೬

ಸೋಬಾನವೆನ್ನಿರೆ ಸೋಬಾನವೆನ್ನಿರೆ
ಸೋಬಾನವೆನ್ನಿರೆ ಗುರು ಗುಂಡೇಶಗೆ ॥ ಪಲ್ಲ ॥

ಕಂಚೆಕ್ಕಿ ಕಳಶದ ಮಿಂಚುಳ್ಳ ನಾರಿಯರು
ಅಂಚೆಗಮನೆಯರು ಪಾಡುತ । ಸೋ......
ಅಂಚೆಗಮನೆಯರು ಪಾಡುತ ಗುರುಗುಂಡೇಶ
ಪಂಚತತ್ವಕೆ ಈತ ಮಿಗಿಲೆಂದು । ಸೋ........ ॥ ೧ ॥

ಅರಿಷಿಣವ ಪಿಡಿಕೊಂಡು ಅರಸಿಯರು ಬರುವಾಗ
ಅರಸೆಂದು ತ್ರಿಲೋಕ ಪೊಗಳುತ । ಸೋ.......
ಅರಸೆಂದು ತ್ರಿಲೋಕ ಪೊಗಳುತ ಗುರುಗುಂಡರಾಯ
ಪರಶಿವನು ಕರ್ತನಹುದೆಂದು । ಸೋ...... ॥ ೨ ॥

ಛಪ್ಪನ್ನದೇಶದೊಳೊಪ್ಪುವ ನಾರಿಯರು
ಅಪ್ಪನೆಂದು ವಿಭೂತಿ ಧರಿಸಿರೆ । ಸೋ......
ಅಪ್ಪನೆಂದು ವಿಭೂತಿ ಧರಿಸಿರೆ । ಗುರುಗುಂಡೇಶ
ಕಪ್ಪುಗೊರಳ ಕರ್ತನಹುದೆಂದು । ಸೋ... .... ॥ ೩ ॥

ಸೋಗಿಲ ಅಕ್ಕಿಯ ತನ್ನಿ ಸೊಬಗಿಂದ ನಾರಿಯರು
ಬಾಗುತ ಬಳುಕುತ ಅಲುಗುತ । ಸೋ... ....
ಬಾಗುತ ಬಳುಕುತ ಅಲುಗುತ ಗುರುಗುಂಡರಾಯ
ನಾಗಭೂಷಣ ಕರ್ತನಹುದೆಂದು । ಸೋ...... ॥ ೪ ॥

ತೆತ್ತೀಸಕೋಟಿ ದೇವಾಧಿದೇವರ್ಕಗಳು
ಅರ್ತಿಲಿ ಬಂದು ಮದುವೆಗೆ । ಸೋ......
ಅರ್ತಿಲಿ ಬಂದು ಮದುವೆಗೆ ಗುರುಗುಂಡೇಶಗೆ
ಎತ್ತಿ ಸೇಸೆಯನಿಕ್ಕಿದರು । ಸೋ....... ॥ ೫ ॥

# 'ಗಿರಿಯ ಪರಂಜ್ಯೋತಿ'

● ಬಿ. ಸಿ. ಜವಳಿ

೧

ಈ ಕೃತಿ, ಕರ್ನಾಟಕದ ಪ್ರಸಿದ್ಧ ಶರಣೆ, ದಿವ್ಯ ಅನುಭಾವಿ, ಶ್ರೇಷ್ಠಕವಿ ಹಾಗೂ ವಚನಕಾರ್ತಿಯಾಗಿರುವ ಮಹಾದೇವಿಯಕ್ಕನನ್ನು ಕುರಿತು ಬರೆದುದಾಗಿದೆ. ಕೃತಿಕಾರರಾದ ಡಾ. ಎಸ್. ಎಸ್. ಕೋತಿನ ಅವರು, ಈ ಕವಿಯಿತ್ರಿಯನ್ನು ತಮ್ಮ ಕೃತಿಗೆ ವಸ್ತುವನ್ನಾಗಿ ಆಯ್ದುಕೊಂಡುದು. ಅವರ ಮನದ ಒಲವನ್ನೂ ಮತ್ತು ಮಹಾದೇವಿಯಕ್ಕನ ಬದುಕು, ವೈರಾಗ್ಯಶಾಲಿನಿಯದಾಗಿದ್ದರೂ, ಗೃಹಸ್ಥರಿಗೂ ಮಾರ್ಗದರ್ಶಿಯಾಗಿದೆಯೆಂಬುದನ್ನು ಎತ್ತಿತೋರಿಸುತ್ತದೆ. ಅಕ್ಕಮಹಾದೇವಿ, ಕನ್ನಡ ನಾಡಿನ ಮಹೋನ್ನತ ವ್ಯಕ್ತಿಗಳ ಸಾಲಿಗೆ ಸೇರುವ ಸಂತಳಾಗಿದ್ದಾಳೆ. ಆಕೆಯ ವ್ಯಕ್ತಿತ್ವ ಅಂದಿನ ಕಾಲದ ಕವಿಗಳಿಗೆ ಮಾತ್ರ ಪ್ರೇರಕ ಶಕ್ತಿಯಾಗಿರದೆ, ಎಂದೆಂದಿಗೂ ಸ್ಫೂರ್ತಿದಾಯಕವಾದುದಾಗಿದೆ. ಈ ಶತಮಾನದಲ್ಲಿಯೇ, ಮಹಾದೇವಿಯಕ್ಕನನ್ನು ಕುರಿತು ಕನ್ನಡ ಸಾಹಿತ್ಯದಲ್ಲಿ, ಹಲವು ರೂಪಗಳಲ್ಲಿ, ಲೇಖಕರು ಕೃತಿ ರಚಿಸಿದ್ದಾರೆ. ಪ್ರಸಿದ್ಧ ಕವಿಗಳೂ, ಪಂಡಿತೋತ್ತಮರೂ, ಪರಮ ವೈರಾಗ್ಯಮೂರ್ತಿಗಳೂ ಆದ ಲಿಂಗೈಕ್ಯ ಗೌರೀಶಂಕರ ಸ್ವಾಮಿಗಳವರು, 'ಅಕ್ಕಮಹಾದೇವಿ'ಯನ್ನು ಕುರಿತು ಒಂದು ಚಂಪೂ ಕಾವ್ಯ ಬರೆದಿದ್ದಾರೆ. ಲಿಂಗೈಕ್ಯ ಟಿ. ಎಚ್. ಎಂ. ಸದಾಶಿವಯ್ಯನವರು, 'ಅಕ್ಕನ ಹಂಬಲ' ಎಂಬ ನಾಟಕ ಬರೆದಿದ್ದಾರೆ. ಶ್ರೀ ಬಸವರಾಜ ಕಟ್ಟೀಮನಿಯವರು 'ಗಿರಿಯ ನವಿಲು' ಎಂಬ ಹೆಸರಿನಲ್ಲಿ, ಡಾ. ತಿಪ್ಪೇರುದ್ರಸ್ವಾಮಿಯವರು 'ಕದಳಿಯ ಕರ್ಪುರ' ಎಂಬ ಹೆಸರಿನಲ್ಲಿ ಕಾದಂಬರಿಗಳನ್ನೂ, ಅಲ್ಲದೆ 'ಮಹಾದೇವಿಯಕ್ಕ–ಕಾರಿಕಾಲಮ್ಮ', 'ಅಕ್ಕಮಹಾದೇವಿ–ಮೀರಾಬಾಯಿ–ಅಂಡಾಳ್' ಇವರನ್ನು ಹೋಲಿಸಿ ಬರೆದ ಪಿ. ಎಚ್. ಡಿ. ಪ್ರಬಂಧಗಳೂ ಹೊರಹೊಮ್ಮಿವೆ. ಪ್ರೊ ಸಂ. ಶಿ. ಭೂಸನೂರಮಠ ಅವರು, 'ಭವ್ಯಮಾನವ' ಎಂಬ ಮಹಾಕಾವ್ಯಕ್ಕೆ ಅಕ್ಕಮಹಾದೇವಿಯ ಬದುಕನ್ನೇ ಮೂಲವಾಗಿರಿಸಿಕೊಂಡಿದ್ದಾರೆ. ಇನ್ನಿತರರ ಕೃತಿಗಳೂ ಹೊರಹೊಮ್ಮಿ, ಅಕ್ಕಮಹಾದೇವಿ, ಇನ್ನೂ ಬರಹಗಾರರಿಗೆ 'ಸ್ಫೂರ್ತಿಯ ಸೆಲೆ'ಯೆಂಬುದಕ್ಕೆ ಸಾಕ್ಷಿಯಾಗಿದ್ದಾಳೆ. ಈ ಎಲ್ಲ ಕೃತಿಗಳ ಸಮುದಾಯಕ್ಕೆ ಡಾ. ಕೋತಿನ ಅವರ ಕೃತಿಯೂ ಒಂದು ಮಹತ್ವದ ಕೊಡುಗೆಯಾಗಿದೆ. ಈ ಕೃತಿ, ತ್ರಿಪದಿಯಲ್ಲಿರುವುದೊಂದು ವಿಶೇಷ; ಯಾಕೆಂದರೆ ಕನ್ನಡ ಕವಿಯಿತ್ರಿಯರಲ್ಲಿ ಅಕ್ಕಮಹಾದೇವಿಯೇ, ತ್ರಿಪದಿಯಲ್ಲಿ, 'ಯೋಗಾಂಗ ತ್ರಿವಿಧಿ'ಯನ್ನು ರಚಿಸಿರುವುದು ಎಲ್ಲರಿಗೂ ವಿದಿತವಿದೆ. ತ್ರಿಪದಿ

ಛಂದಸ್ಸು ಅಕ್ಕಮಹಾದೇವಿಗೂ ಪ್ರಿಯವಾದ ಛಂದಸ್ಸಾಗಿತ್ತು. ಅದು ಹಾಡಲು ಸುಲಭ; ಕೇಳಲು ಇಂಪು; ಅಲ್ಲದೆ ನಾಡಿನ ತುಂಬೆಲ್ಲ ಪಂಡಿತ-ಪಾಮರರಿಗೆ ಚಿರಪರಿಚಿತವಾದ ಛಂದಸ್ಸು; 'ಕನ್ನಡದ ಗಾಯತ್ರಿ'ಯೆಂದು ಹೆಸರು ಪಡೆದಿದೆ 'ಸಿದ್ಧರಾಮ ಪುರಾಣ'ವನ್ನು ಬರೆದ ಶ್ರೀಮತಿ ಜಯದೇವಿತಾಯಿ ಲಿಗಾಡೆಯವರಂತೆ ಕೆಲಕಿನ ಅವರು, ತ್ರಿಪದಿ ಬಳಸಿದುದು, ಈ ಕಾಲದಲ್ಲೂ ತ್ರಿಪದಿ ಕಾವ್ಯಕ್ಕೆ ತನ್ನ ಆಕರ್ಷಕತೆಯನ್ನುಳಿಸಿಕೊಂಡಿದೆಯೆಂಬುದನ್ನು ಎತ್ತಿ ತೋರಿಸುತ್ತದೆ. 'ವಚನ', ಸಾಹಿತ್ಯದ ರೂಪವಾಗಿ ಅನೇಕ ಪ್ರಸಿದ್ಧ ಬರೆಹಗಾರರನ್ನು ಆಕರ್ಷಿಸಿ, ಇನ್ನೂ ಕನ್ನಡ ಸಾಹಿತ್ಯದ ಸಜೀವ ರೂಪವಾಗಿ ಉಳಿದುಕೊಂಡಂತೆ, ತ್ರಿಪದಿಯೂ ಸಜೀವರೂಪವಾಗಿದೆ. ಡಾ. ಬಿ. ಬಿ. ಹೆಂಡಿಯವರು ಮುನ್ನುಡಿಯಲ್ಲಿ ಹೇಳಿದ ಮಾತು ಹೀಗಿದೆ. ಇಲ್ಲಿಯ "ತ್ರಿಪದಿ, ಗ್ರಂಥಸ್ಥ ಮಾದರಿಯದಾಗಿರದೆ, ಜಾನಪದ ಮಾದರಿಯದಾಗಿರುವುದು ಪ್ರಧಾನವಾದ ಗುಣವಿಶೇಷವಾಗಿದೆ. ಒಮ್ಮೆಲೆ ಕೈಗೆತ್ತಿ ಓದುವವರಿಗೆ ಇದೂ ಒಂದು ಜಾನಪದ ಕೋಶದಿಂದ ಎತ್ತಿತಂದ ಕೃತಿಯಾಗಿರಬೇಕೆಂದು ಕಲ್ಪನೆ ಹುಟ್ಟಿಸುತ್ತದೆ" (ಪುಟ V). ಶರಣರನ್ನು ಕುರಿತು, ಶಿಷ್ಟಸಾಹಿತ್ಯದಲ್ಲಿ ಕೃತಿಗಳು ಹೊರಹೊಮ್ಮಿದಂತೆ, ಜನಪದ ಸಾಹಿತ್ಯದಲ್ಲೂ ಹೊರಹೊಮ್ಮಿರುವುದರಿಂದ ಈ ಭಾವನೆ ಬರುವುದು ಸ್ವಾಭಾವಿಕವೇ. ಜಾನಪದದಲ್ಲಿ ಮಹಾದೇವಿಯಕ್ಕನನ್ನು ಕುರಿತು ಕೃತಿ ಇರುವುದು ಸಾಧ್ಯವಿದೆ. ಅಂತಹ ಕೃತಿ ದೊರೆತರೆ, ಆಗ ತೌಲನಿಕವಾಗಿ ನೋಡಿ, ಈ ಕೃತಿಯ ವಿಶೇಷ ಲಕ್ಷಣಗಳನ್ನು ಕಲೆಹಾಕಬಹುದಾಗಿದೆ. ಈ ಕೃತಿ, ತ್ರಿಪದಿಯಲ್ಲಿರುವುದರಿಂದ ಅಕ್ಕನ ಬಗೆಗೆ ತಿಳಿಯಲು, ಬಹು ಜನರಿಗೆ ಸುಲಭಸಾಧ್ಯವಾಗುತ್ತದೆ.

೨

ಚಾರಿತ್ರಿಕ ವ್ಯಕ್ತಿಯಾದ ಮಹಾದೇವಿಯಕ್ಕನನ್ನು ಕುರಿತು ಕಥೆ, ಕಾವ್ಯ ಬರೆಯುವುದು ಬಲು ಕಷ್ಟದ ಕೆಲಸ; ಯಾಕೆಂದರೆ ಅಕ್ಕಮಹಾದೇವಿಯ ಜೀವನದ ರಹಸ್ಯ, ಅಥವಾ ಅಕ್ಕಮಹಾದೇವಿಯ ಇಂಗಿತ, ಆ ಶರಣೆಯ ಬದುಕಿನ ರೀತಿ, ಇವು ತಿಳಿಯಲು ಅಸಾಧ್ಯ. ಅಧ್ಯಾತ್ಮವಾದಿಯೂ ಅನುಭಾವಿಯೂ ಆದ ಈ ಶರಣೆ, ಹೊರನೋಟಕ್ಕೆ ಒಂದು ರೀತಿ ಕಂಡರೆ, ಅಂತರಂಗಕ್ಕೆ ಆಕೆಯ ಬದುಕಿನ ಸಂಘರ್ಷ, ಅಥವಾ ಆ ವ್ಯಕ್ತಿ ಸಾಧಿಸಿದ ಅನುಭಾವದ ಸಿದ್ಧಿ-ಸಾಮಾನ್ಯರಿಗೆ ಅರ್ಥವಾಗದೇ ಹೋಗಬಹುದು. ಹೀಗಾಗಿ, ಹಿಂದಿನಿಂದಲೂ, ಮಹಾದೇವಿಯಕ್ಕನ ಬಗೆಗೆ ಬರಹಗಾರರು, ಒಂದೊಂದು ರೀತಿಯ ನಿಲವನ್ನು ತಾಳಿದ್ದಾರೆ. ಆಕೆ ಮಹಾ-ಅನುಭಾವಿ; ಯೋಗಿನಿ; ವೀರವಿರಾಗಿಣಿ; ಅಖಂಡ ಬ್ರಹ್ಮಾಂಡದಲ್ಲೆಲ್ಲ ದೇವರನ್ನು ಕಾಣಲು ಪ್ರಯತ್ನಿಸಿ, ಬ್ರಹ್ಮಾಂಡವೇ ದೇವರ ಮುಖ ("ವನವೆಲ್ಲ ನೀವೇ! ವನದೊಳಗಣ ತರುಮರಾದಿಗಳೆಲ್ಲ ನೀವೇ; ಖಗಮೃಗವೆಲ್ಲ ನೀವೇ" ಎಂಬ ವಚನ ನೋಡಿರಿ) ಎಂದು ಉದ್ಘೋಷಿಸಿದವಳು. ಕಲ್ಯಾಣಕ್ಕೆ ಬಂದಳೆಂದು ಕೆಲ ಲೇಖಕರು ಹೇಳಿದರೆ, ಇನ್ನುಳಿದವರೆಲ್ಲ ಆಕೆ ಕಲ್ಯಾಣಕ್ಕೆ

ಬರುವುದರ ಪ್ರಸ್ತಾಪವೇ ಇಲ್ಲ. ಚಾರಿತ್ರಿಕ ವ್ಯಕ್ತಿಯ ಬಗೆಗೆ, ಅದರಲ್ಲೂ ಮಹಾದೇವಿಯಕ್ಕನಂತಹ 'ವೀರವಿರಾಗಿಣಿ'ಯ ಬಗೆಗೆ ಏನನ್ನೇ ಹೇಳಲೂ ಹೋದರೂ ತೊಂದರೆಯಾಗುತ್ತದೆ. ಕಾವ್ಯ-ಮೊದಲಾದ ಸಾಹಿತ್ಯಕೃತಿಗಳಲ್ಲಿ ನಾವು ಆ ವ್ಯಕ್ತಿಯ ಚಾರಿತ್ರಿಕ ಅಂಶಗಳತ್ತ ಗಮನಹರಿಸದೇ, ಆ ಶರಣೆ ಸಾಧಿಸಿದ ಉನ್ನತ, ಆಧ್ಯಾತ್ಮಿಕ ನಿಲವಿನ ವ್ಯಕ್ತಿತ್ವವನ್ನು ನಿರೂಪಿಸಿ ತೋರಿಸಿದಾಗ, ಆ ಕೃತಿಗೆ ಸೊಬಗು ಬರುತ್ತದೆ. ಯಾವುದೇ ಚಾರಿತ್ರಿಕವ್ಯಕ್ತಿಯನ್ನು ಕುರಿತಾದ ಸಾಹಿತ್ಯಿಕ ಕಲಾಕೃತಿಗಳಲ್ಲಿ ಓದುಗರು ಮೌಲ್ಯಗಳತ್ತ ಗಮನಹರಿಸಬೇಕೇವಿನಾ ಚರಿತ್ರೆಯ ಅಂಶಗಳಿಗಲ್ಲ.

೩

ಈ ಕೃತಿ, ಆರು ಸಂಧಿಗಳಲ್ಲಿ, ೪೪೭ ತ್ರಿಪದಿಗಳಲ್ಲಿ, ಅಕ್ಕಮಾದೇವಿಯ ಬದುಕಿನ ಬಗೆಗೆ, ಆಕೆಯ ಜನ್ಮದಿಂದ ಮೊದಲ್ಗೊಂಡು, ಶ್ರೀಶೈಲದ ಕದಳಿಯವನದಲ್ಲಿ ಬಯಲಾಗುವವರೆಗೆ, ಹಲವು ಸಂಗತಿಗಳನ್ನು ವಿವರಿಸುತ್ತದೆ. ಆಕೆಯ ಐಕ್ಯ ಹೇಗಾಯಿತೆಂಬುದನ್ನು ಯಾರೂ ನೋಡಿದಂತಿಲ್ಲ; ಆದುದರಿಂದ ಆ ಶರಣೆ, ಕದಳಿಯಲ್ಲಿ ಬಯಲಾದಳೆಂದು ಹಿಂದಿನಿಂದ ಜನಹೇಳುತ್ತ ಬಂದಿದ್ದಾರೆ. ಅದೇ ಇಲ್ಲಿಯೂ ಉಕ್ತವಾಗಿದೆ: "ಕದಳಿಯೆಂಬುವ ತನುವ, ಕದಳಿಯೆಂಬುವ ಮನವ, ಕದಳಿಯೆಂಬುವ ಭವಕಾಂಡ ಸುಡುವುದಕ, ಕದಳಿಯೊಳು ಬಯಲ ಬೆರೆತಾಳ (ಪುಟ ೫೯). ಇದನ್ನು ಜನ ನಂಬಬೇಕೆಂದು ಒತ್ತಾಯಿಸಲು ಹೀಗೆ ಬರೆದಿದ್ದಾರೆ; "ಮುಳ್ಳು ಜನ ನಂಬಿರುವ ಸುಳ್ಳು ಕಥೆಯಿದುವೆಂದು, ಪೊಳ್ಳೆಂದು ನಕ್ಕು ಜರೆದರ ಎಲೆ ತಮ್ಮ, ಮುಳ್ಳು ಮುರಿವಂಗ ನಾಲಿಗಿಗೊ" (ಪುಟ ೬೯) ಎನ್ನುವಲ್ಲಿ ಕವಿ, ಮಹಾದೇವಿಯಕ್ಕನ ಬಗೆಗೆ ತಾಳಿದ ನಿಲವು ಭಾವುಕತನದ್ದೆಂದು ಸ್ಪಷ್ಟವೆನಿಸುತ್ತದೆ. ಕೆಲವಟ್ಟಿಗೆ, ಇಂತಹ ಚರಿತ್ರೆಯ ನಿರೂಪಣೆಗೆ, ಭಾವುಕತನ ಅವಶ್ಯವೆನಿಸುತ್ತದೆ. ಸಂಧಿ ಒಂದರಲ್ಲಿ ಅಕ್ಕಮಾದೇವಿಯ ಜನನದ ಹಿನ್ನೆಲೆಯನ್ನು ವಿವರಿಸಲಾಗಿದೆ. ಈ ನಾಡ ಕಸವಾಗಿದ್ದ, ಬಸವಣ್ಣನ ಆಗಮನದಿಂದ 'ಹಸನಾತು'; 'ರಸವಾತು' ಎಂದಿದ್ದಾರೆ. ಹರಿಹರ, ಚಾಮರಸ, ಚನ್ನಬಸವಾಂಕರನ್ನು ಆರಂಭದಲ್ಲಿ ಸ್ತುತಿಸಿದ್ದಾರೆ. ಕನ್ನಡನಾಡು ಎಲ್ಲದದಿಂದ ಪುಣ್ಯ ಭೂಮಿಯೆಂದು ಕೊಂಡಾಡಿದ್ದಾರೆ. ಇದು, ಈ ಕವಿ ಪ್ರಾಚೀನ ಪರಂಪರೆಯ ಕವಿಯೆಂಬುದಕ್ಕೆ ಸಾಕ್ಷಿ. 'ಕನ್ನಡನಾಡಿನೊಳಗೊಂದು 'ಸಣ್ಣ ಒಳನಾಡು'; ಉಡುತಡಿ ಗ್ರಾಮದಲ್ಲಿ, ಶಂಕರ ಭಕ್ತರಾದ 'ಓಂಕಾರ', 'ಲಿಂಗಮ್ಮ', ಇವರಿಗೆ ಅಕ್ಕಮಹಾದೇವಿ ಜನಿಸಿದ್ದಾಳೆ. ಮಕ್ಕಳಿಲ್ಲಂತ ಹಲುಬಿ, ಶಿವಮಠಕ್ಕೆ ಒಂದು ಸೋಮವಾರ ಆಗಮಿಸಿ, ತನಗೆ ಮಕ್ಕಳಿಲ್ಲದ ಕೊರಗನ್ನು ಶಿವಗೆ ಹೇಳಿದಾಗ, ಹಿಂಗೆ ಕೇಳುವುದು 'ಕೂಲಿಯಭಕ್ತಿ' ಎಂದು ಗಂಡ ಬೆದರಿಸುತ್ತಾನೆ; ಮಠದ ಗುರು-'ಗುರುಲಿಂಗರು', 'ಶಿವ ನಿಮ್ಮ ಮೊರೆ ಕೇಳಿದ್ದಾನೆ' ಎಂದು ಹರಸುತ್ತಾರೆ. ದಂಪತಿಗಳಿಗೆ ಸಂತೋಷವಾಯಿತು; ಆಗ ಪಾರ್ವತಿಯೇ ಮುಂದಾಗಿ ಶಿವಗೆ ಹೀಗೆ ನುಡಿದಳಂತೆ ಲಿಂಗಮ್ಮನ ಕನಸಿನಲ್ಲಿ. "ಅರಿವು

ಇಲ್ಲದೆ ದೇವ, ಮರೆಯುವಿಯೋ ಶರಣರನು: ಶರಣರ ಪಾಪ ನಿನಗಾತು: ಅದರಂತೆ ತಿರಿವು ತಿನ್ನುವಿಯೋ ಜಗದೊಳಗೆ" (ಸಂಧಿ೧, ಪದ್ಯ೫೫). ಹೀಗೆ ಇಲ್ಲಿ ಪಾರ್ವತಿ-ಪರಮೇಶ್ವರರ ಸಂಭಾಷಣೆ, ಕವಿಯ ಒಳ್ಳೆಯ ಕಲ್ಪಕತೆಗೆ ಸಾಕ್ಷಿ. ಹೀಗೆಂದು ಪಾರ್ವತಿ, ತನ್ನಲೀಲೆ ಮೆರೆಸಲು ಲಿಂಗವ್ವನಿಗೆ ಮಗಳಾಗಿ ಜನಿಸುತ್ತಾಳೆ. ಅಕ್ಕಮಹಾದೇವಿಯ ಮಹಿಮೆ ಮೇರು ಸಮಾನವೆಂಬುದನ್ನು ತಿಳಿಸಲು ಕವಿ ಹೀಗೆ ಬರೆದಿದ್ದಾರೆ. "**ಮೇರುಪರ್ವತದಂಥ ನಾರಿಯ ಮಹಿಮೆ** ಯನು ಸಾರಿ ತೋರುದಕ ಮಗಳಾಗಿ ಹುಟ್ಟುವೆನು" ಎಂದು ಪಾರ್ವತಿಯೇ ಶಿವಗೆ ಆಡುತ್ತಾಳೆ (ಪುಟ ೧೧). ಎರಡನೆಯ ಸಂಧಿಯಲ್ಲಿ ಅಕ್ಕಮಹಾದೇವಿಯ ಬಾಲ್ಯ, ಶಿವಭಕ್ತಿಯ ಬೆಳವಣಿಗೆ ಮತ್ತು ಗುರುಗಳಾದ ಗುರುಲಿಂಗದೇವರ ಸನ್ನಿಧಿಯ ಫಲಗಳನ್ನು ವಿವರಿಸಿದ್ದಾರೆ. ಶಿವಮತದಲ್ಲಿ ಆಕೆ, ಗುರುಗಳಿಂದ ವಚನಗಳನ್ನು ಓದಿಸಿ ಕೇಳಿದ್ದಾಳೆ; ಶಿವಾನುಭವ, ಶಿವಶಾಸ್ತ್ರ ತಿಳಿದಿದ್ದಾಳೆ; 'ದೇವರೇ ಪತಿ'ಯೆಂದು ತಿಳಿದು, ತನ್ನ ಅಚಲ ಪ್ರೀತಿಯನ್ನು ದೇವರಲ್ಲಿ ವ್ಯಕ್ತಪಡಿಸುವ ವಚನಗಳನ್ನು ತಾನೂ ಬರೆದು ತಂದು ಗುರುಗಳ ಬಳಿ ಓದಿ ತೋರಿಸಿದ್ದಾಳೆ. ಅವರು ಓದಿ, ತಿದ್ದಿ ಹರಸುತ್ತಾರೆ (ಪುಟ ೨೬, ಪದ್ಯ ೨೦). ಹೀಗಿರಲು ಅಕ್ಕಮಹಾದೇವಿಗೆ ಯವ್ವನವು ಕಾಲಿಟ್ಟಿತು "ಹೊಂಗಿರಣಕುಡಿವ ಹೂವಂಗ" "ತನು ಕಾಂತಿ ಚಂದಿರನ ಅಣಕಿಸಿತು". ಭಕ್ತಿಯುತ ಶರೀರ ಹೆತ್ತವರಿಗೂ ತೃಪ್ತಿತಂದಿದೆ.

ಮೂರನೆಯ ಸಂಧಿಯೇ, ಮಹಾದೇವಿಯಕ್ಕನ ಸಂಸಾರ–ಸನ್ಯಾಸಗಳ ಕಡು ಹೋರಾಟದ ಸನ್ನಿವೇಶಗಳನ್ನು ವಿವರಿಸುವ ಭಾಗ. ಕೌಶಿಕನು, ವೈಹಾಳಿ ಮುಗಿಸಿ ಬರುವ ಕಾಲ : "ತುಂಬಿದತಾರೆಗಳ ಅಂಬರದೊಳಗಯ್ಯ, ತುಂಬುಚಂದಿರನು ಕುಳಿತಂಗ; ಕೌಶಿಕನು ಅಂಬಾರಿಯೊಳಗ ಕುಳಿತಾನು" (೩-೭); ಆ ದೊರೆಗೆ "ಮಾದೇವಿ ಸೆಳೆಮಿಂಚಾಗಿ" ಕಂಡುದರಿಂದ, "ಕೌಶಿಕನು ತಲ್ಲಣಿಸಿಹೋದ": ಅವನಿಗೆ "ಮಾಯದ ಕೊಳದೊಳಗೆ ಒಗೆದಂಗಾತು;" "ಸೆರೆಸಿಕ್ಕು ಹಣ್ಣಾದ ಹುಲಿಯಂತಾದ:" ಆಕೆಯನ್ನು ನೋಡಿ "ಎದೆ ಜುಮ್ಮೆಂದುಹೋಯಿತು"–ಎಂದು ಮಂತ್ರಿ ಬ್ರಹ್ಮಯ್ಯನಿಗೆ ತಿಳಿಸಿದ; ಮದುವೆಗೆ ಆಕೆಯನ್ನು ಕೇಳಲು, ಆಕೆಯ ತಂದೆತಾಯಿಗಳನ್ನು ಮನವೊಲಿಸಲು ಕೌಶಿಕ ಹೇಳುತ್ತಾನೆ; ಮಾದೇವಿ "ತೇಟ ರತಿ" ಎನ್ನುತ್ತಾನೆ. ಅದರಂತೆ ಅಕ್ಕಮಾದೇವಿಯನ್ನು ಕೌಶಿಕನಿಗೆ, ಮದುವೆಗೆ ಕೇಳಿ ಬ್ರಹ್ಮಯ್ಯ, ಅಕ್ಕನ ತಂದೆ ತಾಯಿಯರಿಗೆ ನುಡಿದಾಗ "ಹರನನ್ನು ಬಿಟ್ಟು ನರನನ್ನು ಕೂಡುವುದು ಸರಿಯೇ ?" ಎನ್ನುತ್ತಾರೆ ಅವರು. ಮಾದೇವಿ ದಾರಿಗಾಣಲು ಗುರುಗಳ ಬಳಿ ಬರುತ್ತಾಳೆ. ಗುರುಗಳು : "ಮಾಡಬಾರದ ಕೆಲಸ ಮಾಡಿದನು ಕೌಶಿಕನು, ಕೇಡತಪ್ಪದು ನಾಡಿಗೆ" ಎಂದು ನುಡಿದು, "ಹರಲೀಲೆ ತಿಳಿಯದು" ಎನ್ನುತ್ತಾರೆ. ಬ್ರಹ್ಮಯ್ಯ ಬಂದು, ಅರಸನಿಗೆ ಅಕ್ಕನ ತಾಯ್ತಂದೆಗಳು ತಿರಸ್ಕರಿಸಿದುದನ್ನು ಹೇಳುತ್ತಾನೆ: ಮತ್ತೊಮ್ಮೆ ಪ್ರಯತ್ನಿಸಿನೋಡಲು ಬ್ರಹ್ಮಯ್ಯ ಹೋದಾಗ, ಶಿವಭಕ್ತರೆಲ್ಲ ನೆರೆದು ದೊರೆ ಹೆಸರಿಗೆ

ಮುಸಿಬಳಿದು ಚೀರಿವರು (೩.೭೩)! ಅಕ್ಕಮಾದೇವಿ ನೋಂ. ಕಣ್ಣೀರಿಟ್ಟು, ತಟ್ಟನೆ ತಿಳಿದು, ತಾನೇ ಅರಮನೆಗೆ ಬರುತ್ತಾಳೆ. (೩-೭೮). ಅರಸನು ಅಕ್ಕನನ್ನು ನೋಡುತ್ತಲೇ ಸ್ವಾಗತಿಸುತ್ತಾನೆ. ಅರಸನಿಗೆ, ಅಕ್ಕಮಾದೇವಿ, "ನಿನ್ನನ್ನು ಕಾಯು ಬಂದಿರುವೆ; ಮಾಯೆಯ ಸಂಗಬೇಡ:" "ನಾ ಮಲ್ಲಯ್ಯಗ ಮೀಸಲಾದವಳು" ಎಂದು ಹೇಳುತ್ತಾಳೆ. ಕೌಶಿಕನು ಒರಟುಮಾತನಾಡಿದುದಕ್ಕೆ,* ಮೈಮೇಲೆ ಏರಿಹೋದುದಕ್ಕೆ, ಅವನಿಗೆ "ಮೈ ಉರಿಹತ್ತಿದಂಗಾತು!-ಎಂದಾಡಿ. ಉಟ್ಟಉಡಿಗೆಯ ಹರಿದು ವೈರಾಗ್ಯ ತಾಳಿ ಹೊರಡುತ್ತಾಳೆ. ಕೌಶಿಕನೂ ನಿರಾಶೆ ಹೊಂದುತ್ತಾನೆ.

ನಾಲ್ಕನೆಯ ಸಂಧಿ, ಮಹಾದೇವಿಯಕ್ಕನು ವೈರಾಗ್ಯತಾಳಿ, ಗುರುಮಠಕ್ಕೆ ನಡೆದು, ಗುರುಕೊಟ್ಟ ಬಟ್ಟೆ ಉಟ್ಟುಕೊಳ್ಳುತ್ತಾಳೆ! ಊರೇ ಬೆರಗಾಗುತ್ತದೆ-ಆಕೆಯ ವರ್ತನೆಯನ್ನು ಕಂಡು! ಕೌಶಿಕನೂ ಬುದ್ಧಿ ತಿಳಿದು, ಅಲ್ಲಿಗೇ ಬಂದು ಆಕೆಯ "ಚರಣವಡಿ" ಬೀಳುತ್ತಾನೆ". ದುರುಳ, ಪಾಪಿ ಎನ್ನಲು; "ನಿನ್ನಡಿಗೆ ಕೆರವು ನಾನವ್ವ" (ಪುಟ೪೩) ಎನ್ನುವ ಸೌಜನ್ಯ ತೋರಿಸುತ್ತಾನೆ. ಗುರುವಿನ ಪಾದಕ್ಕ ಬೀಳುವ ದೊಡ್ಡಮನಸ್ಸು ಮಾಡಿದ್ದಾನೆ! ಇದು ಇಲ್ಲಿ ಅಕ್ಕಮಾದೇವಿ, ಕೌಶಿಕನ ಮೇಲೆ ಮಾಡಿದ ಪರಿಣಾಮ. ಇತರ ಕಾವ್ಯಗಳಲ್ಲಿ ಕಾಣದ ಬದಲಾವಣೆ ಇದು. ಅಲ್ಲಿಂದ ಮಹದೇವಿ ಎಲ್ಲರ ಹರಕೆ ಪಡೆದು, ಕಲ್ಯಾಣಕ್ಕೆ ಹೊರಡುತ್ತಾಳೆ. ತಂದೆ ತಾಯಿಗಳಿಗೆ ದುಃಖವಾಗುವುದು ಸ್ವಾಭಾವಿಕವೇ.

ಐದನೆಯ ಸಂಧಿಯಲ್ಲಿ. ಕಲ್ಯಾಣವಲ್ಲಿ ಮಹಾದೇವಿಯಕ್ಕ ನಡೆದುದನ್ನು ವಿವರಿಸಲಾಗಿದೆ. ಸುಡುವ ಬಿಸಿಲಿನ ಬಾಧೆಗೆ ಅಂಜದೆ, ಶಿವನನ್ನು ನೆನೆಯುತ್ತ, ನೋವು ಮರೆತುನಡೆದಾಗ, ಅಕ್ಕನನ್ನು ತಣಿಸಲು ಮಳೆಯಾಗುತ್ತದೆ (ಪುಟ ೪೮,ಪದ್ಯ೧೧)! ಇದು ಶಿವಕಾರುಣ್ಯದ ಸೂಚನೆ. ತೊಂದರೆಗಳನ್ನೊಡ್ಡುವ ಶಕ್ತಿಯೇ ಅದರ ನಿವಾರಣೆಗೂ ತಾನೇಮುಂದಾಗುತ್ತದೆಯೆನ್ನುವುದರ ಸಂಕೇತವಿದು. ನಿಸರ್ಗದ ಪ್ರಕೋಪಗಳೆಲ್ಲವನ್ನೂ ಶಿವಪೂಜೆಯ ಸಾಮಗ್ರಿ ಎಂದು ತಿಳಿದಿದ್ದಾಳೆ. ಈಕೆಯ ವರ್ತನೆ ಕಂಡು ಜನರು "ಹುಚ್ಚಿ ಎಂದಾರೆ"; "ಹುಡುಗರು ಕಲ್ಲು ಒಗೆದಿದ್ದಾರೆ"; ಕೆಲರು "ಗಂಡನ ಕಳಕೊಂಡ ಪರದೇಶಿ",-ಎಂದಿದ್ದಾರೆ; ಹೀಗೆ ಕಷ್ಟಗಳನ್ನು ಎದುರಿಸುತ್ತಾ ಕಲ್ಯಾಣ ಪಟ್ಟಣದ ಹೊರವಳಯಕ್ಕೆ ಬರಲು, ಕಿನ್ನರಿಯ ಬೊಮ್ಮಣ್ಣ ಹೀನದೃಷ್ಟಿಯಿಂದ ಆಕೆಯನ್ನು ಕಂಡು, ನಂತರ ಪಶ್ಚಾತ್ತಾಪಪಟ್ಟು, ಬಸವಣ್ಣ ತನ್ನನ್ನು ಸ್ವಾಗತಕ್ಕಾಗಿ ಕಳಿಸಿದ್ದನೆಂಬುದನ್ನು ಆಕೆಗೆ ಅರಿಕೆಮಾಡಿಕೊಳ್ಳುತ್ತಾನೆ. ಕಲ್ಯಾಣದಲ್ಲಿ ಭಕ್ತರನ್ನು ಶಿವಾನುಭವಗೋಷ್ಠಿಯಲ್ಲಿ ಕಾಣಲು ಬಂದಾಗ, ಅಕ್ಕಮಾದೇವಿಯು "ಕಾಯ

* "ವಸ್ತ್ರವಿ ಏಲಿ ಹೆಣ್ಣ, ಗತ್ತ ನಡಿಸಿವಿಹೇನ, ಹೊತ್ತಗಳಿಬೇಡ ತವಿಲಾವೆ,ಬತ್ತಲೆಯು ಮಾಡಿ ನಿಲಿಸೇನ"-ಪುಟ ೩೮

ಕಂದಿದೆ; ಬಟ್ಟೆ ಚಿಂದಿಯಾಗಿದೆ;" ಅದನ್ನೇ ಜನ "ಬತ್ತಲೆ" ಎನ್ನುವಂತಿತ್ತು (ಪುಟ ೫೨) ಆಗಿನ ಆಕೆಯ ಸ್ಥಿತಿ. ಆಗಲೇ ಪ್ರಭುದೇವ, "ಎಲ್ಲರಿಗೆ ಅಕ್ಕನ ಉನ್ನತಿಯ ತೋರುದಕ" ಕಲ್ಲುಮನನಾಗಿ ಪ್ರಶ್ನೆ ಕೇಳುತ್ತಾನೆ. ಆ ಪ್ರಶ್ನೆಗಳೆಂದರೆ; ಬತ್ತಲೆಯಾದ ನೀನು ಇಲ್ಲಿ ಬಂದುದೇಕೆ ? ನಿನ್ನ ನಲ್ಲನ ಹೆಸರೇನು ? ಎಂದುದಕ್ಕೆ ಮಲ್ಲಯ್ಯ, ಗಂಡನೆಂದಿದ್ದಾಳೆ: ಕಾಣಬಾರದ ಶಿವನ. ಒಲಿಸುವುದು ಹೇಗೆ ಎಂದು ಪ್ರಭುದೇವ ಕೇಳಿದುದಕ್ಕೆ, ಅಕ್ಕನು ಹೇಳಿದ ಉತ್ತರ ಮನನೀಯವಾಗಿದೆ:

"ನನ್ನಿನಿಯ ಮಲ್ಲಯ್ಯ ನನ್ನ ಮನದೊಳಗಯ್ಯ.
ನನ್ನಿಯಲ್ಲಿ ಕರಗಿ ಬೆರೆತಾನ ನೋಡದಕ,
ಇನ್ನೆಲ್ಲಿ ಹೊರಗ ಕಾಣುದಕ"— (೫-೪೯).

ಹೀಗೆ ಹೇಳಿದರೂ ಮತ್ತೆ, ಪ್ರಭು, "ಕೌಶಿಕನನ್ನು ಮರುಳು ಮಾಡಿದೆ"; "ಶರಣರನು ಕೂದಲದೆ ಮರೆಮಾಡಿದೆ"—ಎಂದು ಹರಲಿ ಹೊರಿಸಿದುದಕ್ಕೆ ಅಕ್ಕನು, "ಹೀಗೆ ಹರಲಿ ಹೊರಿಸುವುದು ತರವಲ್ಲ; ಕರಕ (ಮಸಿ)ಹತ್ತೀತು ಹರಮಂತಕ –ಎನ್ನುತ್ತಾಳೆ. ಕೂಡಲೆ ಶರಣರು, ಆಕೆಯ ಧೈರ್ಯಕ್ಕೆ ಬೆಪ್ಪಾಗಿ, ಆಕೆಯ ನಿಲವನ್ನು ಹೊಗಳುತ್ತಾರೆ. ಪ್ರಭುದೇವನು ಆಕೆಗೆ ಯೋಗವನ್ನು ಕಲಿಸಿದುದರಿಂದ (ಪದ್ಯ ೬೯) ಆಕೆ ಯೋಗಿಯಾಗಿ, ಕೆಲದಿನ ಅಲ್ಲಿದ್ದು ಯೋಗಾಂಗ ತ್ರಿವಿಧಿ ರಚಿಸಿದಳು ಎಂದಿದ್ದಾರೆ-ಶ್ರೀ ಕೋತಿನ ಅವರು.

ಆರನೆಯ ಸಂಧಿಯಲ್ಲಿ ಅಕ್ಕಮಹಾದೇವಿ ಶ್ರೀ ಶೈಲಕ್ಕೆ ಪಯಣ ಹೊರಡುತ್ತಾಳೆ. ಆಕೆಯ ಮಹಿಮೆ ನಾಡಿಗೆ ಪರಿಚಯವಾಗುತ್ತದೆ. ಪರಮತದ ಹೆಣ್ಣುಮಕ್ಕಳು ಲಿಂಗದೀಕ್ಷೆ ಪಡೆಯುತ್ತಾರೆ. ಆಕೆಯ ಶರೀರ ಲಿಂಗಜ್ಞಾನವಹ್ನಿಯಲ್ಲಿ ಬೆಂದ ಅನುಭಾವಿಯ ಶರೀರ. "ಹೆಣ್ಣಿನ ಉನ್ನತಿಯ ತೋರಿದ" ಮಹಿಳೆ ಎಂದು ಅರಿತ ಜನ ಕೊಂಡಾಡುತ್ತಾರೆ. ಪರ್ವತದ ಮಹಿಮೆ ಅಲ್ಲಮನಿಗೆ ತಿಳಿದಿತ್ತು; ಸಿದ್ಧರಾಮಶಿವಯೋಗಿಗೆ ತಿಳಿದಿತ್ತು; ಅದನ್ನೇ ಅಕ್ಕನಿಗೆ ತಿಳಿಸುತ್ತಾನೆ ಸಿದ್ಧರಾಮ. ವೈರಾಗ್ಯದ ಶರೀರವನ್ನು ಹೊತ್ತು, ಶರಣರಿಂದ ಹರಕೆ ಪಡೆದು, ಊರಜನರಿಂದ ಶುಭ ಹಾರೈಕೆ ಹೊತ್ತು, ಅಕ್ಕ ನಡೆದಾಗ, ದಾರಿಯಲ್ಲಿ ಜನ ಕೈಮುಗಿಯುತ್ತಾರೆ. ಆಗಲೇ ಆಕೆ ಹುಚ್ಚಿಯಲ್ಲ, ಅನುಭಾವಿ, ದಿವ್ಯಾತ್ಮಳು ಎಂಬ ಭಾವ ತಲೆದೋರಿದಂತಿದೆ. ದಾರಿಯಲ್ಲಿ, ಮಹದೇವಿ, ನಮಸ್ಕರಿಸಿದವರನ್ನು ಹರಸುತ್ತ, ಪರ್ವತವನ್ನು ಸೇರುತ್ತಾಳೆ. ಗಿಡಗಳೆಲ್ಲ ಆಕೆಗೆ ಹಣ್ಣು ನೀಡಿ ಕೃತಾರ್ಥವಾಗಿವೆ. ಬಹುದಿನದ ತನ್ನ ಕನಸಿನ ಸ್ಥಳ ಕಂಡು ಹರ್ಷಿಸಿದ್ದಾಳೆ ಅಕ್ಕ: ಶಿವನೆ, "ಬಂದು ದಯೆದೋರು" ಎಂದು ಸಾಕ್ಷಾತ್ಕಾರಕ್ಕಾಗಿ ಪ್ರಾರ್ಥಿಸಿದ್ದಾಳೆ: "ಕರುಣೆದೋರಯ್ಯ ಶಿವನೇ"–ಎಂದು ಹಲವರಿಸಿದ್ದಾಳೆ. ಗಿಳಿ, ನವಿಲುಗಳನ್ನು, "ಮಲ್ಲಯ್ಯನ ತೋರಿರೇ"—ಎಂದು ಕೇಳಿದ್ದಾಳೆ. ಅಲ್ಲಿಂದ

ಮಲ್ಲಯ್ಯನ ಗುಡಿಗೆ ಬರುತ್ತಾಳೆ; ಎನಿತೋ ದಿನದ ಹಂಬಲ ಕೈಗೂಡಿದಂತಾಗಿ "ಲಿಂಗವನು ಅಪ್ಪಿ ಬೆರೆತಾಳ;" ಕದಳಿಯಲ್ಲಿ ತನುಗುಣ-ಮನಗುಣಗಳ ಸುಟ್ಟು ಭವಹರನೊಡನೆ ಒಂದಾಗಿ ಕೂಡಿದ್ದಾಳೆ. ಇದಿಷ್ಟು ಈ ಪುಟ್ಟಕಾವ್ಯದ ಕಥಾವಸ್ತು.

ಪುನರ್ಮುದ್ರಣವಾದ ಮೇಲಾದರೂ ಇಲ್ಲಿ ತಪ್ಪುಗಳಾಗದಂತೆ ನೋಡಿಕೊಳ್ಳಬಹುದಾಗಿತ್ತು. ಒಂದು ಪುಟದ ಒಪ್ಪೋಲೆ ಇರುವುದು ಕಾವ್ಯಕ್ಕೆ ಶೋಭೆ ತರುವ ಮಾತಲ್ಲ.

೪

ಈ ಕೃತಿಯಲ್ಲಿ ಕಥಾನಕವನ್ನು ನೋಡಿದರೆ, ಕವಿ, ಶೀರ್ಷಿಕೆ ಕೊಡುವಲ್ಲಿ, ಬಸವರಾಜ ಕಟ್ಟೀಮನಿಯವರ 'ಗಿರಿಯ ನವಿಲು' ಎಂಬುದರಿಂದ ಪ್ರೇರಣೆ ಪಡೆದಿರುವಂತಿದೆ. ಸಾಂಕೇತಿಕವಾಗಿ, ಈ ಕಾಲದಲ್ಲಿ, ಅಕ್ಕಮಹಾದೇವಿಯ ಕಥೆಗೆ ಸಾಂಕೇತಿಕ ಹೆಸರಿಟ್ಟು ಬರೆಯುವ ಪರಂಪರೆಗೆ ಈ ಕೃತಿ ಪೋಷಕವೆನಿಸುತ್ತದೆ. ಅಕ್ಕಮಹಾದೇವಿಯ ರಗಳೆ, ಸಾಂಗತ್ಯ, ಚಂಪೂ ಎನ್ನುವ ಕಾಲ ಈಗ ದೂರವಾಯ್ತು ಎನ್ನುವಂತಿದೆ ಈ ಶೀರ್ಷಿಕೆ.

ಅಕ್ಕಮಹಾದೇವಿಯ ಕಥೆಯಲ್ಲಿ ನಾವು ತಿಳಿಯಬೇಕಾದ ಅಂಶಗಳು : ಆಕೆಯ ಚರಿತ್ರೆಯ ಅಂಶಗಳಿಗಿಂತ, ಆಕೆಯು ಸಾಧಿಸಿದ ಮಹೋನ್ನತ ವ್ಯಕ್ತಿತ್ವಕ್ಕೆ ಸಂಬಂಧಿಸಿವೆ. ಎಂದರೆ ಆಕೆ ಇಂತಹ ವೀರವೈರಾಗ್ಯ ಪಡೆದುದು ಹೇಗೆ ? ಕಲ್ಯಾಣಕ್ಕೆ ಬರುವ ಪೂರ್ವದಲ್ಲಿಯೇ ಈ ವೈರಾಗ್ಯ ಆಕೆಯಲ್ಲಿ ದಟ್ಟವಾಗಿದೆ. ಆಕೆ. ಅನುಭಾವವಿದ್ಯೆಗೆ ಪ್ರವೇಶ ಪಡೆದುದು ಹೇಗೆ ? ಈ ಅಂಶಗಳತ್ತ ಓದುಗರ ಗಮನ ಸೆಳೆಯುವ ಸನ್ನಿವೇಶಗಳು ಇಲ್ಲಿ ಕಾಣದಿರುವುದರಿಂದ, ಕಥೆ ಎಂದಿನಂತೆ ಹಿಂದಿನ ರೀತಿಯಲ್ಲಿ ಮುಂದುವರಿಯುತ್ತದೆ. ಕೃತಿಕಾರರಿಗೆ ಕಥೆ ಹೇಳುವುದರತ್ತ ಗಮನ ವಿಶೇಷವಾಗಿದೆ. ಮಹಾದೇವಿಯಕ್ಕನ ಕಥಾ ನಿರೂಪಣೆ ಮಾಡುವಾಗ ಧುತ್ತೆಂದು ಎದುರಾಗುವ ಸಮಸ್ಯೆಗಳೆಂದರೆ: ಆಕೆಯ ಮದುವೆಯಾಗಿತ್ತೆ ? ಆಕೆಯು ಬತ್ತಲೆಯಾಗಿ ಕಲ್ಯಾಣದ ಅನುಭವ ಮಂಟಪಕ್ಕೆ ಹೋಗಿದ್ದಳೇ ? ಕಿನ್ನರಿಯ ಬ್ರಹ್ಮಯ್ಯ ಆಕೆಯನ್ನು ಪರೀಕ್ಷಿಸಿದನೇ? —ಇವೇ ಆ ಸಮಸ್ಯೆಗಳು. ಆ ಸಮಸ್ಯೆಗಳನ್ನು ಕೃತಿಕಾರರು ಬಹು ಜಾಣ್ಮೆಯಿಂದ ನಿವಾರಿಸಿಕೊಂಡಿದ್ದಾರೆಂಬುದು ಮೆಚ್ಚಬೇಕಾದ ಅಂಶವೇ. ಅಕ್ಕಮಹಾದೇವಿ, ಉಡುತಡಿಯಿಂದ-ಕಲ್ಯಾಣಕ್ಕೆ, ಕಲ್ಯಾಣದಿಂದ-ಕದಳಿಗೆ ಏಕಾಕಿಯಾಗಿ ಪ್ರವಾಸ ಮಾಡುವ ಎರಡು ಸಂದರ್ಭಗಳೂ ಇಲ್ಲಿ ಉಕ್ತವಾಗಿವೆ. ಮೊದಲನೆಯದರಲ್ಲಿ ಅಜ್ಞ ಜನತೆ ಆಕೆಯನ್ನು 'ಹುಚ್ಚಿ' ಎಂದು ಕರೆದರೆ, ಎರಡನೆಯ ಸಂದರ್ಭದಲ್ಲಿ ಜನತೆ. ಆಕೆಯನ್ನು 'ಯೋಗಿಣಿ' 'ಹೆಣ್ಣಿನ ಉನ್ನತಿದೋರಿದ ಮಹಿಳೆ' ಎಂದು ತಿಳಿದು ಪಾದಮುಟ್ಟಿ,

ಮುಟ್ಟಿ ನಮಸ್ಕಾರ ಮಾಡಿದ್ದಾರೆ. ಇದು ಸರಿಯಾದ ರೀತಿಯ ವಿವರಣೆ ಎನ್ನಿಸುತ್ತದೆ. ಡಾ. ಹೆಂಡಿಯವರು ಮುನ್ನುಡಿಯಲ್ಲಿ ಹೇಳಿದಂತೆ "ಆಕೆಯ ಬಾಳನ್ನು ಕಾಣುವ ಹೊಸದೃಷ್ಟಿಕೋನ ಇಲ್ಲಿ ಇಲ್ಲ" ಎಂಬ ಮಾತು ಸರಿಯೆನಿಸುತ್ತದೆ. ಏನೇ ಕೊರತೆಗಳಿದ್ದರೂ ಕಥೆ ಸರಾಗವಾಗಿ ಮುಂದುವರಿಯುತ್ತದೆ. ಇಲ್ಲಿಯ ತ್ರಿಪದಿ ಛಂದಸ್ಸು, ಆಡುನುಡಿಯ ಭಾಷೆ, ಸೂಕ್ತ ಪದಗಳ ಆಯ್ಕೆ, ಹಿತಕರ ಅಲಂಕಾರ–ಇವುಗಳಿಂದ, ಮಹಾದೇವಿಯಕ್ಕನ ಪ್ರಾಸಾದಿಕ ವ್ಯಕ್ತಿತ್ವಕ್ಕನುಗುಣವಾಗಿ, ಪ್ರಾಸಾದಿಕ ಶೈಲಿಯನ್ನೊಳಗೊಂಡು ಓದುಗರನ್ನು ಆಕರ್ಷಿಸುತ್ತವೆ. ಅದರಲ್ಲೂ ಭಾವುಕರಿಗೆ ಇನ್ನೂ ಹೆಚ್ಚಿನ ಸಂತೋಷವನ್ನು ಒದಗಿಸುತ್ತದೆ. ಕೃತಿಕಾರರೇ ಹೇಳಿರುವಂತೆ, "ಮೇರು ಪರ್ವತದಂಥ ನಾರಿಯ ಮಹಿಮೆ" ಈಕೆಯದು (ಪುಟ೧೧೧–ಪದ್ಯ೨೩); ಆದರೆ ಆ ವ್ಯಕ್ತಿತ್ವದ ಔನ್ನತ್ಯವನ್ನು ಸಾರಲು, ಈ ಖಂಡಕಾವ್ಯ ಅಸಮರ್ಥವಾಗಿದೆಯೆಂದನಿಸುತ್ತದೆ.

ಪುಸ್ತಕ–ವಿಮರ್ಶೆ

# ಆವಂತಿಕಾ ಪ್ರವಾಸ : ಶಿರಂಕಲ್ಲು ಈಶ್ವರಭಟ್ಟ

[ಸಾಂಸ್ಕೃತಿಕ ಸಾಹಿತ್ಯ ಪ್ರಕಾಶನ ಶಿರಂಕಲ್ಲು; ಅಂಚೆ; ಕನ್ಯಾನ; ದ ಕ; ೧೯೮೫, ಪುಟಗಳು೬೬, ಬೆಲೆ. ರೂ ೮/-)

---

ಮೋಕ್ಷದಾಯಕ ಸಪ್ತಕ್ಷೇತ್ರಗಳಲ್ಲಿ ಒಂದೆಂದು ಪ್ರಸಿದ್ಧವಾದ ಆವಂತಿ (ಉಜ್ಜೈನ)ಕ್ಷೇತ್ರದ ಪರಿಚಯ ಗ್ರಂಥವಿದು. ಪವಿತ್ರ ಕ್ಷೇತ್ರಗಳನ್ನು ಭಕ್ತಿ-ಭಾವದಿಂದ ಸಂದರ್ಶಿಸುವ ಲೇಖಕರು ಆವಂತಿ ಪ್ರವಾಸದಲ್ಲಿ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದೆಂದು ಪ್ರಸಿದ್ಧವಾದ ಮಹಾಕಾಳೇಶ್ವರನ ದರ್ಶನದಿಂದ ಪಾವನಗೊಂಡ ತೃಪ್ತಿಯನ್ನು ತಾಳುವುದರೊಂದಿಗೆ, ಅದನ್ನು ವರ್ಣಿಸಿ ಓದುಗರನ್ನೂ ಭಕ್ತಿಭಾವದ ತೊರೆಯಲ್ಲಿ ಮಿಂಯುವಂತೆ ಮಾಡಿದ್ದಾರೆ. ಐವತ್ತೊಂದು ಶಕ್ತಿಪೀಠಗಳಲ್ಲಿ ಒಂದಾದ 'ಹರಿ ಸಿದ್ಧಿದೇವಿ' ಶಕ್ತಿಪೀಠದ ವಿವರಣೆಯನ್ನೂ ನೀಡಿದ್ದಾರೆ. ಆವಂತಿ–ಉಜ್ಜಯನಿಯು ಶಕ್ತಿಪೀಠ, ಭಕ್ತಿ(ಶಿವ)ಪೀಠ. ಮುಕ್ತಿಪೀಠಗಳ ಸಮಾಗಮದಿಂದ ವೈಶಿಷ್ಟ್ಯಪೂರ್ಣ ತೀರ್ಥಕ್ಷೇತ್ರವಾಗಿದೆಯೆಂಬುದನ್ನು ತಿಳಿಸುವುದರೊಂದಿಗೆ ಅದರ ಐತಿಹಾಸಿಕ ಮಹತ್ವವನ್ನೂ ಎತ್ತಿತೋರಿದ್ದಾರೆ. ವಿಕ್ರಮಾದಿತ್ಯ, ಆರ್ಯಭಟ. ವರಾಹ ಮಿಹಿರ, ಕಾಲಿದಾಸ, ಭರ್ತೃಹರಿ–ಇವರಂಥ ಮಹಾ–ಮಹಿಮರ ಕಾರ್ಯಕ್ಷೇತ್ರವಾದ ಈ ಪವಿತ್ರ ಸ್ಥಳದ ಬಗೆಗಿನ ಪುರಾಣ-ಇತಿಹಾಸ-ಐತಿಹ್ಯಗಳ ಉಲ್ಲೇಖಗಳೊಂದಿಗೆ ಅದರ ಸಾಂಸ್ಕೃತಿಕ ಮಹತ್ವವನ್ನು ವಿಶದಪಡಿಸಿದ್ದಾರೆ. ಹನ್ನೆರಡು ವರ್ಷಗಳಿಗೊಮ್ಮೆ ಜರುಗುವ ಕುಂಭಮೇಳ, ಅಲ್ಲಿನ ಜಗತ್ಪ್ರಸಿದ್ಧ ವೇಧಶಾಲೆ ಆವಂತಿ ಕ್ಷೇತ್ರದ ಅಪರೂಪ ವಿಶೇಷಗಳು. ವೇಧ ಶಾಲೆ ಇಲ್ಲಿಯೇ ಸ್ಥಾಪನೆಯಾದುದರ ಕಾರಣ ಹಿನ್ನೆಲೆ ಮೊದಲಾದ ವಿವರಗಳನ್ನು ಓದುವಾಗ ಲೇಖಕರ ವಿಷಯಸಂಗ್ರಹ, ಅದನ್ನು ನಿರೂಪಿಸುವಲ್ಲಿನ ಸಂಯಮಯುತ ಬರವಣಿಗೆ ಹಿತಕರ ರೀತಿ ಮನದಟ್ಟಾಗುತ್ತದೆ. ಪರಮಭಕ್ತಿಯಿಂದ ಈ ಕ್ಷೇತ್ರದರ್ಶನಕ್ಕಾಗಿ ಉತ್ಸುಕತೆಯಿಂದ ಹೊರಟ ಲೇಖಕರು ತಮ್ಮ ಉದ್ದೇಶದಲ್ಲಿ ಸಫಲರಾದಂತೆ ವಿವಿಧವರ್ಗ–ಅಭಿರುಚಿಯ ಓದುಗರನ್ನು ಗಮನದಲ್ಲಿರಿಸಿಕೊಂಡು ತಮ್ಮ ಪ್ರವಾಸದ ಅನುಭವವನ್ನು ನೀಡುವಲ್ಲಿ ತುಂಬ ಔಚಿತ್ಯವನ್ನು ತೋರಿದ್ದಾರೆ. ಕಾಲಿದಾಸನ 'ಮೇಘಸಂಗದೇಶ'ದ ಸ್ಮರಣೆಯಾದ ಸನ್ನಿವೇಶ, ಅಲ್ಲಿನ ವಿವರ ಲೇಖಕರ ಕಾವ್ಯರಸಾಸ್ವಾದನೆಗೆ ನಿದರ್ಶನವಾಗಿದೆ. ಭರ್ತೃಹರಿಯ ಸಮಾಧಿಯನ್ನು ಸಂದರ್ಶಿಸಿದ ಸಂದರ್ಭ ಕವಿ-ದಾರ್ಶನಿಕರ ಬಗೆಗಿನ ಅವರ ಅಪಾರ ಗೌರವಕ್ಕೆ ದ್ಯೋತಕವಾಗಿದೆ.

ತೀರ್ಥಕ್ಷೇತ್ರಗಳ ಪ್ರವಾಸ ವರ್ಣನೆ ಸಾಮಾನ್ಯವಾಗಿ ಏಕತಾನತೆಯಿಂದ ಕೂಡಿ ಮುಖ್ಯ ಗುರಿಯನ್ನು ಮಾತ್ರ ದೃಷ್ಟಿಯಲ್ಲಿರಿಸಿಕೊಂಡು ಸಾಗುವುದನ್ನು ಕಾಣುತ್ತೇವೆ. ಆದರೆ 'ಆವಂತಿಕಾಪ್ರವಾಸ' ವರ್ಣನೆಯಲ್ಲಿನ ಅನೇಕ ಸನ್ನಿವೇಶಗಳು ಹೃದ್ಯವಾದ ನಿರೂಪಣೆಯಿಂದಾಗಿ ಓದುಗರನ್ನು ಸೆರೆಹಿಡಿಯುವಲ್ಲಿ ಸಫಲವಾಗಿದೆ. ರೈಲು ಪ್ರವಾಸದಲ್ಲಿ ಸಾವಿನ ದವಡೆಯಲ್ಲಿ ಸಿಲುಕಿದ ತಾಯಿ-ಮಗುವನ್ನು ಸಮಯೋಚಿತ ಚಾಕಚಕ್ಯತೆಯಿಂದ ಪಾರುಮಾಡಿ, ಆ ಮುಗ್ಧತಾಯಿಯ ಸಂತೃಪ್ತ-ಧನ್ಯ ಭಾವ ವನ್ನು ಕಂಡು ಪ್ರವಾಸದ ಆಯಾಸವನ್ನು ಮರೆತ ಲೇಖಕರ ಅನುಭವ ಓದುಗರನ್ನು ಸ್ತಂಭೀಭೂತರನ್ನಾಗಿಸುವುದು. ರೈಲಿಗೆ ಸಿಕ್ಕು ಸತ್ತ ಎಮ್ಮೆಗಳ ಹಿಂಡು ಅನುಕಂಪೆ ಯನ್ನು ಮೂಡಿಸುವುದು. ನದಿಸ್ನಾನಕ್ಕೆ ಹೋದಾಗ ಕಳೆದುಕೊಂಡ ಕೈಚೀಲವು ಭಕ್ತಿಯ ಆವೇಶದಿಂದ ಮಹಾಕಾಳೇಶ್ವರನನ್ನು ಪ್ರಾರ್ಥಿಸುವುದರ ಮೂಲಕ ದೊರೆಯಿತೆಂದು ಹೇಳುವಲ್ಲಿ ಭಟ್ಟರ ಭಾವುಕ ಮನಸ್ಸು ಕಂಡುಬರುವಂತೆ ಅದನ್ನು ತಂದುಕೊಟ್ಟ ಭಕ್ತರ ಪ್ರಾಮಾಣಿಕತೆ ಉದಾರತೆಯೂ ತಿಳಿಯುತ್ತದೆ. ಪ್ರವಾಸದ ಪ್ರಯಾಸವನ್ನು ದೂರಮಾಡುವಲ್ಲಿ ನೆರವಾಗುವ ಅನೇಕ ಸಂದರ್ಭಗಳು ಓದುಗರಿಗೆ ವೈವಿಧ್ಯತೆಯನ್ನು ಒದಗಿಸುತ್ತವೆ. ಶಿವಲಿಂಗಕ್ಕೆ ಅರ್ಪಿಸಲು ಎತ್ತಿದ ಹೂಮಾಲೆ ಇನ್ನೊಬ್ಬರು ನೂಕುವುದರಿಂದ ಅಲ್ಲಿ ಕುಳಿತ ಮಹಿಳೆಯ ಕೊರಳಿಗೆ ಬಿದ್ದ ಸಂದರ್ಭ; ವಯಸ್ಕರೊಬ್ಬರು ಶಿವಲಿಂಗವೆಂದು ಆದೇ ಕ್ಷೌರ ಮಾಡಿಸಿಕೊಂಡು ಬಂದ ವಿಧ ವೆಯ ತಲೆಯ ಮೇಲೆ ನೀರು ಸುರಿದು ಸಹಸ್ರನಾಮಾರ್ಚನೆ ಪಡೆದ ಸಂದರ್ಭ; ಮಳೆಯಲ್ಲಿ ನೆನೆದುಹೋದ ಭಟ್ಟರಿಗೆ ಹೋಟಲಿನಲ್ಲಿ ಸ್ಥಳ ನಿರಾಕರಿಸಿದ ಸನ್ನಿವೇಶ; ವಾರಕರಿಪಂಥದವರ ಆಗಮನದಿಂದ ಧರ್ಮಶಾಲೆಯಲ್ಲಿ ಆದ ಗಲಾಟೆ ಹಾಗೂ ಭಟ್ಟರ ಗಂಟುಮೂಟೆಗೆ ಒದಗಿದ ಅವಸ್ಥೆ. ಭೋಪಾಲ ರೈಲುನಿಲ್ದಾಣದಲ್ಲಿ ಭೇಟಿ ಯಾದ ಮಲೆಯಾಳಿ ಮೊದಲಾದ ವಿವರಣೆಗಳಲ್ಲಿನ ನವಿರಾದ ಹಾಸ್ಯ ಭಟ್ಟರ ಬರ ವಣಿಗೆಯ ಆಕರ್ಷಣೆಯನ್ನು ಹೆಚ್ಚಿಸಿದೆ. 'ಬೋರ್ಡ' ಪದವನ್ನು 'ನಾಮಫಲಕ' ವೆಂದು ಸಾಮಾನ್ಯವಾಗಿ ಕರೆಯಲಾಗುತ್ತಿದ್ದರೂ ಅದನ್ನು 'ಹೆಸರುಹಲಗೆ'(ಪು.೪೦) ಎಂದು ಕನ್ನಡಿಕರಿಸಿರುವ ಭಟ್ಟರ ಕನ್ನಡ ಅಭಿಮಾನ ವಿಶೇಷ ಮೆಚ್ಚುಗೆ ಗಳಿಸುತ್ತದೆ. ಮಧ್ಯಪ್ರದೇಶದ ಜನಜೀವನದ ಚಿತ್ರಣ ಇಲ್ಲಿ ವಿವರವಾಗಿ ಬರದಿದ್ದರೂ ಈಉದ್ದೇಶ ಕ್ಕಾಗಿ ಹಳ್ಳಿಯ ಪ್ರದೇಶವನ್ನು ಸಂಚರಿಸಿ ಪ್ರಯತ್ನಿಸಿದುದು ಸ್ತುತ್ಯವಾಗಿದೆ.

ಒಟ್ಟಿನಲ್ಲಿ 'ಆವಂತಿಕಾಪ್ರವಾಸ' ೬೭ ಪುಟಗಳ ಪರಿಮಿತಿಯಲ್ಲಿ ಪುರಾಣ, ಇತಿ ಹಾಸ, ಐತಿಹ್ಯ,ಕ್ಷೇತ್ರಮಹಿಮೆ, ಕಾವ್ಯ, ಸಂಸ್ಕೃತಿ, ಸಮಾಜ ಮೊದಲಾದ ಕ್ಷೇತ್ರಗಳ ವಿಷಯವನ್ನು ಸಂಗ್ರಹಿಸಿದ್ದು ವೈಯಕ್ತಿಕ ಅನುಭವ, ಸರಳ-ಸುಲಭ ನವಿರಾದಹಾಸ್ಯ ಲೇಪನದೊಂದಿಗೆ ಉಪಯುಕ್ತ ಕೃತಿಯಾಗಿ ಪರಿಣಮಿಸಿದೆ.

ಡಾ. ಎಸ್. ಪಿ. ಪಾಟೀಲ

## ಈ ಸಂಚಿಕೆಯ ಲೇಖಕರು


- ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ
  ಚೇರಮನ್, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಡಾ. ದೇವೇಂದ್ರಕುಮಾರ ಹಕಾರಿ
  ಪ್ರವಾಚಕರು. ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಶ್ರೀ ಎಸ್. ಎಸ್. ಕೋತಿನ
  ಪ್ರವಾಚಕರು, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಡಾ. ವಿಲ್ಯಂ ಮಾಡ್ತ
  ಪ್ರವಾಚಕರು, ಭಾಷಾವಿಜ್ಞಾನ
  ಕನ್ನಡ ಅಧ್ಯಯನ ಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಡಾ. ಹೆಚ್. ಎಂ. ಮಹೇಶ್ವರಯ್ಯ
  ಅಧ್ಯಾಪಕರು, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಶ್ರೀಮತಿ ಮಧು ವೆಂಕಾರೆಡ್ಡಿ
  ಅಧ್ಯಾಪಕಿಯರು, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಡಾ. ದಯಾನಂದ ನರಸಿಂಹ ಶಾನಭಾಗ
  ಚೇರಮನ್, ಸಂಸ್ಕೃತ ವಿಭಾಗ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಡಾ. ಬುದ್ದಣ್ಣ ಹಿಂಗಮಿರೆ
ಪ್ರವಾಚಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಡಾ. ವೀರಣ್ಣ ರಾಜೂರ
ಪ್ರವಾಚಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಡಾ. ಬಿ. ಆರ್. ಹಿರೇಮಠ
ಪ್ರವಾಚಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಡಾ. ಬಿ. ಸಿ. ಜವಳಿ
ಪ್ರವಾಚಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಡಾ. ಎಸ್. ಪಿ. ಪಾಟೀಲ
ಅಧ್ಯಾಪಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

# ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಆಜೀವ ಸದಸ್ಯತ್ವ : ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ರೂ. ೧೦೦-೦೦ (ಒಂದು ನೂರು ರೂಪಾಯಿಗಳು) ಕಳಿಸಿ ವಿಶ್ವವಿದ್ಯಾಲಯು ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ" ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳುಹಿಸುವ ವ್ಯವಸ್ಥೆ ಮಾಡಲಾಗುವದು.

# ವಿದ್ಯಾರ್ಥಿ ಭಾರತಿ

(ತ್ರೈಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೮-೦೦ (ಅಂಚೆ ವೆಚ್ಚ ಸಹಿತ)

ಬಿಡಿ ಪ್ರತಿ : ರೂ. ೨-೫೦ (ಅಂಚೆ ವೆಚ್ಚ ಪ್ರತ್ಯೇಕ)

ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ : ರೂ. ೪-೦೦

ಹಣವನ್ನು **ಫಾಯನಾನ್ಸ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ**-೫೮೦ ೦೦೩ ಇವರ ಹೆಸರಿನಲ್ಲಿ ಡಿಮಾಂಡ ಡ್ರಾಫ್ಟ ಅಥವಾ ಪೋಸ್ಟಲ್ ಆರ್ಡರ ತೆಗೆಯಿಸಿ, **ನಿರ್ದೇಶಕರು, ಪ್ರಸಾರಾಂಗ; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ** ಇವರಿಗೆ ಕಳುಹಿಸಬೇಕು.

**ವಿವರಗಳಿಗೆ ಬರೆಯಿರಿ**

ನಿರ್ದೇಶಕರು

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ